೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ

ರಾಘವಾಂಕನ
ಹರಿಶ್ಚಂದ್ರ ಚರಿತೆ

(ಗದ್ಯಾನುವಾದ)

ಎನ್. ರಂಗನಾಥಶರ್ಮಾ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

೭೬ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ – ಗದಗ

ರಾಘವಾಂಕನ

ಹರಿಶ್ಚಂದ್ರ ಚರಿತೆ

(ಗದ್ಯಾನುವಾದ)

ಅನುವಾದಕರು

ಎನ್. ರಂಗನಾಥಶರ್ಮಾ

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೧೮

HARISHCHANDRA CHARITHE
Translated by : **Sri. N. Ranganatha Sharma**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages viii + 127 Price : Rs. **50=00** : **2010**

ಮೊದಲನೇ ಮುದ್ರಣ : ೧೯೭೨
ಎರಡನೇ ಮುದ್ರಣ : ೨೦೧೦
ಪ್ರತಿಗಳು : ೧೦೦೦
ಬೆಲೆ : ಐವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

ಅಧ್ಯಕ್ಷರು – ಡಾ. ನಲ್ಲೂರು ಪ್ರಸಾದ್. ಆರ್.ಕೆ.

ಸಂಚಾಲಕರು – ಶ್ರೀ ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಟಿ.ಎಸ್.ದಕ್ಷಿಣಾಮೂರ್ತಿ
ಡಾ. ಗಿರಡ್ಡಿ ಗೋವಿಂದರಾಜ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಶ್ರೀ ಬಿ.ಆರ್.ಪೊಲೀಸ್ ಪಾಟೀಲ
ಶ್ರೀ ಮಾನಸ
ಶ್ರೀ ಪ್ರದೀಪ್‌ಕುಮಾರ ಕಲ್ಕೂರ
ಶ್ರೀ ಮಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ಕುಂ.ವೀರಭದ್ರಪ್ಪ
ಶ್ರೀ ವಿಷ್ಣು ನಾಯ್ಕ
ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು – ಡಾ. ಎಲ್. ಬಸವರಾಜು
೭೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು – ಶ್ರೀ ಮನು ಬಳಿಗಾರ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುಖಪುಟ ವಿನ್ಯಾಸ : ಶ್ರೀ ಮೋನಪ್ಪ

ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆ ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹು ವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸ ಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದರಲ್ಲೇ ಸಾಹಿತ್ಯ ಪರಿಷತ್ತಿನ ಜೀವಂತಿಕೆಯಿದೆಯೆಂದು ಬಲವಾಗಿ ನಂಬಿ ನಡೆಯುತ್ತಿರುವವನು ನಾನು. ಕನ್ನಡದಲ್ಲಿ ಇತ್ತೀಚೆಗೆ ಬರುತ್ತಿರುವ ವೈವಿಧ್ಯಮಯ ಪುಸ್ತಕಗಳನ್ನು ನೋಡಿದರೆ ಮೊದಲು ಅವುಗಳನ್ನು ಕಣ್ಣಿಗೊತ್ತಿಕೊಂಡು, ಮೃದುವಾಗಿ ಮೈದಡವಿ, ಸ್ವಲ್ಪ ಹತ್ತಿರದಿಂದಲೂ ನಂತರ ದೂರದಿಂದಲೂ ನೋಡಿ ಪುಳಕಗೊಂಡು ಪುಟ ತಿರುವಬೇಕೆನ್ನಿಸುತ್ತದೆ. ಪಂಚೇಂದ್ರಿಯಗಳಲ್ಲಿ ನಾಲಗೆಯೊಂದನ್ನು ಹೊರತುಪಡಿಸಿ ಉಳಿದವುಗಳೆಲ್ಲ ತಣಿಯದ ದಿವ್ಯ ಸುಖವನ್ನು ಖಂಡಿತ ಅನುಭವಿಸುತ್ತವೆ. ಪುಸ್ತಕಪ್ರೇಮಿಗಳು ಯಾರೂ ಈ ಭವಸುಖನಿಮಜ್ಜನದಿಂದ ಬಿಡಿಸಿಕೊಳ್ಳಲಾರರು.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ, ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರ ವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ. ಕೈಯಿಂದ ಎತ್ತಿ ನೋಡುತ್ತಾರೆ, ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನದ ಸಾಧ್ಯತೆಗಳನ್ನು

ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ-ಮಂಥನ, ಪರೀಕ್ಷೆ-ಪ್ರಯೋಗ, ಅವಲೋಕನ-ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡಲು ಸಾಧ್ಯವಾಗಿದೆ. ಬೆಂಗಳೂರು ಮತ್ತು ಹೊರಗೆ ನಡೆಯುತ್ತಿರುವ ಪುಸ್ತಕ ಮೇಳ-ಪುಸ್ತಕ ಪ್ರದರ್ಶನಗಳಲ್ಲಿ ಜಯಭೇರಿ ಬಾರಿಸಲು ಸಾಧ್ಯವಾಗಿದೆ. ೨೦೦೯ರ ಕನ್ನಡ ರಾಜ್ಯೋತ್ಸವದ ನೆನಪಿಗೆ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ದಾಖಲೆಯ ವಹಿವಾಟು ನಡೆಸಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಸಮ್ಮೇಳನಗಳ ಸಂದರ್ಭದಲ್ಲಿ ಭರವಸೆಯಿಂದ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಿದೆ. ಇದನ್ನೆಲ್ಲ ಸಾಧ್ಯವಾಗಿಸುವುದಕ್ಕೆ ಕಾರಣರಾದ ಕನ್ನಡ ಪುಸ್ತಕಪ್ರೇಮಿಗಳನ್ನು ಅಭಿನಂದಿಸಬೇಕಾಗಿದೆ.

೨೦೧೦ ಫೆಬ್ರವರಿ ೧೯ ರಿಂದ ೨೧ ರವರೆಗೆ ಮೂರು ದಿನಗಳ ಕಾಲ ಗದಗದಲ್ಲಿ ನಡೆಯಲಿರುವ ೭೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ೭೬ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳಲಿರುವ ಈ ಪುಸ್ತಕಗಳ ಆಯ್ಕೆಗೆ ಅವುಗಳ ಗುಣಮಟ್ಟವೇ ಮೂಲ ಬಂಡವಾಳವಾಗಿದೆ. ಪರಿಷತ್ತು ತಮ್ಮ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿ ನಾಡಿನ ಮೂಲೆಮೂಲೆಗಳಿಂದ ಲೇಖಕರು ಪತ್ರ ಬರೆದು ವಿನಂತಿ ಮಾಡಿಕೊಳ್ಳುತ್ತಾರೆ. ಅನೇಕರು ಹಸ್ತಪ್ರತಿಗಳನ್ನೇ ಕಳುಹಿಸಿಕೊಡುತ್ತಾರೆ. ಜಿಲ್ಲಾಧ್ಯಕ್ಷರುಗಳ ಮೂಲಕ ಒತ್ತಾಯ ತರುತ್ತಾರೆ. ಅಂಥ ಮನವಿಗಳು ವರ್ಷವೊಂದರಲ್ಲಿ ಸಾವಿರವನ್ನೂ ಮೀರುತ್ತವೆ. ಹಾಗೆ ಎಲ್ಲ ಪುಸ್ತಕಗಳನ್ನೂ ಮರುಮಾತಿಲ್ಲದೆ ಪ್ರಕಟಿಸುವುದು ಪರಿಷತ್ತಿಗೆ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಪುಸ್ತಕದ ಶಕ್ತಿ-ಯೋಗ್ಯತೆಗಳನ್ನು ಜರಡಿಯಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಪರಿಶೀಲನಾ ಸಮಿತಿಯ ಅಗ್ನಿದಿವ್ಯವನ್ನು ಎದುರಿಸಿಯೇ ಕೃತಿ ಪ್ರಕಟಗೊಳ್ಳಬೇಕಾಗುತ್ತದೆ. ಈ ಬಾರಿಯ ಅಕ್ಷರಜಾತ್ರೆಯನ್ನು ಅರ್ಥಪೂರ್ಣವಾಗಿ ಸಿಂಗರಿಸುವುದಕ್ಕಾಗಿಯೇ ಸಜ್ಜುಗೊಂಡಿರುವ ಈ ಪುಸ್ತಕಗಳು ಪ್ರೀತಿಸುವ ಸಹೃದಯರ ಮಡಿಲನ್ನು ಸೇರಲಿ, ಅವರ ಜ್ಞಾನಭಂಡಾರವನ್ನು ವಿಸ್ತರಿಸಲಿ, ಅವರನ್ನು ರಸಾನಂದದಲ್ಲಿ ಮುಳುಗಿಸಲಿ ಎಂದು ಹಾರೈಸುತ್ತೇನೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಉಪಸಂಹಾರ

ಸತ್ಯಸಂಧನಾದ ಹರಿಶ್ಚಂದ್ರನ ಪುಣ್ಯಕಥೆಯನ್ನು ಕೇಳಿದರೆ, ಏಳು ಜನ್ಮದ ಪಾತಕಗಳೂ ನಶಿಸುತ್ತವೆ. ಸೂರ್ಯನು ಉದಯಿಸಿದ ಮೇಲೆ ಕತ್ತಲೆ ಉಳಿದೀತೆ? ಶಿವನೆಂದರೆ ಸತ್ಯ, ಸತ್ಯವೆಂದರೆ ಶಿವ, ಇವೆರಡು ಬೇರೆ ಬೇರೆ ವಸ್ತುಗಳಲ್ಲ ಎಂದು ಈ ಶ್ರುತಿಯು ಸಾರುತ್ತದೆ. ಈ ಶ್ರುತಿವಾಕ್ಯವನ್ನು ಸತ್ಯಗೊಳಿಸಿ ಮೂರು ಲೋಕಗಳಿಗೂ ಪ್ರತ್ಯಕ್ಷವಾಗಿ ತೋರಿಸಿದ ಕೀರ್ತಿಶಾಲಿ ಹರಿಶ್ಚಂದ್ರ.

ಅನೃತವನ್ನರಿಯದ ಸತ್ಯಸಂಧನಾದ ಹೊಲೆಯನನ್ನು ನೆನೆದರೂ ಪುಣ್ಯ ಉಂಟು. ಹೀಗಿರುವಾಗ ಸೂರ್ಯಕುಲೋತ್ಪನ್ನನೂ ವೀರನೂ ದಾನಿಯೂ ವಸಿಷ್ಠಮಹರ್ಷಿಗಳ ಶಿಷ್ಯನೂ ಮಹಾ ಶಿವಭಕ್ತನೂ ಕಾಶೀಕ್ಷೇತ್ರದಲ್ಲಿ ಮೆರೆದವನೂ ವೇದಪ್ರಮಾಣ ಸಿದ್ಧನೂ ಸತ್ಯನಿಷ್ಠನೂ ಆದ ಹರಿಶ್ಚಂದ್ರ ಮಹಾರಾಜನನ್ನು ಸ್ಮರಿಸಿದರೆ ದೊರೆಯುವ ಪುಣ್ಯಕ್ಕೆ ಮಿತಿಯುಂಟೆ? 'ಆತನನ್ನು ಸ್ಮರಿಸಿ ಹೊಗಳಿ ಜನರು ಬದುಕಲಿ' ಎಂಬ ಆಶಯದಿಂದ ಮಹಾಲಿಂಗಭಕ್ತರ ಭಕ್ತನಾದ ರಾಘವಾಂಕ ಕವಿಯು ಈ ಕಾವ್ಯವನ್ನು ವಿರಚಿಸಿದನು

ಮುನ್ನುಡಿ

ರಾಘವಾಂಕ ಕವಿಯ 'ಹರಿಶ್ಚಂದ್ರ ಕಾವ್ಯ' ಕನ್ನಡದಲ್ಲಿ ತುಂಬ ಜನಪ್ರಿಯವಾದ ಕಾವ್ಯ. ಹರಿಶ್ಚಂದ್ರನ ಕಥೆಯನ್ನಂತೂ ಎಲ್ಲರೂ ಬಲ್ಲರು. ಆದರೆ ರಾಘವಾಂಕ ನಿರೂಪಿಸಿರುವ ಕಥಾವೈಖರಿ ಅಸಾಮಾನ್ಯವಾದುದು. ಅದು ನಡುಗನ್ನಡದ ಷಟ್ಪದಿ ಶೈಲಿಯಲ್ಲಿದೆ. ಕವಿ ತನ್ನ ಕಾವ್ಯವನ್ನು 'ಜನ ಬದುಕಬೇಕೆಂದು' ರಚಿಸಿದನು. ಅದನ್ನು ಓದಿ ಅದರ ಸ್ವಾರಸ್ಯವನ್ನು ಪ್ರತಿಯೊಬ್ಬ ಕನ್ನಡಿಗನೂ ಅರಿಯಬೇಕೆಂದು ಕಾವ್ಯದ ಸರಳ ಗದ್ಯಾನುವಾದವೊಂದನ್ನು ಪ್ರಕಟಿಸಬೇಕೆಂದು ಪರಿಷತ್ತು ಆಲೋಚಿಸಿತ್ತು.

ಸಂಸ್ಕೃತ ಪಂಡಿತರೂ ಕನ್ನಡದಲ್ಲಿ ಸರಳವಾಗಿ ಬರೆಯ ಬಲ್ಲವರೂ ಆದ ಶ್ರೀ ಎನ್. ರಂಗನಾಥಶರ್ಮ ಅವರು ಪರಿಷತ್ತಿನ ಪ್ರಾರ್ಥನೆಯನ್ನು ಮನ್ನಿಸಿ ರಾಘವಾಂಕನ ಕಾವ್ಯವನ್ನು ಸರಳ ಗದ್ಯದಲ್ಲಿ ಹೃದಯಂಗಮವಾಗಿ ನಿರೂಪಿಸಿದ್ದಾರೆ. ಕಥೆಯ ಓಟ ಮೈಗೆಡದಂತೆ, ತಮ್ಮ ನಿರೂಪಣೆಯನ್ನು ಸೊಗಸಾಗಿಸಿದ್ದಾರೆ.

ಹರಿಶ್ಚಂದ್ರನ ಕಥೆ ಗದ್ಯದಲ್ಲಿ ನಿರೂಪಿತವಾಗಿರುವುದರಿಂದ ಪುಸ್ತಕ ಜನಪ್ರಿಯವಾಗುವುದರಲ್ಲಿ ಸಂಶಯವಿಲ್ಲ.

ಪುಸ್ತಕದ ಅನುವಾದವನ್ನು ಸಕಾಲದಲ್ಲಿ ಮಾಡಿಕೊಟ್ಟ ಶ್ರೀ ಎನ್. ರಂಗನಾಥಶರ್ಮ ಅವರಿಗೆ ನಮ್ಮ ಹಾರ್ದಿಕ ವಂದನೆಗಳು.

ಬೆಂಗಳೂರು
೧೬-೬-೧೯೭೨

ರಂ.ಶ್ರೀ.ಮುಗಳಿ
ಪ್ರಧಾನ ಸಂಪಾದಕರು

ಅನುವಾದಕನ ಅರಿಕೆ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ರಾಘವಾಂಕನ ಕೀರ್ತಿ ಸ್ಥಿರವಾದುದು. ಹರಿಶ್ಚಂದ್ರಕಾವ್ಯವೆಂದು ಈಗ ವ್ಯವಹೃತವಾಗುತ್ತಿರುವ ಈ ಕಾವ್ಯಕ್ಕೆ ಕವಿಯು ಇಟ್ಟ ಹೆಸರು 'ಹರಿಶ್ಚಂದ್ರ ಚಾರಿತ್ರ' ಎಂದು. 'ಕೃತಿಗೆ ನಾಮಂ ಹರಿಶ್ಚಂದ್ರ ಚಾರಿತ್ರ'(೧-೧೫). ಹರಿಶ್ಚಂದ್ರನ ಕಥೆ ದೇವೀಭಾಗವತ, ಸ್ಕಾಂದ ಪುರಾಣಾದಿಗಳಲ್ಲಿ ದೊರೆಯುತ್ತದೆ. ಇದನ್ನು ನಡುಗನ್ನಡದ ನುಡಿಯಲ್ಲಿ ಕಾವ್ಯವಾಗಿ ವಿರಚಿಸಿದ ರಾಘವಾಂಕನು ಮಹಾಕವಿಗಳ ವರ್ಗದಲ್ಲಿ ಸೇರತಕ್ಕವನು.

ರಾಘವಾಂಕನು ಪ್ರಾಚೀನ ಕಾವ್ಯ ಪದ್ಧತಿಯನ್ನನುಸರಿಸಿ ಈ ಕಾವ್ಯವನ್ನು ರಸವತ್ತಾಗಿ ನಿರ್ಮಿಸಿದ್ದಾನೆ. ಹರ್ಷ, ವಿಷಾದ, ಶೋಕ, ಕ್ರೋಧ ಮುಂತಾದ ಚಿತ್ತವೃತ್ತಿಗಳನ್ನು ಮನೋಜ್ಞವಾಗಿ ವರ್ಣಿಸಿದ್ದಾನೆ. ಹರಿಶ್ಚಂದ್ರನ ಧೀರೋದಾತ್ತತೆ ಸತ್ಯನಿಷ್ಠೆಗಳೂ, ಚಂದ್ರಮತಿಯ ಸೌಜನ್ಯ ಸಚ್ಚಾರಿತ್ರಗಳೂ, ವಿಶ್ವಾಮಿತ್ರನ ವಂಚನಾನೈಪುಣ್ಯ ಛಲಗಳೂ ಓದುಗರ ಮನಸ್ಸನ್ನಾಕರ್ಷಿಸಿ ತನ್ಮಯಗೊಳಿಸುತ್ತವೆ. ಪ್ರಕೃತಿಚಿತ್ರಣದಲ್ಲಿಯೂ ರಾಘವಾಂಕನು ಸಿದ್ಧಹಸ್ತ. ಮಾತಿಗೊಂದು ಮಾತಿನ ಕೊಂಡಿಯನ್ನಿಟ್ಟು ಸರಪಳಿಯಂತೆ ಸಂಭಾಷಣೆಯನ್ನು ಬೆಳೆಸುವ ಕವಿಯ ಚಾತುರ್ಯ ಮೆಚ್ಚುವಂತಹದು.

ಪೌರಾಣಿಕವಾದ ಪುಣ್ಯಕಥೆ ಇಲ್ಲಿ ಮಧುರವಾದ ಕಾವ್ಯವಾಗಿದೆ. ತಾನು ನಂಬಿದ ಮಹಾತತ್ತ್ವವಾದ ಸತ್ಯಕ್ಕಾಗಿ ಮಹತ್ತರವಾದ ವಿಪತ್ತನ್ನೂ ಎದುರಿಸಿ ಗೆದ್ದವನು ಹರಿಶ್ಚಂದ್ರ, 'ಆತನ ಪೊಗಳ್ದು ಜನ ಬದುಕಬೇಕೆಂದು ಕಾವ್ಯಮುಖದಿಂ ಪೇಳ್ದನನಪೇಕ್ಷೆಯಿಂದ ಕವಿ ರಾಘವಾಂಕಂ' (೧೪-೩೩) ' ಈ ಪೊಸ ಕಾವ್ಯ ಕನ್ಯಕೆಯ ಪಡೆದು ಪಂಪಾಂಬಿಕೆಯರಸ ವಿರೂಪಾಕ್ಷಂಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಕೃತ್ಯನೋ! (ಪರಿಶಿಷ್ಟ : 'ರಾ' ಪ್ರತಿ, ೧-೨೪).

ಶ್ರೀ ಎನ್. ಬಸವಾರಾಧ್ಯ, ಎಂ.ಎ. ಮತ್ತು ಪಂಡಿತ ಎಸ್. ಬಸಪ್ಪ ಇವರು ಸಂಪಾದಿಸಿದ ಹರಿಶ್ಚಂದ್ರ ಕಾವ್ಯವನ್ನು ಈ ಅನುವಾದದಲ್ಲಿ ಮೂಲವೆಂದು ಬಳಸಲಾಗಿದೆ. ಅವರು ಪರಿಶಿಷ್ಟದಲ್ಲಿ ಕಾಣಿಸಿದ ಪದ್ಯಗಳನ್ನು ಅನುವಾದಿಸಿಲ್ಲ. ಸಾಧ್ಯವಾದ ಮಟ್ಟಿಗೆ ಕವಿಯ ಮಾತುಗಳನ್ನೇ ಗದ್ಯದಲ್ಲಿ ಉಪಯೋಗಿಸಿದೆ. ಸೂಳೆಗೇರಿ, ಬೇಟೆ, ಲೋಹಿತಾಶ್ವನ ಮರಣಸಂದರ್ಭದಲ್ಲಿ ಚಂದ್ರಮತಿಯ ದುಃಖ – ಈ ಮೂರು ದೀರ್ಘವರ್ಣನೆಗಳನ್ನು ಮಾತ್ರ ಉಚಿತವೆಂದು ಭಾವಿಸಿ ಸ್ವಲ್ಪ ಸಂಕ್ಷೇಪಿಸಿದ್ದೇನೆ. ಇನ್ನು ರಸವತ್ತಾದ ಯಾವ ಭಾಗವನ್ನೂ ಅನುವಾದದಲ್ಲಿ ಬಿಟ್ಟಿಲ್ಲ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜನಸಾಮಾನ್ಯರ ಆಸಕ್ತಿಯನ್ನು ಪ್ರಚೋದಿಸಿ, ಮೂಲ ಗ್ರಂಥಗಳ ಕಡೆಗೆ ಕೈನೀಡಿಸುವುದು ಈ ಗದ್ಯಾನುವಾದದ ಮುಖ್ಯ ಗುರಿ. ಈ ಕಾರ್ಯವನ್ನು ಕೈಗೊಳ್ಳುವಂತೆ ಪ್ರೋತ್ಸಾಹಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರಿಗೂ ಪ್ರಕಟನಾ ಶಾಖಾಧ್ಯಕ್ಷರಾದ ಡಾ. ರಂ.ಶ್ರೀ. ಮುಗಳಿಯವರಿಗೂ ನಾನು ಕೃತಜ್ಞನಾಗಿದ್ದೇನೆ.

ಎನ್. ರಂಗನಾಥಶರ್ಮಾ

ಅನುಕ್ರಮಣಿಕೆ

೧. ಪೀಠಿಕೆ	–	೩
೨. ಕಥಾರಂಭ	–	೧೨
೩. ವಸಿಷ್ಠ ವಿಶ್ವಾಮಿತ್ರರ ವಿವಾದ	–	೧೬
೪. ವಸಂತ ವಿಹಾರ	–	೨೫
೫. ನಗರ ಪರ್ಯಟನ	–	೩೫
೬. ಮೃಗಯಾ ಪ್ರಸಂಗ	–	೩೯
೭. ವಿಶ್ವಾಮಿತ್ರಾ ಶ್ರಮಪ್ರವೇಶ	–	೪೭
೮. ಚಂಡಾಲಕನ್ಯಕಾಪ್ರಸಕ್ತಿ	–	೫೫
೯. ಸರ್ವಸ್ವದಾನ	–	೬೧
೧೦. ಕಾನನಪರಿಭ್ರಮಣ	–	೮೦
೧೧. ವಿಶ್ವನಾಥದರ್ಶನ	–	೮೯
೧೨. ಪತ್ನೀಪುತ್ರವಿಕ್ರಯ, ಆತ್ಮ ವಿಕ್ರಯ	–	೯೫
೧೩. ಲೋಹಿತಾಶ್ವಮರಣ	–	೧೦೬
೧೪. ವಿಶ್ವನಾಥಸಾಕ್ಷಾತ್ಕಾರ	–	೧೧೮
೧೫. ವರಪ್ರದಾನ, ಸಿಂಹಾಸನಾರೋಹಣ	–	೧೨೩

ರಾಘವಾಂಕನ

ಹರಿಶ್ಚಂದ್ರ ಚರಿತೆ

(ಗದ್ಯಾನುವಾದ)

ಪೀಠಿಕೆ

ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯ ವಾ
ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ
ತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕವಾವರಿಸುವ ।
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ
ಪಾಪತಿ ವಿರೂಪಾಕ್ಷನೆಮಗಿಷ್ಟಸಿದ್ಧಿಯಂ ಮಾಳ್ಕೆ ಸಂತೋಷದಿಂದ ॥

ಶ್ರೀವಿರೂಪಾಕ್ಷಸ್ವಾಮಿಯು ನಮ್ಮೆಲ್ಲರ ಇಷ್ಟವನ್ನೂ ನೆರವೇರಿಸಲೆಂದು ಪ್ರಾರ್ಥಿಸುತ್ತೇನೆ. ಆ ಸ್ವಾಮಿಯು ಲಕ್ಷ್ಮೀಪತಿಯಾದ ವಿಷ್ಣುವಿಗೆ ಸೌಭಾಗ್ಯವನ್ನೂ ತಾರಾಪತಿಯಾದ ಚಂದ್ರನಿಗೆ ಸೌಮ್ಯತೆಯನ್ನೂ ವಾಣೀಪತಿಯಾದ ಬ್ರಹ್ಮನಿಗೆ ಬುದ್ಧಿಶಕ್ತಿಯನ್ನೂ ಅನುಗ್ರಹಿಸಿದವನು. ಸೂರ್ಯನಿಗೆ ಪ್ರತಾಪವನ್ನೂ ಇಂದ್ರನಿಗೆ ಸುಖಭೋಗವನ್ನೂ ಮನ್ಮಥನಿಗೆ ಮೂರು ಲೋಕಗಳನ್ನೂ ಮೀರಿಸುವ ಸೌಂದರ್ಯವನ್ನೂ ಸಮುದ್ರರಾಜನಿಗೆ ಗಾಂಭೀರ್ಯವನ್ನೂ ಕರುಣಿಸಿದವನು. ಅಗ್ನಿಗೆ ತೇಜಸ್ಸನ್ನು ಕೊಟ್ಟವನು ಆತನೇ. ಗುರುಮೂರ್ತಿಯಾದ ಆ ಪಂಪಾಪತಿಯು ಸಂಪ್ರೀತನಾಗಿ ನಮ್ಮ ಇಷ್ಟಸಿದ್ಧಿಯನ್ನು ಮಾಡಲಿ.

ಸಮುದ್ರಮಂಥನ ಸಮಯದಲ್ಲಿ ಮೇಲೆದ್ದ ಕಾಲಕೂಟ ವಿಷದ ಉರುಬೆಗೆ ತತ್ತರಿಸುತ್ತ ಬಾಲಚಂದ್ರನು ಕಡಲತಡಿಯನ್ನಡರಿದನು. ಆ ಸಂದರ್ಭದಲ್ಲಿ ದೇವದಾನವಸೇನೆಯನ್ನು ಸಲಹಲು ಶಿವನು ಬಂದನು. ಚಂದ್ರನ ಒಡಲು ನಡನಡುಗುತ್ತಿರಲು ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅವನು ಶಿವನ ಸಾಂದ್ರವಾದ ಜಡೆಯ ಎಡೆಯಲ್ಲಿ ಅಡಿಯಿಟ್ಟು ಅಡಗಿಕೊಂಡನು. ಕಾಲಕೂಟವಾದರೋ ಘುಡುಘುಡಿಸುತ್ತ ದೇವದಾನವರ ಪಡೆಯನ್ನು ಜಡಿದು ಕೆಡವುತ್ತಿತ್ತು. ಆಗ, ಅಡಿಗಡಿಗೆ ಕಿಡಿಗೆದರುವ ನಡುನಯನದ ಮೃಡನು ಕಡಲ ಬಳಿಗೆ ನುಗ್ಗಿ ಆ ವಿಷವನ್ನು ಹಿಡಿದು ಹೊಸೆದು ತನ್ನ ಕೊರಳೆಡೆಯಲ್ಲಿ ತೊಡೆದುಕೊಂಡುಬಿಟ್ಟನು! ಅಂಥ ಮಹಾಮಹಿಮನಾದ ಶಿವನು ನಮ್ಮನ್ನು ಬಿಡದೆ ಸಲಹಲಿ.

ಹೇ ಉಮಾಸಹಿತ, ಸೋಮಭೂಷಿತ, ಸುರರಾಜರಾಜ, ರಿಪುಭೀಮ, ಭೀಕರ ವಿಶಾಲಬಾಹು, ಯಮನನ್ನೇ ನಿಯಮಿಸಿದವನೆ, ಕಾಮನನ್ನು ಜಯಿಸಿದವನೆ, ನಿಷ್ಕಾಮನೆ, ಗುಣಮಯನೆ, ಕೆಂಜೆಡೆಯಿಂದ ಶೋಭಿತನೆ, ವಿಷವನ್ನು ಕೊರಳಲ್ಲಿ ಧರಿಸಿದವನೆ, ಜಗತ್ಪಾಲಕ, ಪುಣ್ಯನಿವಾಸ, ತೇಜೋನಿಧಿ, ಬಲಶಾಲಿಯೆ, ಸಕಲವೇದಗಳ ಸಾಮರ್ಥ್ಯವುಳ್ಳವನೆ, ಸಾಮವೇದಸ್ತುತ್ಯ, ಪಂಪಾಧಿಪತಿ, ವಿರೂಪಾಕ್ಷ ನಮ್ಮಲ್ಲಿ ಕರುಣೆದೋರಿಸು.

ನಿರುಪಮ ನಿರಾಲಂಬ ನಿತ್ಯ ನಿರ್ಭಯ ನಿರಾ
ವರಣ ನಿರ್ಮಾಯ ನಿರ್ಮಳ ನಿರ್ವಿಕಲ್ಪ ನಿಜ
ನಿರಸೂಯ ನಿಶ್ಚಿಂತ ನಿರ್ಲೇಪ ನಿರ್ಗುಣ ನಿರಾಧಾರ ನಿತ್ಯತೃಪ್ತ।
ನಿರವದ್ಯ ನಿರ್ಭಿನ್ನ ನಿರ್ದ್ವಂದ್ವ ನಿರ್ದೋಷ
ನಿರಪೇಕ್ಷ ನಿಷ್ಕಾಮಿ ನಿಷ್ಕಳ ನಿರಾಕಾರ
ನಿರಜ ನಿರಹಂಕಾರ ನಿರ್ಮಳ ನಿರಾಳ ಪಂಪಾವಿರೂಪಾಕ್ಷ ಶರಣು॥

ನುತಕಾಯ ಜಿತಮಾಯ ಪುರಮಥನ ವರಕಥನ
ಧೃತಸೋಮ ಗತಕಾಮ ಚಿರಲಿಂಗ ವರಸಂಗ
ಶ್ರುತಿದೂರ ಮತಿಸಾರ ಗಿರಿಜೇಶ ಸ್ಮರನಾಶ ದುರಿತಹರ ಕರುಣಾಕರ।
ಪ್ರತಿರಹಿತ ನುತವಿಹಿತ ಶರದಮಯ ಭರಿತಜಯ
ವಿತತಗಣ ಚತುರಗುಣ ಸುರರಾಜ ವರತೇಜ
ಸಿತಗಳನೆಯತಿಬಳನೆ ಶರಣಾಗು ಗುರುಮೂರ್ತಿ ಪಂಪಾಪುರಾಧೀಶ್ವರ।

ಬಾಲಚಂದ್ರ- ಮಲ್ಲಿಗೆಯ ಮಾಲೆ, ಕೆಂಜೆಡೆ-ತುರುಬು, ಉರಿಗಣ್ಣು-ಕಸ್ತೂರಿ ತಿಲಕ, ಪಿಂಗಳನೇತ್ರ- ಕಮಲನೇತ್ರ, ಕುಂಡಲಾಕೃತಿಯ ಸರ್ಪ- ಚಿನ್ನದ ಓಲೆ, ವಿಷದ ಕಪ್ಪು- ರತ್ನದ ತಾಳಿ, ಸುಂದರವಾದ ಸ್ಫಟಿಕದ ಹಾರ- ಮನೋಹರವಾದ ಸ್ತನ, ವ್ಯಾಘ್ರ ಚರ್ಮ- ದುಕೂಲ, ತ್ರಿಶೂಲ- ಲೀಲಾಕಮಲ ಇವುಗಳಿಂದೊಪ್ಪುತ್ತ ಒಂದು ಪಾದದಲ್ಲಿ ನೂಪುರವನ್ನು ಧರಿಸಿದ ಅರ್ಧನಾರೀಶ್ವರ ಮಹಾದೇವನು ನಮ್ಮನ್ನು ಸಲಹಲಿ.

ಪಂಪಾಂಬಿಕೆಯಾದ ಉಮಾದೇವಿಯು ಸಂಪ್ರೀತಳಾಗಿ ನನ್ನ ಬುದ್ಧಿಗೆ ಪ್ರಸನ್ನತೆಯನ್ನು ಕರುಣಿಸಲಿ. ಅವಳು ಸರಸ್ವತಿಯ ಜ್ಞಾನಕ್ಕೆ ಪ್ರಕಾಶ ರೂಪಿಣಿ; ಮುಕ್ತಿವನಿತೆಯ ಮುಡಿಯಲ್ಲಿ ಇರುವ ಮಾಣಿಕ್ಯ; ಸರ್ವಮಂತ್ರಗಳಿಗೂ ಆದಿ; ಪಂಚಾಕ್ಷರೀ ಮಂತ್ರದ ಪ್ರಾಣ; ಮಂಗಳದ ಮನೆ; ದೇವಲೋಕದ ಜನ್ಮಭೂಮಿ; ವಿಷ್ಣುವಿನ ರಾಣಿಯಾದ ಲಕ್ಷ್ಮಿಯು ಧರಿಸುವ ಓಲೆಯ ಭಾಗ್ಯ; ಸಕಲಸಿದ್ಧಿಗಳ ತಾಣ; ವಿರೂಪಾಕ್ಷನ ಉನ್ನತೈಶ್ವರ್ಯದ ಸ್ಥಾನ.

ಉಮಾಧವನಾದ ಶ್ರೀ ಪಂಪಾವಿರೂಪಾಕ್ಷನು ನಮಗೆ ಭಕ್ತಿ ಜ್ಞಾನಗಳ ಸಂಪತ್ತನ್ನು ಅನುಗ್ರಹಿಸಲಿ. ಅವನು ಇಂದುಧಾರಿ; ಅಭಯಕಾರಿ; ಉಗ್ರಮಾಯ; ಭಕ್ತರ ಭವಹಾರಿ; ಗಂಗಾಧಾರಿ; ಸರ್ಪಭೂಷಣ; ದಿವ್ಯರೂಪ; ಪಾಪವೆಂಬ ಕತ್ತಲಿಗೆ ಸೂರ್ಯ; ನಿರ್ದೋಷ; ವಿಶಾಲವಾದ ವಿಶ್ವದ ಈಶ; ಪುಣ್ಯದಾಯಕ; ಹರಿ ಬ್ರಹ್ಮ ಮೊದಲಾದ ದೇವತೆಗಳ ಅಧೀಶ.

ಹಂಪೆಯ ಶಂಕರಪ್ರಭು ನನ್ನ ಬುದ್ಧಿಗೆ ಪ್ರಸನ್ನತೆಯನ್ನು ಅನುಗ್ರಹಿಸಲಿ. ಆತನು ಶ್ರೀ ವಿರೂಪಾಕ್ಷನಂತೆ ನಿತ್ಯನು; ಅಭಿನವ ಮಹಾದೇವನೆನಿಸಿದವನು; ಜಿತೇಂದ್ರಿಯನೂ ನಿಷ್ಕಾಮನೂ ಆಗಿದ್ದಾನೆ; ಭೌತಿಕದೇಹದ ಗುಣ ಸಂಬಂಧವಿಲ್ಲದ ನಿರ್ಮಲನೂ ನಿರ್ಲೇಪನೂ ಆಗಿದ್ದಾನೆ; ಲೌಕಿಕ ರಾಗದ್ವೇಷಗಳು ಅಂಟದ ಅಸಾಧಾರಣ ಪುರುಷ; ಜಗದ್ವಂದಿತ; ನಿತ್ಯತೃಪ್ತ; ಸಮಸ್ತ ಜೀವಿಗಳಲ್ಲಿಯೂ ಕಾರುಣ್ಯವುಳ್ಳವನು; ಪುಣ್ಯಾತ್ಮನೆಂದು ವಿಖ್ಯಾತನಾದವನು.

ಪಂಪೆಯ ಮಾದಿರಾಜನ ಜ್ಞಾನದೀವಿಗೆಯು ನನ್ನ ಹೃದಯದಲ್ಲಿ ಬೆಳಗಲಿ. ಕವಿಯುತ್ತಿರುವ ಮಾಯೆಯೆಂಬ ಕಾರ್ಗತ್ತಲೆಯು ಅಳಿಯಲಿ. ಮಾದಿರಾಜನು ನಿಖಿಲಾಗಮಗಳ ಆಚಾರ್ಯ; ಅಸೂಯಾರಹಿತ; ಕಳಂಕ ರಹಿತನೂ ಶ್ರೇಷ್ಠನೂ ಆದ ಅಪ್ರತಿಮ ಪುರುಷ; ಸಕಲವೇದಗಳ ಸಾರಜ್ಞ; ಅವಿದ್ಯೆಯನ್ನು ದಾಟಿದವನು;

ಆನಂದಮಯ; ಶಾಪಾನುಗ್ರಹಗಳ ಅಧಿಕಾರಿ; ಕೀರ್ತಿಶಾಲಿ; ಗುಪ್ತಲಿಂಗಪ್ರೇಮಿ; ಅಲ್ಲದೆ ಉತ್ತಮ ಕವಿ.

ಗುರುರಾಜನೆನಿಸಿದ ಹಂಪೆಯ ಮಹಾದೇವನು ನಮ್ಮನ್ನು ರಕ್ಷಿಸಲಿ. ಆತನು ಈ ನಿಯಮಗಳನ್ನು ಪಾಲಿಸಿ ನಡೆಸಿದ ಮಹಾನುಭಾವ: ೧. ಶಿವಭಕ್ತರದಲ್ಲದವರಿಗೆ ಕೈ ಮುಗಿಯದಿರುವುದು. ೨. ತನ್ನ ಪತ್ನಿಯಲ್ಲಿಯೇ ಹೊರತು ಅನ್ಯಸ್ತ್ರೀಯಲ್ಲಿ ಮನಸ್ಸನ್ನಿಡದಿರುವುದು. ೩. ದೇಹದಲ್ಲಿ ಮಮತೆಯನ್ನಿಡದಿರುವುದು. ೪. ಅನ್ಯರನ್ನು ನಿಂದಿಸದಿರುವುದು. ೫. ಪರದೈವವನ್ನು ಚಿಂತಿಸದಿರುವುದು. ೬. ಸತತವೂ ಶಿವಲಿಂಗಪೂಜೆಯನ್ನು ತಪ್ಪಿಸದಿರುವುದು. ೭. ಕಾಮಾದಿ ಷಡ್ವರ್ಗಗಳಿಗೆ ಒಳಗಾಗದಿರುವುದು.

ಅಂಥ ಮಹಾದೇವನ ಉದರದಲ್ಲಿ ಜನಿಸಿದ ಹಂಪೆಯ ಹರೀಶ್ವರನ ಮೂರ್ತಿ ನನ್ನ ಚಿತ್ತದಲ್ಲಿ ಸದಾ ನೆಲಸಿರಲಿ. ಹರೀಶ್ವರನಾದರೋ ತನ್ನ ತಂದೆಯಾದ ಮಹಾದೇವನಲ್ಲಿದ್ದ ಗುರುಭಕ್ತಿ. ನಿಷ್ಕಾಮತೆ, ಜ್ಞಾನ, ಆಚಾರ, ನೀತಿ, ದಯೆ, ಜಂಗಮಪ್ರೇಮ, ಶಮೆ, ದಮೆ, ಶಾಂತಿ, ದಾಂತಿ, ಚಾತುರ್ಯ, ಸತ್ಯ, ಔದಾರ್ಯ, ಏಕನಿಷ್ಠತೆ, ಸಾಮರ್ಥ್ಯ, ಸಕಲ ಕಲೆಗಳ ಪ್ರೌಢಿಮೆ ಮುಂತಾದ ಸದ್ಗುಣ ಸ್ತೋಮವು ಒಂದೆಡೆ ಸೇರಿ ಮೂರ್ತಿಯಾಯಿತೋ ಎಂಬಂತೆ ಇರತಕ್ಕವನು.

ನಾಲ್ಕು ವೇದಗಳನ್ನೂ ಹದಿನಾರು ಶಾಸ್ತ್ರಗಳನ್ನೂ ಹದಿನೆಂಟು ಪುರಾಣಗಳನ್ನೂ ಕೇಳಿ ಶೋಧಿಸಿ ತಿಳಿದು ತೂಗಿ ಹೇಳುತ್ತಿದ್ದೇನೆ. ಏನೆಂದರೆ, ಶ್ರೀ ವಿರೂಪಾಕ್ಷನ ಪಾದವೇ ದಿವ್ಯವಾದುದು. ಈ ನುಡಿಯಲ್ಲಿ ಯಾವ ಊಣೆಯವೂ ಇಲ್ಲ. ಅಂತೆಯೇ ಹೋಲಿಸಿ ನೋಡಿದರೆ ನನ್ನ ಈ ಕೃತಿಗೆ ಸಮಾನವಾದ ಇನ್ನೊಂದು ಕೃತಿ ಇಲ್ಲ. ಹಂಪೆಯ ಮಹಾದೇವನ ಆತ್ಮಜನಾದ ರಾಘವಾಂಕನ ಈ ಕಾವ್ಯವು ಶುಷ್ಕತರ್ಕಕ್ಕೆ ಸವಾಲಾಗಿ ಒಡ್ಡಿದ ಒಂದು ಒಗಟು.

ಮನೋವಾಕ್ಕಾಯಗಳಿಂದ ಒಮ್ಮೆಯೂ ಫಾಲಲೋಚನನಾದ ಶಿವನನ್ನಲ್ಲದೆ ಇನ್ನೊಬ್ಬನನ್ನು ಹೊಗಳದಿರುವ ನಾನು, ಈ ಮಹಾಕಾವ್ಯವನ್ನು ರಚಿಸಲು ತೊಡಗಿದ್ದೇನೆ. ಶಿವಭಕ್ತರಾದ ಮಯೂರ, ಕಾಳಿದಾಸ, ಹಲಾಯುಧ, ಕೇಶಿರಾಜ, ಮಲುಹಣ, ಬಾಣ, ಭೋಜ, ಭಲ್ಲಟ, ಭಾರವಿಗಳ ಪಾದವನ್ನು ನೆನೆದು ವಂದಿಸಿ ಈ ಕೃತಿಯನ್ನು ಆರಂಭಿಸಿದ್ದೇನೆ. ಅವರೆಲ್ಲರೂ ನನಗೆ ನೆರವಿತ್ತು, ಈ ಕಾರ್ಯವನ್ನು ನಿರ್ವಿಘ್ನವಾಗಿ

ನೆರವೇರಿಸಿಕೊಡಲಿ. ಇದು ರಸವತ್ತಾಗುವಂತೆ ಮಾಡಿ ತಿದ್ದಲಿ.

ಈ ಕಾವ್ಯದ ಹೆಸರು ಹರಿಶ್ಚಂದ್ರ ಚರಿತೆ. ಇದರ ಅಧಿದೇವತೆ ನಿರ್ಮಲನಾದ ಪಂಪಾ ವಿರೂಪಾಕ್ಷ. ಇದರ ಪಾಲಕರು ಲೋಕದ ಭಕ್ತಜನರು. ಈ ಕಾವ್ಯವನ್ನು ರಚಿಸಿದವನು ಚತುರ ಕವಿರಾಜ ಹಂಪೆಯ ಹರೀಶ್ವರನ ವರಸುತನೆನಿಸಿದ ಉಭಯಕವಿಕಮಲರವಿ ರಾಘವಾಂಕ ಪಂಡಿತ! ಹೀಗಿರಲಾಗಿ ಕಥಾರಸದ ಲಹರಿಯನ್ನು ಹೊಗಳದವರು ಈ ಜಗತ್ತಿನಲ್ಲಿ ಯಾರಿದ್ದಾರೆ?

ರಾಘವಾಂಕನ ಭಾಷೆಯ ಹೆಚ್ಚುಗಾರಿಕೆಯೇನೆಂದರೆ; ಅವನದು ಪರಧನವನ್ನು ಸ್ವೀಕರಿಸಿ ಕೃತಿಯನ್ನು ರಚಿಸದಿರುವ ಭಾಷೆ. ಪರರ ಕಾವ್ಯಾರ್ಥಗಳನ್ನು ಕದಿಯದ ಭಾಷೆ. ಅನ್ಯದೈವವನ್ನು ನುತಿಸದ ಭಾಷೆ. ಪರರಿಗೆ ಮನಃಕ್ಲೇಶವನ್ನು ತರದ ಭಾಷೆ. ಪರರನ್ನು ನಿಂದಿಸಿ ತನ್ನನ್ನು ಹೊಗಳಿಕೊಳ್ಳದ ಭಾಷೆ. ಪರರ ವಧುವನ್ನು ಕಂಡು ಮನವೆಳಸದಿಹ ಭಾಷೆ. ಪರರ ವಸ್ತುವನ್ನು ತೃಣಕ್ಕೆ ಸರಿಯೆಂದು ತಿಳಿಯುವ ಭಾಷೆ. ಈ ಗುಣವೆಲ್ಲವೂ ರಾಘವಾಂಕನಿಗೆ ಸಲ್ಲತಕ್ಕದ್ದು.

ಹರಿಶ್ಚಂದ್ರ ಭೂಪಾಲನು ಸತ್ಯನಿಷ್ಠನೆಂದು ವಸಿಷ್ಠ ಮುನಿಯು ಇಂದ್ರನಿಗೆ ಹೇಳಿದನು. ಆಗ ವಿಶ್ವಾಮಿತ್ರನು ಆ ಮಾತನ್ನು ಹುಸಿಗೈಯುವೆನೆಂದು ಶಪಥ ಮಾಡಿ ಭೂಲೋಕಕ್ಕೆ ಬಂದು ಹರಿಶ್ಚಂದ್ರನನ್ನು ಪೀಡಿಸತೊಡಗಿದನು. ಅವನ ಪತ್ನೀಪುತ್ರರು ಸಾಯುವ ಪರಿಸ್ಥಿತಿಯನ್ನು ತಂದೊಡ್ಡಿ ಕಾಡಿದರೂ ಹರಿಶ್ಚಂದ್ರನು ಸುಳ್ಳಾಡಲಿಲ್ಲ. ಆಗ ಚಂದ್ರಶೇಖರನಾದ ಶ್ರೀ ವಿಶ್ವನಾಥನು ರಾಜನಲ್ಲಿ ದಯೆದೋರಿ ಸಕಲ ಸಾಮ್ರಾಜ್ಯವನ್ನು ಅನುಗ್ರಹಿಸಿ ಅವನ ಕೀರ್ತಿಯನ್ನು ಮೆರೆಸಿದನು. ಇದನ್ನು ವರ್ಣಿಸುವ ಪುಣ್ಯಕಾವ್ಯವಿದು.

ಇದಿಷ್ಟು ಸಂಕ್ಷಿಪ್ತವಾದ ಕಥಾಬೀಜ. ಈ ಬೀಜವನ್ನು ಬಿತ್ತಿ ಕಾವ್ಯ ವೃಕ್ಷವನ್ನು ಬೆಳೆಸುತ್ತೇನೆ. ಶಿವಪದಾರ್ಚಕರೂ ಅಭಿಮಾನಿಗಳೂ ರಸಿಕರೂ ಸಂಮಾನ್ಯರೂ ಕಾವ್ಯಕಲಾಕೋವಿದರೂ ಆದ ನೀವು, ನಿಮ್ಮ ರೋಮಾಂಚವೆಂಬ ಗೊಬ್ಬರವನ್ನು ಈ ವೃಕ್ಷಕ್ಕೆ ಹಾಕಿ ಆನಂದಬಾಷ್ಪವೆಂಬ ನೀರನ್ನು ಎರೆದು ಸಲಹಿರಿ. ವಿಸ್ತಾರವಾಗಿ ಹರಡಿದ ಅರ್ಥಗಳೆಂಬ ಕೊಂಬೆಗಳ ನೆರಳಲ್ಲಿ ನಿಂತು ಮೊದಲಿಂದ ತುದಿವರೆಗೆ ಹೇರಿದ ಹೊಸ ಹಣ್ಣುಗಳ ರಸವನ್ನು ಸವಿಯಿರಿ!

ಹರಿಶ್ಚಂದ್ರ ನೃಪಾಲನ ಈ ಕಥಾವೃತ್ತಾಂತವು ಶಿವಭಕ್ತಿಯೆಂಬ ಬಳ್ಳಿಯನ್ನು ಬೆಳಸುವ ಹೊಸಬಗೆಯ ಬೀಜವಾಗಿದೆ. ಇದು ಸಜ್ಜನರ ಚಿತ್ತದಲ್ಲಿ ರಸಭಾವಭರಿತವಾದ ಅರ್ಥ ಸಂಪತ್ತನ್ನು ಮೂಡಿಸಿ ಅವರ ಪುಳಕಗಳೆಂಬ ಮೊಳಕೆಗಳನ್ನು ಹೊತ್ತು ಆನಂದಾಶ್ರುಗಳ ನೀರಿನಿಂದ ಪೋಷಿತವಾಗಿ ವಿಸ್ತೃತವಾಗಿ ಬೆಳೆಯುತ್ತದೆ. ಇನ್ನೊಂದು ವಸ್ತುವಿನಲ್ಲಿ ಅಭಿಲಾಷೆ ಹುಟ್ಟದಂತೆ ಮಾಡಿ ಎಲ್ಲರನ್ನೂ ತನ್ನೆಡೆಗೆ ಸೆಳೆಯುತ್ತದೆ.

ಈ ಕಾವ್ಯದ ರಸ, ಅರ್ಥ, ಭಾವ, ಅಲಂಕಾರ, ರೀತಿ, ಬಂಧ, ಲಕ್ಷಣ, ಪದಪ್ರಯೋಗ- ಇವುಗಳ ವಿಷಯದಲ್ಲಿ ಯಾವುದಾದರೂ ತಪ್ಪಿದ್ದರೆ ಶಿವಭಕ್ತರು ಸರಿಪಡಿಸಬೇಕು. ಅನ್ಯರು ಕೈಹಾಕದಂತೆ ತಿದ್ದಬೇಕು. ಈ ಕೃತಿಯನ್ನು ಕೊಂಡಾಡಿ ಲಾಲಿಸಿ ಕೇಳಬೇಕು. ನೀವು ತಿದ್ದುವುದರಿಂದ ನನಗೆ ಯಾವ ಕುಂದೂ ಇಲ್ಲ, ನಾನು ನಿಮ್ಮ ಶಿಶು. ಆದ್ದರಿಂದ ನನ್ನನ್ನು ಪೋಷಿಸುವ ಭಾರ ನಿಮಗೆ ಸೇರಿದೆ.

ವಚನರಚನೆ, ಕಾವ್ಯಲಕ್ಷಣ, ಅರ್ಥ, ರಸ, ಭಾವಕೋವಿದರಾದ ಕವೀಂದ್ರರ ಕಾವ್ಯವಿರಲಾಗಿ, ಈ ಜಡಮತಿಯೊಬ್ಬನು ಈಶ್ವರನ ಮಹಿಮೆಯನ್ನು ಬಣ್ಣಿಸುವುದಕ್ಕೆ ಏಕೆ ಹೊರಟನೊ! -ಎಂದು ನನ್ನನ್ನು ನೋಡಿ ನಗಬಾರದು. ಏಕೆಂದರೆ, ದೀಪವು ಬಡವರ ಮನೆಯಲ್ಲಿ ಇದ್ದರೆ ಬೆಳಗಲಾರದೆ ಕಂದಿ ಹೋಗುವುದೆ? ನಾಡ ಹಸು ಕೊಡುವ ಹಾಲು ಕಹಿಯಾಗುವುದೆ? ಎಲವೊ, ಸಂಶಯಬೇಡ; ನಂಬು! ಕೈ ನೀಡಿ ಹೇಳುವೆನು, ನನ್ನ ಕೃತಿ ಪೊಡವಿಯಲ್ಲಿ ಕೀರ್ತಿವೆತ್ತು ಮೆರೆಯುವುದು!

ನಡೆಯತಕ್ಕವನು ಎಡವುತ್ತಾನಲ್ಲದೆ ಎದ್ದು ನಿಲ್ಲಲೂ ಶಕ್ತಿಯಿಲ್ಲದವನು ಎಡವುತ್ತಾನೆಯೆ? ಹಾಗೆ ಕವಿಯು ಕಾವ್ಯವನ್ನು ರಚಿಸುವಾಗ ರಸಾವೇಶದಿಂದಲೋ, ಮರೆವಿನಿಂದಲೋ, ಆಲಸ್ಯದಿಂದಲೊ ತಪ್ಪು ಮಾಡಿಯಾನು. ಒಂದೆರಡು ಎಡೆಗಳಲ್ಲಿ ತಪ್ಪು ನುಸುಳಿದ ಮಾತ್ರಕ್ಕೆ ಅದನ್ನೇ ಹಿಡಿದು ಸಾಧಿಸಬಾರದು. ಕಡೆತನಕ ಬಂದ ಗುಣವನ್ನು ಮೆಚ್ಚಿ ತಲೆದೂಗಬೇಕು. ತಲೆದೂಗಿದರೆ ತಲೆ ಒಡೆದುಹೋಗುವುದೆ! ಕವಿಯ ಕಷ್ಟವನ್ನು ಅರಿಯಲಾರದ ನೀರಸ ಜನರನ್ನು ಬ್ರಹ್ಮನು ಅದೇಕೆ ಸೃಷ್ಟಿಸಿದನೋ!

ವ್ಯಾಕರಣಪರಿಣತನೂ ಅಲಂಕಾರಕೋವಿದನೂ ರಸನಿಪುಣನೂ ವಚೋವಿನ್ಯಾಸಪ್ರವೀಣನೂ ಕಲಾಕುಶಲನೂ ಆದವನು ಮಹಾಕವಿಯೆನಿಸುತ್ತಾನೆ. ಅವನೆದುರಿಗೆ ಏನನ್ನೂ ಅರಿಯದವನು ಒಂದು ಕಗ್ಗವನ್ನು ಹೊಸೆದು ಕವಿಯೆನಿಸಿಕೊಂಡಲ್ಲಿ ಮಹಾಕವಿಗೆ ಬಂದ ಕುಂದೇನು? ಜಲಶಾಯಿಯಾದ ವಿಷ್ಣು

ಹರಿ ಎಂದು ವಿಖ್ಯಾತನಾಗಿದ್ದಾನೆ. ನೀರಲ್ಲಿರುವ ಕಪ್ಪೆಯೂ ಹರಿ ಎನಿಸಿಕೊಂಡಿದೆ! ವಿಷ್ಣುವೇನಾದರೂ ಕುಪಿತನಾಗಿ ಚಕ್ರವನ್ನು ಹಿಡಿದು ಬಂದು ಕಪ್ಪೆಯನ್ನು ಕೊಂದಿದ್ದಾನೆಯೆ!

ಮಹಾಕವಿ ಇದ್ದರೇನು ಕಾವ್ಯವನ್ನು ಕೇಳುವವರೇ ಇಲ್ಲದಾಗ? ಸಂಗೀತಗಾರನಿದ್ದರೇನು ಆಲಿಸಿ ಆನಂದಿಸುವ ಜಾಣರಿಲ್ಲದಾಗ? ಕಲಾವತಿಯಾದ ಚೆಲುವೆ ಇದ್ದರೇನು ಮೆಚ್ಚದ ರಸಿಕನಿಲ್ಲದಾಗ? ಹೊಸ ಹೂಮಾಲೆಯಿಂದೇನು ಮುಡಿಯುವವರೇ ಇಲ್ಲದಾಗ? ಕಲಾವಿದರ ಗುಂಪಿನಿಂದೇನು ಕಲೆಯ ಸೊಗಸನ್ನರಿತ ಪ್ರೌಢರಿಲ್ಲದಾಗ? ಸ್ವಯಂ ವಿದ್ವಾಂಸನಾಗಿ ಅಪೂರ್ವವಾದ ಕಲಾಭಿಜ್ಞತೆಯುಳ್ಳವನು ದೇವತೆಯೇ ಸರಿ, ಮನುಷ್ಯನಲ್ಲ.

ಏನೋ ಪುಣ್ಯವಶದಿಂದ ಯಾವುದೋ ಒಂದು ಊರಲ್ಲಿ ಒಬ್ಬಿಬ್ಬರನ್ನು ಮಾತ್ರವೇ ನಾನು ಮೆಚ್ಚಿಸುತ್ತೇನೆ- ಎಂದರೆ ಹೇಗಾದೀತು! ಜಗತ್ತಿನಲ್ಲಿ ಈ ಕಾವ್ಯವಿದೆಯೆಂದು ಗೊತ್ತಿದ್ದರೂ ಕೇಳದೆ ಇದ್ದವರ ವಿಷಯದಲ್ಲಿ ನಾನೇನೂ ಹೇಳಲಾರೆ. ಒಂದು ಸಲ ಈ ಕಾವ್ಯವನ್ನು ಕಿವಿಯೊಡ್ಡಿ ಕೇಳಿದಾಗ, ಅವರು ಕವಿಗಳಾಗಲಿ, ಗಮಕಿಗಳಾಗಲಿ, ವಾದಿಗಳಾಗಲಿ, ವಾಗ್ಮಿಗಳಾಗಲಿ, ರಸಾವೇಶದಿಂದ ಎಲ್ಲರೂ ತಲೆದೂಗುವಂತೆ ಮಾಡುತ್ತೇನೆ! "ನಿನ್ನ ಕಾವ್ಯವನ್ನು ಮೆಚ್ಚದ ದುರ್ಜನರೂ ಇದ್ದಾರು!" ಎಂದು ನೀನು ಪ್ರಶ್ನೆ ಹಾಕಿದರೆ, ಅದಕ್ಕೆ ಉತ್ತರವನ್ನು ಹೇಳುತ್ತೇನೆ, ಕೇಳು!

ರೋಗಿ ಹಳಿದರೆ ಹಾಲು ಹುಳಿಯಾಗುವುದೊ? ಗೂಗೆ ಹಗಲಲ್ಲಿ ಕಾಣಲಾರದೆ ದೂರಿದರೆ ಸೂರ್ಯನಿಗೆ ಕುಂದೊ? ಕುರುಡನು ತನ್ನ ಮುಖವನ್ನು ನೋಡಲಾಗದಿದ್ದರೆ ಕನ್ನಡಿ ಕೆಟ್ಟದೆಂದು ಸಿದ್ಧವಾಗುವುದೊ? ದುರ್ಜನರು ಮೆಚ್ಚದಿದ್ದರೆ ನಾಗಭೂಷಣನಾದ ಶಿವನ ಮಹಿಮೆಯನ್ನು ವರ್ಣಿಸುವ ಈ ಕಾವ್ಯ ಕೆಡುವುದೊ? ಛೆ! ಮರುಳೆ! ಹೋಗಲಿ; ಉತ್ತರಕ್ಕೆ ಮಾರುತ್ತರವನ್ನು ಕೊಡುವ ಈ ಮಾತೇಕೆ? ಸಾಹಿತಿಗಳೆ ನನ್ನ ಶಪಥಗಳನ್ನು ಕೇಳಿರಿ!

ಈ ಕೃತಿಯಲ್ಲಿ ಪರರು ವರ್ಣಿಸಿದ ರೀತಿ ಎಲ್ಲಾದರೂ ಆಕಸ್ಮಿಕವಾಗಿ ಕಂಡು ಬಂದರೆ, ಅದನ್ನು ನಾನರಿಯೆ! ಆಲೋಚಿಸುವ ಮನಸ್ಸು ಒಂದುಗೂಡಿ ಹಾಗೆ ಆಗಿರಬಹುದು. ಪರರು ಹೇಳಿದ ವಿಷಯವನ್ನು ಕದಿಯುವುದು ಅಧಮತನ. ಅನ್ಯ ಕವಿಗಳು ಈ ಬಗೆಯಲ್ಲಿ ವರ್ಣಿಸಿದ್ದಾರೆಂಬುದನ್ನು ತಿಳಿದೂ ಅದಕ್ಕೆ ಆಸೆಪಟ್ಟು ನನ್ನ

ಕಾವ್ಯದಲ್ಲಿ ಸೇರಿಸಿದೆನಾದರೆ, ಅವರು ಮಿಂದ ನೀರಿಗೆ- ಮುಡಿದು ತೆಗೆದ ಹೂಮಾಲೆಗೆ- ಉಗುಳಿದ ತಂಬುಲಕ್ಕೆ- ಉಟ್ಟು ಕಳೆದ ಮೈಲಿಗೆ ಬಟ್ಟೆಗೆ- ಸವಿದು ಚೆಲ್ಲಿದ ಎಂಜಲು ಕೂಳಿಗೆ ನಾನು ಕೈ ನೀಡಿದಂತೆ! ಇದರಲ್ಲಿ ಸಂದೇಹವೇ ಇಲ್ಲ, ಈ ಪ್ರತಿಜ್ಞೆ ಹಂಪೆಯ ರಾಘವಾಂಕನಿಗೇ ಸಲ್ಲತಕ್ಕದ್ದು.

ಎದುರಿನಲ್ಲಿ 'ನಿನ್ನ ಕವಿತೆಗೆ ಸಾಟಿ ' ಎಂದು ಹೊಗಳಿದವರು ಹಿಂದು ಗಡೆಯಲ್ಲಿ 'ಏನು ಕವಿತೆ ಅದು!' ಎಂದು ನಿಂದಿಸುತ್ತಾರೆ. ಅವರು ತಮ್ಮ ಮನೆಯೊಳಗೆ ರಹಸ್ಯವಾಗಿ ಕುಳಿತು ಊರಿನ ಜನರೆದುರಿಗೆ, ತಾವು ಹೊಸೆದ ನಿರರ್ಥಕವಾದ ಕಗ್ಗ ಕವಿತೆಯನ್ನು ಧಾರಾಳವಾಗಿ ಓದಿ ಅನ್ಯರನ್ನು ಹಂಗಿಸಿ ಕೆಟ್ಟ ದನಿಯಿಂದ ಒರಲುತ್ತಾರೆ! ಈ ರಾಘವಾಂಕನು ಅಂತಹ ದುಷ್ಕವಿಗಳ ಎದೆಯ ಶೂಲ! ಮೂಗಿನ ಕತ್ತಿ! ಸೊಕ್ಕಿದ ಕವಿನಿಕರದ ಚೌದಂತ![1] ರಾಘವಾಂಕ ಪಂಡಿತನು ಉಭಯಕವಿ ಶರಭಭೇರುಂಡ.[2]

ಗೆಳೆತನದ ಸಲಿಗೆಯಿಂದಲೂ ಬಂಧುವೆಂಬ ಭಾವನೆಯಿಂದಲೂ ಯಾರಾದರೂ ತನ್ನನ್ನು ಕವಿಯೆಂದೂ ಕವಿರಾಜನೆಂದೂ ಹೊಗಳಿಕೊಂಡರೆ ಸೈರಿಸುತ್ತೇನೆ. ಹಾಗಲ್ಲದೆ ನನ್ನೊಡನೆ ಸ್ಪರ್ಧೆಗೆ ನಿಂತು ತಾನೇ ಕವಿಯೆಂದೂ ತಾನೇ ವೈಯಾಕರಣನೆಂದೂ ಉದ್ಧಟತನದಿಂದ ಒರಲಿದರೆ, ಆ ದುಷ್ಕವಿಯ ಗರ್ವದ ಮೂಗನ್ನು ಸಭಾಮಧ್ಯದಲ್ಲಿ ಹಂಪೆಯ ರಾಘವನು ಕೆಳಗಿಳಿಸದೆ ಬಿಡಲಿಕ್ಕಿಲ್ಲ! ರಾಘವನೆಂದರೆ ಯಾರು? ಉಭಯ ಕವಿ ಶರಭಭೇರುಂಡ!

ಪಂಪಾಪತಿಯಾದ ವಿರೂಪಾಕ್ಷನನ್ನು ಮಾತ್ರವೇ ಹೊಗಳುವ ನಾಲಗೆ ನನ್ನದು. ಎಷ್ಟೇ ಐಶ್ವರ್ಯವು ಬರುವಂತಿರಲಿ- ಇದ್ದುದೇ ಹೋಗಲಿ, ನಾನು ಅಮರನಾಗಲಿ-ಇಂದೇ ಸಾಯಲಿ, ಯಾವ ಸಂದರ್ಭದಲ್ಲಿಯೂ ಶಿವನನ್ನಲ್ಲದೆ ಇನ್ನೊಂದು ದೈವವನ್ನೂ ನಾಸ್ತಿಕರನ್ನೂ ಹೊಗಳಿದೆನಾದರೆ ನಾನು ಶಿವಭಕ್ತನೇ ಅಲ್ಲ

---

1. ಚೌದಂತ = ಚತುರ್ದಂತ, ಐರಾವತ. ಕವಿಶಬ್ದಕ್ಕೆ ನೀರುಹಕ್ಕಿ ಎಂಬ ಅರ್ಥವೂ ಉಂಟು. ಆನೆ ಕೊಳದಲ್ಲಿ ನುಗ್ಗಿದಾಗ ನೀರುಹಕ್ಕಿಗಳು ಹೆದರಿ ಹಾರಿಹೋಗುತ್ತವೆ.

2. ಶರಭ = ಎಂಟು ಕಾಲಿನ ಮೃಗ, ಭೇರುಂಡ= ಎರಡು ತಲೆಗಳುಳ್ಳ ಪಕ್ಷಿ. ಇವೆರಡೂ ಪೌರಾಣಿಕ ಪ್ರಾಣಿಗಳು. ಶರಭವನ್ನು ಭೇರುಂಡವು ಸಂಹರಿಸಬಲ್ಲದು.

ಎಂಬ ಬಿರುದಿನ ಕವಿ ಈ ರಾಘವಾಂಕ! ಈತನು ರಚಿಸಿದ ಕಾವ್ಯ ಇದು ಎಂದಾಗ ಯಾವ ಸಜ್ಜನರು ಕೊಂಡಾಡದೆ ಇದ್ದಾರು? ಇನ್ನು ಈ ಮಹಾಕಾವ್ಯವನ್ನು ಆರಂಭಿಸೋಣ :

ಕಥಾರಂಭ

ಸಕಲರೂ ತಿಳಿದಂತೆ ಮಹಾಸಾಗರವು ಕೋಲಾಹಲ ಧ್ವನಿಯಿಂದ ಮೊರೆಯುತ್ತ ಮೆರೆಯುತ್ತಿದೆ. ತರಳತರ ತರಂಗಗಳಿಂದಲೂ ಆಳವಾದ ಸುಳಿಗಳಿಂದಲೂ ಹಾರುವ ನೀರಿನ ಹನಿಗಳಿಂದಲೂ ತೆರಪಿಲ್ಲದೆ ಹರಿದಾಡುವ ನೊರೆಗಳಿಂದಲೂ ನೀರ್ಗುಳ್ಳೆಗಳಿಂದಲೂ ಶೋಭಿಸುತ್ತಿದೆ. ಶೈವಾಲ ವಿದ್ರುಮ ರತ್ನಗಳಿಂದ ಪೂರಿತವಾಗಿದೆ. ಅದರಲ್ಲಿ ಜರಠಕಮಠಗಳೂ ಪಾಠೀನಗಳೆಂಬ ಬಹುದಂಷ್ಟ್ರ ಮತ್ಸ್ಯಗಳೂ ನೀರಾನೆ, ಮಕರ, ನಕ್ರ, ಶಿಶುಮಾರ, ತಿಮಿ, ತಿಮಿಂಗಿಲ, ಜಿಗಳೆ, ಹಾವು - ಮುಂತಾದ ಜಲಚರಗಳೂ ನೆಲೆಸಿವೆ. ಜಲಚರಗಳ ಸಂಚಾರದಿಂದಲೂ ಉತ್ತುಂಗತರಂಗಗಳ ಹೊಯ್ದಾಟಗಳಿಂದಲೂ ಕಡಲು ಸದಾ ಘೋರ್ಗರೆಯುತ್ತಿರುವುದು. ಸಮುದ್ರವು ಸುತ್ತುಗಟ್ಟಿದ ವಸುಧೆಯ ಮಧ್ಯದಲ್ಲಿ, ಮೇರುಪರ್ವತದ ದಕ್ಷಿಣದಿಕ್ಕಿನಲ್ಲಿ ಲಾಳದೇಶವೆಂಬ ಒಂದು ರಾಜ್ಯ ಉಂಟು. ಅದು ಮದನನ ವಿಹಾರಕ್ಷೇತ್ರ. ಸಕಲ ಸಂಪದದ ಜನ್ಮಭೂಮಿ. ಶಾರದೆಯ ವಾಸಸ್ಥಳ, ಕಲ್ಯಾಣಪರಂಪರೆಯ ಆಗರ. ಲಕ್ಷ್ಮೀದೇವಿಯ ರಾಜಧಾನಿ. ಭಕ್ತಜನರ ನೆಲೆವೀಡು. ವೇದಗಳ ತವರು. ಆ ಲಾಳದೇಶದಲ್ಲಿ ಅಪ್ರತಿಮವೀರರೆನಿಸಿದ ಸೂರ್ಯವಂಶೀಯ ರಾಜರಿಗೆ ಕುಲಪರಂಪರೆಯಿಂದ ಬಂದ ಅಯೋಧ್ಯಾ ನಗರವೆಂಬ ರಾಜಧಾನಿ ಇತ್ತು. ವೀರಲಕ್ಷ್ಮಿಯು ನಲಿಯುತ್ತ ಬಂದು ಚೆಲುವಿನ ರತ್ನ ಸಿಂಹಾಸನವನ್ನು ಆ ರಾಜರಿಗೆ ಅರ್ಪಿಸಿದ್ದಳು. ಇದಕ್ಕೆ ಸಮಾನವಾದ ನಗರವಿನ್ನೊಂದಿಲ್ಲವೆಂಬ ಕೀರ್ತಿ ಅಯೋಧ್ಯೆಗೆ

ಬಂದಿತ್ತು. ಆ ನಗರಕ್ಕೆ, ಅತ್ಯಂತ ಭೀಕರವಾದ ಕೋಟೆ ಇತ್ತು. ಅದು ಕಾಲಭೈರವನ ಕದನದ ಕಣವೋ, ಪ್ರಳಯಕಾಲದ ಸಿಡಿಲಿನ ಹೋಳೋ, ರವಿಕುಲದ ವೈರಿಗಳ ಕೀರ್ತಿಯೆಂಬ ಚಂದ್ರನನ್ನು ನುಂಗುವ ರಾಹುವನ್ನು ತುಂಬಿದ ಪೆಟ್ಟಿಗೆಯೋ ಅಥವಾ ಅಯೋಧ್ಯಾಪತಿಯಾದ ಹರಿಶ್ಚಂದ್ರನ ಪ್ರಬಲ ಪ್ರತಾಪ ಸಾಗರದ ಸುಳಿಯೋ ಎಂಬಂತೆ ಕಂಗೊಳಿಸುತ್ತಿತ್ತು. ಉನ್ನತವಾದ ಆ ಕೋಟೆಯ ಪ್ರಾಕಾರವು ಸುರನಗರಕ್ಕೆ ಧಾಳಿಯಿಡಲು ಕಟ್ಟಿದ ಅಟ್ಟಣೆಯೋ, ದೇವತೆಗಳು ಆಕಾಶದಲ್ಲಿ ನಡೆದು ದಣಿದಾಗ ವಿಶ್ರಮಿಸಲೆಂದು ನಿರ್ಮಿಸಿದ ಉಪ್ಪರಿಗೆಯೋ ಎಂಬಂತೆ ರಂಜಿಸುತ್ತಿತ್ತು. ಅವರಾವತಿಯ ಸೊಬಗನ್ನೂ ಅಲಕಾಪುರಿಯ ಸಿರಿಯನ್ನೂ ಮಧರಾಪುರದ ಮಂಗಳವನ್ನೂ ಶೋಣಿತಾಪುರದ ದರ್ಪವನ್ನೂ ಲಂಕಾಪುರದ ಕೀರ್ತಿಯನ್ನೂ ಯಮಪುರದ ರೌದ್ರತ್ವವನ್ನೂ ಉರಗೇಂದ್ರ ಪುರವಾದ ಭೋಗವತಿಯ ರಚನಾ ಕೌಶಲವನ್ನೂ ಇಂದ್ರಪ್ರಸ್ಥದ ಬಲವನ್ನೂ ಹಿರಿದು ತಂದು ಬ್ರಹ್ಮನು ನಿರ್ಮಿಸಿದನೋ ಎಂಬಂತೆ ಅಯೋಧ್ಯಾಪುರವು ಶೋಭಿಸುತ್ತಿತ್ತು.

ಆ ನಗರದ ಒಡೆಯನು ಹರಿಶ್ಚಂದ್ರ ಮಹಾರಾಜ. ದೇವೇಂದ್ರನ ಭೋಗ, ಅಗ್ನಿಯ ತೇಜಸ್ಸು, ಯಮನ ದರ್ಪ, ನೈಋತಿಯ ಪ್ರತಾಪ, ಸಮುದ್ರರಾಜನಾದ ವರುಣನ ಗಾಂಭೀರ್ಯ, ವಾಯುವಿನ ಬಲ, ಕುಬೇರನ ಐಶ್ವರ್ಯ, ರುದ್ರನ ಉಗ್ರತೆ, ಸೂರ್ಯನ ಪ್ರಭೆ, ಭೂಮಿಯ ತಾಳ್ಮೆ ಚಂದ್ರನ ಶಾಂತಿ-ಇವೆಲ್ಲವೂ ಸೇರಿ ಒಂದು ರೂಪವನ್ನು ಧರಿಸಿರಬಹುದೆ-ಎಂಬಂತೆ ಹರಿಶ್ಚಂದ್ರನು ವಿರಾಜಿಸುತ್ತಿದ್ದನು. ಅವನು ಅರಿಯೆಂಬ ಶರಧಿಗೆ ಬಡಬಾಗ್ನಿ, ವೈರಿಯೆಂಬ ಕರಿಗೆ ಕಂಠೀರವ. ಹರಿಶ್ಚಂದ್ರನ ದೇಹ ಕಾಂತಿಯ ಮುಂದೆ ಸೂರ್ಯನ ಕಾಂತಿ ಕಪ್ಪಕಪ್ಪನೆ. ಅವನ ಕೋಪದೆದುರಿಗೆ ಬಡಬಾಗ್ನಿ ತಣ್ಣತಣ್ಣನೆ. ಕೊಡುವ ಕೈ ಎದುರಿಗೆ ಕಲ್ಪತರು ಮೆಲ್ಲಮೆಲ್ಲನೆ. ಸುಂದರವಾದ ರೂಪದೆದುರಿಗೆ ಮನ್ಮಥನ ರೂಪ ಸಪ್ಪೆಸಪ್ಪೆ. ಆತನ ಗಾಂಭೀರ್ಯದೆದುರಿಗೆ ಅಂಬುನಿಧಿ ತೆಳ್ಳತೆಳ್ಳನೆ. ಅವನ ಶಾಂತಿಯ ಎದುರಿಗೆ ಚಂದ್ರನು ಬೆಚ್ಚಬೆಚ್ಚನೆ! ತನ್ನ ಬಳಿಗೆ ಬಂದವರನ್ನೂ ಬೇಡಿದವರನ್ನೂ ಬಯಸಿದವರನ್ನೂ ಸೋಂಕಿದವರನ್ನೂ ಹರಿಸ್ಚಂದ್ರನು ತನ್ನಂತೆಯೇ ಶ್ರೀಮಂತರನ್ನಾಗಿ ಮಾಡುವ ಉದಾರ ಗುಣವನ್ನು ಕಂಡು ಚಂದನವು ನಾಚಿ ಸಿಗ್ಗಾಗಿ ಸೆಡೆದು ಮರವಾಗಿ ಬಿಟ್ಟಿತು! ಕಲ್ಪವೃಕ್ಷವು ಸ್ವರ್ಗಸ್ಥವಾಯಿತು! ಕಾಮಧೇನು ಮೂಕವಾಯಿತು! ಪರುಷಮಣಿ ಕಲ್ಲಾಯಿತು! ಸಿದ್ಧರಸವು ಕರಗಿಹೋಯಿತು! ಹರಿಶ್ಚಂದ್ರನು ಮನಸ್ಸು ಮಾಡಿದರೆ ಇಂದ್ರನೇ ಮೊದಲಾದ

ಅಷ್ಟದಿಕ್ಪಾಲರನ್ನು ಜಯಿಸಿ ಅವರ ಆಯುಧಗಳನ್ನೂ ವಾಹನಗಳನ್ನೂ ಸೆಳೆದುಕೊಂಡು ಬರುವ ಸಾಮರ್ಥ್ಯವಿರುವ ಪರಾಕ್ರಮಿ.

ಹರಿಶ್ಚಂದ್ರರಾಯನ ಅರಸಿ ಚಂದ್ರಮತಿ. ಅವಳು ರೂಪದಲ್ಲಿ ರತಿಗೂ ಸೌಭಾಗ್ಯದಲ್ಲಿ ಲಕ್ಷ್ಮಿಗೂ ಜಾಣ್ಮೆಯಲ್ಲಿ ಸರಸ್ವತಿಗೂ ಸಮಾನಳು. ಪುಣ್ಯ ಚರಿತದಲ್ಲಿ ಗಂಗೆಗೆ ಸದೃಶಳು. ಪತಿಭಕ್ತಿಯಲ್ಲಿ ಅರುಂಧತಿಗೆ ಸರಿ. ಕೀರ್ತಿಯಲ್ಲಿ ರೋಹಿಣಿಗೆ ಸಾಟಿ. ವಂದ್ಯತೆಯಲ್ಲಿ ಗಾಯತ್ರಿಗೆ ಎಣೆ. ಆ ದಂಪತಿಗಳಿಗೆ ಲೋಹಿತಾಶ್ವನೆಂಬ ಕುಮಾರನು ಜನಿಸಿದನು. ಆ ಬಾಲಕನು 'ನನಗೆ ಅಡ್ಡಿಯಾಗುವ ರಾಜರನ್ನು ಒರಸಿಹಾಕುವೆನು!' ಎಂಬ ನುಡಿಯನ್ನು ನುಡಿಯುತ್ತಲೇ ನುಡಿಗಲಿತನು! ರಣದೊಳಾಂತವರಿಂದ ಸೂರೆ ಮಾಡಿ ತಂದು ಅರಮನೆಯಲ್ಲಿ ಸುರಿದಿದ್ದ ಸರ್ವಸ್ವವನ್ನೂ ಹಿಡಿ ಹಿಡಿದು ನಿಂತು, ನಿಲ್ಲಲು ಕಲಿತನು. ಹಗೆಗಳ ಬೈತಲೆಯ ಮೇಲೆ ನಡೆನಡೆದು, ನಡೆಯಲು ಕಲಿತನು. ರಿಪುಗಳ ಕಪ್ಪವನ್ನು ಬಿಡದೆ ಕೊಂಡು ಕೊಂಡು, ಕೈಯಿಂದ ಉಣ್ಣಲು ಕಲಿತನು! ಕೀರ್ತಿಯೊಡನೆ ಹರಿದಾಡಿ ಹರಿದಾಡಿ, ತಿರುಗಾಡಲು ಕಲಿತನು!

ಹರಿಶ್ಚಂದ್ರ ಮಹಾರಾಜನಿಗೆ ಸತ್ಯಕೀರ್ತಿ ಎಂಬ ಬುದ್ಧಿಶಾಲಿಯಾದ ಮುಖ್ಯಮಂತ್ರಿ ಇದ್ದನು. ಆತನು ಸ್ವಾಮಿಭಕ್ತಿಯುಳ್ಳವನೂ ಪೌರಜನರಿಗೆ ಪ್ರೀತಿಪಾತ್ರನೂ ದೇಶದ ಉನ್ನತಿಯನ್ನು ಚಿಂತಿಸತಕ್ಕವನೂ ದುಷ್ಟದಮನನೂ ಶಿಷ್ಟರಕ್ಷಕನೂ ಆಗಿದ್ದನು. ಸತ್ಯಕೀರ್ತಿಯು ಅರವತ್ತುನಾಲ್ಕು ಕಲೆಗಳಲ್ಲಿ ಪ್ರವೀಣನೂ ಸಾಮಾದಿ ಚತುರುಪಾಯಚತುರನೂ ಮಂತ್ರಾಲೋಚನಾ ನಿಪುಣನೂ ಆಗಿದ್ದನಲ್ಲದೆ ಈಶಭಕ್ತನೂ ಶೂರನೂ ದಾನಶೀಲನೂ ಆಗಿದ್ದನು. ಉತ್ತಮ ರಾಜನೀತಿಗಳೆಲ್ಲವೂ ಸೇರಿ ಮೂರ್ತಿವಂತವಾದವೋ ಎಂಬಂತೆ ಆತನು ಧೀಮಂತನೆನಿಸಿದ್ದನು. ಹರಿಶ್ಚಂದ್ರನ ಬಳಿಯಲ್ಲಿ ಕಡುಗಲಿಗಳ ಗಡಣದಿಂದೊಡಗೂಡಿದ ದೊಡ್ಡದಾದ ಪಡೆ ಇತ್ತು. ಆ ಯೋಧರು ಪೊಡವಿಯನ್ನು ಬಗಿದು ವಾಸುಕಿಯನ್ನು ಉಗಿದು ತರಬಲ್ಲರು. ಕಡಲನ್ನು ಕುಡಿದು ಬಡಬಾಗ್ನಿಯನ್ನು ಹಿಡಿಯಬಲ್ಲರು. ಗಿರಿಗಳನ್ನು ತರಿದು ರವಿಯನ್ನು ಬೆನ್ನಟ್ಟಬಲ್ಲರು. ಮೃತ್ಯುವನ್ನು ತುತ್ತುಮಾಡಿ ತಿಂದು ದಿಕ್ಪಾಲರನ್ನು ಮುತ್ತಬಲ್ಲರು. ಆ ವೀರರು ಸಿಡಿಲನ್ನು ಹುಡಿಗೈದರು. ದಿಗ್ಗಜಗಳ ಕೋರೆಗಳನ್ನು ಮುರಿದಾರು. ತಾರೆಗಳನ್ನು ತರಿದು ಉರುಳಿಸಿಯಾರು. ಅಂತಹ ಸೇನಾನಾಯಕರ ಸಂಖ್ಯೆಯೇ ಅಗಣಿತವಾಗಿತ್ತು. ಹೀಗಿರುವಾಗ ಸೈನಿಕರನ್ನು ಯಾರಿಗೆ ಎಣಿಸಲಾದೀತು?

ಹರಿಶ್ಚಂದ್ರ ಭೂಪಾಲನ ಆತಿಶಯವನ್ನು ಏನೆಂದು ವರ್ಣಿಸುವುದು? ಅವನ ತ್ಯಾಗಕ್ಕೆ ವಿದ್ವಾಂಸರು ತೃಪ್ತರಾಗುವುದೇ ಅವಧಿ. ರಾಜ್ಯಕ್ಕೆ ಸಪ್ತ ಸಾಗರಗಳೇ ಅವಧಿ. ಭಕ್ತಿಗೆ ಈಶ್ವರನು ತಲೆದೂಗುವುದೇ ಅವಧಿ. ಕೀರ್ತಿಯ ಸಂಚಾರಕ್ಕೆ ಮೂರು ಲೋಕಗಳೇ ಅವಧಿ. ವಿಪುಲಭೋಗಕ್ಕೆ ಸರ್ವಸುಖಗಳೇ ಅವಧಿ. ಶೌರ್ಯಕ್ಕೆ ಶತ್ರುಗಳ ನಿರ್ನಾಮವೇ ಅವಧಿ! ಈ ಬಗೆಯಲ್ಲಿ ಹರಿಶ್ಚಂದ್ರನು ರಾಜ್ಯಭಾರವನ್ನು ನಡೆಸುತ್ತಿದ್ದನು. ಮಾಸದಿರುವ ತೇಜಸ್ಸು, ಕುಂದದ ಕೀರ್ತಿ, ಕಳಂಕವಿಲ್ಲದ ಹೆಸರು, ಇಂಗದ ಓಜಸ್ಸು ಕೊರಗದ ದರ್ಪ, ಅಹಂಕಾರದಿಂದ ಮೆರೆಯದ ಮನಸ್ಸು, ಹುಸಿಯಿಲ್ಲದ ನುಡಿ, ಮರವಿಲ್ಲದ ಅರಿವು, ಆಲಸ್ಯವಿಲ್ಲದ ಪರಮಭಕ್ತಿ, ಲೋಭವಿಲ್ಲದ ಐಶ್ವರ್ಯ, ಭಯ ಬೆರಸದ ಪರಾಕ್ರಮ, ಎದುರಿಲ್ಲದ ಉನ್ನತಿ- ಇವು ಅವನಲ್ಲಿ ಸಹಜವೆನಿಸಿದ್ದವು. ಈ ಬಗೆಯಲ್ಲಿ ಹರಿಶ್ಚಂದ್ರನು ವಿರಾಜಿಸುತ್ತ ಸುಖದಿಂದಿರಲು ಇಂದ್ರನ ಅಮರಾವತಿಯಲ್ಲಿ ಒಂದು ಪ್ರಸಂಗ ನಡೆಯಿತು.

ವಸಿಷ್ಠ ವಿಶ್ವಾಮಿತ್ರರ ವಿವಾದ

ದೇವೇಂದ್ರನ ವೈಭವ ಅನುಪಮವಾದುದು. ಅವನ ಅಂಗಣದಲ್ಲಿ ಹಾಸಿದ ಕಲ್ಲು ಪರುಷಮಣಿ. ಕರೆಯುವ ಹಸು ಕಾಮಧೇನು. ಉದ್ಯಾನವನವು ಕಲ್ಪವೃಕ್ಷಾದಿ ದೇವತರುಗಳ ನಿವಹ. ರಾಜಧಾನಿ ಅಮರಾವತಿ. ಕ್ರೀಡಾಶೈಲ ಸುವರ್ಣಮಯವಾದ ಮೇರುಪರ್ವತ. ಮನೆಯಲ್ಲಿ ನಿತ್ಯದ ಆಹಾರ ಅಮೃತ. ವೇಶ್ಯೆ ಅಸದೃಶ ಸುಂದರಿಯಾದ ರಂಭೆ, ಪಟ್ಟದ ರಾಣಿ ಶಚೀದೇವಿ. ಏರುವ ವಾಹನ ಐರಾವತ. ಹಿಡಿಯುವ ಆಯುಧ ವಜ್ರ. ಭಂಡಾರವು ನವನಿಧಿಗಳ ಆಗರ. ಪಾಲಿಸುವ ಹೊಣೆಗಾರ ಪರಶಿವ! ಇಂಥ ವೈಭವಶಾಲಿಯಾದ ದೇವೇಂದ್ರನು ಒಂದು ರಾತ್ರಿ ದೇವಸಭೆಯಲ್ಲಿ ಓಲಗವನ್ನಿತ್ತನು. ಆ ಸಭೆಯಲ್ಲಿ ಸುರ, ಸಿದ್ಧ, ಕಿನ್ನರ, ಕಿಂಪುರುಷ, ಗುಹ್ಯಕ, ಗಂಧರ್ವ, ವಿದ್ಯಾಧರ, ಮಹೋರಗಾದಿ ನಾಯಕರು ತಮ್ಮ ತಮ್ಮ ಯೋಗ್ಯತೆಗೆ ತಕ್ಕ ಆಸನಗಳಲ್ಲಿ ಸಾಲು ಸಾಲಾಗಿ ಕುಳಿತ್ತಿದ್ದರು. ಮಧ್ಯದಲ್ಲಿ ದೇವೋತ್ತಮನಾದ ಇಂದ್ರನು ರತ್ನಖಚಿತ ಸಿಂಹಾಸನದಲ್ಲಿ ಮಂಡಿಸಿದ್ದನು. ಅವನ ಸುತ್ತಲೂ ಪಟುಭಟರು ವಿವಿಧಾಯುಧಗಳನ್ನು ಹಿಡಿದು ಸಂದಣಿಸಿದ್ದರು. ಎಲ್ಲೆಲ್ಲಿಯೂ ದೀಪಗಳು ಬೆಳಗುತ್ತಿದ್ದವು. ಅಲ್ಲಿದ್ದ ಅಪ್ಸರೆಯರ ಹೊಂದೊಡಿಗೆ, ಮುಗುಳ್ನಗೆ, ನಿರ್ಮಲ ನಯನಗಳ ಬೆಳಕಿಂದ ಆ ದೀಪಗಳು ಮಂದ್ಯೆಸಿದಂತೆ ಕಾಣುತಿದ್ದವು! ಆ ಒಡ್ಡೋಲಗದಲ್ಲಿ ಸನಕ, ಸನಂದನ, ನಾರದ, ಮನು, ಮರೀಚಿ, ಜಹ್ನು, ಜಮದಗ್ನಿ, ಗರ್ಗ, ಗೌತಮ,

ಕಶ್ಯಪ, ಭರದ್ವಾಜ-ಮುಂತಾದ ಮುನಿಮುಖ್ಯರು ನೆರೆದಿದ್ದರು. ಆ ಮುನಿಸಮೂಹದ ನಡುವೆ ವಸಿಷ್ಠ ವಿಶ್ವಾಮಿತ್ರರು ಮಂಡಿಸಿದ್ದರು. ಮಹಾತೇಜಸ್ವಿಗಳಾದ ಅವರಿಬ್ಬರು, ದೇಹದ ಅಂಗೋಪಾಂಗಗಳಲ್ಲಿ ಎರಡು ನೇತ್ರಗಳಂತೆಯೂ ನವಗ್ರಹಗಳ ನಡುವೆ ಸೂರ್ಯಚಂದ್ರರಂತೆಯೂ ನಾನಾ ನದಿಗಳ ಮಧ್ಯದಲ್ಲಿ ಗಂಗಾತುಂಗಭದ್ರೆಯರಂತೆಯೂ ವಿರಾಜಿಸುತ್ತಿದ್ದರು.

ಆ ಸಮಯದಲ್ಲಿ ಇಂದ್ರನು ವಸಿಷ್ಠ ಮುನಿಗಳನ್ನು ಕುರಿತು "ವಸಿಷ್ಠರೆ, ಭೂಲೋಕದಲ್ಲಿ ರವಿಕುಲದ ಇಕ್ಷ್ವಾಕುವಂಶೀಯರಾದ ಅರಸರು ಸಮಸ್ತ ಭೂಮಂಡಲವನ್ನು ಆಳುತ್ತ ಬಂದಿರುವರಷ್ಟೆ. ಅವರಲ್ಲಿ ಮನೋವಚನಕಾಯಗಳಿಂದ ಒಮ್ಮೆಯೂ ಸುಳ್ಳಾಡದ ಸತ್ಯನಿಷ್ಠನಾದ ದೊರೆ ಯಾರು? ನೀವು ಅವರೆಲ್ಲರ ಪರಂಪರೆಗೂ ರಾಜಗುರುಗಳಾಗಿದ್ದೀರಿ. ನೀವರಿಯದ ರಾಜನಿಲ್ಲ. ಅಂತಹ ಸತ್ಯನಿಷ್ಠನಾದ ರಾಜನಿದ್ದರೆ ಅವನ ಹೆಸರನ್ನು ತಿಳಿಸಿರಿ" ಎಂದು ಕೇಳಿದನು. ಅದಕ್ಕೆ ವಸಿಷ್ಠರು "ಇಂದ್ರ, ಇದುವರೆಗೆ ಇಕ್ಷ್ವಾಕುವಂಶದಲ್ಲಿ ಹದಿನಾಲ್ಕು ಮಂದಿ ಅರಸರನ್ನು ನಾನು ಬಲ್ಲೆ. ಅವರಲ್ಲಿ ಅಷ್ಟು ಸತ್ಯೈಕ ನಿಷ್ಠನಾದ ದೊರೆಯನ್ನು ನಾನು ಕಂಡಿಲ್ಲ. ಆದರೆ ಹಿಂದಿನ ರಾಜರ ಕಳಂಕವನ್ನು ತೊಡೆಯಲೋ ಎಂಬಂತೆ ಈಗ ಹರಿಶ್ಚಂದ್ರಮಹಾರಾಜನು ಸತ್ಯದಿಂದ ರಾಜ್ಯಭಾರವನ್ನು ನಡೆಸುತ್ತಿದ್ದಾನೆ. ಅವನು ಸತ್ಯೈಕನಿಷ್ಠ. ಹರಿಶ್ಚಂದ್ರನ ಸತ್ಯದ ಮಹಿಮೆಯನ್ನು ವರ್ಣಿಸಲು ನನಗೆ ಶಕ್ಯವಲ್ಲ. ಆದಿಶೇಷನಿಗೂ ಸಾಧ್ಯವಲ್ಲ. ಶಿವನ ಆಣೆಯಾಗಿಯೂ ಹರಿಶ್ಚಂದ್ರನು ಸತ್ಯಪಾರಾಯಣ" ಎಂದರು.

ವಸಿಷ್ಠರ ಮಾತನ್ನು ಕೇಳಿ ವಿಶ್ವಾಮಿತ್ರರು ಕುಪಿತರಾದರು. ನೆರೆದ ಒಡ್ಡೋಲಗದ ಮಧ್ಯದಲ್ಲಿ ವಸಿಷ್ಠರು ತಮ್ಮನ್ನು ಮೊದಲು ಆದರಿಸಿ ಮಾತನಾಡಿಸಲಿಲ್ಲವೆಂದು ವಿಶ್ವಾಮಿತ್ರರಿಗೆ ಮೊದಲೇ ಸಿಟ್ಟು ಬಂದಿತ್ತು. ವಸಿಷ್ಠರು ಏನು ಹೇಳಿದರೂ ಅದು ಸರಿಯಲ್ಲವೆಂದು ವಾದಿಸುವ ಛಲವು ಬೇರೆ ನೆಲೆಸಿತ್ತು. ಲೋಕದಲ್ಲಿ ಯಾರನ್ನು ಕಂಡರೂ ದೋಷವನ್ನೇ ಗ್ರಹಿಸುವ ಭಾವವು ಅವರಲ್ಲಿ ಬೇರೂರಿತ್ತು. ಹೀಗೆ ಮೂರು ಕಾರಣಗಳಿಂದ ವಿಶ್ವಾಮಿತ್ರರ ಕೋಪವು ಮುಪ್ಪುರಿಗೊಂಡು ಚಿಗುರಿ ಆವರಿಸಲು, ಅವರು ಎದ್ದುನಿಂತು "ವಸಿಷ್ಠರೆ, ತಡೆಯಿರಿ; ಮಾತಾಡಬೇಡಿರಿ! ಹೇಳಿದ್ದೆಲ್ಲವನ್ನೂ ದೇವೇಂದ್ರನು ಬೇಸರ ಪಡದೆ ಕೇಳುತ್ತಾನೆಂದು, ತೋರಿದಂತೆ ಹರಟುವಿರಾ? ಅಬ್ಬ!" ಎಂದು ಜರಿದು

ನುಡಿದರು. ಆಗ ಅವರಿಬ್ಬರಿಗೂ ವಾದ ವಿವಾದಗಳು ಬೆಳೆದವು:

ವಸಿಷ್ಠ :- ವಿಶ್ವಾಮಿತ್ರರೆ, ನಾನು ಹರಟುತ್ತಿರುವೆನೆ? ಹರಿಶ್ಚಂದ್ರನು ದೊಡ್ಡ ಮನುಷ್ಯನಲ್ಲವೆ? ನೀವೇ ಹೇಳಿರಿ.

ವಿಶ್ವಾಮಿತ್ರ :- ಹೌದು ಹೌದು; ದೊಡ್ಡ ಮನುಷ್ಯನೇ. ಅವನಲ್ಲಿ ರಾಶಿ ರಾಶಿಯಾಗಿ ಹಣ ಉಂಟು!

ವಸಿಷ್ಠ :- ಹಣದ ಮಾತು ಈ ಸಭೆಯಲ್ಲೇಕೆ? ಅವನು ಸತ್ಯನಿಷ್ಠನಲ್ಲವೆ?

ವಿಶ್ವಾಮಿತ್ರ :- ಸತ್ಯದ ಗಂಧವೂ ಅವನ ದೇಶವನ್ನೇ ಪ್ರವೇಶಿಸಿಲ್ಲ!

ವಸಿಷ್ಠ :- ಹರಿಶ್ಚಂದ್ರನು ಸತ್ಯವಂತನೆಂಬುದನ್ನು ಪರಮೇಶ್ವರನು ಬಲ್ಲ. ಆತನು ಆಳುವ ರಾಜ್ಯದಲ್ಲಿ ಸುಳ್ಳು, ಅನ್ಯಾಯ, ದುರ್ನೀತಿ, ದುಸ್ಸಂಗ, ದುರಾಚಾರಗಳು ಪ್ರವೇಶಿಸಿಲ್ಲ.

ವಿಶ್ವಾಮಿತ್ರ :- ಬೇರನ್ನೇ ಬಲ್ಲವನಿಗೆ ಎಲೆಯನ್ನು ತೋರಿಸಬೇಕೆ? ವಸಿಷ್ಠರೆ, ನಿಮ್ಮ ರಾಜನ ನಾಡಿನಲ್ಲಿ ನಾನು ವಿಪುಲವಾಗಿ ಸಂಚಾರ ಮಾಡಿದ್ದೇನೆ. ಎಲ್ಲವೂ ನನಗೆ ಗೊತ್ತು! ಅದರ ಸ್ವಾರಸ್ಯವನ್ನು ಹೇಳುತ್ತೇನೆ, ಕೇಳಿ. ಆ ರಾಜ್ಯದಲ್ಲಿ ★ಔನ್ನತ್ಯವಿರುವುದು ಅರಣ್ಯದಲ್ಲಿ ಮಾತ್ರ. ಪಶುಪತಿ ಭಕ್ತಿಯು ಗೋಕುಲದಲ್ಲಿ ಸ್ವರಾಗವು ಶುನಕಗೋಷ್ಠಿಯಲ್ಲಿ, ದ್ವಿಜೋಪಚಾರವು ದಂತಧಾವನದಲ್ಲಿ, ಧರ್ಮಶ್ರವಣವು ಅಂತ್ಯಕಾಲದಲ್ಲಿ, ಆಶ್ರಿತಪರ್ವ ವೈಭವವು ಬಿದಿರುಗಳಲ್ಲಿ, ಸ್ವಸ್ಥೆಯು ಮುಕ್ತರಾದವರಲ್ಲಿ, ★ಔನ್ನತ್ಯಾದಿಗುಣಗಳು ಇನ್ನೆಲ್ಲಿಯೂ ಕಾಣಿಸವು!

ಇವರಿಬ್ಬರ ವಾದವನ್ನು ಕೇಳಿ ಇಂದ್ರನಿಗೆ ಚಿಂತೆಯಾಯಿತು : "ಎಲಾ! 'ಎರಡು

★ ಔನ್ನತ್ಯ= ಉನ್ನತ ವಿಚಾರ, ಎತ್ತರ. ಅರಣ್ಯದಲ್ಲಿ – ಅರಣ್ಯಗಳಲ್ಲಿರುವ ಮರಗಳಲ್ಲಿ. ಪಶುಪತಿಭಕ್ತಿ= ಶಿವಭಕ್ತಿ, ಪಶುಪಾಲಕರಲ್ಲಿ ಭಕ್ತಿ. ಗೋಕುಲ= ಗೋವುಗಳ ಹಿಂಡು ಅಥವಾ ಕೊಟ್ಟಿಗೆ. ಸ್ವರಾಗ= ಆತ್ಮಾನುರಕ್ತಿ, ನಾಯಿಗಳು ಕೂಗು (ಶ್ವರಾಗ), ದ್ವಿಜೋಪಚಾರ= ಬ್ರಾಹ್ಮಣ ಸೇವೆ, ಹಲ್ಲುಗಳ ಉಪಚಾರ. ಧರ್ಮಶ್ರವಣ= ಧರ್ಮ ಗ್ರಂಥಗಳ ಶ್ರವಣ, ಯಮನ ಸುದ್ದಿಯನ್ನು ಕೇಳುವುದು. ಆಶ್ರಿತಪರ್ವವೈಭವ= ಆಶ್ರಿತ ಜನರ ಉತ್ಸವ ವೈಭವ, ತನ್ನಲ್ಲಿರುವ ಗಿಣ್ಣುಗಳ ವಿಸ್ತಾರ. ಸ್ವಸ್ಥತೆ= ನೆಮ್ಮದಿ, ಸ್ವರ್ಗವಾಸ. 'ಔನ್ನತ್ಯಾದಿಗುಣಗಳು ಹರಿಶ್ಚಂದ್ರನ ರಾಜ್ಯದಲ್ಲಿಲ್ಲ. ಆ ಶಬ್ದಗಳಿಗೆ ಅರ್ಥಾಂತರವನ್ನಿಟ್ಟು ಅರಣ್ಯಾದಿಗಳಲ್ಲಿ ಇವೆಯೆಂದು ಹೇಳಬಹುದು' ಎಂದು ಕಟುವಾದ ಟೀಕೆ ಇಲ್ಲಿದೆ.

ಕೋಣಗಳು ಹೋರಾಡಿದರೆ ನಡುವೆ ಇರುವ ಗಿಡಕ್ಕೆ ಮೃತ್ಯು!' ಎಂಬ ಗಾದೆಯ ಹಾಗಾಯಿತಲ್ಲ, ಈ ಮುನಿಗಳ ಜಗಳದಿಂದ ಹರಿಶ್ಚಂದ್ರನ ಪ್ರಾಣಕ್ಕೆ ಸಂಚಕಾರ ಬಂದಂತೆ ಕಾಣುತ್ತದೆ!'' ಎಂಬ ಶಂಕೆಯಿಂದ ಅವನು ಅಸಮಾಧಾನಗೊಂಡು ''ಮುನಿಗಳಿರಾ, ನಾನು ಏನನ್ನೋ ಕೇಳಿದರೆ ಏನನ್ನೋ ಆರಂಭಿಸಿದಿರಲ್ಲ! 'ರಾಜರಲ್ಲಿ ಸತ್ಯಸಂಧರು ಯಾರಾದರೂ ಇದ್ದಾರೆಯೆ?' ಎಂಬ ಸರಳವಾದ ನನ್ನ ಒಂದು ಪ್ರಶ್ನೆಗೆ ಇದು ಉತ್ತರವೆ? ಈ ರೀತಿಯಲ್ಲಿ ಹಗುರವಾದ ಮಾತನ್ನು ಆಡಬಹುದೆ?'' ಎಂದು ಕೇಳಿದನು. ಆಗ ವಸಿಷ್ಠರು ''ಏನೇ ಆಗಲಿ, ಹರಿಶ್ಚಂದ್ರನು ಸತ್ಯಸಂಧ ಎಂಬುದು ನನ್ನ ನಿಲುವು'' ಎಂದರು. ಒಡನೆಯೇ ವಿಶ್ವಾಮಿತ್ರರು ''ಅವನು ಸತ್ಯಸಂಧನಲ್ಲ ಎಂಬುದು ನನ್ನ ನಿಲುವು!'' ಎಂದು ಪ್ರತಿಯಾಗಿ ಹೇಳಿದರು.

ವಸಿಷ್ಠ :- ಭೂಮಿ ರಸಾತಳಕ್ಕಿಳಿದರೂ ಚಂದ್ರನು ಬಿಸಿಯಾದರೂ ಮೇರುಗಿರಿ ಚಲಿಸಿದರೂ ರವಿ ಕಂದಿದರೂ ಜಲನಿಧಿ ಬತ್ತಿದರೂ ಬೆಂಕಿ ತಣ್ಣಗಾದರೂ ಹರಿಶ್ಚಂದ್ರರಾಯನ ನುಡಿಯಲ್ಲಿ ಹುಸಿಯೆಂಬುದು ಹೊಗದು. ಆತನ ಸತ್ಯದ ಮಹಿಮೆಯನ್ನರಿಯಲು ಮೂರು ಕಣ್ಣುಗಳಿರುವ ಭಾಲಲೋಚನನು ಬರಬೇಕು!

ವಿಶ್ವಾಮಿತ್ರ :- ಅಂತಹ ಪರಿಸ್ಥಿತಿ ಬರುವವರೆಗೂ ನನ್ನ ನಿರ್ಧಾರ ಅಲ್ಲಾಡದು! ಬರಿಯ ಸತ್ಯ ಒಂದಿದ್ದರೆ ಆಗುವುದೇನು? ಸತ್ಯ ಸಾಧನೆಗಾಗಿ ಅನೇಕ ದುರ್ಗುಣಗಳನ್ನೂ ತ್ಯಜಿಸಿದ್ದರೆ, ಆಗ ಸತ್ಯಕ್ಕೆ ಬೆಲೆಯುಂಟು.

ವಸಿಷ್ಠ :- ತ್ಯಜಿಸಬೇಕಾದ ದುರ್ಗುಣಗಳು ಯಾವುವು?

ವಿಶ್ವಾಮಿತ್ರ :- ಲೋಭ, ದೈನ್ಯ, ಭಯ, ನಿಷ್ಕಾರುಣ್ಯ, ಮೂರ್ಖತೆ, ಜಡತ್ತ್ವ!

ವಸಿಷ್ಠ :- ವಿಶ್ವಾಮಿತ್ರಮುನಿಗಳೆ, ಚಿನ್ನದಲ್ಲಿ ಪರಿಮಳವನ್ನೂ ಮಾಣಿಕ್ಯದಲ್ಲಿ ರಸವನ್ನೂ ಮುತ್ತಿನಲ್ಲಿ ಮೃದುತ್ವವನ್ನೂ ಪ್ರಕಾಶದ ಝಳದಲ್ಲಿ ತಂಪನ್ನೂ ಚಂದನದಲ್ಲಿ ಬಿಸಿಯನ್ನೂ ಹೂಗಳಲ್ಲಿ ಗೀತವನ್ನೂ ಅರಸಬಹುದೆ? ಇದು ಸಹೃದಯರ ಲಕ್ಷಣವೆ? ಹರಿಶ್ಚಂದ್ರನು ಸತ್ಯವಾದಿಯೆಂದು ನಾನು ಹೊಗಳಿದರೆ, 'ಅವನಲ್ಲಿ ಈ ದೋಷಗಳಿಲ್ಲವೊ? ಈ ಗುಣಗಳಿವೆಯೊ?'' ಎಂದು ಕೇಳಬಹುದೆ?

ವಿಶ್ವಾಮಿತ್ರ :- ವಸಿಷ್ಠರೆ, ಲೋಭಾದಿ ದುರ್ಗುಣಗಳೂ ಅವನಲ್ಲಿದ್ದರೆ ಅದೆಂತಹ ಸತ್ಯ?

ವಸಿಷ್ಠ :- ಒಳ್ಳೆಯದು; ಕೇಳಿರಿ. ಮುನಿದು ಬಂದ ವೈರಿಗಳಿಗೆ ಬೆನ್ನು ತೋರಿಸಬಾರದೆಂಬ ನೀತಿಯಲ್ಲಿ ಹರಿಶ್ಚಂದ್ರನು ಅತಿಲೋಭಿ! ದುರ್ಜನರ ಮಾತನ್ನು ಕೇಳಬಾರದೆಂಬ ಅವನ ನಿರ್ಧಾರದಲ್ಲಿ ಆತನು ಅತಿಮೂರ್ಖ! ಪರವನಿತೆಯನ್ನು ನೋಡುವ ವಿಷಯದಲ್ಲಿ ಭೀತ! ಭಗವಂತನಲ್ಲಿ ಭಕ್ತಿಯನ್ನು ಬೇಡುವಾಗ ಅತಿದೀನ! ವಿದ್ವಾಂಸರ ಬವಣೆಗಳನ್ನು ಕೊಲ್ಲುವಾಗ ನಿಷ್ಕರುಣ! ಅಧರ್ಮ ಮಾರ್ಗದಲ್ಲಿ ಕಾಲಿಡಬೇಕೆಂದರೆ ಅವನಿಗೆ ಜಡತ್ವ ಬಂದುಬಿಡುತ್ತದೆ! ವಿಶ್ವಾಮಿತ್ರರೆ, ಇಷ್ಟು ವಿಷಯಗಳಲ್ಲಿ ಹರಿಶ್ಚಂದ್ರನಿಗೆ ಲೋಭಾದಿಗಳುಂಟು, ಇನ್ನೆಲ್ಲಿಯೂ ಇಲ್ಲ!

ವಿಶ್ವಾಮಿತ್ರ :- ಆಹಾ! ಹರಿಶ್ಚಂದ್ರನ ಕಥೆ ವೇದದಲ್ಲಿಯೇ ಬಂದಿದೆ. ತನಗೆ ಮಗನಿಲ್ಲದ್ದರಿಂದ ನರಕವಾದೀತೆಂದು ಬಗೆದು ವರುಣನನ್ನು ಆರಾಧಿಸಿದನು. ವರುಣನು ಪ್ರಸನ್ನನಾಗಿ 'ಹರಿಶ್ಚಂದ್ರ, ನಿನಗೆ ಪುತ್ರನನ್ನು ಅನುಗ್ರಹಿಸುತ್ತೇನೆ. ಆದರೆ ಆತನನ್ನು ನನಗೆ ಬಲಿಯಾಗಿ ಒಪ್ಪಿಸಬೇಕು' ಎಂದು ನಿಯಮವನ್ನು ಹಾಕಿದನು. ಹರಿಶ್ಚಂದ್ರನು ತನಗೆ ಸಂತತಿಯಾದರೆ ಸಾಕೆಂದು ತಿಳಿದು ಆ ನಿಯಮವನ್ನೊಪ್ಪಿದನು. ಆದರಂತೆ ಮಗನು ಜನಿಸಿದಾಗ, ವರುಣನ ಭಯದಿಂದ ಅವನನ್ನು ಅಡವಿಗೆ ಕಳಿಸಿ ಬೈಚಿಟ್ಟನು. ಕೊಟ್ಟ ಮಾತನ್ನು ನಡೆಸದ ಸುಳ್ಳುಗಾರನೆಂಬುದು ಗೊತ್ತಿದ್ದರೂ ಹರಿಶ್ಚಂದ್ರನು ಸತ್ಯವಂತನೆಂದು ಹೊಗಳುವುದು ನಿಮ್ಮ ಬುದ್ಧಿಗೆ ಮಾತ್ರ ಸಾಧ್ಯ. ವರುಣನು ಕುಪಿತನಾಗಿ ಜಲೋದರರೋಗದಿಂದ ನರಳುವಂತೆ ಮಾಡಿದಾಗ, ಹರಿಶ್ಚಂದ್ರನು ಕಂಗೆಟ್ಟು ಜಡನಾಗಿ ವರ್ತಿಸಿದ್ದು ತಿಳಿಯದೆ? ತನ್ನ ಮಗನ ಮೇಲೆ ಇಷ್ಟು ವ್ಯಾಮೋಹವಿದ್ದವನು ಯಾಗ ಪೂರ್ತಿಗಾಗಿ ಅಜೀಗರ್ತನ ಮಗನಾದ ಶುನಃಶೇಫನನ್ನು ಬಲಿಗೊಡಲು ಉದ್ದೇಶಿಸಿದ ಪಾತಕಿಯಲ್ಲವೆ? ಅವನನ್ನೇಕೆ ಹೇಸದೆ ಹೊಗಳುವಿರಿ?

ವಸಿಷ್ಠ :- ಬಹಳ ಮಾತನಾಡಿ ಪ್ರಯೋಜನವೇನು? ಹರಿಶ್ಚಂದ್ರ ಭೂಪಾಲನಲ್ಲಿ ಅಸತ್ಯವನ್ನು ಪ್ರತ್ಯಕ್ಷವಾಗಿ ತೋರಿಸತಕ್ಕವರು ಈ ಜಗತ್ತಿನಲ್ಲಿ ಹಿಂದೆ ಹುಟ್ಟಲಿಲ್ಲ; ಮುಂದೆ ಹುಟ್ಟಲಾರರು. ಇಷ್ಟನ್ನು ನಾನು ದೃಢವಾಗಿ ಹೇಳಬಲ್ಲೆ.

ವಿಶ್ವಾಮಿತ್ರ :- ಬಾಯಿ ಉಂಟೆಂದು ತೋರಿದಂತೆ ನುಡಿಯಬಾರದು. ಆತನು ಸಮುದ್ರಪರ್ಯಂತವಾದ ಭೂಮಿಗೆ ಒಡೆಯನಾಗಿದ್ದಾನೆ. ನಿಮ್ಮ ಶಿಷ್ಯನಾಗಿದ್ದಾನೆ. ನಿಮಗೆ ಬೇಕಾದಷ್ಟು ಹಣವನ್ನು ಕೊಡುತ್ತಾನೆ! ಅವನ ಆಶ್ರಯದಲ್ಲಿ ಇದ್ದೀರಿ! ಹೀಗಿರುವಾಗ ಅವನನ್ನು ಎಷ್ಟು ಮೇಲೇರಿಸಿ ಬಣ್ಣಿಸಿದರೆ ತಾನೇ ಒಪ್ಪದು!

ವಸಿಷ್ಠ :- ಏನು ಹೇಳಿದಿರಿ? ನಾನು ರಾಜಾಶ್ರಯದಲ್ಲಿ ಬಾಳುತ್ತಿದ್ದೇನೆಯೇ?

ವಿಶ್ವಾಮಿತ್ರ :- ವಸಿಷ್ಠರೆ, ಕೋಪಿಸಿಕೊಳ್ಳಬೇಡಿರಿ! ಅವನು ಸುಳ್ಳನ್ನು ಹೇಳಿದರೆ ನಿಮ್ಮನ್ನು ಏನು ಮಾಡಬೇಕು?

ವಸಿಷ್ಠ :- ಕೇಳಿರಿ! ಶ್ರುತಿಮತಕುಲಾಚಾರಗಳನ್ನು ಪಾಲಿಸಿ ಧರ್ಮ ಮಾರ್ಗದಿಂದ ಮಹಾವ್ರತಗಳನ್ನು ನಡೆಸಿ ಗುರ್ವಾಜ್ಞೆಯಂತೆ ನಡೆದು, ಲಿಂಗಾರ್ಚನೆಗೈದು ಉನ್ನತ ತಪಸ್ಸನ್ನಾಚರಿಸಿ ವೈದಿಕಕರ್ಮಾನುಷ್ಠಾನದಿಂದ ಗಳಿಸಿದ ಪುಣ್ಯಸಂಚಯ ನನ್ನಲ್ಲುಂಟು. ಹರಿಶ್ಚಂದ್ರನೇನಾದರೂ ಹುಸಿಯನ್ನು ನುಡಿದಲ್ಲಿ, ಆ ಪುಣ್ಯಸಂಚಯವನ್ನು ತೊರೆದು ನನ್ನ ಪತ್ನಿಯನ್ನು ತ್ಯಜಿಸಿ ಈ ಶಿಖೆಯನ್ನು ಬಿಚ್ಚಿ ಹರಡಿ ಹೆಂಡವನ್ನು ಕುಡಿಯುತ್ತ ದಕ್ಷಿಣಾಭಿಮುಖವಾಗಿ ಹೋಗುತ್ತೇನೆ! ಇದು ನನ್ನ ಪ್ರತಿಜ್ಞೆ!

ಇಂದ್ರನ ಒಡ್ಡೋಲಗದಲ್ಲಿದ್ದ ನಿಖಿಲರೂ ನಿಬ್ಬೆರಗಾದರು. ಭೂಮ್ಯಾಕಾಶಗಳಿಗೆ ಘೋರವಾದ ಕದನವು ಆರಂಭಿಸಿತೋ ಹೇಗೆ? ವಸಿಷ್ಠ ವಿಶ್ವಾಮಿತ್ರ ಮುನಿಗಳೀರ್ವರೂ ಸಾಮಾನ್ಯರೆ? ಕ್ರುದ್ಧರಾದರೆ ಅಖಿಲ ಚರಾಚರ ಪ್ರಪಂಚವನ್ನೂ ಸುಟ್ಟು ಬೂದಿ ಮಾಡಿ ಮತ್ತೆ ಸೃಷ್ಟಿಸಬಲ್ಲ ಮಹಾಮಹಿಮರು. ಶಾಂತಿಯು ಕದಡಿ ಅವರು ಕದನಾಭಿಮುಖರಾಗಿ ನಿಂತಾಗ, ನೆರೆದಿದ್ದ ಸಭಾಸದರು 'ನಾವು ಇಲ್ಲಿ ಕುಳಿತಿರಬೇಕೆ? ಏಳಬೇಕೆ? ಮಧ್ಯದಲ್ಲಿ ನುಡಿಯಬಹುದೆ? ನುಡಿಯಬಾರದೆ? ಹೌದು ಎನ್ನೋಣವೆ? ಅಲ್ಲವೆನ್ನೋಣವೆ?' ಎಂಬುದಾವುದೂ ತೋರದೆ ದಿಗ್ಭ್ರಾಂತರಾಗಿ ಚಿಂತಾಗ್ರಸ್ತರಾದರು. ದೇವೇಂದ್ರನ ಮುಖವು ಕಂದಿತು. ಅವನು ಚಿಂತಾತುರನಾದನು. "ಈಗ ನಾನು ಯಾರ ಪಕ್ಷವನ್ನು ಹಿಡಿದರೂ ಪಕ್ಷಪಾತಿಯೆನಿಸುತ್ತೇನೆ. ಸುಮ್ಮನಿದ್ದರೆ 'ನಮ್ಮಲ್ಲಿ ಇಂದ್ರನಿಗೆ ಉಪೇಕ್ಷೆ' ಎಂದು ಭಾವಿಸುತ್ತಾರೆ. ಇಬ್ಬರನ್ನೂ ಜರಿದರೆ 'ಆ! ನಮಗಿಂತ ಈತನು ಅಧಿಕನೆ?' ಎಂದು ತಿಳಿಯುತ್ತಾರೆ. ಇಬ್ಬರನ್ನೂ ಹೊಗಳಿದರೆ 'ನಿನ್ನ ಉಪಚಾರದ ಮಾತು ಸಾಕು!' ಎನ್ನಬಹುದು. ಈ ಜಗಳವೇ ಬೇಡವೆಂದು ನಿಲ್ಲಿಸಲು ಹೊರಟರೆ 'ನಮ್ಮಲ್ಲಿ ಸ್ಪರ್ಧೆಯನ್ನು ತಂದಿಟ ಧೂರ್ತ!' ಎಂದು ತೆಗಳಬಹುದು. ಹೇಗೆ ಮಾಡಿದರೂ ಈ ಮುನಿಗಳು ನನ್ನನ್ನು ಶಪಿಸದೆ ಇರುವುದಿಲ್ಲ!" ಎಂದು ಪೇಚಾಡುತ್ತ ಇಂದ್ರನು ದಿಙ್ಮೂಢನಾದನು. ಆಗ ನಾರದರು ಧಿಗ್ಗನೆ ಎದ್ದು ಬಂದು "ವಿಶ್ವಾಮಿತ್ರ, ಈಗ ವಸಿಷ್ಠನೆದುರಿಗೆ ನಿನ್ನ ಪ್ರತಿಜ್ಞೆ ಏನು, ಹೇಳು!" ಎಂದು ಅಬ್ಬರಿಸಿದರು.

ವಿಶ್ವಾಮಿತ್ರ :- ಕೇಳಿರಿ! ಭೂಲೋಕದಲ್ಲಿ ನಾಲ್ಕು ಯುಗಗಳು ಸಾವಿರ ಸಲ ಮರಳಿದರೆ ಬ್ರಹ್ಮನಿಗೆ ಒಂದು ದಿನವಾಗುತ್ತದೆ. ಆ ದಿನಗಳು ಮೂವತ್ತು ಆದರೆ ಒಂದು ತಿಂಗಳು. ಅಂತಹ ಹನ್ನೆರಡು ತಿಂಗಳಾದರೆ ಬ್ರಹ್ಮಮಾನದಿಂದ ಒಂದು ವರ್ಷ. ಬ್ರಹ್ಮನ ನೂರು ವರ್ಷಗಳು ಈ ದೇವೇಂದ್ರನ ಪರಮಾಯು. ಹರಿಶ್ಚಂದ್ರನು ಸತ್ಯವಾದಿಯೆಂಬುದು ದೃಢವಾದರೆ ಇಂತಹ ಹದಿನಾಲ್ಕು ಮಂದಿ ದೇವೇಂದ್ರರು ದೇವಲೋಕವನ್ನಾಳುವವರೆಗೂ ನಾನು ದೇವಲೋಕಕ್ಕೆ ಕಾಲಿಡುವುದಿಲ್ಲ!

ನಾರದ :- ಚೆನ್ನಾಯಿತು! ಸೊಗಸಾದ ಪ್ರತಿಜ್ಞೆ! ಹೊಟ್ಟೆನೋವೆಂದರೆ ಜುಟ್ಟನ್ನು ಕೊಯ್ದನಂತೆ! ಕರುವನ್ನು ಹಸು ಮೆಟ್ಟಿತೆಂದರೆ ಗೂಳಿಯನ್ನು ಬಡಿದನಂತೆ! ಸೂಳೆ ದೂರಿದಳೆಂದು ಊರಬಾಗಿಲನ್ನು ಮುರಿದನಂತೆ! ಎಂತಹ ನಗೆಪಾಟಲು, ವಿಶ್ವಾಮಿತ್ರ. 'ಹರಿಶ್ಚಂದ್ರನು ಸತ್ಯವಾದಿಯೆಂದು ದೃಢವಾದರೆ, ಹದಿನಾಲ್ಕು ಇಂದ್ರರು ಕಳೆಯುವವರೆಗೆ ದೇವಲೋಕಕ್ಕೆ ಕಾಲಿಡುವುದಿಲ್ಲ' ಎಂಬುದು ಯಾವ ಪ್ರತಿಜ್ಞೆ? ಯಾವುದಕ್ಕೆ ಯಾವುದು ಸಂಬಂಧ? ಇದು ಸರಿಯಲ್ಲ.

ವಿಶ್ವಾಮಿತ್ರ :- ಹಾಗಾದರೆ ಕೇಳಿರಿ! ಭಕ್ತಿ, ಶಮ, ದಮ, ಯೋಗ, ಯಾಗ, ವೈದಿಕಕರ್ಮ, ನಿಷ್ಠೆ, ವಿರಕ್ತಿ, ಘೋರವ್ರತ, ತಪಸ್ಸು, ಜಪ, ಶೈವಾಗಮಾಸಕ್ತಿ, ಲಿಂಗಾರ್ಚನೆ- ಮುಂತಾದ ನಿಯಮಗಳಿಂದ ನಾನು ಸಂಗ್ರಹಿಸಿದ ಪುಣ್ಯರಾಶಿಯುಂಟು. ಹರಿಶ್ಚಂದ್ರನು ಸುಳ್ಳಾಡುವುದಿಲ್ಲ ಎಂಬುದು ದೃಢವಾದರೆ, ನನ್ನ ಈ ಪುಣ್ಯರಾಶಿಯಲ್ಲಿ ಅರ್ಧವನ್ನು ಹರಿಶ್ಚಂದ್ರನಿಗೆ ಧಾರೆಯೆರೆಯುತ್ತೇನೆ! ಇದಕ್ಕೆ ದೇವತೆಗಳೇ ಸಾಕ್ಷಿ.

ವಸಿಷ್ಠ :- ಹಾಗಾದರೆ, ಎಂದು ಹರಿಶ್ಚಂದ್ರನ ಪರೀಕ್ಷೆ?

ವಿಶ್ವಾಮಿತ್ರ :- ನನ್ನ ಮನಸ್ಸಿಗೆ ಬಂದಾಗ!

ವಸಿಷ್ಠ :- ಪರೀಕ್ಷೆ ಎಷ್ಟು ದಿನಗಳವರೆಗೆ?

ವಿಶ್ವಾಮಿತ್ರ :- ಆತನು ಭೂಮಿಯಲ್ಲಿ ಬದುಕಿರುವವರೆಗೆ!

ವಸಿಷ್ಠ :- ಯಾವ ವಿಧದಲ್ಲಿ?

ವಿಶ್ವಾಮಿತ್ರ :- ಸಾವಿರ ವಿಧದಲ್ಲಿ!

ವಸಿಷ್ಠ :- ಹಾಗಿದ್ದರೆ ಪರೀಕ್ಷೆಗೆ ಹೊರಡಬಹುದು.

ವಿಶ್ವಾಮಿತ್ರ :- ನೀವು ಹೋಗಿ ಹರಿಶ್ಚಂದ್ರನಿಗೆ ಹೇಳಿರಿ! "ವಿಶ್ವಾಮಿತ್ರನು ಪರಿಪರಿಯಲ್ಲಿ ನಿನ್ನನ್ನು ಕಾಡಲಿದ್ದಾನೆ. ಎಚ್ಚರಿಕೆಯಿಂದಿರು" ಎಂದು!

ವಸಿಷ್ಠ :- ಆ ಮಾತನ್ನು ನಾನು ಹೇಳುವವನಲ್ಲ.

ವಿಶ್ವಾಮಿತ್ರ :- ಅವನು ಹುಸಿಯಾಡಿದರೆ, ನಿಮ್ಮ ಮುನಿತನವೇ ಹೋಗುವುದಲ್ಲ!

ವಸಿಷ್ಠ :- ವಿಶ್ವಾಮಿತ್ರರೆ, ನೀವು ಹೇಳುವುದೇನು? 'ಸುಳ್ಳು ಹೇಳಬೇಡ, ಹರಿಶ್ಚಂದ್ರ' ಎಂದು ನಾನು ಅವನಿಗೆ ಎಚ್ಚರಿಕೆ ಕೊಡಬೇಕೆ? 'ಸೂರ್ಯ, ತೇಜಸ್ಸನ್ನು ಕಳೆದುಕೊಳ್ಳಬೇಡ! ಅಗ್ನಿ ತಣ್ಣಗಾಗಬೇಡ! ಚಂದ್ರ, ಸೌಮ್ಯತೆಯನ್ನು ಉಳಿಸಿಕೊ! ಎಲೆ ಮಂದರ ಪರ್ವತ, ಅಲ್ಲಾಡದಿರು!' ಎಂದು ಹೇಳಬೇಕೆ? ಚಾಡಿಯ ಮಾತಾಡುವುದು ನಮ್ಮ ಹಿರಿಯತನವೆ?

ವಿಶ್ವಮಿತ್ರ :- ವಸಿಷ್ಠರೆ, ಸಿಡಿಲು ಅಪ್ಪಳಿಸಿ ಹೊಡೆವಾಗ ಹಿಡಿದ ಕೊಡೆ ಕಾಯುವುದೆ? ಭೂಕಂಪವಾಗಿ ಭೂಮಿಯೇ ನುಂಗುವಾಗ ಮನೆ ಉಳಿಸುವುದೆ? ಮಹಾಸಾಗರಗಳು ಉಕ್ಕಿ ಜಗತ್ತನ್ನು ಮುಳುಗಿಸುವಾಗ ಬಿದಿರು ಮೆಳೆಗಳು ರಕ್ಷಿಸುತ್ತಿಯೆ? ನಾನು ಕ್ರುದ್ಧನಾದಾಗ ನಿಮ್ಮ ಬಡಬೋಧೆಗೀದೆಗಳು ಅವನನ್ನು ಉಳಿಸಲಾರವು. ಮೊದಲು ಹೋಗಿ ಅವನನ್ನು ಎಚ್ಚರಿಸಿ!

ವಸಿಷ್ಠ :- ಕುಲವನ್ನು ನಾಲಗೆ ಹೇಳಿತು - ಎಂಬ ನಾಣ್ನುಡಿಯುಂಟು. ಬ್ರಹ್ಮರ್ಷಿಯಾದವನ ಹೃದಯ ನಿರ್ಮಲವಾಗಿರುತ್ತದೆ. ನೀವು ರಾಜರ್ಷಿಗಳು. ಕೋಪಿಸದೆ ಗದರಿಸದೆ ಕೆಟ್ಟ ಮಾತಾಡದೆ ಇರಲು ನಿಮಗೆ ಸಾಧ್ಯವೆ!

ವಿಶ್ವಾಮಿತ್ರ :- ನಿರ್ಭಯವಾಗಿ ಮಾತಾಡುತ್ತಿದ್ದೀರಿ!

ವಸಿಷ್ಠ :- ಹೌದು; ನಿಮ್ಮ ಗುಣ ಹೀಗೆ ಆಡಿಸುತ್ತದೆ.

ವಸಿಷ್ಠರ ನುಡಿಯನ್ನು ಕೇಳಿ ವಿಶ್ವಾಮಿತ್ರರು ಸಿಟ್ಟಿನಿಂದ ಉರಿದೆದ್ದರು. ಅದನ್ನು ಯಾವ ಕವಿ ಬಣ್ಣಿಸಿಯಾನು? ಅವರ ಕಣ್ಣುಗಳು ಕಿಡಿಗೆದರಿದವು. ಮುಖವು ಕೆಂಪೇರಿತು, ಹಣೆಯು ಬೆವರಿತು, ಕೈ ನಡುಗಿತು, ಹುಬ್ಬು ಚಲಿಸಿತು, ತುಟಿಯದುರಿತು, ಹಿಡಿದಿದ್ದ ಬ್ರಹ್ಮದಂಡವು ಹೊಗೆಯಿತು, ಕಾಲು ಕಂಪಿಸಿತು, ಬಳಿದುಕೊಂಡಿದ್ದ ವಿಭೂತಿ ಮಸುಕಾಯಿತು, ರೋಮಗಳು ನಿಮಿರಿದವು, ಕಮಂಡಲುವಿನಲ್ಲಿದ್ದ ನೀರು

ಕುಡಿಯಿತು! ರುದ್ರನ ಫಾಲಾಗ್ನಿಯೇ ಮುನಿಯ ರೂಪವನ್ನು ಧರಿಸಿತೋ ಎಂಬಂತೆ ವಿಶ್ವಾಮಿತ್ರರು ಗೋಚರಿಸಿದರು. ಅವರು ಕ್ರೋಧೋದ್ದೀಪಿತರಾಗಿ ಬೆಂಕಿಯನ್ನು ಕಾರುವರೋ ಎಂಬಂತೆ ವಸಿಷ್ಠರನ್ನು ಕುರಿತು ಹೀಗೆಂದರು : "ಏನು? ನನ್ನನ್ನು ರಾಜರ್ಷಿ ಎಂದಿರಾ? ನೋಡುತ್ತಿರಿ, ನಿಮ್ಮ ಈ ತಪ್ಪಿಗೆ ಹರಿಶ್ಚಂದ್ರನನ್ನು ಕಾಡಿ ಕಾಡಿ ಅವನು ಸುಳ್ಳನೆಂದು ಸ್ಥಾಪಿಸುತ್ತೇನೆ! ಪ್ರತಿಜ್ಞೆ ಮಾಡಿರುವ ನಿಮ್ಮನ್ನು ವ್ರತಭ್ರಷ್ಟರನ್ನಾಗಿ ಮಾಡಿ ಹಂಗಿಸಿ ಹಂಗಿಸಿ ಪೀಡಿಸುತ್ತೇನೆ!" ಈ ರೀತಿಯಲ್ಲಿ ಆರ್ಭಟಿಸಿ ಕೋಪಾವಿಷ್ಟರಾದ ವಿಶ್ವಾಮಿತ್ರ ಮುನಿಗಳು, ಸಿಡಿಲು ಗಜರಿ ಗರ್ಜಿಸಿ ಮೇಘದಿಂದ ಹೊರಬರುವಂತೆ, ಇಂದ್ರ ಸಭೆಯಿಂದ ನಿರ್ಗಮಿಸಿದರು.

ಅವರು ನೇರವಾಗಿ ತಮ್ಮ ಆಶ್ರಮಕ್ಕೆ ಹೋಗಿ ಹಲ್ಲು ಕಡಿಯುತ್ತ, ಹರಿಶ್ಚಂದ್ರನ ಸತ್ಯವ್ರತವನ್ನು ಭಗ್ನಗೊಳಿಸುವುದಕ್ಕೆ ಉಪಾಯವನ್ನು ಚಿಂತಿಸತೊಡಗಿದರು. ಇತ್ತಲಾಗಿ, ಸಾಕ್ಷಾತ್ ಪರಮೇಶ್ವರನ ಮೂರ್ತಿಯಂತಿದ್ದ ವಸಿಷ್ಠ ಮಹರ್ಷಿಗಳು ಹರಿಶ್ಚಂದ್ರನಿಗೆ ಯಾವ ವಿಷಯವನ್ನೂ ತಿಳಿಸದೆ, ತಮ್ಮ ತಪೋವನವನ್ನು ಸೇರಿ ಶಾಂತಚಿತ್ತರಾಗಿದ್ದರು. ಈ ಸಂಗತಿಯನ್ನರಿಯದ ಹರಿಶ್ಚಂದ್ರ ಭೂಪಾಲನು ತನ್ನ ಪಾಡಿಗೆ ರಾಜ್ಯಭಾರವನ್ನು ನಡೆಸುತ್ತಿದ್ದನು.

ವಸಂತ ವಿಹಾರ

'ಕೋಣನೆರಡುಂ ಹೋರೆ ಗಿಡುವಿಗೆ ಮೃತ್ಯು' ಎಂಬ ಗಾದೆಯನ್ನು ದಿಟಗೊಳಿಸುವಂತೆ ವಿಶ್ವಾಮಿತ್ರ ಮುನಿಗಳು ಹರಿಶ್ಚಂದ್ರನನ್ನು ಹೇಗೆ ಪೀಡಿಸಬೇಕೆಂದು ಚಿಂತಿಸತೊಡಗಿದರು. ವಸಿಷ್ಠರಿಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನು ಗೆಲ್ಲಬೇಕಾದರೆ ಆ ರಾಜನನ್ನು ಅಧೋಗತಿಗಿಳಿಸದೆ ಮಾರ್ಗವಿರಲಿಲ್ಲ. ವಿಶ್ವಾಮಿತ್ರರು ಸಾಮಭೇದಾದ್ಯುಪಾಯಗಳಲ್ಲಿ ಪ್ರವೀಣರು. ಅವರು ಏಕಾಂತದಲ್ಲಿ ಕುಳಿತು ಆಲೋಚನೆಯಲ್ಲಿ ಮಗ್ನರಾಗಿ ಧ್ಯಾಂತಿಯೋಗದಲ್ಲಿದ್ದರು! ಏನಾದರೂ ಮಾಡಿ ಹರಿಶ್ಚಂದ್ರನ ಬಾಯಿಂದ ಸುಳ್ಳು ಹೇಳಿಸಬೇಕು ಎಂಬುದೇ ಅವರ ಧ್ಯಾನದ ವಿಷಯ! ಕಡೆಗೆ ಒಂದು ಉಪಾಯ ಹೊಳೆಯಿತು. ಆನಂದದಿಂದ ಉಬ್ಬಿ ತಮ್ಮ ಭುಜವನ್ನು ಚಪ್ಪರಿಸಿಕೊಂಡರು. ತಮ್ಮ ಅಂತರಂಗವನ್ನರಿಯದ ಕೆಲವು ಮುನಿಗಳನ್ನು ಕರೆದು "ನೀವು ಹರಿಶ್ಚಂದ್ರರಾಯನ ಬಳಿಗೆ ಹೋಗಿ ಬಹುಸುವರ್ಣಯಾಗವನ್ನು ಕೈಗೊಳ್ಳುವಂತೆ ಪ್ರೇರಿಸಿರಿ." ಎಂದು ಹೇಳಿಕಳಿಸಿದರು. ಅವರಿಗೆ ಈ ಕೌಶಿಕ ಮುನಿಗಳ ಕುಟಿಲಯೋಜನೆ ಗೊತ್ತಿರಲಿಲ್ಲ. ಅವರು ಅಯೋಧ್ಯೆಗೆ ಹೋಗಿ ಹರಿಶ್ಚಂದ್ರನನ್ನು ಕಂಡು ಆಶೀರ್ವದಿಸಿದರು. ರಾಜನು ಅವರ ಯೋಗಕ್ಷೇಮಗಳನ್ನು ಕೇಳಿ, ಬಂದ ನಿಮಿತ್ತವೇನೆಂದು ವಿಚಾರಿಸಲಾಗಿ "ಮಹಾರಾಜ, ಸಕಲವೇದಪುರಾಣಾಗಮಗಳನ್ನು ಶೋಧಿಸಿ ನೋಡಲಾಗಿ ಅತ್ಯಂತ ಪುಣ್ಯಪ್ರದವಾದ ಒಂದು ಧರ್ಮ ಕಾರ್ಯವಿದೆಯೆಂದು ನಮಗೆ ತಿಳಿದು ಬಂದಿತು.

ಅದನ್ನು ನಿನಗೆ ತಿಳಿಸಬೇಕೆಂದು ಬಂದೆವು. ಈ ಕಾರ್ಯವನ್ನು ನೀನು ನೆರವೇರಿಸಲು ನಿಶ್ಚಯಿಸುವುದಾದರೆ ಹೇಳುತ್ತೇವೆ'' ಎಂದು ಮುನಿಗಳು ನುಡಿದರು. ಅದಕ್ಕೆ ಹರಿಶ್ಚಂದ್ರನು ''ಮಹರ್ಷಿಗಳೆ, ಹೃತ್ಪೂರ್ವಕವಾಗಿ ಆ ಕಾರ್ಯವನ್ನು ಮಾಡುತ್ತೇನೆ. ಗುರುಗಳಾದ ವಸಿಷ್ಠ ಮುನಿಗಳ ಪಾದಕಮಲದ ಆಣೆ! ಸಂಕೋಚವಿಲ್ಲದೆ ಹೇಳಿರಿ'' ಎಂದನು. ಆಗ ಋಷಿಗಳು ''ಮಹಾರಾಜ, ಅದು ಬಹುಸುವರ್ಣವೆಂಬ ಯಾಗ. ಸಕಲ ಯಾಗಗಳಲ್ಲಿಯೂ ಶ್ರೇಷ್ಠವಾದುದು. ಅದು ನಿನ್ನಿಂದಲ್ಲದೆ ಇನ್ನೊಬ್ಬನಿಂದ ಸಾಧ್ಯವಿಲ್ಲ'' ಎಂದು ತಿಳಿಸಿದರು. ''ಅದರಲ್ಲಿ ಪಾಲಿಸಬೇಕಾದ ಮುಖ್ಯ ನಿಯಮ ಯಾವುದು?'' ಎಂದು ರಾಜನು ವಿಚಾರಿಸಲಾಗಿ ''ಆ ಯಾಗಸಮಯದಲ್ಲಿ ಯಾರು ಬಂದು ಏನನ್ನು ಬೇಡಿದರೂ ದಾನ ಮಾಡಬೇಕು. ಸ್ವಲ್ಪವೂ ಹಿಂಜರಿಯಬಾರದು. ಹಿಂಜರಿದರೆ ಬಹಳ ದೋಷ ಬರುತ್ತದೆ'' ಎಂದರು.

ಅದೇ ಪ್ರಕಾರವಾಗಿ ಬಹುಸುವರ್ಣ ಯಾಗವನ್ನು ಮಾಡಬೇಕೆಂದು ಹರಿಶ್ಚಂದ್ರನು ನಿಶ್ಚಯಿಸಿ ಸಕಲ ಮುನಿಗಳನ್ನು ಬರಮಾಡಿಕೊಂಡು ವೇದೋಕ್ತ ಮಾರ್ಗದಿಂದ ಯಾಗ ಕಾರ್ಯವನ್ನು ನೆರವೇರಿಸಿದನು. ಆ ಸಮಯದಲ್ಲಿ ಯಾವ ಋಷಿಯು ಯಾವುದನ್ನು ಅಪೇಕ್ಷಿಸಿದರೂ ನಿರರ್ಗಳವಾಗಿ ದಾನಮಾಡಿ ಎಲ್ಲರನ್ನೂ ಉಪಚರಿಸುತ್ತಿದ್ದನು. ಆ ಸಂದರ್ಭವನ್ನೇ ಕಾಯುತ್ತಿದ್ದ ಕಪಟೋಪಾಯಪಟುಗಳಾದ ಕೌಶಿಕಮುನಿಗಳು ಶಿಷ್ಯಗಣಪರಿವೃತರಾಗಿ ಹರಿಶ್ಚಂದ್ರನಿದ್ದೆಡೆಗೆ ಬಂದರು. ವಸಿಷ್ಠರು ಯಾಗ ಮಂಟಪದಲ್ಲಿರಲಿಲ್ಲ. ರಾಜನು ಸಂಭ್ರಮದಿಂದ ವಿಶ್ವಾಮಿತ್ರರನ್ನು ಸ್ವಾಗತಿಸಿ ಪಾದಗಳನ್ನು ತೊಳೆದು ''ಮಹರ್ಷಿಗಳೆ, ತಮ್ಮ ಇಷ್ಟಾರ್ಥವೇನು?'' ಎಂದು ಕೇಳಿದನು. ಆಗ ವಿಶ್ವಾಮಿತ್ರರು ''ಅರಸ, ಆನೆಯ ಮೇಲೆ ನಿಂತು ಒಂದು ಕವಡೆಯನ್ನು ಮೇಲಕ್ಕೆಸೆದರೆ ಎಷ್ಟು ಎತ್ತರ ಹೋಗುವುದೋ ಅಷ್ಟೆತ್ತರದ ಸುವರ್ಣ ರಾಶಿಯನ್ನು ನನಗೆ ಕೊಡು!'' ಎಂದರು. ಹರಿಶ್ಚಂದ್ರನು ''ತಥಾಸ್ತು, ಕೊಟ್ಟೆನು! ಈಗಲೇ ತೆಗೆದುಕೊಂಡು ಹೋಗಬಹುದು'' ಎಂದು ನಿವೇದಿಸಿದನು. ವಿಶ್ವಾಮಿತ್ರರು ''ಈಗ ಬೇಡ; ಬೇಕಾದಾಗ ತರಿಸಿಕೊಳ್ಳುತ್ತೇನೆ'' ಎಂದು ಉತ್ತರಿಸಿ, ಅಷ್ಟು ಸುವರ್ಣ ರಾಶಿಯನ್ನು ರಾಜನ ಭಂಡಾರದಲ್ಲಿಯೇ ತೆಗೆದಿರಿಸಿ ತಮ್ಮ ಆಶ್ರಮಕ್ಕೆ ತೆರಳಿದರು.

ಹರಿಶ್ಚಂದ್ರನು ಸತ್ಯಸಂಧನೆಂಬ ಕೀರ್ತಿ ಎಲ್ಲೆಲ್ಲಿಯೂ ಪ್ರಸರಿತು. ತರಣಿಕಿರಣವು ಹೋಗುವ ಠಾವಿನಲ್ಲೆಲ್ಲ ಅವನ ಕೀತಿರ್ಯ ನುಡಿಯೇ. ವಿಶ್ವಾಮಿತ್ರರ ಮನಸ್ಸಿನಲ್ಲಿ

''ಹೇಗಾದರೂ ಆ ರಾಜನಲ್ಲಿ ಒಂದು ಅನೃತವನ್ನು ಕಂಡುಹಿಡಿದರೆ ಸಾಕು, ದೇವೇಂದ್ರನೆದುರಿಗೆ ವಸಿಷ್ಠರ ತೇಜೋವಧೆಯನ್ನು ಮಾಡಬಹುದು!'' ಎಂಬುದೊಂದೇ ಚಿಂತೆ. ''ಒಂದೆರಡು ಹಳ್ಳಿಗಳಲ್ಲಿಯೋ ಒಂದು ನಗರದಲ್ಲಿಯೋ ಜನರು ಹರಿಶ್ಚಂದ್ರನನ್ನು ಕೊಂಡಾಡುವುದಾದರೆ, ಅದು ಬೇರೆ ಮಾತು. ಸಮುದ್ರಪರ್ಯಂತವಾದ ಭೂಮಂಡಲದಲ್ಲಿ ಎಲ್ಲರೂ ಅವನನ್ನು ಹೊಗಳಿ ಹಾಡುವರಲ್ಲ! ರಾಷ್ಟ್ರದ ಒಂದೆಡೆಯೂ ಎಡರು, ಬಡತನ, ಕೊರತೆಗಳ ನೆರಳಿಲ್ಲ. ಅಪಕೀರ್ತಿಯ ಛಾಯೆಯೂ ಇಲ್ಲ. ರಾಜನು ಧರ್ಮಾತ್ಮನೆಂಬ ಬಿರುದು ಸುವರ್ಣಾಕ್ಷರದಲ್ಲಿ ಕೆತ್ತಿದೆ!'' ಎಂದು ಕಳವಳಿಸಿದರು. ಸರ್ವಗುಣಸಂಪನ್ನರೆನಿಸಿದ ಆ ಕೌಶಿಕ ಮುನಿಗಳಿಗೆ ಮತ್ತೊಂದು ದುರ್ಯುಕ್ತಿ ಹೊಳೆಯಿತು. ಮೈಕಾಯಿಸಿಕೊಳ್ಳುವುದಕ್ಕಾಗಿ ಪಚ್ಚ ಕರ್ಪೂರದ ರಾಶಿಗೆ ಬೆಂಕಿ ಹಚ್ಚುವಂತೆ, ಹಲಗೆಯನ್ನು ಮಾಡುವುದಕ್ಕಾಗಿ ಮಣಿದರ್ಪಣವನ್ನು ಕಟ್ಟುವಂತೆ, ಒಬ್ಬ ತೊತ್ತಿಗಾಗಿ ತನ್ನ ತಾಯಿಯನ್ನು ಮಾರುವಂತೆ, ಒಂದು ಕೀಲಿಗಾಗಿ ದೇವಸ್ಥಾನವನ್ನು ಕೆಡವಿಸುವಂತೆ ತಮ್ಮ ಫಲದ ಸಾಧನೆಗಾಗಿ ಹರಿಶ್ಚಂದ್ರನ ಕೀರ್ತಿಗೆ ಕಳಂಕವನ್ನು ತರಲು ಅವರು ಉದ್ದೇಶಿಸಿದರು : ''ನನ್ನ ತಪೋಬಲದಿಂದ ವನ್ಯಮೃಗಗಳನ್ನು ಸೃಷ್ಟಿಸಿ ರಾಜ್ಯದ ಬೆಳೆಯನ್ನು ಬೀಳುಗೈಯುವೆನು. ಮೃಗಗಳ ಹಾವಳಿಯನ್ನು ಸಹಿಸಲಾರದೆ ಪ್ರಜೆಗಳು ರಾಜನ ಬಳಿಗೆ ಹೋಗಿ ಹುಯ್ಯಲೆಬ್ಬಿಸುವರು. ಹರಿಶ್ಚಂದ್ರನು ಅವರ ಗೋಳನ್ನು ಕೇಳಲಾರದೆ ಮೃಗಗಳ ಬೇಟೆಗಾಗಿ ಈ ಅರಣ್ಯಕ್ಕೆ ಬರುವನು. ಅವನನ್ನು ಮರುಳು ಮಾಡಿ ನನ್ನ ಆಶ್ರಮಕ್ಕೆ ಸೆಳೆತಂದು, ಆಗ ಅವನ ಸತ್ಯಗಿತ್ಯದ ಪರಿಯನ್ನು ಪರೀಕ್ಷಿಸಿಬಿಡುವೆನು!'' ಎಂದು ಆಲೋಚಿಸಿದರು. ''ಭಲಾ! ಸರಿಯಾದ ಉಪಾಯ ಹೊಳೆಯಿತು!'' ಎಂದು ವಿಶ್ವಾಮಿತ್ರರು ತಮ್ಮ ಬುದ್ಧಿಗೆ ತಾವೇ ಮೆಚ್ಚಿ ಕಣ್ಮುಚ್ಚಿ ಉತ್ಪತ್ತಿ ಮಂತ್ರದಿಂದ ಜಲವನ್ನಭಿಮಂತ್ರಿಸಿ ದಿಕ್ಕುದಿಕ್ಕಿಗೆ ಚೆಲ್ಲಿದರು. ಒಡನೆಯೇ ನಾನಾ ಜಾತಿಯ ಮೃಗ ಪಕ್ಷಿಗಳು ಜನಿಸಿದವು. ಕೌಶಿಕ ಮುನಿಗಳು ಬೆಟ್ಟುದೋರಿ ತಲೆದೂಗಿ ಕೈಬೀಸಿ, ಪ್ರಜೆಗಳನ್ನು ಬಗೆಬಗೆಯಲ್ಲಿ ಗೋಳಾಡಿಸಬೇಕೆಂದು ಅವುಗಳಿಗೆ ಆಜ್ಞೆಯನ್ನಿತ್ತರು. ''ಹರಿಶ್ಚಂದ್ರನು ಅನೃತವಾದಿ, ವಸಿಷ್ಠರು ವ್ರತಭ್ರಷ್ಟರು- ಎಂದು ಸಿದ್ಧಪಡಿಸುವೆನು. ನನ್ನ ನಿಶ್ಚಯಕ್ಕೆ ಬಲಬಂದಿತು. ದಾರಿ ರೂಪಗೊಂಡಿತು. ಉಪಾಯವು ಚಿಗುರಿತು'' ಎಂದು ಹಿಗ್ಗುತ್ತ ಉಬ್ಬುತ್ತ ವಿಶ್ವಾಮಿತ್ರರು ತಪೋವನದಲ್ಲಿದ್ದರು. ಅಷ್ಟರಲ್ಲಿ ಮಾಗಿಯು ಕಳೆದು ವಸಂತ ಕಾಲವು ಸಮೀಪಿಸಿತು.

ಕ್ರಮವಾಗಿ ಚಳಿಗಾಲದ ಮದವಾರಿತು. ಮಾವು ಅಂಕುರವನ್ನು ತೋರಿತು. ಅಸುಗೆ ಚಿಗುರನ್ನು ಹೇರಿತು. ಬಳ್ಳಿ, ಮೊಗ್ಗುಗಳನ್ನು ಬೀರಿತು. ಹೂವು ಪರಾಗವನ್ನು ತೂರಿತು. ದುಂಬಿ ಸುತ್ತಲೂ ಹಾರಿತು. ತಂಗಾಳಿ ತಂಪನ್ನು ಬೀರಿತು. ಚಂದ್ರನಿಗೆ ಕಳೆಯೇರಿತು. ಕೋಗಿಲೆಯ ಕೂಗು ಮಿತಿ ಮೀರಿತು. ಕಾಮನು ತನ್ನ ಶರಗಳನ್ನು ಯುವಜನರಲ್ಲಿ ನೆಟ್ಟನು. ವಿರಹಿಗಳು ಬಾಯಿಬಿಟ್ಟರು. ವಸಂತಕಾಲವು ಬಂದಿತು. ಹರಿಶ್ಚಂದ್ರನ ಉದ್ಯಾನಪಾಲಕನು ವಸಂತಾಗಮನವನ್ನು ಕಂಡು ಹರ್ಷದಿಂದ ಮಹಾರಾಜನ ಅರಮನೆಗೆ ಹೋದನು. ಸಮಯವನ್ನು ಕಾದು ಹರಿಶ್ಚಂದ್ರನನ್ನು ಸಂದರ್ಶಿಸಿ, ನಳನಳಿಸುವ ಅಶೋಕ ವೃಕ್ಷದ ತಳಿರ ಗೊಂಚಲನ್ನೂ ಹೊಸ ಹೂವಿನ ಮಾಲೆಯನ್ನೂ ತನ್ನ ಪ್ರಭುವಿಗೆ ಅರ್ಪಿಸಿ, ಭಕ್ತಿಯಿಂದ ವಂದಿಸಿ ಹೀಗೆಂದನು :

''ಮಹಾಪ್ರಭು, ವಸಂತಋತು ಆಗಮಿಸಿತು! ಎಳೆಯ ಬಳ್ಳಿಗಳಿಗೆ ಲಾವಣ್ಯವನ್ನೀಯುತ್ತ, ಮಾವಿನಗಿಡಗಳ ಮಂಗಳರೂಪವನ್ನು ವರ್ಧಿಸುತ್ತ. ಕೋಗಿಲೆಗಳ ಕೊರಳಲ್ಲಿ ಪುಣ್ಯವನ್ನು ತುಂಬುತ್ತ, ದುಂಬಿಗಳ ಮೂಗಿಗೆ ನಲಿವನ್ನು ಎರೆಯುತ್ತ, ನವಿಲುಗಳನ್ನು ಕುಣಿಸುತ್ತ ವಸಂತನು ಬಂದಿದ್ದಾನೆ. ಜನರಿಗೆ ಸುಖದ ಸುಗ್ಗಿಯಾಗಿ, ಗಿಳಿವಿಂಡುಗಳ ಸವಿಯ ಸಾಮ್ರಾಜ್ಯವಾಗಿ, ಚಂದ್ರನ ಬೆಳದಿಂಗಳಿಗೆ ಬೆಂಬಲವಾಗಿ, ರತಿಪತಿಯ ಭುಜಬಲದ ವೀರ ಸಿರಿಯಾಗಿ ವಸಂತಕಾಲವು ಬಂದಿತು. ಕಮಲವನವು ವಸಂತನ ಬರವನ್ನು ಬಯಸುವಂತೆ, ಉದ್ಯಾನವನವು ನಿಮ್ಮ ಆಗಮನವನ್ನು ಪ್ರತೀಕ್ಷಿಸುತ್ತಿದೆ. ಮಹಾರಾಜ. ಪರಿವಾರದೊಡನೆ ಎಂದಿನಂತೆ ನಂದನವನಕ್ಕೆ ದಯಮಾಡಿಸಿ ಒಂದು ತಿಂಗಳವರೆಗೆ ಆನಂದದಿಂದ ಇರೋಣವಾಗಲಿ.''

ಹರಿಶ್ಚಂದ್ರನು ಉದ್ಯಾನಪಾಲನ ಅರಿಕೆಯನ್ನು ಮನ್ನಿಸಿ, ಪಟ್ಟದರಸಿಯಾದ ಚಂದ್ರಮತಿಗೆ ತಿಳಿಸಿ, ಅವಳನ್ನೂ ಪುತ್ರನಾದ ಲೋಹಿತಾಶ್ವನನ್ನೂ ಕರೆದುಕೊಂಡು ಸಚಿವಾದಿಪರಿವಾರದೊಡನೆ ವೈಭವದಿಂದ ನಂದನವನಕ್ಕೆ ಪ್ರಯಾಣ ಮಾಡಿದನು. ಯೋಧರು ಮೈಗಾವಲಾಗಿ ಇಕ್ಕೆಲದಲ್ಲಿಯೂ ನಡೆದರು. ಆನೆಗಳೂ ಅಶ್ವಗಳೂ ರಥಗಳೂ ಸಾಗಿದವು. ಚಂದ್ರಮತಿಯು ದಂಡಿಗೆಯಲ್ಲಿ ಕುಳಿತು ಸುಂದರಿಯರಾದ ಬಹುಮಂದಿ ಸಖಿಯರೊಡನೆಯೂ ದಾಸಿಯರೊಡನೆಯೂ ಹೊರಟಳು. ಚಂದ್ರಮತಿಯು ಉದ್ಯಾನವನವನ್ನು ಪ್ರವೇಶಿಸುವಾಗ ಪರಿವಾರನಾರಿಯರ ಲಲಿತಾಂಗಗಳನ್ನು ವೀಕ್ಷಿಸಿ ಜನರ ಕಣ್ಣುಗಳ ಬರ ಹರಿದುಹೋಯಿತು. ಅವರು

ಬಳಿದುಕೊಂಡಿದ್ದ ಸುಗಂಧದ್ರವ್ಯಗಳ ಪರಿಮಳವನ್ನಾಘ್ರಾಣಿಸಿ ನಾಸಿಕಗಳ ಬಯಕೆ ಪೂರೈಸಿತು. ಆ ಲಲನೆಯರೊಡನೆ ಮಾತನಾಡಿದವರ ನಾಲಗೆ ಸುಖಿಯಾಯಿತು! ಹಾಡುವ ಇಂಚರವನ್ನು ಕೇಳಿ ಕಿವಿಗಳು ನಲಿದವು. ಆ ಉದ್ಯಾನವನವಾದರೋ ಮನ್ಮಥನ ಅರಮನೆ. ವಸಂತನ ಬೀಡು. ಎಳಲತೆಗಳ ಗೂಡು. ಮರಗಳ ಆಕರ. ಚಿಗುರಿನ ತಾಣ. ಹೂಗಳ ನೆಲೆ. ಹಣ್ಣುಗಳ ಮನೆ. ಕೋಗಿಲೆಗಳ ಚಾವಡಿ. ದುಂಬಿಗಳು ಆಡುವ ಹೊಲ. ಗಿಳಿಗಳು ಓದುವ ಶಾಲೆ. ಮಲಯಮಾರುತನ ಜನ್ಮಭೂಮಿ. ಪುಳಿನಗಳ ಆಲಯ. ಕೊಳಗಳ ನಿಲಯ. ನವಿಲುಗಳ ನಂದನವನ. ದಿವ್ಯವಾದ ಆ ಉಪವನದೊಳಗೆ ಹರಿಶ್ಚಂದ್ರ ಮಹಾರಾಜನು ಪತ್ನೀಪುತ್ರರೊಡನೆ ಪರಿವಾರ ಸಮೇತನಾಗಿ ಪ್ರವೇಶಿಸಿದನು.

ಉಪವನದ ಸುತ್ತಲೂ ಪರಿಮಳ ಬೀರುವ ಬೇಲಿಯಂತೆ ಬೆಳೆದಿದ್ದ ಕೇದಗೆಗಳು ಅರಳಿದ್ದವು. ಆ ಕೇದಗೆಗಳು ವಿರಹಿಗಳ ಚಿತ್ತವನ್ನು ಸೀಳುವ ಮನ್ಮಥನ ಕೈಗರಗಸಗಳೋ, ಮುನೀಶ್ವರರ ಕಠಿಣಚಿತ್ತಕ್ಕೆ ತಾಕಿ ಮುರಿದ ಧಾರೆಗಳುಳ್ಳ ಮದನಶರಗಳೋ ಎಂಬಂತೆ ಮೆರೆಯುತ್ತಿದ್ದವು. ತೆಂಗಿನಮರಗಳಲ್ಲಿ ಹೊರೆಹೊರೆಯಾಗಿ ತೆಂಗಿನಕಾಯಿಗಳು ಫಲಿಸಿದ್ದವು. ಪಡೆದ ಉಪಕಾರವನ್ನು ತೀರಿಸುವುದಕ್ಕಾಗಿ ಭೂದೇವಿಯು ಮೇಘಗಳಿಗೆ ಕೈಯೆತ್ತಿಕೊಡುವ ಅಮೃತಕಲಶಗಳೋ, ಗಗನಾಂಗಣದಲ್ಲಿ ಸಂಚರಿಸುವ ವಿದ್ಯಾಧರರಿಗೋಸ್ಕರ ವಸಂತನು ಏರ್ಪಡಿಸಿದ ಅರವಟ್ಟಿಗೆಗಳೋ, ಕ್ಷೀರಸಾಗರವನ್ನು ಕಡೆದಾಗ ಜನಿಸಿದ ಪದಾರ್ಥಗಳನ್ನು ದೇವತೆಗಳು ಒಯ್ಯುವಾಗ ಭೂದೇವಿಯು ತನಗೆ ಬೇಕೆಂದು ತೆಗೆದಿರಿಸಿಕೊಂಡಿದ್ದ ರಸರತ್ನಗಳೋ ಎಂಬಂತೆ ಆ ತೆಂಗಿನಕಾಯಿಗಳು ಶೋಭಿಸುತ್ತಿದ್ದವು. "ಮನ್ಮಥನು ಬಲಶಾಲಿಯೆಂದು ಹೇಳುತ್ತಾರೆ. ಅವನ ಬಲ ಎಷ್ಟರದು?- ಎಂದು ಋಷಿಗಳು ಇಂದ್ರಿಯಗಳನ್ನು ಜಯಿಸಿ ಕಾಮನನ್ನು ದೂರಮಾಡಿದ್ದಾರೆ. ಇವರು ಕುಸುಮಬಾಣನ ಹೊಡೆತಕ್ಕೆ ಸಿಕ್ಕಿ ಅಂಡಲೆಯುವಂತೆ ಮಾಡುತ್ತೇವೆ!" ಎಂದು ವನದೇವತೆಗಳು ಕೋಪಿಸಿ, ಜಲಪಾತ್ರೆಗಳೆಂಬ ರುದ್ರಾಕ್ಷಸರಗಳನ್ನು ಹಿಡಿದು ಚಕ್ರಗಳ ಚೀತ್ಕಾರವೆಂಬ ಮದನ ಮಂತ್ರವನ್ನು ಜಪಿಸುತ್ತಿರುವುವೋ ಎಂಬಂತೆ ನೀರೆತ್ತುವ ರಾಟೆಗಳು ಕಂಗೊಳಿಸಿದವು. ಜನರ ಪಂಚೇಂದ್ರಿಯಗಳ ಲಾಲನೆಯಿಂದ ಬೆಳೆದ ಮಾವು, ವನಿತೆಯರು ಸಾಕಿಬೆಳೆಸಿದ ವನಲತೆ, ಮನ್ಮಥವಾಣಿಗಳು ಹರಿಸಿದ ಮುತ್ತಿನ ಸೇಸೆಯಂತಿರುವ ಮೊಗ್ಗು ಮಲ್ಲಿಗೆ,

ಅನುರಾಗಿಗಳು ಸಲಹಿದ ದಾಳಿಂಬೆ, ಭೂಮಿಯೆಂಬ ಕಾಮಿನಿ ಸಾಕಿದ ಸಂಪಗೆ- ಇವು ಆ ವನದಲ್ಲಿ ಬಗೆಬಗೆಯಿಂದ ಒಪ್ಪುತ್ತಿದ್ದವು. ಬೆಳೆದ ಬಾಳೆಯಮರಗಳು ''ಎಲೈ ಮುನಿಜರೆ, ನಮ್ಮನ್ನು ನೋಡಿರಿ. ನಮ್ಮ ಹೃದಯದಲ್ಲಿ ಕಾಠಿಣ್ಯವೆಂಬ ಕಳಂಕವಿಲ್ಲ! ನಾರುಬಟ್ಟೆಯುಟ್ಟು ಬರಿ ನೀರನ್ನು ಕುಡಿದು ಮಳೆ ಗಾಳಿ ಬಿಸಿಲಿಗೆ ಅಳುಕದೆ ನಿಂತಿದ್ದೇವೆ! ನಮಗೆ ಕೊಂಬಾಸೆ★ ಇಲ್ಲ! ನೆಲಕ್ಕೆ ಹೊರೆಯಾಗದೆ ಒಂದೆಡೆ ನಿಂತು ಬದುಕಿ ಬೆಳೆದು ರಸಭರಿತ ಫಲಗಳನ್ನು ಜನರಿಗೆ ನೀಡುತ್ತಿದ್ದೇವೆ'' ಎಂದು ತಿಳಿಸುವಂತೆ ತೋರುತ್ತಿದ್ದವು. ಮರುಗಗಳು ಚಿಗರಿದ್ದವು. ಸುರಗಿ ಜಾಜಿಗಳ ಮೊಗ್ಗುಗಳು ಅರಳಿ ಪರಿಮಳವನ್ನು ಹರಡುತ್ತಿದ್ದವು. ಮುಡಿವಾಳವು ಚೆಲುವಿನಿಂದ ಬಿರಿದು ನಿಂತಿದ್ದಿತು. ಹೂಗಳನ್ನು ಮಲ್ಲಿಗೆಯು ಚೆಲ್ಲುತ್ತಿದ್ದಿತು. ಕೆಲವೆಡೆಗಳಲ್ಲಿ ಲತೆಗಳು ದಟ್ಟವಾಗಿ ಹಬ್ಬಿ ಹರಡಿದ್ದವು. ಸುತ್ತಲೂ ಸಾಂದ್ರವಾದ ಕೊಂಬೆಗಳನ್ನು ಎತ್ತರದ ಮರಗಳು ಬಿತ್ತರಿಸಿರಲು, ಹೊಂಗೆಯ ಮರಗಳು ಎಲೆಮನೆಗಳ ಕೆಳಗೆ ಒಲೆದಾಡುತ್ತಿದ್ದವು. ತೆಂಗಿನಮರಗಳಲ್ಲಿ, ಕೌಂಗಿನ† ಗಿಡಗಳಲ್ಲಿ- ತೀವಿದ ತೆನೆಗಳ ಬಳಿ ಸೋಗೆಗಳು ಬಾಗಿ ತೂಗುತ್ತಿದ್ದವು. ಆ ಲತಾ ವೃಕ್ಷಗಳ ಮಧ್ಯದಲ್ಲಿ ಸೇರಿದ ಕತ್ತಲೆ ಬೆಳಕನ್ನು ಕನಸಲ್ಲಿಯೂ ಕಂಡಿರಲಿಲ್ಲ! ಅಂಕುರ, ಕೊನರು, ಕೆಂದಳಿರು, ಚಿಗುರು, ಹಸುರೆಲೆ, ಮೊಗ್ಗು, ನನೆಮೊಗ್ಗು, ಹೂ, ಮಿಡಿಗಾಯಿ, ಬಲಿತಕಾಯಿ, ದೋರೆಹಣ್ಣುಗಳಿಂದೊಪ್ಪುವ ಮಾವು, ನೇರಿಳೆ, ಕದಳಿ, ಹೇರಳೆ, ಕಿತ್ತಳೆಮರಗಳಿಂದಲೂ ಗೋರಂಟಿ, ದಾಸವಾಳ, ಬನ್ನಾಳಿ, ಗೇರುಹೂಗಳಿಂದಲೂ ಉದ್ಯಾನವು ಮನೋಹರವಾಗಿತ್ತು. ಆ ಹೂದೋಟದಲ್ಲಿ ಸೂರ್ಯರಶ್ಮಿಗಳೂ ಚಂದ್ರಕಿರಣಗಳೂ ಒಳಹೋಗದಂತೆ ಗಿಡಮರಗಳು ಸಾಂದ್ರವಾಗಿ ಬೆಳೆದಿದ್ದವು. ಅಲ್ಲಿ ತಿರುಗಾಡುವ ತರುಣಿಯರು ತೊಟ್ಟಿದ್ದ ಚಿನ್ನದೊಡವೆಗಳ ಹೊಂಬಿಸಿಲಿಂದಲೇ ತಾವರೆಗಳು ಬಿರಿಯುತ್ತಿದ್ದವು! ಅವರ ನಸುನಗೆಯ ಬೆಳದಿಂಗಳಿಂದಲೇ ಕುಮುದಗಳು ಅರಳುತ್ತಿದ್ದವು! ರವಿ ಕಾಣದುದನ್ನು ಕವಿ ಕಂಡನೆಂಬ ನುಡಿ ಹುಸಿಯಲ್ಲ. ಹಂಪೆಯ ರಾಘವಾಂಕ ಕವಿಗೆ ಹೂದೋಟದ ಒಳ ಇರವು ಕಾಣಿಸಿತು! ಉಪವನದಲ್ಲಿ ನವಿಲುಗಳ ನೃತ್ಯವು ನಡೆಯುತ್ತಿತ್ತು. ಗಿಳಿಗಳ ಚಿಲಿಪಿಲಿಯೇ

★ಕೊಂಬಾಸೆ = ಕೊಂಬ – ಧನವನ್ನು ಪರಿಗ್ರಹಿಸುವ ಆಸೆ, ಕೊಂಬ-ಕೊಂಬೆಗಳ ಆಸೆ.

† ಕೌಂಗು = ಅಡಿಕೆ.

ನೃತ್ಯೋತ್ಸವದ ಘೋಷಣೆ. ಕೋಗಿಲೆಗಳ ಪಂಚಮದ ಇಂಚರವೇ ಕಹಳೆ. ಫಲಿಸಿದ ಹಲಸು ಮದ್ದಳೆ. ಜೇಂಕರಿಸುವ ದುಂಬಿಗಳು ಹೊಗಳುವ ವಂದಿಗಳು. ನೆಲದವರೆಗೆ ಒಲೆದ ಅಶೋಕೆಯ ತಳಿರು ಜವನಿಕೆ. ಕುಸುಮಲತೆಗಳು ಪ್ರೇಕ್ಷಕರಾದ ವನಿತೆಯರು. ಎಲೆಗಳ ಮರ್ಮರಧ್ವನಿಯು ಸಂಗೀತ. ಕಂಚುವಾಳಮರಗಳ ತೂಗಾಟ ಮೆಚ್ಚಿಕೆಯ ತಲೆದೂಗು. ಹಣ್ಣೆಲೆಗಳ ನಿಶ್ಚಲತೆಯೇ ನೃತ್ಯದ ಮೆಚ್ಚಿನ ತನ್ಮಯತೆ! ಅಲ್ಲಿದ್ದ ಗಿಳಿಗಳೆಲ್ಲವೂ ಅರಗಿಳಿಗಳೇ. ನವಿಲುಗಳೆಲ್ಲವೂ ಚೆಲುವಿನ ಗರಿಗೆದರಿದ ನವಿಲುಗಳೇ. ದುಂಬಿಗಳು ಮರಿದುಂಬಿಗಳೇ. ಮಾವು ಸಿಹಿಮಾವು. ಪುಳಿನವು ಶೀತಳ. ತೆಂಗು ಚೆಂದೆಂಗು. ಕೇದಗೆ ಹೊಂಗೇದಗೆ. ಸುಳಿಗಾಳಿ ತೆಂಗಾಳಿ. ಕೋಗಿಲೆಗಳೆಲ್ಲವೂ ಮದಿಸಿದವು. ಉತ್ಪಲಗಳೆಂದರೆ ನೀಲೋತ್ಪಲಗಳೇ. ಹಂಸಗಳೆಂದರೆ ರಾಜಹಂಸಗಳೇ.

ಮನ್ಮಥನಂತೆ ಮನೋಹರನಾದ ಹರಿಶ್ಚಂದ್ರನನ್ನು ವನದೇವತೆಗಳು ಆದರಿಸಿ ಸ್ವಾಗತಿಸಿದರು. ಹೂಗಳ ಹೊಸಸೀರೆಯುಟ್ಟ ಲತೆಗಳೇ ಎದುರ್ಗೊಳ್ಳುವ ಅಂಗನೆಯರು. ಹಣ್ಣುಗಳೇ ಕಲಶಗಳು. ಎಳಚಿಗುರು ಕನ್ನಡಿ. ಅರಗಿಳಿಗಳ ಅಬ್ಬರ ಡಿಂಡಿಮಧ್ವನಿ. ಮೊಗ್ಗು ನೆನೆಯಕ್ಕಿ. ಕೋಗಿಲೆಗಳ ಧ್ವನಿ ಕಹಳೆ. ದುಂಬಿಗಳ ಜೇಂಕಾರ ಸುಖಾಗಮನವೀಯುವ ಹಾಡು. ಈ ಬಗೆಯ ರಾಜಮರ್ಯಾದೆಯೊಡನೆ ರಾಜನು ಒಳಹೊಕ್ಕು ವನದ ಸೊಬಗನ್ನು ನೋಡುತ್ತ ಒಂದು ಕೊಳದ ಬಳಿಗೆ ಬಂದನು. ಹಗಲಾದ್ದರಿಂದ ಮುದುರಿದ ನೈದಿಲೆಗಳನ್ನು ನೋಡಿ ನಗುವುವೋ ಎಂಬಂತೆ ಕಮಲಗಳು ಅರಳುತ್ತಿದ್ದವು. ಅಷ್ಟರಲ್ಲಿಯೇ ಕೆಲವು ಹೆಣ್ಣುದುಂಬಿಗಳು ಹೊಸದಾವರೆಗಳ ದಳಗಳ ಸಂದಿನಲ್ಲಿ ನುಗ್ಗಿ ಕೇಸರಗಳಲ್ಲಿ ನುಸುಳಿದವು. ಜಿನುಗುವ ಮಕರಂದದಿಂದ ಕೊಚ್ಚೆಯಾದ ಪರಾಗಕಣಗಳಲ್ಲಿಳಿದು ಮಕರಂದವನ್ನು ಹೀರಿ ತಮ್ಮ ಮರಿಗಳಿಗೆ ಗುಟುಕನ್ನು ಕೊಟ್ಟುವು. ಆ ಕೊಳದಲ್ಲಿ ★ವಿಷವಿದ್ದರೂ ವಿಷವಿರಲಿಲ್ಲ! ಹೊಸ ಕಮಲವಿದ್ದರೂ ಕಮಲವಿಲ್ಲ! ಕುಮುದವಿದ್ದರೂ ಕುಮುದವಿಲ್ಲ! ಪ್ರತಿಕೂಲವಿದ್ದವರೂ ಪ್ರತಿಕೂಲವಿಲ್ಲ! ವಿಜಾತಿಗಳಿದ್ದರೂ ವಿಜಾತಿಗಳಿಲ್ಲ! ಕೊಳದ ಈ ವೈಚಿತ್ರ್ಯವನ್ನು ನೋಡಿ ಹರಿಶ್ಚಂದ್ರನು ಅಚ್ಚರಿಪಡುತ್ತ ಸ್ವಲ್ಪಕಾಲದವರೆಗೆ ಅಲ್ಲಿ ನಿಂತನು. ಹೀಗೆ ಆ ಉದ್ಯಾನದ

★ ವಿಷ= ನೀರು; ವಿಷ. ಕಮಲ= ತಾವರೆ; ಕ+ಮಲ–ನೀರಿನ ಕೊಳೆ. ಕುಮುದ= ನೈದಿಲೆ; ದುಃಖ. ಪ್ರತಿಕೂಲ= ಸುತ್ತಲಿರುವ ದಡ; ವಿರೋಧ. ವಿಜಾತಿ= ನೀರು ಹಕ್ಕಿಗಳ ಹಿಂಡು; ವಿಜಾತೀಯರು.

ಬಗೆಬಗೆಯ ಸೌಂದರ್ಯವನ್ನು ಸವಿಯುತ್ತ ಮಹಾರಾಜನು ಮುಂದೆಹೋಗಿ, ಹೂದೋಟದ ನಡುವೆ ಕಟ್ಟಿಸಿದ್ದ ದಿವ್ಯವಾದ ಭವನದಲ್ಲಿ ಇಳಿದುಕೊಂಡನು. ಅನಂತರ ಪ್ರತಿದಿನವೂ ತಾನು ಮಾಡುವ ನಿತ್ಯಕರ್ಮಗಳನ್ನೂ ಶಿವಾರ್ಚನೆಯನ್ನೂ ತಪ್ಪದೆ ನೆರವೇರಿಸುತ್ತ ಉಳಿದ ಕಾಲದಲ್ಲಿ ಉಪವನದೊಳಗೆ ವಿಹರಿಸುತ್ತಿದ್ದನು. ಹರಿಶ್ಚಂದ್ರನು ರಾಣೀವಾಸದವರೊಡನೆ ಹೊರಟು ಒಮ್ಮೆ ಎಳಲತೆಗಳನ್ನು ನೋಡುತ್ತ, ಒಮ್ಮೆ ಕ್ರೀಡಾ ಶೈಲದಲ್ಲಿ ಸಂಚರಿಸುತ್ತ, ಒಮ್ಮೆ ಪುಳಿನಸ್ಥಳದಲ್ಲಿ ವಿಹರಿಸುತ್ತ, ಒಮ್ಮೆ ಹೂಗಳನ್ನು ಕೀಳುತ್ತ, ಒಮ್ಮೆ ಜಲಕ್ರೀಡೆಯನ್ನಾಡುತ್ತ, ಒಮ್ಮೆ ಇನಿವಣ್ಣುಗಳನ್ನು ಮೆಲ್ಲುತ್ತ, ಒಮ್ಮೆ ಪಂಡಿತಗೋಷ್ಠಿಯನ್ನು ಸೇರಿಸುತ್ತ ವಸಂತಸುಖವನ್ನು ಸವಿಯುತ್ತಿದ್ದನು.

ಇತ್ತ ವಿಶ್ವಾಮಿತ್ರಮುನಿಗಳ ಕಪಟಮಂತ್ರದ ಬೀಜವು ಮೊಳೆಯಿತು. ಹೊಲಗಳಲ್ಲಿ ಮೊಳೆತ ಬೀಜಗಳನ್ನು ಕ್ರಿಮಿಕೀಟಗಳು ತಿಂದವು. ಸಸಿಗಳನ್ನು ಹುಲ್ಲೆಗಳು ಮೇದವು. ತೆನೆಗಳನ್ನು ಗಿಳಿ ನವಿಲು ಕೊಂಚೆ ಮೊದಲಾದ ಹಕ್ಕಿಗಳು ಮುಕ್ಕಿದವು. ಉಳಿದ ಬೆಳೆಯನ್ನು ಇಲಿ ಹೆಗ್ಗಣಗಳು ಮುಗಿಸಿದವು. ಕಾಯುವ ಜನರನ್ನು ಹಾವುಗಳು ಕಡಿದವು. ತೋಟದ ಗೆಡ್ಡೆ ಗೆಣಸುಗಳನ್ನು ಹಂದಿಗಳು ಧ್ವಂಸ ಮಾಡಿದವು. ಹಣ್ಣುಕಾಯಿಗಳೂ ಕಬ್ಬುಗಳೂ ಅಳಿಲ ಪಾಲಾದವು. ನೀರಲ್ಲಿ ಮೊಸಳೆಗಳ ಭಯ ಹೆಚ್ಚಿತು. ಎಳಗರುಗಳನ್ನು ತೋಳಗಳು ಕಬಳಿಸಿದವು. ಹಸುಗಳನ್ನು ಹುಲಿಗಳು ಭಕ್ಷಿಸಿದವು. ದಾರಿಯಲ್ಲಿ ಸಂಚರಿಸುವ ಜನರನ್ನು ಕರಡಿ ಕಾಡುಕೋಣಗಳು ಕೊಂದವು! ಹೀಗೆ ನಾಡಿನಲ್ಲೆಲ್ಲೆಲ್ಲಿಯೂ ಹಾಹಾಕಾರವೆದ್ದಿತು. ಪರಿಹರಿಸುವ ಮಾರ್ಗ ಜನರಿಗೆ ತೋರದಾಯಿತು. ತಮ್ಮ ಗೋಳನ್ನು ಮಹಾರಾಜನಿಗೆ ತಿಳಿಸಬೇಕೆಂದು ಪ್ರಜೆಗಳು ಅಯೋಧ್ಯೆಗೆ ಧಾವಿಸಿ ಹರಿಶ್ಚಂದ್ರನು ತಂಗಿದ್ದ ಉಪವನಕ್ಕೆ ಬಂದರು. ಅವರು ಮಹಾರಾಜನನ್ನು ಸಂದರ್ಶಿಸಿ ಉಚಿತವಾದ ಕಾಣಿಕೆಗಳನ್ನಿತ್ತು ವಂದಿಸಿ, "ಮಹಾಪ್ರಭು, ನಿನ್ನ ರಾಜ್ಯದಲ್ಲಿ ನಾವು ಸುಖದಿಂದಿರುವಾಗ, ಇದುವರೆಗೆ ಕಾಣದಿದ್ದ ಮಹಾಭಯವೊಂದು ಒದಗಿದೆ. ಇದು ಆಶ್ಚರ್ಯಕರವಾಗಿ ತೋರಬಹುದು. ವನ್ಯಮೃಗಗಳೂ ಹಕ್ಕಿಗಳೂ ಇನ್ನಿಲ್ಲದಂತೆ ಹುಟ್ಟಿ ಬೆಳೆದು ನಮ್ಮನ್ನು ಅಪಾರವಾಗಿ ಕಾಡುತ್ತಿವೆ. ನಾಡಿನಲ್ಲೆಲ್ಲಿಯೂ ಬೆಳೆ ಇಲ್ಲ, ಬಿತ್ತನೆ ಇಲ್ಲ, ನೀರಿಲ್ಲ, ನಮಗೆ ಕುಶಲವೆಂಬುದೇ ಇಲ್ಲ, ಈ ಸಂಕಟವನ್ನು ನೀನು ಪರಿಹರಿಸಬೇಕು" ಎಂದು ನಿವೇದಿಸಿದರು. ಹರಿಶ್ಚಂದ್ರನು ಅವರಿಗೆ ಸಮಾಧಾನ ಹೇಳಿ ಧನಧಾನ್ಯಗಳನ್ನು ಕೊಟ್ಟು

ಸಂತವಿಟ್ಟು "ಪ್ರಜೆಗಳೆ, ಅಂಜದಿರಿ. ನಾಳೆಯೇ ನಾನು ಬಂದು ಬೇಟೆಯಾಡಿ ಖಗಮೃಗಗಳನ್ನು ಸದೆಯುವೆನು" ಎಂದು ಹೇಳಿ ಅವರನ್ನು ಕಳಿಸಿಕೊಟ್ಟನು.

ಸಂಜೆಯಾಯಿತು. ಸೂರ್ಯನು ಪಡುವಣ ಕಡಲ ಬಳಿಗೆ ಸಾರಿದನು. ಕೆಂಪಾಗಿ ಬೆಳಗುವ ಸೂರ್ಯಮಂಡಲವು, ಸರ್ಪವೃಂದವನ್ನು ಕೊಂದ ಪಾಪವನ್ನು ತೊಳೆಯಲು ಸಮುದ್ರಕ್ಕಿಳಿಯುವ ಸಿಡಿಲೋ, ತನ್ನ ವೈರಿಯಾದ ಮೈನಾಕನಿಗೆ ಆಶ್ರಯವನ್ನಿತ್ತನೆಂಬ ಕೋಪದಿಂದ ಇಂದ್ರನು ಸಮುದ್ರದ ಮೇಲೆ ಅಪ್ಪಳಿಸಿದ ವಜ್ರಾಯುಧವೋ, ಮೇಘಗಳು ನೀರನ್ನು ಕುಡಿಯುವಾಗ ಅವುಗಳ ಬಾಯಿಗೆ ಸಿಕ್ಕಿ ಮೇಲೇರಿ ಮತ್ತೆ ಸಮುದ್ರಕ್ಕಿಳಿದು ಬರುತ್ತಿದ್ದ ಬಡಬಾಗ್ನಿಯೋ, ಸಂಧ್ಯಾಂಗನೆಗೆ ನಿವಾಳಿಸುವುದಕ್ಕಾಗಿ ಸಮುದ್ರರಾಜನು ಎತ್ತಿ ಹಿಡಿದ ಆರತಿಯೋ, ದಿಶಾಂಗನೆಯು ಮುಂದಲೆಯಲ್ಲಿ ಧರಿಸಿದ್ದ ಚೂಡಾರತ್ನವೋ ಎಂಬಂತೆ ಕಂಗೊಳಿಸಿತು. ಆಗ ಪೂರ್ವದಿಕ್ಕಿನಲ್ಲಿ ಕೆಂಬಣ್ಣದ ಚಂದ್ರಬಿಂಬವು, ಪೂರ್ವಸಮುದ್ರದಲ್ಲಿ ಕಾಣುವ ಸೂರ್ಯನ ಪ್ರತಿಬಿಂಬವೋ ಎಂಬಂತೆ ಉದಯಿಸಿತು. ಹೀಗೆ ಎದುರುಬದುರಾಗಿ ರಂಜಿಸುತ್ತಿದ್ದ ರವಿ ಶಶಿ ಮಂಡಲಗಳು, ಇಂದ್ರ ವರುಣರು ಕಾದಾಡಲು ಹಿಡಿದಿದ್ದ ಗುರಾಣಿಗಳೋ ಎಂಬಂತೆ ಶೋಭಿಸಿದವು. ಅನಂತರ ಥಳಥಳಿಸುವ ತಾರೆಗಳು ಮೂಡಿದವು. ಇವು ಬೆಳದಿಂಗಳನ್ನು ಬೆಳೆಯುವ ಬೀಜಗಳೋ, ಚಂದ್ರನು ಚಕೋರಗಳಿಗಿತ್ತ ಗುಟುಕುಗಳೋ, ಗಗನರಮಣಿಯ ರುಚಿರಮುಕ್ತಹಾರಗಳೋ, ಸೂರ್ಯಾಶ್ವಗಳು ಉಗುಳಿದ ನೊರೆಗಳೋ, ದೇವಗಂಗೆಯಲ್ಲಿ ಬೆಳೆದ ಬಿಳಿನೈದಿಲೆಗಳ ಮೊಗ್ಗುಗಳೋ, ನಿಶಾಂಗನೆಯು ವಿಷ್ಣುಪದವನ್ನರ್ಚಿಸಿದ★ ತೋರಮಲ್ಲಿಗೆ ಹೂಗಳೋ ಎಂಬಂತೆ ರಂಜಿಸಿದವು. "ನನ್ನ ಮಗನು ಉದಿಸಿಬಂದು ವೈಭವದಿಂದ ಕಾಲಿಡುವ ರಾಜಾಂಗಣವಿದೆ"ಂದು ಬಗೆದು ಕ್ಷೀರವಾರಿಧಿಯು ಹರ್ಷದಿಂದ ನಗುತ್ತ ಉಬ್ಬಿ ಅಲೆಗಳಿಂದ ತೊಳೆದು ಮಲ್ಲಿಗೆ ಹೂಗಳನ್ನು ಹರಡಿತೋ ಎಂಬಂತೆ ಗಗನಾಂಗಣವು ಹೊಳೆಯುತ್ತಿರಲು, ಚಂದ್ರನು ದಶದಿಶೆಗಳಿಗೂ ಬೆಳದಿಂಗಳನ್ನು ಚೆಲ್ಲುತ್ತ ಮೇಲೆದ್ದನು. ಮನ್ಮಥನು ತನ್ನ ಕುಸುಮಶರವನ್ನು ಮಸೆಯುವ ಸ್ಫಟಿಕದ ಸಾಣೆಯೋ, ರತಿಯ ಕನ್ನಡಿಯೋ, ಮನ್ಮಥನ ಹೊಸ ಚಕ್ರಾಯುಧವೋ, ದೇವತೆಗಳು ಭೂಲೋಕಕ್ಕೆ ಬೆಳದಿಂಗಳನ್ನು ಚೆಲ್ಲುವ ಪಾತ್ರೆಯೋ ಎಂಬಂತೆ ಚಂದ್ರಬಿಂಬವು ಸೊಗಯಿಸಿತು.

★ ವಿಷ್ಣುಪದ = ವಿಷ್ಣುಪಾದ ; ಆಕಾಶ

ಆ ಸಮಯದಲ್ಲಿ ಮುಖ್ಯಸಚಿವನಾದ ಸತ್ಯಕೀರ್ತಿಯು ಹರಿಶ್ಚಂದ್ರನ ಬಳಿಗೆ ಬಂದು ''ಮಹಾಸ್ವಾಮಿ ಉಪವನದಲ್ಲಿ ವಿಹರಿಸುವುದಕ್ಕಾಗಿ ಬಂದು ಒಂದು ತಿಂಗಳಾಯಿತು. ನಾಳೆ ಬೇಟೆಗಾಗಿ ಅರಣ್ಯಕ್ಕೆ ಹೊರಡತಕ್ಕವರಿದ್ದೀರಿ. ಪ್ರಜೆಗಳ ಕಷ್ಟವನ್ನು ಪರಿಹರಿಸದಿರಲು ಸಾಧ್ಯವಿಲ್ಲ. ಆದ್ದರಿಂದ ಈ ರಾತ್ರಿ ನಗರ ಸಂಚಾರವನ್ನು ಕೈಗೊಂಡು ಅಲ್ಲಿಯ ವಿನೋದಗಳನ್ನು ಕಂಡು ಆನಂದಿಸಬೇಕು'' ಎಂದು ವಿಜ್ಞಾಪಿಸಿದನು. ಹರಿಶ್ಚಂದ್ರನು ''ಹೌದು; ಪ್ರಜೆಗಳ ಸಂಕಟವು ತಿಳಿದ ಮೇಲೆ ಸುಮ್ಮನಿರಲಾಗದು. ಮೃಗಬಾಧೆಯನ್ನು ನೀಗಿಸುವುದಕ್ಕಾಗಿ ನಾಳೆಯೇ ಹೊರಡಬೇಕು. ವನವಿಹಾರವು ಇಂದಿಗೆ ಮುಗಿಯಲಿ. ಈ ರಾತ್ರಿ ನಗರ ಸಂಚಾರವನ್ನು ಕೈಗೊಳ್ಳುವೆನು'' ಎಂದು ತಿಳಿಸಿ. ವನಪಾಲಕರಿಗೆ ಪಾರಿತೋಷಕಗಳನ್ನಿತ್ತು ಸನ್ಮಾನಿಸಿ, ಪರಿವಾರವೆಲ್ಲವೂ ನಗರಕ್ಕೆ ಸಾಗಲೆಂದು ಆಜ್ಞಾಪಿಸಿದನು.

ನಗರ ಪರ್ಯಟನ

ಹರಿಶ್ಚಂದ್ರನು ಮಂತ್ರಿಯ ನಿವೇದನೆಯನ್ನು ಮನ್ನಿಸಿ, ಅಂತಃಪುರ ಸ್ತ್ರೀಯರನ್ನು ಅರಮನೆಗೂ ಸೇನಾಪರಿವಾರವನ್ನು ಬಿಡಾರಗಳಿಗೂ ಕಳಿಸಿ, ಪರಿಮಿತ ಜನರೊಡನೆ ನಗರಸಂಚಾರಕ್ಕಾಗಿ ಹೊರಟನು. ಮುತ್ತಿನ ಸರ, ಪದಕ, ಕೇಯೂರ, ಕರ್ಣಕುಂಡಲ - ಮುಂತಾದ ವಿವಿಧಾಭರಣಗಳನ್ನು ಧರಿಸಿ, ಪುಣುಗು ಚಂದನಗಳನ್ನು ಲೇಪಿಸಿ, ಕಸ್ತೂರಿಯ ಬಟ್ಟನ್ನು ಇಟ್ಟು, ಸ್ವಚ್ಛವಾದ ವಸ್ತ್ರವನ್ನುಟ್ಟು ಹರಿಶ್ಚಂದ್ರಭೂಪಾಲನು ಸೂರ್ಯನಂತೆಯೂ ಮನ್ಮಥನಂತೆಯೂ ವಿರಾಜಿಸುತ್ತ ಹತ್ತೆಂಟು ಮಂತ್ರಿಗಳೊಡನೆ ವೇಶ್ಯಾವೀಥಿಯನ್ನು ಪ್ರವೇಶಿಸಿದನು. ಆ ಸೂಳೆಗೇರಿಯಾದರೋ ಜಾಣೆನ ಜನ್ಮಭೂಮಿ. ಶೃಂಗಾರದ ಮಡು. ಮೋಹದ ಬೀಡು. ಸೊಬಗಿನ ಸೀಮೆ. ಚಾತುರ್ಯದ ಚಾವಡಿ. ಉಪಚಾರದ ಗೂಡು. ವೇಶ್ಯಾವೃತ್ತದ ವಿಸ್ತಾರ. ಸುಳ್ಳಿನ ಪ್ರಚಾರಭೂಮಿ! ಕೃತಕ ವ್ಯವಹಾರದ ಕೇರಿ. ಬಯಕೆಯ ನೆಲೆ.

ಬೀದಿಯ ಇಕ್ಕೆಲಗಳಲ್ಲಿ ಅತಿಮನೋಹರವಾದ ವಿಶಾಲ ಭವನಗಳಿದ್ದವು. ವಿವಿಧ ರತ್ನಭೂಷಣಗಳಿಂದ ವೈಭವೋಪೇತವಾದ ಆ ಗೃಹಗಳಲ್ಲಿ ಸುಂದರಿಯರಾದ ವೇಶ್ಯೆಯರು ಸಂಚರಿಸುತ್ತಿರುವುದನ್ನು ಹರಿಶ್ಚಂದ್ರನು ಕಂಡನು. ಆ ತರುಣಿಯರು ಮಹಾರಾಜನನ್ನು ವೈಭವದಿಂದ ಸ್ವಾಗತಿಸುವರೋ ಎಂಬಂತೆ ಕಾಣಿಸಿದರು. ಹೇಗೆಂದರೆ, ಸುಳಿಗಾಳಿಗೆ ಒಲೆದಾಡುವ ಅವರ ಸೀರೆಯ ಸೆರಗೇ ಬಾವುಟ. ಚಲಿಸುವ ಮುಂಗುರುಳು ತೋರಣ. ಕುಚಗಳೇ ಕಲಶಗಳು. ಮುಖವೇ ಕನ್ನಡಿ. ಕರತಳವೇ

ತಳಿರು. ನಖಗಳೇ ಹೂಗಳು. ಒಡವೆಗಳ ಮುತ್ತು ನನೆಯಕ್ಕಿ. ಹುಬ್ಬುಗಳೇ ಕಬ್ಬಿನ ಜಲ್ಲೆಗಳು. ಮುಡಿದ ಹೂಗಳಿಗೆ ಮುಸುಕುವ ದುಂಬಿಗಳು ನವಿಲುಗರಿ. ಬಳೆಗಳ ಸದ್ದು ಮಂಗಳವಾದ್ಯ! ಆ ಸಮಯದಲ್ಲಿ ಸುಣ್ಣವನ್ನು ಬಳಿದಿದ್ದ ಬಿಳಿಬಣ್ಣದ ಮಹಡಿಯ ಮೇಲೆ ಗೌರವರ್ಣದ ಯುವತಿಯೊಬ್ಬಳು ನಿಂತಿದ್ದಳು. ಅವಳು ಧವಳಾಂಬರವನ್ನುಟ್ಟು ಶುಭ್ರದಂತಪಕ್ತಿಯು ಕಾಣಿಸುವಂತೆ ಬೆಳ್ನಗೆಯನ್ನು ಬೀರುತ್ತಿದ್ದಳು. ಮೈಗೆ ಶ್ರೀಗಂಧವನ್ನು ಬಳಿದುಕೊಂಡು ತಲೆಯಲ್ಲಿ ಮಲ್ಲಿಗೆಯ ಮಾಲೆಯನ್ನು ಮುಡಿದಿದ್ದಳು. ತೊಟ್ಟಿದ್ದ ಮುತ್ತಿನ ಒಡವೆಗಳ ಬೆಳಕು ಬೆಳದಿಂಗಳಂತೆ ಬೀದಿಯವರೆಗೆ ಹರಡಿತ್ತು. ಬಿಳಿಯ ಉಪ್ಪರಿಗೆಯ ಮೇಲೆ ನಿಂತಿದ್ದ ಆ ಚೆಲುವೆಯು ಬಿಳಿಮೋಡದ ಮೇಲೆ ತೊಳಗುವ ಚಂದ್ರಕಲೆಯೋ ಎಂಬಂತೆ ತೋರಿದಳು! ಆ ಸೂಳೆಗೇರಿಯ ಮಹಡಿಗಳಲ್ಲಿ ಕೆಲವರು ಪಗಡೆ ಚದುರಂಗಗಳನ್ನಾಡುತಿದ್ದರು. ಕೆಲವರು ವೀಣೆಗಳನ್ನು ನುಡಿಸುತ್ತಿದ್ದರೆ, ಕೆಲವರು ಗೀತನೃತ್ಯ ವಾದ್ಯಗಳನ್ನು ಕಲಿಯುತ್ತಿದ್ದರು. ಒಂದು ಕಡೆ ಗಿಳಿಗಳಿಗೆ ಮಾತು ಕಲಿಸುತ್ತಿದ್ದರೆ, ಇನ್ನೊಂದು ಕಡೆ ಕಾಮಶಾಸ್ತ್ರದ ಪಾಠ ನಡೆಯುತ್ತಿತ್ತು! ಒಂದೆಡೆ ವೇಶ್ಯಾವಿಡಂಬನದ ಕಥೆಗಳನ್ನು ಹೇಳುತ್ತಿದ್ದರು. ಇನ್ನೊಂದೆಡೆ ವೇಶ್ಯೆಯರು ಸಿಂಗರಿಸಿಕೊಂಡು ನಲ್ಲರೊಡನೆ ಕಲೆತಿದ್ದರು. ಇದೆಲ್ಲವನ್ನೂ ವೀಕ್ಷಿಸುತ್ತ ಹರಿಶ್ಚಂದ್ರನು ಸಾಗಿದನು. ಒಂದು ಕಡೆಯಲ್ಲಿ ಅಂಗನೆಯರು ಚಿಟ್ಟು ಮುರಿಯೆಂಬ ಆಟವನ್ನಾಡುತ್ತಿದ್ದರು. ಆಡುವಾಗ ಒಬ್ಬರನ್ನೊಬ್ಬರು ಎದುರಿಸಿ ಮುಂದೆ ಬಂದಾಗ ಎದುರಿದ್ದವರು ಹಿಂದಕ್ಕೆ ಸರಿಯುತ್ತಿದ್ದರು. ಆ ಸಮಯದಲ್ಲಿ ದುಂಬಿಯು ದುಂಬಿಯನ್ನಟ್ಟುವಂತೆ ಅವರ ಅಲಕಗಳೂ, ಹೂಬಾಣವು ಹೂಬಾಣವನ್ನು ಹಿಂದಕ್ಕೆ ತಳ್ಳುವಂತೆ ನೇತ್ರಗಳೂ, ಇಂದುಮಂಡಲವು ಇನ್ನೊಂದು ಇಂದುಮಂಡಲವನ್ನು ತಾಕುವಂತೆ ಮುಖಗಳೂ, ಎಳೆಬಳ್ಳಿಯು ಇನ್ನೊಂದು ಎಳೆಬಳ್ಳಿಯ ಕುಡಿಯಲ್ಲಿ ತಗುಲಿಕೊಳ್ಳುವಂತೆ ತೋಳುಗಳೂ, ಚಕ್ರವಾಕಗಳು ಚಕ್ರವಾಕಗಳನ್ನು ಬೆನ್ನಟ್ಟುವಂತೆ ಸ್ತನಗಳೂ, ಹಂಸಗಳು ಹಂಸಗಳನ್ನೆದುರಿಸುವಂತೆ ಪಾದಗಳೂ ರಂಜಿಸಿದವು. ಒಂದೆಡೆಯಲ್ಲಿ ಸುಂದರಿಯರು ಬಗೆಬಗೆಯಲ್ಲಿ ಬಾಹುಗಳನ್ನು ತಿರುವುತ್ತ ಕೋಲಾಟವನ್ನಾಡುತ್ತಿರಲು ಮುಡಿಯ ಪರಿಮಳದೊಡನೆ ಮರಿದುಂಬಿಗಳು ಹಾರಾಡುತ್ತಿದ್ದವು. ಅವರ ನಡಿಗೆಯ ಜೊತೆಯಲ್ಲಿ ಹಂಸಗಳು ಹೆಜ್ಜೆಯಿಡುತ್ತಿದ್ದವು. ಸೊಬಗಿನ ನುಡಿಗಳೊಡನೆ ಗಿಳಿಗಳು ನುಡಿಯುತ್ತಿದ್ದವು. ಕುಚಗಳ ಬಳಿ ಕೋಕಗಳು ಕುಣಿಯುತ್ತಿದ್ದವು. ಆ ಚೆಲುವೆಯರ ದೇಹ ಸೌಂದರ್ಯದೊಡನೆ ನೋಟಕರ ದೃಷ್ಟಿಗಳು ನರ್ತಿಸುತ್ತಿದ್ದವ' ಕೆಲವು ಲಲನೆಯರು ಚೆಂಡಾಟವಾಡುತ್ತಿದ್ದರು.

ಒಬ್ಬ ರಮಣಿಯು ಉಯ್ಯಾಲೆಯಾಡುತ್ತಿರುವಾಗ ಚಂದ್ರಬಿಂಬದಂತಿದ್ದ ಕಾಲ್ಮಣೆಯನ್ನು ಒದ್ದಳು. ಅವಳು "ಎಲವೋ ಚಂದ್ರ, ಜಗತ್ತಿಗೆ ತಿಳಿದಿರುವಂತೆ ನೀನು ಕಳಂಕಿ, ಕಲಾಹೀನ; ಹಾವು★ ನುಂಗಿ ಉಗುಳಿದೆ ನಿನ್ನನ್ನು! ದೋಷಿ; ಅಸ್ಥಿರ; ಶ್ವೇತಾಂಗ; ಇಂಥ ಅವಲಕ್ಷಣನಾದ ನೀನು ನನ್ನ ಮುಖದೆದುರಿಗೆ ಬಂದೆಯಾ?" ಎಂದು ಕೋಪಿಸಿ ಚಂದ್ರನನ್ನು ಒದೆದಂತೆ ಕಾಣಿಸಿತು.

ಈ ಪ್ರಕಾರವಾಗಿ ಬಗೆಬಗೆಯ ಕ್ರೀಡೆಗಳಿಂದ ವಿಹರಿಸುತ್ತ ನಲ್ಲರೊಡನೆ ನಲಿಯುತ್ತ ಮೆರೆಯುತ್ತಿದ್ದ ಸೊಗಸುಗಾತಿಯರನ್ನು ನೋಡಿ ಹರಿಶ್ಚಂದ್ರ ಭೂಪಾಲನು ಚಿತ್ತವಿನೋದವನ್ನು ಪಡೆದು ತನ್ನ ಅರಮನೆಯನ್ನು ಸೇರಿದನು. ಅನಂತರ ಸ್ನಾನವನ್ನು ಮಾಡಿ ಭೋಜನವನ್ನು ಮುಗಿಸಿ ಶಯನಾಗಾರಕ್ಕೆ ಹೋಗಿ ನಿದ್ರಿಸಿದನು. ಇತ್ತ ಆಕಾಶದಲ್ಲಿ ಚಂದ್ರಮನ ಸೊಬಗು ಇಳಿಯುತ್ತ ಬಂದಿತು. ರಾತ್ರಿವಧುವಿನ ಯೌವನವು ಹಳದಾಯಿತು. ತೆರಪಿಲ್ಲದೆ ಕಾಡುತ್ತಿದ್ದ ದುಂಬಿಗಳ ಪೀಡೆಯಿಂದ ಕೈರವಗಳು ಕಂದಿದವು. ಹಗಲೆಲ್ಲ ಹಸಿದಿದ್ದ ಚಕೋರಿಗಳು ಬೆಳದಿಂಗಳನ್ನು ಕುಡಿದು ಕುಡಿದು ಮುಗಿಸಿದವು! ಕಳೆಯೆಲ್ಲವನ್ನೂ ಹಿಂಡಿ ಹೀರಿ ಬಿಸುಟಂತೆ ಚಂದ್ರನು ನಿಸ್ಸಾರವಾಗಿ ಕಾಣಿಸಿದನು. ತಮ್ಮ ಕಾಂತನಾದ ಚಂದ್ರನ ದುರವಸ್ಥೆಯನ್ನು ಕಂಡು ತಾರೆಗಳು ದುಃಖದಿಂದ ಕಂದಿದವು! ಮಗನ ಕ್ಷೀಣತೆಯನ್ನು ನೋಡಿ ಸಮುದ್ರರಾಜನು ಬಡವಾದನು! ಮಹಾರಾತ್ರಿಯೇ ಅಳಿಯುತ್ತಿರುವಾಗ ಯಾರು ತಾನೇ ನಶಿಸದೆ ಇದ್ದಾರು?

ಮೂಡಲಲ್ಲಿ ಅರುಣೋದಯವಾಯಿತು. ತಂಗಾಳಿ ಬೀಸಿತು. ಪಂಚ ಮಹಾವಾದ್ಯಗಳು ಮೊಳಗಿದವು. ದೇವಸ್ಥಾನಗಳಲ್ಲಿ ಶಂಖಗಳು ಶಿವನ ಮಹಿಮೆಯನ್ನು ಘೋಷಿಸಿದವು. ಅರಮನೆಯಲ್ಲಿ ಗಾಯಕಿಯರು ಹಾಡಿದರು. ವಂದಿಮಾಗಧರು ಮಹಾರಾಜನನ್ನು ಹೊಗಳಿದರು. ಉದಯಗಿರಿಯ ಶಿಖರಾಗ್ರದಲ್ಲಿ ರವಿಯು ಕಿರಣತತಿಗಳೊಡನೆ ಹೊಳೆಹೊಳೆಯುತ್ತ ಮೂಡಿದನು. ಪೂರ್ವದಿಕ್ಕಿನಲ್ಲಿ ಹೊಂಬೆಳಗು ಹರಡತೊಡಗಿತು. ಸಾಗರದ ಉಬ್ಬರ ಇಳಿಯತೊಡಗಿತು. ನೈದಿಲೆಯು ಬಾಡತೊಡಗಿತು. ತಂಗಾಳಿ ಪರಿಮಳವನ್ನು ಬೀರತೊಡಗಿತು. ತಾವರೆಯು

★ ಹಾವು= ರಾಹು. ದೋಷಿ=ದೋಷಯುಕ್ತ; ದೋಷಾ=ರಾತ್ರಿ, ರಾತ್ರಿಯಲ್ಲಿ ಉದಿಸುವವನು. ಶ್ವೇತಾಂಗ= ತೊನ್ನು ಹಿಡಿದವನು; ಬಿಳಿಯ ದೇಹವುಳ್ಳವನು.

ಅರಳತೊಡಗಿತು. ಜೀವಿಗಳ ಜ್ಞಾನಜ್ಯೋತಿಯೋ ಎಂಬಂತೆ ರವಿಬಿಂಬವು ಮೂಡತೊಡಗಿತು. ಕೆಂಪಗೆ ಹೊಳೆಯುತ್ತಿದ್ದ ಸೂರ್ಯಮಂಡಲವನ್ನು ನೋಡಿದಾಗ, ಇದೇನು ಚಂದ್ರನನ್ನು ಬೆನ್ನಟ್ಟಿದ ಬಡಬಾಗ್ನಿಯಿಂದ ಸಿಡಿದ ಕೆಂಗಿಡಿಯೋ, ಕಾಳರಾತ್ರಿಯ ನಡುದಲೆಯ ಮೇಲೆ ಎರಗಿದ ಬರಸಿಡಿಲೋ ಅಥವಾ ಕೋಪಾವಿಷ್ಟನಾದ ಕಾಲಭೈರವನು ಖಡ್ಗವನ್ನು ನಿರ್ಮಿಸುವುದಕ್ಕಾಗಿ, ರುದ್ರನ ಫಾಲನೇತ್ರಾಗ್ನಿಯಲ್ಲಿ ಕಾಯಿಸಿ ಉದಯಗಿರಿಯೆಂಬ ಅಡಿಗಲ್ಲಿನ ಮೇಲೆ ಬಡಿಯುವುದಕ್ಕಾಗಿ ಇಟ್ಟ ಕಬ್ಬಿಣದ ಬಟ್ಟೋ ಎಂಬಂತೆ ರಂಜಿಸಿತು!

ಆಗ ಹರಿಶ್ಚಂದ್ರಭೂಪಾಲನು ಶಿವನಾಮಸ್ಮರಣೆ ಮಾಡುತ್ತ ಹಾಸಿಗೆಯಿಂದ ಮೇಲೆದ್ದನು. ಮೊದಲು ಘೃತವನ್ನು ನೋಡಿ, ಮಣಿಮುಕುರದಲ್ಲಿ ತನ್ನ ಮುಖದ ಪ್ರತಿಬಿಂಬವನ್ನವಲೋಕಿಸಿ, ಬುಧಜನರ ಮಂಗಳಾಶೀರ್ವಾದವನ್ನು ಪಡೆದು, ಗೋವನ್ನು ಸ್ಪರ್ಶಿಸಿ, ವಂದಿಮಾಗಧರ ಸ್ತುತಿಯನ್ನೂ ಮಂಗಳ ವಾದ್ಯವನ್ನೂ ಆಲಿಸುತ್ತ ಸ್ನಾನಗೃಹಕ್ಕೆ ತೆರಳಿದನು. ಕ್ರಮವಾಗಿ ಮುಖ ಪ್ರಕ್ಷಾಲನಸ್ನಾನಾದಿಗಳನ್ನು ಮಾಡಿ, ಸಂಧ್ಯಾವಂದನೆಯನ್ನಾಚರಿಸಿ, ಆನಂದದಿಂದ ಶಿವಪೂಜೆಯನ್ನು ನೆರವೇರಿಸಿದನು. ಅನಂತರ ದಾನಧರ್ಮಗಳನ್ನು ಮಾಡಿ ರಿಪುರಾಜಮದಗಜವಿದಳನೋದಗ್ರಸಿಂಹನಾದ ಹರಿಶ್ಚಂದ್ರನು ಸಭಾಮಂಟಪಕ್ಕೆ ಬಂದು ಉತ್ತುಂಗ ಸಿಂಹಾಸನಾರೂಢನಾದನು.

ಮೃಗಯಾಪ್ರಸಂಗ

ಹರಿಶ್ಚಂದ್ರಮಹಾರಾಜನು ಸಿಂಹಾಸನದಲ್ಲಿ ಕುಳಿತು ಓಲಗವನ್ನಿತ್ತು ಅಧಿಕಾರಿಗಳನ್ನು ಕುರಿತು ''ಈಗ ಬೇಟೆಯಾಡಲು ಅರಣ್ಯಕ್ಕೆ ಹೊರಡತಕ್ಕದ್ದು. ಅದಕ್ಕಾಗಿ ನಮ್ಮ ಶಬರಸೇನೆಯನ್ನು ಕೂಡಲೇ ಕರೆಸಿರಿ. ಮೃಗಗಳ ಹಾವಳಿಯನ್ನು ನೀಗಿಸಲೇಬೇಕು'' ಎಂದು ಆಜ್ಞಾಪಿಸಿದನು. ಒಡನೆಯೇ ಶಬರಸೇನಾಪತಿಗಳಿಗೆ ರಾಜಾಜ್ಞೆಯನ್ನು ತಿಳಿಸಲು, ಅವರು ಬೇಟೆಗೆ ಸನ್ನದ್ಧರಾಗಿ ಬಂದರು. ಆ ಬೇಡರೊಡೆಯರ ದೇಹದ ಬಣ್ಣ ಕಪ್ಪು, ನಿಮಿರಿದ ರೋಮಗಳು, ಕೆಂಗಣ್ಣು, ಕೆಮ್ಮೀಸೆ, ಕೆದರಿದ ತಲೆ, ಕಾಳಸರ್ಪದಂತಿರುವ ತೋಳು, ಬಿಲ್ಲಿನ ನಾರಿ ಹೊಡೆದೊಡೆದ ಹುಣ್ಣಿನ ಕಿಣವುಳ್ಳ ಮೇಗೈ. ದೊಡ್ಡ ಹೊಟ್ಟೆ ಕಿರಿಯ ನಡು, ಕೊಬ್ಬಿದ ಹೆಗಲು, ಹಿಡಿದ ಕೂರಂಬು, ದೀರ್ಘವಾದ ಧನಸ್ಸು. ಆ ಶಬರರು ಗುಂಪುಗೂಡಿ ಸಭೆಗೆ ಬಂದಾಗ ಹೊಗೆಯು ಮುಸುಕಿದಂತಾಯಿತು! ಅವರು ಮಹಾರಾಜನಿಗೆ ಜಿಂಕೆಯ ಮರಿ, ಆನೆಯ ದಂತ, ಜೇನುತಟ್ಟಿ, ನವಿಲುಗರಿ, ಹುಲಿಯ ಚರ್ಮ, ಪುನಗಿನ ಬೆಕ್ಕು- ಮುಂತಾದ ಕಾಣಿಕೆಗಳನ್ನಿತ್ತು ನಮಸ್ಕರಿಸಿದರು.

ಕಾಡುಮೃಗಗಳೊಡನೆ ಹೋರಾಡುವಾಗ ಸಂಭವಿಸಿದ ಗಾಯಗಳ ಚಿಹ್ನೆಗಳು ಬೇಡರ ನಾಯಕರ ಮೈಯಲ್ಲಿ ಮೂಡಿದ್ದವು. ಮದದಾನೆಗಳು ಇರಿದ, ಹಂದಿಗಳು ಬಗಿದ, ಸಿಂಹಗಳು ತೋಡಿದ, ಕರಡಿಗಳು ಕಡಿದ, ಹುಲಿಗಳು ಪರಚಿದ, ಕೋಣಗಳು ಬಡಿದ, ಭೇರುಂಡಗಳು ಎರಗಿದ, ಕಡವೆಗಳು ತುಳಿದ ಗಾಯಗಳು ಕಾಣಿಸುತ್ತಿದ್ದವು. ಶಬರರು ಬೇಟೆನಾಯಿಗಳನ್ನು ತಂದಿದ್ದರು. ಆ ನಾಯಿಗಳು ಸಾಮಾನ್ಯವಾದವೆ?

ಅವುಗಳ ಸಾಹಸಗಳಿಗೆ ಮೆಚ್ಚಿ ಬೇಟೆಗಾರರು ಬಿರುದುಗಳನ್ನು ಕೊಟ್ಟಿದ್ದರು. ಹರಿದಲ್ಲಣ, ಹುಲಿಬಾಕ, ಸೂಕರಮೃತ್ಯು, ಸಾರಂಗಮರ್ದನ, ಮರೆಮಾರಿ, ಕಾಡ್ಕೋಣಕಂಟಕ, ಭಲ್ಲೂಕಮಲ್ಲ, ಕರಿಸಿಂಹ, ಸಿಂಹಪ್ರಕರಶರಭ, ಶರಭ ಭೇರುಂಡ- ಮುಂತಾದ ಪರಿಪರಿಯ ಬಿರುದುಗಳನ್ನು ಆ ನಾಯಿಗಳು ಗಳಿಸಿದ್ದವು. ಮೃಗಪಕ್ಷಿಗಳನ್ನು ಬಲೆ ಬೀಸಿ ಹಿಡಿಯುವುದಕ್ಕಾಗಿ ಆ ವ್ಯಾಧರು ತಡಿಕೆವಲೆ, ತಟ್ಟಿವಲೆ, ಹಾಸುವಲೆ, ಬೀಸುವಲೆ, ಕೊಡತಿವಲೆ, ತಳ್ಳಿವಲೆ, ಬಳ್ಳಿವಲೆ, ತೊಡಕುವಲೆ, ತೋರುವಲೆ, ತೊಟ್ಟಿವಲೆ, ಗೂಟವಲೆ, ಕಣ್ಣುವಲೆ, ಕಾಲುವಲೆ, ಸಿಡಿದವಲೆ, ಹಾರುವಲೆ, ಜಾರುವಲೆ, ಬಡಿಗೆವಲೆ, ಬಾಚುವಲೆ, ಗಾಢವಲೆ, ಗೂಢವಲೆ, ಮಡಿಕೆವಲೆ- ಮುಂತಾದ ಬಗೆಬಗೆಯ ಬಲೆಗಳನ್ನು ತಂದಿದ್ದರು. ಅಲ್ಲದೆ ತಡಿಕೆ, ಗಳ, ಗಾಣ, ಬಿಲ್ಲು, ಬಾಣ, ಕೊಡವೆ, ಕತ್ತಿ, ಸಿಲುಕುಗಟ್ಟಿಗೆ, ಬೀಸುಗಣ್ಣೆ ಕೋಲು, ಕಲ್ಲಿ- ಮುಂತಾದ ಸಲಕರಣೆಗಳನ್ನೂ ತಂದಿದ್ದರು.

ಅನಂತರ ಹರಿಶ್ಚಂದ್ರನು ರಾಜ್ಯದಲ್ಲಿ ದೀರ್ಘಕಾಲದವರೆಗೆ ಬೇಟೆಯನ್ನು ನಡೆಸಬೇಕಾಗುವುದೆಂದು ಬಗೆದು, ಕೆಲವು ಮಂತ್ರಿಗಳನ್ನೂ ಪತ್ನೀಪುತ್ರರನ್ನೂ ಕರೆದುಕೊಂಡು ಮಣಿಮಯ ರಥವನ್ನೇರಿದನು. ವಂದಿಮಾಗಧರು ಬಿರುದುಗಳನ್ನೊರಲಿದರು. ಕಹಳೆ ಮೊಳಗಿದವು. ಶಂಖಗಳು ಧ್ವನಿಗೈದವು. ತಮಟೆಗಳು ಬಾರಿಸಿದವು. ಮುಂದೇನಾಗುವುದೋ ಎಂದು ದಿಕ್ಪಾಲರು ಕಳವಳಿಸಿದರು. ರಾವುತರನ್ನು ಹೊತ್ತ ಕುದುರೆಗಳು 'ಮನೋವೇಗವನ್ನು ಮೀರಿಸುವೆವು. ಸಪ್ತವಾರಿಧಿಗಳ ಅಲೆಗಳನ್ನು ಹಿಂದಿಕ್ಕುವೆವು' ಎಂದು ನಿಶ್ಚಯಿಸಿದವೋ. ಎಂಬಂತೆ ತಾಗುತ್ತ ಕುಣಿಯುತ್ತ ಓರಣವಾಗಿ ಸಾಗಿದವು. ಬಹು ದೊಡ್ಡದಾದ ಬೇಡರ ಪಡೆಯು ಘುಡಿಘುಡಿಸುತ್ತ ನಗರದಿಂದ ಹೊರಡಲು, ಪೊಡವಿ ನಡುಗಿತು; ದಿಕ್ಕುಗಳು ಉಬ್ಬಸಪಟ್ಟವು; ವಾಸುಕಿಯ ಹೆಡೆ ಕೊರಳಲ್ಲಿ ಕುಗ್ಗಿತು; ಕೂರ್ಮನ ಬೆನ್ನು ತಗ್ಗಿತು. ಹರಿಶ್ಚಂದ್ರನು ಆ ಪಡೆಯೊಡನೆ ರಥದಲ್ಲಿ ಕುಳಿತು ಹೋಗಿ ಹೇರಡವಿಯ ಮೇಲೆ ದಾಳಿಯಿಟ್ಟನು.

ಆ ಗೊಂಡಾರಣ್ಯರಲ್ಲಿ ಜಾಲ, ಆಲ, ನೆಲ್ಲಿ, ಕನ್ನೆಲ್ಲಿ, ಹಾಲೆ, ಅಂಕೋಲೆ, ದಿಂಡ, ತಂಡರಸ, ಅರಳಿ, ಬೇಲ, ಹಲಸು, ಎಲವ, ನಂದಿ, ಚಂದನ, ಕಕ್ಕೆ, ಬಿಕ್ಕೆ, ಬನ್ನಿ, ಹೊನ್ನೆ, ಕಿತ್ತಾಳೆ, ಹೆಬ್ಬಾಳೆ, ಜಾದುಂಬರ, ತುಂಬುರ, ತೆಂಗು, ಕೌಂಗು, ಕೇದಗೆ, ಕದಳಿ, ತಪಸು, ತಾರಿ, ಹುಣಸೆ, ಖರ್ಜೂರ, ಮಾವು, ಬೇವು- ಮುಂತಾದ ಮರಗಳು ದಟ್ಟವಾಗಿ ಬೆಳೆದಿದ್ದವು. ಇರುಳಿನಂತೆ ಕತ್ತಲೆ ತುಂಬಿದ್ದ ಕಾಡಿನಲ್ಲಿ ಕೆಲವೆಡೆ ಕಾಳ್ಗಿಚ್ಚು

ಉರಿಯುತ್ತಿರಲು ಇದೇನು ಕತ್ತಲೆ ಮುಸುಕಿದ ಕಾಳಸರ್ಪದ ಮನೆಯೋ, ವಡವಾಗ್ನಿಯು ಕೆರಳಿ ಉಗುಳಿದ ಕಿಡಿಯೋ, ತ್ರಿಪುರವನ್ನು ಸುಡುವ ಹರನ ಬಾಣವೋ ಅಥವಾ ಬೆಂಕಿಬಿದ್ದ ಕಾಡಿಗೆಯ ಬೆಟ್ಟವೋ ಎಂಬಂತೆ ತೋರುತ್ತಿತ್ತು. ಆ ಕಾನನವು ಎಲ್ಲಿ ನೋಡಿದರೂ ಶಿಮಯ,[1] ಶಿವಮಯ, ಶಿವಮಯ! ಶಿಖಿಮಯ,[2] ಶಿಖಿಮಯ, ಶಿಖಿಮಯ! ಶುಕಮಯ,[3] ಶುಕಮಯ, ಶುಕಮಯ! ಗಿರಿಸಾನುವಿನಿಂದ ಹರಿವು ಜಲವು ಹರಿಮಯ,[4] ಹರಿಮಯ, ಹರಿಮಯ! ಎಲ್ಲವೂ ಮಧುಮಯ,[5] ಮಧುಮಯ, ಮಧುಮಯ! ಬೇಡರ ಬಾಣಮಯ,[6] ಬಾಣಮಯ, ಬಾಣಮಯ! ಅಲ್ಲದೆ ಆ ಘೋರಾರಣ್ಯವು ದೇವಸಭೆಯಂತೆಯೂ ಮುನಿಸಭೆಯಂತೆಯೂ ಹಾವಾಡಿಗನಂತೆಯೂ ಕೌಶಿಕ ಸಮೇತವಾಗಿದ್ದಿತು.[7] ಪಾಂಡವಭವನದಂತೆಯೂ ನೇತ್ರದಂತೆಯೂ ಬೆಳದಿಂಗಳಂತೆಯೂ ಆರ್ಜುನಾಡಂಬರ.[8] ಸುರಸಭೆಯಂತೆಯೂ ಮತ್ತಗಜದಂತೆಯೂ ಮೇಘದಂತೆಯೂ ವೃಂದಾರಕೋನ್ನತಿ![9]

---

1. ಶಿವ = ನೀರು; ಧೂಪದ ಮರ; ಪುಂಡರೀಕವೆಂಬ ಮರ ಅಥವಾ ಸೈಂಧವ ಲವಣ.

2. ಶಿಖಿ = ನವಿಲು ; ಬೆಂಕಿ; ವೃಕ್ಷ ಅಥವಾ ಬೆಟ್ಟ

3. ಶುಕ = ಗಿಳಿ, ಶಿಂಶಪಾವೃಕ್ಷ ; (ಸೈನಿಕರು ಧರಿಸಿದ್ದ) ಶಿರಸ್ತ್ರಾಣ.

4. ಹರಿ = ಹಾವು; ಕಪ್ಪೆ ಜಿಂಕೆ ಅಥವಾ ಸಿಂಹ.

5. ಮಧು = ಜೇನು; ಹೂಗಳ ಮಕರಂದ; ಅಶೋಕ ವೃಕ್ಷ.

6. ಬಾಣ = ಶರ; ಶಬ್ದ; ಒಂದು ಜಾತಿಯ ಗಿಡ.

7. ಅರಣ್ಯಪಕ್ಷದಲ್ಲಿ ಕೌಶಿಕ = ವಿಶ್ವಾಮಿತ್ರ; ಗೂಬೆ. ದೇವಸಭಾಪಕ್ಷದಲ್ಲಿ ಕೌಶಿಕ = ಇಂದ್ರ. ಮುನಿಸಭಾ ಪಕ್ಷದಲ್ಲಿ ಕೌಶಿಕ = ವಿಶ್ವಾಮಿತ್ರ, ಹಾವಾಡಿಗನ ಪಕ್ಷದಲ್ಲಿ ಕೌಶಿಕ = ಮುಂಗಸಿ.

8. ಅರಣ್ಯ ಪಕ್ಷದಲ್ಲಿ ಅರ್ಜುನ = ಮತ್ತಿ ಮರ; ಹುಲ್ಲು. ಪಾಂಡವಭವನ ಪಕ್ಷದಲ್ಲಿ ಅರ್ಜುನ = ಪಾರ್ಥ, ನೇತ್ರ ಪಕ್ಷದಲ್ಲಿ ಅರ್ಜುನ = ಒಂದು ಬಗೆಯ ನೇತ್ರರೋಗ, ಕಣ್ಣಿನಲ್ಲಿ ಬರುವ ಹೂ. ಬೆಳದಿಂಗಳ ಪಕ್ಷದಲ್ಲಿ ಅರ್ಜುನ = ಬಿಳಿಯ ಕಾಂತಿ.

9. ಅರಣ್ಯ ಪಕ್ಷದಲ್ಲಿ ವೃಂದಾರಕ = ವೃಂದ - ಗುಂಪಾಗಿರುವ ಆರಕ = ಮಾವಿನ ಮರಗಳು ಅತವಾ ವೃಂದಾರಕ = ಶ್ರೇಷ್ಠ ವಸ್ತು. ಸುರಸಭಾ ಪಕ್ಷದಲ್ಲಿ ವೃಂದಾರಕ = ದೇವತೆ. ಮತ್ತಗಜ ಪಕ್ಷದಲ್ಲಿ ವೃಂದಾರಕ = ಸಲಗ. ಮೇಘಪಕ್ಷದಲ್ಲಿ ವೃಂದಾರಕೋನ್ನತ = ದೇವತೆಯಂತೆ ಉನ್ನತ ; ಆಕಾಶಗಾಮಿ.

ಬೇಡರು ಹುರುಪಿನಿಂದ ಬೇಟೆಯನ್ನಾರಂಭಿಸಿದರು. ಮೃಗಗಳ ಹೆಜ್ಜೆ ಉಗುಳಿದ ನೊರಜು, ಕೂದಲು, ವಾಸನೆ ಮೊದಲಾವುಗಳಿಂದ ಅವುಗಳ ಸುಳಿವನ್ನು ಕಂಡುಹಿಡಿದು ಬಲೆಯೊಡ್ಡಿದರು. ಮುತ್ತಿಗೆ ಹಾಕಿದರು. ಅಟ್ಟಿಸಿಕೊಂಡು ಹೋದರು. ಎಲ್ಲೆಲ್ಲಿಯೂ ಭೀಕರವಾದ ಹುಯಿಲೆದ್ದಿತು. ನಡೆವ ದನಿ, ಕರೆವ ದನಿ, ಬಿಲ್ಲ ದನಿ, ಹೊಡೆವ ದನಿ, ಬಯ್ಯುವ ದನಿ, ಬೊಬ್ಬಿಡುವ ದನಿ, ಇರಿವ ದನಿ, ಮುರಿವ ದನಿ, ತರಿವ ದನಿ, ತುಡುಕುವ ದನಿ, ತಿತ್ತಿರಿಯ ದನಿ, ತಮ್ಮಟೆಯ ದನಿ, ಮೃಗಗಳ ಗರ್ಜನೆಯ ದನಿ, ಖಗಗಳ ಚೀರುವ ದನಿ- ಇವುಗಳಿಂದ ಅಡವಿಯು ಧ್ವನಿಮಯವಾಗಿತ್ತು. ''ಹಿಡಿ ನವಿಲ, ಇರಿ ಹುಲಿಯ, ಅಟ್ಟು ಜಿಂಕೆಯ ಹಿಂಡ, ಹಂದಿಯ ಮೇಲೆ ಬಿಡು ನಾಯ, ಹೊಡೆ ತೋಳವ, ಕೆಡಹು ಕರಿಯ, ಇಕ್ಕು ಕೋಣನ. ಹಿಂದಟ್ಟು ಸಿಂಹವ, ಬೀಸು ಬಲೆಯ'' ಎಂಬ ಬೇಡರ ಬೊಬ್ಬೆಯಿಂದ ಅಡವಿಯು ಘೀಳಿಟ್ಟಿತು. ವ್ಯಾಧರು ತಮ್ಮ ಆಯುಧಗಳಿಂದಲೂ ಬಲೆಗಳಿಂದಲೂ ನಾಯಿಗಳಿಂದಲೂ ಮೃಗಪಕ್ಷಿಗಳನ್ನು ಅಸಂಖ್ಯವಾಗಿ ಕೊಂದುಹಾಕಿದರು. ಹರಿಶ್ಚಂದ್ರನು ತನ್ನ ಬಾಹುಬಲದಿಂದ ಸಿಂಹಾದಿ ಕ್ರೂರ ಮೃಗಗಳನ್ನು ಪೈರು ಪಚ್ಚೆಗಳಿಗೆ ತೊಂದರೆ ಮಾಡುವ ಇತರ ಮೃಗಗಳನ್ನೂ ಸಂಹರಿಸುತ್ತ, ಬೇಡರು ಬೇಟೆಯಾಡುವ ಕೌಶಲವನ್ನು ನೋಡುತ್ತ ಗೌತಮಾರಣ್ಯ, ಕ್ರೌಂಚಾರಣ್ಯ, ಗುಹಾರಣ್ಯಾದಿಗಳನ್ನು ಹೊಕ್ಕು, ಬೇಟೆಯಾಡಿ ಕಿಷ್ಕಿಂಧೆಯ ಬಳಿಗೆ ಬಂದನು. ಅಲ್ಲಿ ಬೃಹದಾಕಾರದ ಕಪಿಗಳನ್ನು ನೋಡುತ್ತ ವಿಶ್ರಮಿಸಿಕೊಂಡಿರಲು, ಸ್ವಲ್ಪ ಹೊತ್ತಿನಲ್ಲಿ ಬೇಡರು ಅಲ್ಲಿಗೆ ಬಂದು ಸೇರಿದರು. ಅವರು ಮಹಾರಾಜನನ್ನು ಕಂಡು ''ಜೀಯ, ಈ ಪ್ರಾಂತದಲ್ಲಿ ನಾವು ಒಂದು ಅಚ್ಚರಿಯನ್ನು ಕಂಡೆವು! ಬೇಟೆಯಾಡುವುದಕ್ಕಾಗಿ ನಾವು ಪಳಗಿಸಿ ಸಾಕಿರುವ ಶರಭ ಶಾರ್ದೂಲ ಸಿಂಹಗಳು ಬೇಟೆಯಾಡದೆ ಹಿಂಜರಿದವು. ಎಂತಹ ಜಿಂಕೆಯನ್ನಾದರೂ ಮುರಿದಿಕ್ಕಬಲ್ಲ ಹುಲಿಯು ಜಿಂಕೆಗೆ ಹೆದರಿ ಸುಮ್ಮನಿದ್ದಿತು! ಸಲಗನನ್ನು ಸಂಹರಿಸಬಲ್ಲ ಸಿಂಹವು ಒಂದು ಸಾಮಾನ್ಯವಾದ ಆನೆಯನ್ನು ಕಂಡು ಹಿಂಜರಿಯಿತು! ಪ್ರಬಲವಾದ ಸಿಂಹವನ್ನು ಸೀಳಲು ಸಮರ್ಥವಾದ ಶರಭವು ಸಿಂಹವನ್ನು ವೀಕ್ಷಿಸಿ ಹೆದರಿತು! ಈ ಅದ್ಭುತವನ್ನು ಏನನ್ನೋಣ! ಬೆಂಕಿ ಶೀತಳವಾದಂತೆ, ವಿಷವು ಅಮೃತವಾದಂತೆ, ಸೂರ್ಯನು ತಣ್ಣಗಾದಂತೆ ಆಯಿತಲ್ಲ! ಕಾರಣವೇನೆಂಬುದನ್ನು ಪರಿಶೀಲಿಸಬೇಕು'' ಎಂದು ನಿವೇದಿಸಿದರು.

''ಇದು ವಿಚಿತ್ರವೇ ಸರಿ!'' ಎಂದು ಹರಿಶ್ಚಂದ್ರನು ನುಡಿದು ಮುಂದೆ ಪ್ರಯಾಣ

ಮಾಡಲು, ಭಸ್ಮಲಿಪ್ತಾಂಗನೂ ಜಟಾಧಾರಿಯೂ ಆದ ಒಬ್ಬ ಮುನೀಶ್ವರನು ಗೋಚರಿಸಿದನು. ವ್ಯಾಘ್ರ ಚರ್ಮಾಂಬರವನ್ನುಟ್ಟು ಸೂರ್ಯನಂತೆ ಪ್ರಜ್ವಲಿಸುತ್ತಿದ್ದ ಆ ಮುನಿಯು ಋಷಿಗಳ ಪರಿವಾರದ ಮಧ್ಯದಲ್ಲಿ ಕುಳಿತು ಯಜ್ಞದ ವಿಷಯವಾಗಿ ಸಮಾಲೋಚಿಸುತ್ತಿದ್ದನು. ಸುತ್ತಲೂ ತಿಳಿಗೊಳನ ಬಳಸಿ ನಳನಳಿಸಿ ಬೆಳೆದ ಎಳೆಮಾವು. ಮಧ್ಯದಲ್ಲೊಂದು ಮಲ್ಲಿಕಾ ಮಂಟಪ. ತೆಳು ಗಾಳಿ ಸುಳಿಯುತ್ತಿರಲು ಪವಿತ್ರವಾದ ಪುಳಿನ ಸ್ಥಳದ ಮೇಲೆ ಹಾಸಿದ ಅಶೋಕವೃಕ್ಷದ ತಳಿರ ಗದ್ದುಗೆ ಮೇಲೆ ಕುಳಿತಿದ್ದ ಆ ಮುನಿನಾಥನು ಸಾಕ್ಷಾತ್ ಪರಮೇಶ್ವರನಂತೆ ವಿರಾಜಿಸುತ್ತಿದ್ದನು. ವಿನಯವು ಮನುಷ್ಯಾಕೃತಿಯನ್ನು ತಳೆಯಿತೋ ಶಾಂತಿಯು ರೂಪವನ್ನು ಧರಿಸಿತೋ, ಸದ್ಗುಣವ್ರಾತವು ಮುನಿವೇಷವನ್ನಂಗೀಕರಿಸಿತೋ, ಮುಕ್ತಿಯು ಜಟಾಭಾರವನ್ನು ಹೊತ್ತಿತೋ, ಪುಣ್ಯವು ಭಸ್ಮವನ್ನು ಬಳಿದುಕೊಂಡು ಗೋಚರಿಸಿತೋ, ವೇದವು ಮಾತಾಡುವುದನ್ನು ಕಲಿಯಿತೋ ಎಂಬಂತೆ ಕಾಣುತ್ತಿದ್ದ ಆ ಋಷಿಯನ್ನು ನೋಡಿ ಹರಿಶ್ಚಂದ್ರನಿಗೆ ಹರ್ಷವಾಯಿತು. ಅವನು ಆನಂದದಿಂದ ಮುಂದೆ ಬಂದು ಮುನಿಗೆ ವಂದಿಸಿ ''ಮಹರ್ಷಿಗಳೆ, ನಾನು ಬೇಟೆಗಾಗಿ ಬಂದೆನು. ಅಡವಿಯ ಮೃಗವೃಂದದಲ್ಲೊಂದನ್ನೂ ನನ್ನ ಮೃಗವು ಕೊಂದಿಕ್ಕದೆ ಹಿಂದೆ ಸರಿಯುತ್ತಿದೆ. ಇದಕ್ಕೆ ಕಾರಣವೇನು?'' ಎಂದನು. ಆಗ ಮುನೀಶ್ವರನು ಈ ರೀತಿಯಲ್ಲಿ ಉತ್ತರವಿತ್ತನು : ''ರಾಜ, ಇದು ಯಾವ ಸ್ಥಳವೆಂದು ತಿಳಿದೆ? ಜಗದ್ಗುರುವಾದ ವಿರೂಪಾಕ್ಷ ಸ್ವಾಮಿಯ ಸಾನ್ನಿಧ್ಯವಿರುವ ಪಂಪಾಕ್ಷೇತ್ರವಿದು! ಸಕಲ ವೇದೋಪನಿಷತ್ತುಗಳು ವಿರೂಪಾಕ್ಷನನ್ನು ಸುತ್ತಿಸುತ್ತ ಇಲ್ಲಿ ನೆಲೆಸಿವೆ. ಅಣಿಮಾದಿ ಸಿದ್ಧಿಗಳ ಆಕರವಿದು. ಧರ್ಮಪುರುಷನು ಇಲ್ಲಿ ವಾಸವಾಗಿದ್ದಾನೆ. ಇದು ಜ್ಞಾನಪ್ರಭಾ ದೀಪಗಳ ಸ್ಥಾನ. ವಿಷ್ಣು ಬ್ರಹ್ಮಾದಿ ದೇವತೆಗಳು ಈ ಕ್ಷೇತ್ರವನ್ನು ಕಾಯುತ್ತಿದ್ದಾರೆ. ಚತುರ್ವಿಧ ಪುರುಷಾರ್ಥಗಳ ಬೀಡು. ಈ ಕ್ಷೇತ್ರವು ಪುಣ್ಯದ ಪುಂಜ. ಲಕ್ಷ್ಮೀಸರಸ್ವತಿಯರ ಕ್ರೀಡಾಸ್ಥಳ. ಅತ್ತ ನೋಡು, ಅದು ಹೇಮಕೂಟ. ಅಲ್ಲಿ ಕಾಣುವುದು ಮತಂಗಪರ್ವತ. ಈ ದಿಕ್ಕಿನಲ್ಲಿರುವುದು ಮಾಲ್ಯವಂತ. ಪೂರ್ವದಿಕ್ಕಿನಲ್ಲಿ ಕಿನ್ನರೇಶ, ದಕ್ಷಿಣದಲ್ಲಿ ಜಂಬುಕೇಶ್ವರ, ಪಶ್ಚಿಮದಲ್ಲಿ ಸೋಮನಾಥ, ಉತ್ತರದಲ್ಲಿ ವಾಣಿಭದ್ರ- ಇವು ನಾಲ್ಕು ಈ ಪಂಪಾಕ್ಷೇತ್ರದ ನಾಲ್ಕು ಬಾಗಿಲುಗಳಿದ್ದಂತೆ. ಈ ಕ್ಷೇತ್ರದಲ್ಲಿ ಯಮದೂತರ ಕೋಪಕ್ಕೆ ಅವಕಾಶವಿಲ್ಲ! ಇದು ವಿರೂಪಾಕ್ಷಸ್ವಾಮಿಯ ಆಜ್ಞೆ. ಹರಿಶ್ಚಂದ್ರ, ಈ ತುಂಗಭದ್ರಾನದಿಯನ್ನು ನೋಡು. ಈ ನದಿಯ

ದರ್ಶನಮಾತ್ರದಿಂದ ಸಂಸಾರಬೀಜವು ನಾಶವಾಗುವುದು. ಇದು ಪಾತಕವನ್ನು ತುಂಡರಿಸುವ ಕತ್ತಿ. ದುಷ್ಕರ್ಮದ ಕೊರಳಿಗೆ ಕತ್ತರಿ. ಸಮಸ್ತ ರೋಗಗಳನ್ನು ಕೊಯ್ಯುವ ಅಲಗು. ಅಜ್ಞಾನದ ನಡುದಲೆಗೆ ಗರಗಸ. ಮಾಯೆಯ ಬಸುರನ್ನು ಬಗೆಯುವ ಶೂಲ. ದುರಿತವನ್ನು ಸುಡುವ ಕಿಚ್ಚು'' ಎಂದು ಹೇಳಿದನು.

ಆಗ ಹರಿಶ್ಚಂದ್ರನು ''ಮಹಾತ್ಮರೆ, ನನ್ನ ಸಂಶಯವನ್ನು ಹೋಗಲಾಡಿಸಿದಿರಿ. ನಿಮ್ಮನ್ನು ಪಡೆದ ಪುಣ್ಯಾತ್ಮನ ಹೆಸರೇನು?'' ಎಂದು ಕೇಳಿದನು. ಆ ಮುನೀಶ್ವರನು ''ರಾಜ, ಎರಡನೆಯ ಪರಮೇಶ್ವರನಂತೆ ವಿರಾಜಿಸುವ ವಸಿಷ್ಠ ಮಹರ್ಷಿಗಳಿಗೆ ನಾನು ಮೊಮ್ಮಗ. ನನ್ನ ಹೆಸರು ಪರಾಶರ!'' ಎಂದು ನುಡಿದನು. ಹರಿಶ್ಚಂದ್ರನು ಆನಂದದಿಂದ ಹಿಗ್ಗುತ್ತ ಭಕ್ತ್ಯಾವಿಷ್ಟನಾಗಿ ''ಆಹಾ! ನನ್ನ ಗುರುಗಳ ಅಡಿದಾವರೆಗಳೆಡೆಗೇ ಬಂದೆನು! ಸುರನರೋರಗ ನಮಿತಚರಣ ಜಯ ಜಯ, ದಯಾಭರಣ ಜಯ ಜಯ, ಕೃಪಾವರಣ ಜಯ ಜಯ, ಶಾಂತಿಕಿರಣ ಜಯ ಜಯ, ವಿಗತಮರಣ ಜಯ ಜಯ, ದುರಿತಹರಣ ಜಯ ಜಯ, ಗುರುವೆ ಕುಲಗುರುವೆ ಘನಗುರುವೆ ಪರಗುರುವೆ ಮದ್ಗುರುವೆ ಸದ್ಗುರುವೆ, ಶರಣಾಗು ಶರಣಾಗು!'' ಎನ್ನುತ್ತ ಪರಾಶರಮುನಿಗಳ ಚರಣ ಸರಸಿಜದೆಡೆಯಲ್ಲಿ ತನುವನ್ನು ಹರಹಿ ಸಾಷ್ಟಾಂಗ ಪ್ರಣಾಮ ಮಾಡಿದನು. ಹರಿಶ್ಚಂದ್ರನ ಕಣ್ಣುಗಳಿಂದ ಆನಂದಬಾಷ್ಪ ತುಳುಕಿತು. ಮೈ ಪುಳಕಿತವಾಯಿತು. ಕೈ ನಡುಗಿತು. ನುಡಿ ತೊದಲಿತು. ಕೆನ್ನೆಯು ಬೆವರಿತು. ಕಂಠವು ಗದ್ಗದಿತವಾಯಿತು. ಮುಖದಲ್ಲಿ ನಸುನಗೆ ಮಿಂಚಿತು. ಪರಾಶರಮುನಿಗಳು ಭೂಪಾಲನನ್ನು ಮೇಲೆತ್ತಿ ಕುಳ್ಳಿರಿಸಿ ಮೈದಡವಿ ಪ್ರೀತಿಯಿಂದ ''ಮಗು-ಹರಿಶ್ಚಂದ್ರ ನೀನೆತ್ತ? ಈ ವಿಪಿನವೆತ್ತ? ಏನು ಕಾರಣ ಇಲ್ಲಿಗೆ ಬಂದೆ?'' ಎಂದು ಕೇಳಿದರು. ಅದಕ್ಕೆ ಹರಿಶ್ಚಂದ್ರನು ''ರಾಜ್ಯದಲ್ಲಿ ಖಗಮೃಗಗಳ ಕಾಟ ಅತಿಯಾಯಿತು. ಪ್ರಜೆಗಳು ಬಂದು ಗೋಳಿಟ್ಟರು. ಆದ್ದರಿಂದ ಬೇಟೆಗಾಗಿ ಬಂದೆನು'' ಎಂದನು. ತ್ರಿಕಾಲಜ್ಞರಾದ ಆ ಋಷಿಗಳು ವಿಶ್ವಾಮಿತ್ರರ ಕುಟಿಲೋಪಾಯವನ್ನು ಜ್ಞಾನದೃಷ್ಟಿಯಿಂದ ಅರಿತರು. ಅವರು ಮನಸ್ಸಿನಲ್ಲಿ ''ಈಗ ಏನು ಮಾಡುವುದು ಯುಕ್ತ? ಕ್ರೂರ ಸ್ವಭಾವದ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಪೀಡಿಸುವುದಕ್ಕಾಗಿ ಹಠತೊಟ್ಟಿದ್ದಾನೆ. ಈ ವಿಷಯವು ನನಗೆ ಗೊತ್ತಾದಮೇಲೆ ಈ ರಾಜನಿಗೆ ತಿಳಿಸದಿರುವುದು ಹೇಗೆ? ತಿಳಿಸಿದರೆ ಚಾಡಿ ಯಾಗುತ್ತದೆ. ತಿಳಿಸದಿದ್ದರೆ ಒದಗುವ ಕೇಡನ್ನು ಅನುಮೋದಿಸಿದಂತಾಗುತ್ತದೆ. ಇಕ್ಕಟ್ಟಿನ

ಪ್ರಸಂಗ ಒದಗಿತಲ್ಲ! ಏನು ಮಾಡಲಿ?'' ಎಂದು ಚಿಂತಾಕ್ರಾಂತರಾದರು. ''ಶಿಷ್ಯನಿಗೆ ಹಿತವನ್ನು ಬೋಧಿಸುವುದು ತಪ್ಪಲ್ಲ. ವಿಶ್ವಾಮಿತ್ರನ ಕುಟಿಲೋದ್ದೇಶವನ್ನು ನೇರವಾಗಿ ತಿಳಿಸದೆ, ಈತನಿಗೆ ಬರುವ ವಿಪತ್ತನ್ನು ಬೇರೊಂದು ಮಾರ್ಗದಿಂದ ತಪ್ಪಿಸುವೆನು'' ಎಂದು ಆಲೋಚಿಸಿದರು. ಅನಂತರ ಹರಿಶ್ಚಂದ್ರನನ್ನು ಕುರಿತು ''ಅಪ್ಪಾ-ಹರಿಶ್ಚಂದ್ರ, ನಾನು ಒಂದು ಮಾತನ್ನು ನಿನಗೆ ಹೇಳಬೇಕೆಂದಿದ್ದೇನೆ. ಏನೆಂದರೆ, ಮುಂದೆ ವಿಶ್ವಾಮಿತ್ರಮುನಿಗಳ ಆಶ್ರಮ ಉಂಟು. ಯಾವ ಸಂದರ್ಭದಲ್ಲಿಯೂ ಅಲ್ಲಿಗೆ ಮಾತ್ರ ನೀನು ಹೋಗಬೇಡ. ನನ್ನಲ್ಲಿ ನಿನಗೆ ಭಕ್ತಿ ಇದ್ದರೆ, ಕುಲಾಚಾರವನ್ನು ತೊರೆಯಬಾರದೆಂಬ ನಿಶ್ಚಯವಿದ್ದರೆ, ಗಳಿಸಿದ ಉತ್ತಮ ಕೀರ್ತಿಗೆ ಕುಂದು ಬರಬಾರದೆಂಬ ದೃಢತೆಯಿದ್ದರೆ, ನಿನ್ನ ಸತ್ಯನಿಷ್ಠೆಗೆ ಭಂಗವಾಗಬಾರದೆಂಬ ಸ್ಥೈರ್ಯವಿದ್ದರೆ- ಅಲ್ಲಿಗೆ ಹೋಗಬಾರದು. ವಿಶ್ವಾಮಿತ್ರರು ನಿನ್ನನ್ನು ಬಹುವಿಧದಲ್ಲಿ ಕಾಡಿಸುವರು. ಈ ವಿಷಯವು ತಿಳಿದಿರಲಿ'' ಎಂದು ಹೇಳಿ ವಿರೂಪಾಕ್ಷನ ದರ್ಶನಕ್ಕಾಗಿ ರಾಜನನ್ನು ಕರೆದೊಯ್ದರು.

ಹರಿಶ್ಚಂದ್ರನು ಪರಾಶರಮುನಿಗಳ ಹಿಂದೆ ಹೊರಟನು. ತುಂಗಭದ್ರೆಯ ಭಾಸ್ಕರತೀರ್ಥವನ್ನು ತೋರಿಸಿ, ಅದು ಕಾಶಿಯ ಮಣಿಕರ್ಣಿಕೆಗೆ ಸಮಾನವೆಂದು ರುದ್ರಪದ ಸನ್ನಿಧಿಯಲ್ಲಿ ಪಿಂಡವನ್ನರ್ಪಿಸುವುದು ಗಯೆಗಿಂತ ಅಧಿಕವಾದ ಫಲವನ್ನೀಯುವುದೆಂದೂ ಮುನಿಗಳು ಹೇಳಿದರು. ರಾಜನು ಅಲ್ಲಿ ಸ್ನಾನವನ್ನು ಮಾಡಿ ಪಿತೃಶ್ರಾದ್ಧವನ್ನು ನೆರವೇರಿಸಿದನು. ಅನಂತರ ಪರಾಶರರು ಹರಿಶ್ಚಂದ್ರನನ್ನು ಮುಂದೆ ಕರೆದುಕೊಂಡು ಹೋಗಿ ವಿವಿಧ ಸ್ಥಳಗಳನ್ನು ತೋರಿಸುತ್ತ ''ಹರಿಶ್ಚಂದ್ರ, ಈ ಪರ್ವತದಲ್ಲಿ ಬ್ರಹ್ಮ ವಿಷ್ಣು ಇಂದ್ರ,-ಮೊದಲಾದವರು ತಪಸ್ಸನ್ನಾಚರಿಸಿದ್ದಾರೆ. ಬ್ರಹ್ಮಾದಿಗಳು ಸ್ಥಾಪಿಸಿದ ಲಿಂಗಗಳೂ ಸರಸ್ಸುಗಳೂ ಇಲ್ಲಿವೆ. ಗಂಗಾನದಿಯು ಹರಿದು ಬಂದ ಆ ಸ್ಥಳಕ್ಕೆ ಪಾತಾಳಗಂಗೆಯೆಂದು ಹೆಸರು. ಅಲ್ಲಿ ನೋಡು. ಹರನು ಮನ್ಮಥನನ್ನು ಸುಟ್ಟು ಬೂದಿಮಾಡಿದ ಸ್ಥಾನವದು'' ಎಂದು ಹೇಳುತ್ತ ಪಂಪಾಂಬಿಕೆಯ ದೇವಸ್ಥಾನವನ್ನು ಸೇರಿದರು. ಸರ್ವರೂ ದೇವಿಗೆ ವಂದಿಸಿದರು. ''ಹರಿಶ್ಚಂದ್ರ, ಮಹಿಷಾಸುರನನ್ನು ಸಂಹರಿಸಿದ ಮೂರ್ತಿ ಇದು. ಮಾರ್ಕಂಡೇಯಪುರಾಣದಲ್ಲಿ ರುದ್ರಶಕ್ತಿಯ ಶಿರಸ್ಸು ಎಂದು ಹೇಳಿರುವುದು ಇದನ್ನೇ. ಪಾರ್ವತಿಯು ಈ ಸ್ಥಳದಲ್ಲಿ ಪಂಪಾಂಬಿಕೆ ಎಂದೂ ಕಾಶಿಯಲ್ಲಿ ವಿಶಾಲಾಕ್ಷಿ ಎಂದೂ ಕಂಚಿಯಲ್ಲಿ ಕಾಮಾಕ್ಷಿ ಎಂದೂ ಅಭಿಧಾನವನ್ನು

ತಾಳಿ ನೆಲೆಸಿದ್ದಾಳೆ'' ಎಂದು ನುಡಿದು ವಿರೂಪಾಕ್ಷಲಿಂಗದ ಸನ್ನಿಧಿಗೆ ಕರೆತಂದರು. ಹರಿಶ್ಚಂದ್ರನು ವಿರೂಪಾಕ್ಷನೆದುರಿಗೆ ಭಕ್ತಿಯಿಂದ ತಲೆಬಾಗಿ ನಿಂತು ''ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನೇ ತ್ರಾಹಿ ಮಾಂ, ಭಕ್ತಜನದುರಿತವಿಧ್ವಂಸಕನೇ ತ್ರಾಹಿ ಮಾಂ, ಧರ್ಮಸ್ವರೂಪ ವೃಷಭಾರೂಢನೇ ತ್ರಾಹಿ ಮಾಂ, ಇಂದ್ರಾಗ್ನಿ ಮಾರುತಾದಿವಂದಿತನೇ ತ್ರಾಹಿ ಮಾಂ, ಭಕ್ತಕುಲವಾಂಛಿತದ ಕಲ್ಪವೃಕ್ಷವೇ ತ್ರಾಹಿ ಮಾಂ, ಶ್ರೀ ಗುರು ವಿರೂಪಾಕ್ಷನೇ ತ್ರಾಹಿಮಾಂ'' ಎಂದು ನುಡಿದು ಸಾಷ್ಟಾಂಗವೆರಗಿದನು. ಅನಂತರ ಪಂಪಾಂಬಿಕೆಯನ್ನೂ ವಿರೂಪಾಕ್ಷನನ್ನೂ ವಿಧಿವತ್ತಾಗಿ ಪೂಜಿಸಬೇಕೆಂದು ಸಂಕಲ್ಪಿಸಿ ಪೂಜಾದ್ರವ್ಯಗಳನ್ನು ತರಿಸಿದನು. ಮಹಾರುದ್ರಾಭಿಷೇಕಪೂರ್ವಕವಾಗಿ ದೇವನನ್ನು ಅರ್ಚಿಸಿ, ಸಕಲವಾದ್ಯರವದೊಡನೆ ಧೂಪಾರತಿಯನ್ನೆತ್ತಿ, ನೈವೇದ್ಯವನ್ನರ್ಪಿಸಿ, ಕರ್ಪೂರತಾಂಬೂಲವನ್ನಿತ್ತು, ರತ್ನದಾರತಿಯನ್ನು ಬೆಳಗಿದನು. ಆಮೇಲೆ ಹರಿಶ್ಚಂದ್ರನು ಶ್ರೀ ಪಾರ್ವತೀಪತಿಯ ಪ್ರೀತ್ಯರ್ಥವಾಗಿ ವಿಪ್ರರನ್ನು ಕರೆದು ಯಥೇಷ್ಟವಾಗಿ ದಾನಧರ್ಮಗಳನ್ನಿತ್ತನು. ಮತ್ತೆ ಅವರನ್ನು ಕುರಿತು ''ಹೇ ದ್ವಿಜೋತ್ತಮರೆ, ಅಂಗ ವಂಗ ಕಳಿಂಗಾದಿ ದೇಶಗಳಲ್ಲಿ ಯಾವ ನಾಡನ್ನಾದರೂ ನಿಮಗೆ ಅರ್ಪಿಸುತ್ತೇನೆ. ನೀವು ಅಲ್ಲಿ ನೆಲೆಸಬಹುದು'' ಎಂದನು. ಆಗ ಆ ದ್ವಿಜರು ''ಮಹಾರಾಜ, ಈ ತುಂಗಭದ್ರಾ ತೀರವನ್ನು ಬಿಟ್ಟು ಎಲ್ಲಿಗೂ ನಾವು ಬರುವುದಿಲ್ಲ''ಎಂದು ಹೇಳಿಬಿಟ್ಟರು. ಆಮೇಲೆ ಹರಿಶ್ಚಂದ್ರನು ಆ ಪ್ರಾಂತದ ಒಂದು ಗ್ರಾಮವನ್ನು ವಿರೂಪಾಕ್ಷಸ್ವಾಮಿಯ ಸೇವಾರ್ಥವಾಗಿ ದತ್ತಿಯನ್ನರ್ಪಿಸಿ ಅದರಂತೆ ಶಾಸನವನ್ನು ಬರೆಸಿ ''ವಿಪ್ರೋತ್ತಮರೆ, ವಿರೂಪಾಕ್ಷನ ಸನ್ನಿಧಿಯಲ್ಲಿ ನನ್ನನ್ನು ಹರಸಿರಿ. ನಿತ್ಯವೂ ಶಿವಪೂಜೆಯನ್ನು ಮಾಡಿ, ನನ್ನ ಪಾತಕವನ್ನು ನೀಗಿಸಿರಿ'' ಎಂದು ಬೇಡಿಕೊಂಡನು. ಅನಂತರ ವಿರೂಪಾಕ್ಷಲಿಂಗಕ್ಕೆ ಮತ್ತೆ ಮತ್ತೆ ಅಡ್ಡಬಿದ್ದನು. ಆ ವಿಪ್ರರು ಮಹಾರಾಜನನ್ನು ಆಶೀರ್ವದಿಸಿ ಮಂತ್ರಾಕ್ಷತೆಯನ್ನಿತ್ತರು. ಹರಿಶ್ಚಂದ್ರನು ಆನಂದ ತುಂದಿಲನಾಗಿ ''ಇಂದು ನಾನು ಧನ್ಯನಾದೆನು. ನಾನು ಹುಟ್ಟಿದುದು ಸಾರ್ಥಕವಾಯಿತು. ನಾನು ಕೈಗೊಂಡ ಬೇಟೆಯು, ಸಂಸಾರ ವಾರಿಧಿಯು ಪಾರಗಣಿಸುವ ಗುರುಪಾದದ ಬಳಿಗೆ ಕರೆತಂದಿತು. ವಿರೂಪಾಕ್ಷಸ್ವಾಮಿಯನ್ನು ಕಾಣಿಸಿತು. ''ಬಿಟ್ಟಿ ಕೆಲಸಕ್ಕೆ ಸೇರಿ ರಾಜಧಾನಿಯನ್ನು ಕಂಡೆ!'' ಎಂಬ ಗಾದೆ ಸತ್ಯವಾಯಿತು'' ಎಂದು ನುಡಿದು ಅವರೆಲ್ಲರಿಗೂ ವಂದಿಸಿದನು.

ವಿಶ್ವಾಮಿತ್ರಾಶ್ರಮ ಪ್ರವೇಶ

ಹರಿಶ್ಚಂದ್ರನು ಪರಾಶರಮುನಿಗಳನ್ನು ವಂದಿಸಿ, ವಿರೂಪಾಕ್ಷನಿಗೆ ನಮಿಸಿ, ಎಲ್ಲರನ್ನೂ ಬೀಳ್ಕೊಂಡು ರಥವನ್ನೇರಿ ಮುಂದಿನ ಬೇಟೆಗಾಗಿ ಹೊರಟನು. ಅವನ ಪರಿವಾರವು ರಾಜನನ್ನು ಅನುಸರಿಸಿ ವನಾಂತರದಲ್ಲಿ ಸಾಗಿತು. ಇತ್ತ ಕೌಶಿಕ ಮುನಿಗಳು ಒಂದು ಮಾಯಾವರಾಹವನ್ನು ನಿರ್ಮಿಸಿ, ರಾಜನು ಬೇಟೆಯಾಡುತ್ತಿದ್ದ ಸ್ಥಳಕ್ಕೆ ಕಳಿಸಿದರು. ಶಬರಸೈನಿಕರು ಅಡವಿಯಲ್ಲಿ ಮುನ್ನುಗ್ಗಿ ಬೇಟೆಯಾಡುತ್ತಿರುವಾಗ, ಘೋರಾಕಾರದ ಹಂದಿಯು ಅವರಿಗೆ ಗೋಚರಿಸಿತು. ಸಿಡಿಲ ಕಿಡಿಯಂತೆ ಅದರ ಕಣ್ಣು ಎಸೆಯುತ್ತಿತ್ತು. ಬ್ರಹ್ಮಾಸ್ತ್ರದ ಎರಡು ತುಂಡುಗಳನ್ನು ಸಿಕ್ಕಿಸಿದಂತೆ ದಾಡೆಗಳು. ವಜ್ರದ ಚಿಪ್ಪಿನಂತಹ ಕಿವಿ. ಬಲರಾಮನ ನೇಗಿಲಿನಂತಹ ಸುಂಡಿ. ಮೃತ್ಯುವಿನ ಕೈಯಲ್ಲಿರುವ ಬಾಣಗಳಂತೆ ರೋಮಗಳು. ಯಮನ ಕೋಣವು ಹಂದಿಯ ಮುಖವನ್ನು ಧರಿಸಿ ಬಂದಿದೆಯೋ ಎಂಬಂತೆ ಭೀಕರವಾಗಿದ್ದ ಆ ಸೂಕರವನ್ನು ವ್ಯಾಧರು ಕಂಡರು. ಒಡನೆಯೇ ''ಹೊಡಿ ಹೊಡಿ , ಕಡಿ ಕಡಿ, ತಿವಿ ತಿವಿ!'' ಎಂದು ಘುಡಿಘುಡಿಸುತ್ತ ಬೇಡರ ಪಡೆ ಮುಸುಕಲು, ಅವರನ್ನು ಲೆಕ್ಕಿಸದೆ ಆ ವರಾಹವು ಕಿರುಗಣ್ಣಿನಿಂದ ನೋಡಿತು. ಬೇಡರ ಅಬ್ಬರವನ್ನು ಆಲಿಸುತ್ತ ಸೊಪ್ಪನ್ನು ಬೆದಕುತ್ತ ಇದ್ದ ಆ ರಕ್ಕಸಹಂದಿಯು ಒಮ್ಮೆಯೇ ಉಬ್ಬಿ ಪುಟನೆಗೆದು ಗಜರಿ ಗರ್ಜಿಸಿ ಮೇಲೇರಿ ಬಂದು ಅವರನ್ನು ಒಕ್ಕಲಿಕ್ಕಿತು. ಅಡವಿ ನಡುಗುವಂತೆ ಘುಡುಘುಡಿಸಿ ತನ್ನ ದಾಡೆಗಳಿಂದ ಆ ಬೇಡರನ್ನು ಕೆಡಹುತ್ತ, ಕೊಲ್ಲುತ್ತ, ಸೀಳುತ್ತ, ರಭಸದಿಂದ ನುಗ್ಗಿತು. ಶಬರರು

ದಿಗ್ಭ್ರಮೆಗೊಂಡು ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಮತ್ತೆ ಎಲ್ಲರೂ ಒಟ್ಟುಗೂಡಿ ನಾಯಿಗಳನ್ನು ಛೂ ಬಿಟ್ಟು ನಾಲ್ದೆಸೆಗಳಿಂದಲೂ ಬಂದು ಹಂದಿಯನ್ನು ಮುತ್ತಿದರು. ಹಂದಿಯು ಒಂದು ಬಿದಿರುಮೆಳೆಯಲ್ಲಿ ಹೋಗಿ ಸೇರಿಕೊಂಡಿತು. ಸುತ್ತಲೂ ನಾಯಿಗಳು ಮುತ್ತಿದವು. ಅಡಗಿದ್ದ ಹಂದಿಯು ಸ್ವಲ್ಪ ವೇಳೆಯಲ್ಲಿ ಸಿಡಿಲಿನಂತೆ ಹೊರಬಂದು ಬೇಡರ ಪಡೆಯನ್ನಾಕ್ರಮಿಸಿತು. ನಾಯಿಗಳು ಇಕ್ಕೆಲದಲ್ಲಿಯೂ ಅಟ್ಟಿಸಿಕೊಂಡು ಹೋದವು. ಬೇಡರು ಹಂದಿಯ ಮೇಲೆ ತೆರಪಿಲ್ಲದಂತೆ ಸರಳುಗಳನ್ನು ಸುರಿದರು. ಆದರೇನು? ವಿಶ್ವಾಮಿತ್ರನು ಕಳಿಸಿದ ಮಾಯಾವರಾಹವು ಯಾವುದನ್ನೂ ಲೆಕ್ಕಿಸಲಿಲ್ಲ. ಕೆರಳಿದ ಸಿಂಹವು ಆನೆಗಳನ್ನು ಕೊಲ್ಲುವಂತೆ, ಗರುಡನು ಸರ್ಪಗಳನ್ನು ಸಂಹರಿಸುವಂತೆ, ಆ ವರಾಹವು ಕಿರಾತರನ್ನು ಕೊಂದು ಕೊಂದು ಎಸೆಯಿತು. ನಾಯಿಗಳನ್ನು ಸೀಳಿ ಬಿಸುಟಿತು. ಹೊಡೆದಾಡಿ ಬಳಲಿದ ಹಂದಿಯು ಏದುತ್ತ ಕಟವಾಯಲ್ಲಿ ನೊರೆಯನ್ನುಗುಳುತ್ತ ಸ್ವಲ್ಪಕಾಲ ವಿಶ್ರಮಿಸಿಕೊಂಡು ಮತ್ತೆ ಶಬರ ಸೇನೆಯ ಮೇಲೆ ದಾಳಿ ಮಾಡಿತು. ಸೈನಿಕರ ಬಸುರನ್ನು ಬಗೆದು, ಬಿಸಿನೆತ್ತರನ್ನು ಕುಡಿದು, ಬೆನ್ನುಮೂಳೆಯನ್ನು ಕಡಿದು, ಕರುಳನ್ನು ಹಿಕ್ಕಿ, ತೊರೆಯನ್ನು ಅವಡಿ, ಬಸವಳಿದು ಮೂಗರಳಿಸಿ ಉಸಿರುತ್ತ ಒಲೆಯುತ್ತ ಒಂದು ಪೊದರಿನ ಕಡೆಗೆ ಹೋಯಿತು. ಆ ಪೊದರಿನಲ್ಲಿ ಒಬ್ಬ ಬೇಡನು ಅಡಗಿಕೊಂಡಿದ್ದನು! ಆ ರಕ್ಕಸ ಹಂದಿಯು ಆ ಪೊದರಿನ ಕಡೆಗೆ ಬರುವುದನ್ನು ಕಂಡಾಗ ಬೇಡನ ದುರವಸ್ಥೆಯನ್ನು ಏನೆಂದು ವರ್ಣಿಸುವುದು! ಮುಳ್ಳು ನೆಟ್ಟು ಕುಂಟುವ ಹೆಜ್ಜೆ, ಒಡೆದ ಮೊಣಕಾಲು, ಗಿಡಕ್ಕೆ ಸಿಕ್ಕಿ ಕಳಚಿಬಿದ್ದ ಉಡುಗೆ, ತೇಕುವ ಅಳ್ಳೆಗಳು– ಇದಾವುದನ್ನೂ ಲೆಕ್ಕಿಸದೆ 'ಕೆಟ್ಟೆನೋ!' ಎಂದೊರಲುತ್ತ ಆತನು ಓಡಿದನು! ಓಡುತ್ತಿರುವಾಗ ದಾರಿಯಲ್ಲೊಬ್ಬನು 'ಏಕೆ ಓಡುವೆ? ಹುಲಿ ಆಟ್ಟಿಸಿಕೊಂಡು ಬಂದಿತೆ?' ಎಂದು ಕೇಳಲಾಗಿ, (ಹು ಹು ಹು ಹುಲಿಯಲ್ಲ, ಹಂದಿ!) ಎಂದನು. 'ಅದೆಲ್ಲಿದೆ ತೋರಿಸು' ಎಂದು ಆತನು ಕೇಳಲಾಗಿ 'ನೀನೇ ನೋಡಿಕೊ!' ಎಂದು ಹೇಳುತ್ತ ಆ ಬೇಡನು ನಿಲ್ಲದೆ ಓಡಿ ಹೋದನು! ನಡುಗುವ ಕೈಕಾಲುಗಳು, ಬಿಕ್ಕುವ ಎದೆ, ಒಣಗಿದ ಬಾಯಿ, ಅರಳಿದ ಮೂಗು, ಬೆವರಿದ ಮುಖ, ಕೆದರಿದ ತಲೆ, ಬಿದ್ದು ಒಡೆದ ಮೊಣಕಾಲು– ಈ ಸ್ಥಿತಿಯಲ್ಲಿ ನಿಟ್ಟೋಟದಿಂದ ಓಡಿಬರುತ್ತಿದ್ದ ಬೇಡನನ್ನು ಹರಿಶ್ಚಂದ್ರನು ನೋಡಿದನು. ಆತನನ್ನು ತಡೆದು ನಿಲ್ಲಿಸಿ ಹೆದರಿ ಓಡುವುದೇಕೆಂದು ವಿಚಾರಿಸಲಾಗಿ ಆ ವ್ಯಾಧನು "ಮಹಾರಾಜ,

ಒಂದಾನೊಂದು ಭೀಕರವಾದ ಹಂದಿಯನ್ನು ಕಂಡೆನು. ಹಿರಣ್ಯಾಕ್ಷನನ್ನು ಸಂಹರಿಸಿದ ಆದಿವರಾಹನೋ, ಪುರಹರನು ಮುರಿದಸೊಂಡಲಿನ ಗಜಾಸುರನೋ, ದುರ್ಗಿಯ ನಿರ್ಘಾತದಿಂದ ಕೊಂಬು ಕಳೆದಿರುವ ಮಹಿಷಾಸುರನೋ ಎಂದು ಸಂದೇಹವಾಗುತ್ತಿದೆ!'' ಎಂದು ಉಸುರಿದನು. ರಾಜನು ''ಏನಯ್ಯಾ, ಕಾಡಿನಲ್ಲಿ ಕೊಬ್ಬಿ ಬೆಳೆದ ಒಂದು ಹಂದಿ ಇರಲಾಗದೆ? ಅದಕ್ಕಾಗಿ ಹೆದರಿ ಓಡುವೆಯಾ? ಅದರಿಂದ ಶಬರಸೇನೆಗಾದ ಹಾನಿಯೇನು?'' ಎಂದು ಕೇಳಿದನು. ಆಗ ಶಬರನು ''ಸ್ವಾಮಿ, ಅದು ಸಾಮಾನ್ಯವಾದ ಹಂದಿಯಲ್ಲ, ನಮ್ಮ ಸೇನೆಯನ್ನು ಕೊಂದಿಕ್ಕಿತು. ನಾಯಿಗಳನ್ನು ಸೀಳಿ ಬಿಸುಟಿತು. ಅದರ ಪರಿಯನ್ನು ವರ್ಣಿಸಲಾರೆ'' ಎಂದು ಹಲುಬಿದನು.

ಅಷ್ಟರಲ್ಲಿ ಇತರ ಶಬರರೂ ಅಲ್ಲಿಗೆ ಬಂದು ವರಾಹದ ಅದಟನ್ನು ಹೇಳಲಾಗಿ, ಹರಿಶ್ಚಂದ್ರನು ಮುಳಿದು ರಥವನ್ನೇರಿ 'ಆ ಹಂದಿಯನ್ನು ತೋರಿಸಿರಿ' ಎನ್ನುತ್ತ ನಡೆದನು. ಶಬರರು ಅವನನ್ನು ಹಿಂಬಾಲಿಸಿ ಹೋಗಿ ಹಂದಿಯು ಅಡಗಿದ್ದ ಪೊದರನ್ನು ತೋರಿಸಿದರು. ಬೇಟೆಯ ನಾಯಿಗಳನ್ನು ಬೋಳೈಸಿ ನುಗ್ಗಿಸಿ ಹಂದಿಯನ್ನು ಸುತ್ತುವರಿದು ಬೊಬ್ಬಿರಿದರು. ಒಂದು ಕ್ಷಣದಲ್ಲಿ ಪೊದರಿಂದ ಬರಸಿಡಿಲು ಮೊಳಗಿದಂತಾಯಿತು. ಘೋರಾಕಾರದ ಸೂಕರವು ಘುಡುಘುಡಿಸುತ್ತ ಸಿಡಿದು ಬಂದು ಶಬರ ಸಂಕುಲವನ್ನು ಧಿಕ್ಕರಿಸಿ ಕಿಕ್ಕರಿಸಿ ಸೀಳಿ ಬಿಸುಡಿತು. ಚರಿತವಾದ ಆಯುಧಗಳನ್ನು ತುಂಬಿದ ಬಂಡಿಯು ಬಾಳೆಯ ತೋಟದಲ್ಲಿ ರಭಸದಿಂದ ಓಡಿದಂತಾಯಿತು! ಮೃತ್ಯುರೂಪದ ಹಂದಿಯು ಮಸೆವ ದಾಡೆಗಳ ಕುಡಿಯಿಂದ ಕಿಡಿಯುಗುಳುತ್ತ, ಗಜರುವ ಮೂಗಿಂದ ಹೊಗೆ ಕಾರುತ್ತ, ಕೆಂಗಣ್ಣ ಕಡೆಯಿಂದ ದಳ್ಳುರಿಸೂಸುತ್ತ, ರೋಮಾಳಿಯನ್ನು ನಿಮಿರಿಸಿ, ಬಾಲವನ್ನು ತಿರುವಿ, ರುದ್ರಕೋಪವನ್ನು ಬೀರಿ, ತಿರುಗುತ್ತ ಹರಿಯುತ್ತ ಕೆರಳುತ್ತ, ಶಬರ ಸೇನೆಯನ್ನು ಸೀಳಿತು; ಮುರಿಯಿತು; ಹರಿಯಿತು; ಕೊರೆಯಿತು; ಕುರುಕಿತು! ಕತ್ತಲೆಯು ಸೂರ್ಯನನ್ನು ನೋಡುವಂತೆ, ಹರಿಶ್ಚಂದ್ರನನ್ನು ಕಿರುಗಣ್ಣಿಂದ ನೋಡಿತು! ಶಬರರನ್ನು ಹಂದಿಯು ವಧಿಸಿದ ಪರಿಯನ್ನು ನೋಡಿ ಕೋಪೋದ್ರಿಕ್ತನಾದ ಹರಿಶ್ಚಂದ್ರನು ಕೋದಂಡವನ್ನು ಮೇಲೆತ್ತಿ ಹೆದೆಯನ್ನು ಮಿಡಿದು ಪ್ರಬಲವಾದ ಸರಳನ್ನು ಆಳವಡಿಸಿದನು. ಮೃತ್ಯುದೇವತೆಗೆ ಬಲಿಯಿಕ್ಕುವನೋ ಎಂಬಂತೆ ಹಂದಿಗೆ ಗುರಿಯಿಟ್ಟು ಆ ಕೂರ್ಗಣೆಯನ್ನು ಎಚ್ಚನು. ಹರನು ಸ್ಮರನಿಗೆ ಮುನಿದಂತೆ, ಇರುಳಿಗೆ ತರಣಿ ಕೆರಳಿದಂತೆ ಸೂಕರನ ಮೇಲೆ ಕ್ರುದ್ಧನಾದ ಹರಿಶ್ಚಂದ್ರನು

ಬಿಟ್ಟ ಸರಳು ಅದರ ಕರುಳ ಸುರುಳಿಯಲ್ಲಿ ಹೊಕ್ಕು ಉರುಳಲು, ತರಳ ಚಿತ್ತದ ಹಂದಿ ನರಳುತ್ತ ಮರಳಿ ಕಾನನವನ್ನು ಸೇರಿತು. ಬೆದರಿದ ಹಂದಿಯು ನೆಲವನ್ನು ಕೆದರುತ್ತ, ಎದುರಾದ ಮರಗಳನ್ನು ಮುರಿಯುತ್ತ = ಬಿದಿರು ಮೆಳೆಗಳನ್ನು ಸೀಳುತ್ತ = ಗಿಡು-ಮಡು, ಬೆಟ್ಟ-ಘಟ್ಟ ಸದು-ದರು, ಹಳ್ಳ-ಕೊಳ್ಳ, ಸಂದಿ-ಗೊಂದಿಗಳಲ್ಲಿ ನುಗ್ಗಿ ಓಡಿತು. ಹರಿಶ್ಚಂದ್ರನು ಅದನ್ನು ಬೆನ್ನಟ್ಟಿದನು. ಆ ವರಾಹವು ರಾಜನ ಬಾಣದ ಅಳವಿಗೆ ಸಿಕ್ಕಿದಂತೆ ಆಗಾಗ ತೋರ್ಪಡಿಸಿಕೊಳ್ಳುತ್ತ, ಕತ್ತಿಯ ಹೊಡೆತಕ್ಕೆ ಸಿಕ್ಕಿತೋ ಎಂಬಂತೆ ನಟಿಸುತ್ತ ಬಳಲಿ ಬೆಂಡಾಗಿ ಧೃತಿಗೆಟ್ಟು ನಿಂತಂತೆ ಕಾಣಿಸಿಕೊಳ್ಳುತ್ತ ಮುಂದೆ ಮುಂದೆ ಓಡಿತು. ಹರಿಶ್ಚಂದ್ರನು ಆಯಾಸವನ್ನೆಣಿಸದೆ ಹಿಂದಿನಿಂದ ರಥವನ್ನು ಓಡಿಸುತ್ತ ಹೋದನು. ವೇಗದಲ್ಲಿ ಜಿಂಕೆ ಎಲ್ಲ ಪ್ರಾಣಿಗಳಿಗಿಂತ ಅಧಿಕವಾದುದು. ಜಿಂಕೆಗಿಂತ ವಾಯುವೂ ವಾಯುವಿಗಿಂತ ಬಾಣವೂ ಬಾಣಕ್ಕಿಂತ ದೃಷ್ಟಿಯೂ ದೃಷ್ಟಿಗಿಂತ ಮನಸ್ಸೂ ವೇಗದಲ್ಲಿ ಮಿಗಿಲಾದವು. ಹರಿಶ್ಚಂದ್ರನ ರಥಾಶ್ವಗಳು ಮನೋವೇಗವನ್ನೂ ಮೀರಿ ಓಡುತ್ತಿದ್ದವು. ಆದರೂ ಹಂದಿಯನ್ನು ಹಿಡಿಯಲಾಗಲಿಲ್ಲ. ಬಹುದೂರ ಹೋದ ಮೇಲೆ ಅರಣ್ಯದಲ್ಲಿ ಹಂದಿಯು ಕಾಣದಾಯಿತು! ಹರಿಶ್ಚಂದ್ರನು ಅದನ್ನು ಹುಡುಕಿ ಬೇಸತ್ತನು. ಬಳಲಿಕೆ. ಬಾಯಾರಿಕೆಗಳಿಂದ ಬಸವಳಿದು ಮುಂದೆ ಹೋಗುತ್ತಿರಲು ಒಂದು ತಪೋವನವು ಗೋಚರಿಸಿತು!

ಪದ್ಮಾಸನದಲ್ಲಿ ಕುಳಿತ ಋಷಿಗಳು ಘೋರ ತಪಸ್ಸಿನಲ್ಲಿ ನಿರತರಾಗಿದ್ದರು. ಕೆಲವರ ಮೈಮೇಲೆ ಹುತ್ತ ಬೆಳೆದಿತ್ತು. ಹಾವು, ಇಲಿ ಮೊದಲಾದುವು ದೇಹದ ಮೇಲೆ ಸುಳಿದಾಡುತ್ತಿದ್ದವು. ಅವರ ಜಟಾಭಾರವು ನೆಲದೊಳಕ್ಕೆ ಇಳಿದಿತ್ತು. ಕೃಶಾಂಗರಾದ ಆ ಋಷಿಗಳು ಬಹುದಿನಗಳಿಂದ ತಪಸ್ಸಿನಲ್ಲಿ ಮುಳುಗಿದ್ದರು. ಕೆಲವು ಮುನಿಕುಮಾರರು ಕಂದಮೂಲಗಳನ್ನು ಕೀಳುತ್ತ, ಹೂಗಳನ್ನು ಬಿಡಿಸುತ್ತ, ಕೃಷ್ಣಾಜಿನವನ್ನು ಸರಿಪಡಿಸುತ್ತ, ರುದ್ರಾಕ್ಷಿಗಳನ್ನು ಪೋಣಿಸುತ್ತ, ನಾರುಬಟ್ಟೆಗಳನ್ನು ಒಗೆಯುತ್ತ,ಮೌಂಜಿಯನ್ನು ಹೊಸೆಯುತ್ತ,ಯಜ್ಞೋಪವೀತವನ್ನು ನಿರ್ಮಿಸುತ್ತ, ಭಸ್ಮವನ್ನು ಸಿದ್ಧಪಡಿಸುತ್ತ, ಸಮಿತ್ತುಗಳನ್ನು ತರುತ್ತ ಇದ್ದರು. ಅವರನ್ನು ನೋಡಿ ಹರಿಶ್ಚಂದ್ರನು ವಿನಯದಿಂದ ಕೈಮುಗಿದನು. ಆ ತಪೋವನದಲ್ಲಿ ಹರಿಶ್ಚಂದ್ರನು ಕೆಲವು ಅಚ್ಚರಿಗಳನ್ನು ಕಂಡನು. ಸಿಂಹದೊಡನೆ ಆನೆಗಳು ಕಲೆತಿದ್ದವು. ಹುಲಿಗಳನ್ನು ಜಿಂಕೆಗಳು ಕೊಂಬುಗಳಿಂದ ತಿವಿಯುತ್ತಿದ್ದವು. ಸರ್ಪಗಳು ಮುಂಗುಸಿಯ ಮೇಲೆ ತಲೆಯನ್ನಿಟ್ಟು ನವಿಲುಗಳೊಡನೆ

ಆಡುತ್ತಿದ್ದವು. ನಾಯಿಗಳೊಡನೆ ಜಿಂಕೆಯ ಮರಿ ಕ್ರೀಡಿಸುತ್ತಿತ್ತು. ಇಲಿಗಳು ಕಾಡು ಬೆಕ್ಕುಗಳನ್ನು ಓಡಿಸುತ್ತಿದ್ದವು! ಇವನ್ನು ನೋಡಿ ಹರಿಶ್ಚಂದ್ರನು ಬೆರಗಾಗಿ ಮುಂದೆ ನಡೆದನು. ಒಂದೆಡೆ ವೇದಘೋಷ, ಉಪನಿಷದರ್ಥವಿಚಾರ, ಪುರಾಣ ಪ್ರವಚನ. ಇನ್ನೊಂದೆಡೆ ತರ್ಕಾದಿ ಶಾಸ್ತ್ರಗಳ ಪರಿಶೀಲನ. ಮತ್ತೊಂದೆಡೆ ಸ್ತೋತ್ರಪಾಠ, ಶಿವಾರ್ಚನೆ, ಘಂಟಾಧ್ವನಿ. ಮಗದೊಂದೆಡೆ ಸತತವಾಗಿ ನಡೆಯುವ ಹೋಮಾದಿ ಕ್ರಿಯೆಗಳ ಸ್ವಾಹಾಸ್ವಧಾಕಾರ. ಎಲ್ಲಿ ನೋಡಿದರೂ ಫಲಭಾರದಿಂದ ತೂಗಿ ಬಾಗಿದ ಮರಗಳು. ನಳನಳಿಸುವ ಎಳಲತೆಯ ತಳಿರುಗಳು. ತಿಳಿಗೊಳದಲ್ಲಿ ಬೆಳೆದ ಕಮಲ ಕೈರವುಗಳ ತನಿಗಂಪು. ತಂಗಾಳಿಯ ತಂಪು.

ಆ ತಪೋವನವನ್ನು ನೋಡಿ ಮಂತ್ರಿಯಾದ ಸತ್ಯಕೀರ್ತಿಯು ಹರಿಶ್ಚಂದ್ರನನ್ನು ಕುರಿತು "ಮಹಾರಾಜ, ವಿಶ್ರಮಿಸಿಕೊಳ್ಳಲು ಇದು ಉತ್ತಮವಾದ ಸ್ಥಳ" ಎಂದು ಬಿನ್ನೈಸಿದನು. ಆಗ ಹರಿಶ್ಚಂದ್ರನು ತನ್ನ ಪತ್ನಿಪುತ್ರರೊಡನೆ ರಥದಿಂದ ಕೆಳಗಿಳಿದನು. ದಣಿದ ಕುದುರೆಗಳಿಗೆ ನೀರನ್ನು ಕುಡಿಸಿ ಮೈತೊಳಸಿ ಎಳೆಹುಲ್ಲನ್ನು ಕೊಯಿಸಿ ಮುಂದಿಡಿಸಿದನು. ಅಷ್ಟರಲ್ಲಿ ಹಿಂಬಾಲಿಸಿ ಬಂದ ಸೈನಿಕರನ್ನು ದೂರದಲ್ಲಿ ಇಳಿಸಿ ಹರಿಶ್ಚಂದ್ರನು ಮಂತ್ರಿಯೊಡನೆ ಒಂದು ತಿಳಿನೀರಿನ ಕೊಳದಲ್ಲಿ ಇಳಿದು ನೀರನ್ನು ಕುಡಿದು ದಡದ ಮೇಲೆ ಎಳೆಚಿಗುರುಗಳನ್ನು ಹಾಸಿ ವಿಶ್ರಮಿಸಿಕೊಂಡನು. ತಾಂಬೂಲವನ್ನು ಸವಿದು, ಸುತ್ತಲೂ ಹಾರಾಡುತ್ತಿದ್ದ ಗಿಳಿ, ಕೋಗಿಲೆ, ಪಾರಿವಾಳ, ಹಂಸ, ನವಿಲುಗಳನ್ನು ನೋಡಿ ಹರ್ಷಿಸುತ್ತಿದ್ದನು. ಮಂತ್ರಿಯೊಡನೆ ಸಂಭಾಷಿಸುತ್ತ "ಈ ಪುಣ್ಯಮಯವಾದ ತಪೋವನವು ಯಾವ ಮಹರ್ಷಿಗೆ ಸೇರಿದುದೋ, ಮಹಾದೇವನೇ ಬಲ್ಲ! ಆ ಮಹಾತ್ಮನ ಶಾಂತಿಗುಣದಿಂದ ಚಂದ್ರನು ಜನಿಸಬಹುದು! ಚಾರಿತ್ರದಿಂದ ಗಂಗೆ, ತಪಸ್ಸಿನ ತೇಜಸ್ಸಿನಿಂದ ಸೂರ್ಯ, ಸುಳಿದಾಟದಿಂದ ತಂಗಾಳಿ, ನುಡಿಯ ಮಾಧುರ್ಯದಿಂದ ಅಮೃತ, ಔದಾರ್ಯದಿಂದ ಕಲ್ಪವೃಕ್ಷ - ಇವು ಜನಿಸದಿರಲಾರವು!" ಎಂದನು. ಹೀಗೆ ಅವರೆಲ್ಲರೂ ಆನಂದದಿಂದ ವಿಶ್ರಮಿಸುತ್ತಿರುವಾಗ ಒಬ್ಬ ಮುನಿಯು ಅಲ್ಲಿಗೆ ಬಂದನು. ಆತನನ್ನು ನೋಡಿ "ಯಾರ ಆಶ್ರಮ?" ಎಂದು ಕೇಳಲಾಗಿ, ಆ ಮುನಿಯು "ಇದು ವಿಶ್ವಾಮಿತ್ರ ಮುನಿಗಳ ಆಶ್ರಮ?" ಎಂದು ಹೇಳಿದನು. ಹಾವನ್ನು ತುಳಿದಂತೆ ಹರಿಶ್ಚಂದ್ರನು ಬೆಚ್ಚಿ ಬಿದ್ದು "ಅಯ್ಯೋ! ಗುರ್ವಾಜ್ಞೆಯನ್ನು ಮೀರಿದೆನಲ್ಲ, ಇನ್ನೇನು ಗತಿ!" ಎಂದು ಚಿಂತಾಕ್ರಾಂತನಾದನು. "ಶಿವನನ್ನು ಪೂಜಿಸಿ, ಯಾಗಗಳನ್ನು ನಡೆಸಿ,

ಸತ್ಯವನ್ನು ನುಡಿದು, ದಾನಧರ್ಮಗಳನ್ನು ಮಾಡಿ, ದೇಶವನ್ನು ಪಾಲಿಸಿ, ಕುಲಾಚಾರದಂತೆ ನಡೆದು, ಮುನಿಜನಗಳನ್ನಾರಾಧಿಸಿ, ನಾನಾ ಪುರಾಣ ಕಥೆಗಳನ್ನು ಕೇಳಿ ಗಳಿಸಿದ ಪುಣ್ಯರಾಶಿಯು ಗುರ್ವಾಜ್ಞೆಯ ಉಲ್ಲಂಘನೆಯಿಂದ ನಶಿಸಿತು. ನಾನು ಪಾಪಿಯಾದೆನು. ಗುರುವೇ ಸದಾಶಿವ, ಗುರುಪತ್ನಿಯೇ ಪಾರ್ವತಿ, ಗುರುಪುತ್ರರೇ ಗಣಪತಿ ಷಣ್ಮುಖರು, ಗುರುಮಿತ್ರರೇ ಪ್ರಮಥಗಣಗಳು, ಗುರುಮಂದಿರವೇ ಶಿವಮಂದಿರ, ಗುರುವಿನ ನುಡಿಯೇ ಪಂಚಾಕ್ಷರೀಮಂತ್ರ, ಗುರುಸ್ಮರಣೆಯೇ ಶಿವಸ್ಮರಣೆ, ಗುರುವಿನ ತೃಪ್ತಿ ಶಿವನ ತೃಪ್ತಿ–ಎಂದು ನಂಬಿದ ಪುಣ್ಯಾತ್ಮನು ಎಷ್ಟು ಧನ್ಯನೋ! ಗುರುವಿನ ವಚನವನ್ನು ಮೀರಿದ ನನಗೆ ಹಾನಿಯಾಗದಿರದು'' ಎಂದು ಹರಿಶ್ಚಂದ್ರನು ಕಳವಳಗೊಂಡನು. ಆಗ ಮಂತ್ರಿಯು ''ಮಹಾರಾಜ, ಬುದ್ಧಿಪೂರ್ವಕವಾಗಿ ಗುರುವಚನವನ್ನುಲ್ಲಂಘಿಸಿದರೆ ದೋಷ ಉಂಟು. ಅಜ್ಞಾನದಿಂದ ನಡೆದ ಕಾರ್ಯವು ಪಾಪಕಾರಿಯಲ್ಲ'' ಎಂದನು. ಅದಕ್ಕೆ ಹರಿಶ್ಚಂದ್ರನು ''ಅಜ್ಞಾನದಿಂದ ತುಳಿದರೆ ಮುಳ್ಳು ಚುಚ್ಚದಿರುವುದೇ?'' ಎಂದು ಕೇಳಿದನು. ಮಂತ್ರಿಯು ''ಮಹಾಪ್ರಭು, ವಿಶ್ವಾಮಿತ್ರ ಮುನಿಗಳನ್ನು ಈಗ ನಾವು ಸಂದರ್ಶಿಸಿಲ್ಲ. ತಪೋವನವನ್ನು ಬಿಟ್ಟು ಈಗಲೇ ಹೊರಟುಬಿಡೋಣ'' ಎಂದನು. ಹರಿಶ್ಚಂದ್ರನು ''ಮಂತ್ರಿ, ನೀನು ಹೇಳುವುದೇನೋ ಸರಿ. ತಪೋವನಕ್ಕೆ ಬಂದರೂ ನನ್ನನ್ನು ಕಾಣದೆ ಹೋದನೆಂದು ವಿಶ್ವಾಮಿತ್ರರು ಕುಪಿತರಾಗಿ ಶಪಿಸಬಹುದು'' ಎನ್ನಲು, ''ಮಹಾಸ್ವಾಮಿ, ಶಪಿಸಿ ಮಾಡುವುದೇನು? ಗುರ್ವಾಜ್ಞೆಯನ್ನು ಮೀರುವುದಕ್ಕಿಂತ ಹೀಗೆಯೇ ಹೊರಟುಹೋಗುವುದು ಲೇಸು'' ಎಂದು ಸತ್ಯಕೀರ್ತಿಯು ಉತ್ತರಿಸಿದನು. ಹರಿಶ್ಚಂದ್ರನು ''ಕಾಮಿನಿಯರ ಮಧ್ಯದಲ್ಲಿದ್ದರೂ ಕಾಮವಿಕಾರಕ್ಕೆ ಒಳಗಾಗದಿರುವುದು ಅತಿಶಯವಲ್ಲ. ಸ್ವರ್ಗಲೋಕದಲ್ಲಿದ್ದರೂ ಜಿತೇಂದ್ರಿಯನಾಗಿ ಬಾಳುವುದು ದೊಡ್ಡದಲ್ಲ. ಸತ್ಯವನ್ನೇ ನುಡಿಯುವೆನೆಂಬುದು ನನ್ನ ಕಠೋರ ವ್ರತ. ಗುರ್ವನುಗ್ರಹದಿಂದ ಇದೊಂದು ಸ್ಥಿರವಾಗಿ ಉಳಿದರೆ ಸಾಕು. ಇನ್ನು ಯಾವುದನ್ನೂ ನಾನು ಗಣಿಸುವುದಿಲ್ಲ. ಮಂತ್ರಿ, ನಾನು ಇಲ್ಲಿ ಇದ್ದರೂ ಹೋದರೂ ಕೇಡು ತಪ್ಪದು'' ಎಂದು ಹೇಳಿ ಚಿಂತಾವಿಷ್ಟನಾಗಿ ಪತ್ನಿಯಾದ ಚಂದ್ರಮತಿಯ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿದನು.

ವಿಷಣ್ಣನಾದ ಹರಿಶ್ಚಂದ್ರನಿಗೆ ಯಾವುದೂ ಬೇಡವಾಯಿತು. ಗುರ್ವಾಜ್ಞೆಯನ್ನು ಮೀರಿದೆನೆಂದು ಚಿಂತೆಯೊಂದೇ ಕಾಡುತ್ತಿತ್ತು. ಹಾಗೆಯೇ ಮಲಗಿರಲು ನಸುನಿದ್ರೆ

ಬಂದಂತಾಗಿ ಒಂದು ಕನಸನ್ನು ಕಂಡು ಗಾಬರಿಯಿಂದ ಥಟ್ಟನೆ ಎದ್ದು ಸುತ್ತಲೂ ನೋಡಿದನು. ಅವನ ಮುಖವು ಬಾಡಿತು. ಬಾಯಿ ಒಣಗಿತ್ತು. ದೃಷ್ಟಿ ಹೆದರಿತ್ತು. ಮೈ ನಡುಗಿತ್ತು. ಎದೆ ಕಂಪಿಸಿತ್ತು. ಚಂದ್ರಮತಿಯು ದಿಗ್ಭ್ರಾಂತಳಾಗಿ ತನ್ನ ಕೈಬಳೆಯಿಂದ ದೃಷ್ಟಿಯನ್ನು ನಿವಾಳಿಸಿ, ಮೈಸವರಿ ಸಂತೈಸುತ್ತ ವಲ್ಲಭನನ್ನು ಕುರಿತು ''ಆರ್ಯಪುತ್ರ, ಧುರದಲ್ಲಿ ಶತ್ರುರಾಜರನ್ನು ಅಂಜಿಸಿ ನಡುಗಿಸುವ ರಣಧೀರ ನೀನು. ಶೂರಾಗ್ರಣಿಯಾದ ನೀನು ಈಗ ನಡುಗುವುದೇಕೆ?'' ಎಂದು ಮೃದುವಾಗಿ ಮಾತಾಡಿಸಿದಳು. ಹರಿಶ್ಚಂದ್ರನು ''ಚಂದ್ರಮತಿ, ನಾನು ಕನಸೊಂದನ್ನು ಕಂಡೆನು. ಅದರಿಂದ ಹೀಗಾಯಿತು'' ಎನ್ನಲು ''ಅದಾವ ಕನಸು?'' ಎಂದು ಚಂದ್ರಮತಿ ಕೇಳಿದಳು. ಆಗ ಹರಿಶ್ಚಂದ್ರನು ''ನಾನು ಸಭಾಮಧ್ಯದಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದೆ. ಒಬ್ಬ ಮುನಿಯು ಕೋಪಾವೇಶದಿಂದ ಬಂದು ಸಭಾಮಂಟಪದ ಕಂಭಗಳನ್ನು ಉರುಳಿಸಿ ಚಿನ್ನದ ಕಲಶಗಳನ್ನು ಕಿತ್ತೊಗೆದು ನೆರೆದ ಸಭೆಯಲ್ಲಿ ನನ್ನನ್ನು ಸಿಂಹಾಸನದಿಂದ ಎಳೆದು ಕೆಡಹಿದನು. ಆಮೇಲೆ ಸಿಂಹಾಸನವನ್ನು ಕಿತ್ತುಕೊಂಡು ಹೋದನು. ಆಗ ಒಂದು ಕಾಗೆ ನನ್ನ ಎದೆಯ ಮೇಲೆ ಕುಳಿತು ಕರ್ರೆಂದು ಕೂಗುತ್ತಿತ್ತು. ಆಮೇಲೆ ನಾನು ಒಂದು ಪರ್ವತದ ಶಿಖರದಲ್ಲಿ ವಿರಾಜಿಸುತ್ತಿದ್ದ ರತ್ನಖಚಿತವಾದ ಅರಮನೆಯನ್ನು ಪ್ರವೇಶಿಸಿದೆನು. ಚಂದ್ರಮತಿ, ಇದರ ಅರ್ಥವೇನಿರಬಹುದು?'' ಎಂದನು. ಚಂದ್ರಮತಿ ''ಕಾಂತ, ಇದಕ್ಕಾಗಿ ಇಷ್ಟು ದುಗುಡವೆ? ಕನಸಿನಲ್ಲಿ ಕಂಡ ಕುಪಿತನಾದ ಮುನಿಯೆಂದರೆ ವಿಶ್ವಾಮಿತ್ರರು! ಆಮೇಲೆ ಕಂಡ ಅವರ ಅಬ್ಬರವೆಲ್ಲವೂ ಅವರ ಗೊಡ್ಡಾಟದಿಂದ ನಮಗೆ ಸಂಭವಿಸುವ ಕಿರುಕುಳದ ಸೂಚನೆ. ಅದು ಅಲ್ಪಕಾಲದ ಸಂಕಟ. ಅದಕ್ಕೆ ಹೆದರದಿದ್ದರೆ ಮುಂದೆ ಶುಭವಾಗುತ್ತದೆ. ಪರ್ವತ ಶಿಖರದಲ್ಲಿದ್ದ ಅರಮನೆಯ ಪ್ರವೇಶವು ನಿನಗೆ ಪ್ರಾಪ್ತವಾಗುವ ಮಹೋನ್ನತ ಪದವಿಯನ್ನು ಸೂಚಿಸುತ್ತದೆ. ಇದು ದಿಟ. ಇನ್ನೊಂದು

ಮಾತನ್ನು ಹೇಳುತ್ತೇನೆ, ಅವಧಾರಿಸು. ವಿಮರ್ಶೆ ಮಾಡಿದಾಗ ಹೀಗೆನಿಸುತ್ತದೆ : ಗುರ್ವಾಜ್ಞೆಯನ್ನು ಮೀರಿದ್ದರಿಂದ ಈ ಕೇಡು ಸಂಭವಿಸುವಂತೆ ಕಾಣುತ್ತದೆ. ಅರಸ, ಮುನಿಯ ಬೇಡ; ಕೈ ಮುಗಿದು ಬೇಡುತ್ತೇನೆ. ಏನೇ ಬರಲಿ, ನಿನ್ನ ಸತ್ಯವ್ರತವು ದೃಢವಾಗಿರಲಿ. ನನಗೆ, ನಮ್ಮ ಮಗನಿಗೆ, ಮಂತ್ರಿಗೆ, ರಾಜ್ಯಕ್ಕೆ, ಚತುರಂಗ ಸೇನೆಗೆ, ಸಕಲ ಭಂಡಾರಕ್ಕೆ, ನಗರಕ್ಕೆ, ಸರ್ವ ಪರಿವಾರಕ್ಕೆ- ಯಾವ ವಿಪತ್ತು ಬಂದರೂ ಬರಲಿ, ಸತ್ಯವನ್ನು ಮಾತ್ರ ಬಿಡಬೇಡಿ. ಮತ್ತೊಮ್ಮೆ ಕೈ ಮುಗಿದು ಕೇಳಿಕೊಳ್ಳುತ್ತೇನೆ'' ಎಂದಳು.

ಹರಿಶ್ಚಂದ್ರನು ಚಿಂತೆಯಲ್ಲಿ ಮುಳುಗಿದ್ದನು. ''ಮಡದಿ ಏನು ಹೇಳಿದಳು? ನಾನು ಏನನ್ನು ಕೇಳಿದೆನು? ಮುಂದೆ ಮಾಡುವುದೇನು? ನಾನು ಎಲ್ಲಿಂದ ಬಂದೆ? ನನ್ನೊಡನೆ ಯಾರಿರುವರು? ನಾನಿರುವುದೆಲ್ಲಿ?'' ಎಂಬುದೊಂದೂ ಅವನಿಗೆ ತೋರಲಿಲ್ಲ. ಚಿತ್ರದಲ್ಲಿ ಚಿತ್ರಿಸಲ್ಪಟ್ಟವನಂತೆ ದುಮ್ಮಾನದಿಂದ ಮಿಸುಕಾಡದೆ ಕುಳಿತನು. ಮಂತ್ರಿಯು ''ಮಹಾರಾಜ, ಸುಮ್ಮನೆ ಕುಳಿತರೆ ಏನಾಗುವುದು? ವಿಶ್ವಾಮಿತ್ರರನ್ನು ಕಂಡು ವಂದಿಸಿ ಬೇಗನೆ ಇಲ್ಲಿಂದ ಹೊರಟು ಹೋಗೋಣ, ನಡೆ'' ಎಂದು ಹೇಳುತ್ತಿದ್ದನು. ಇತ್ತಲಾಗಿ ಹರಿಶ್ಚಂದ್ರನ ಶರಘಾತದಿಂದ ನೊಂದ ಹಂದಿಯು ದೈನ್ಯದಿಂದ ಒಲೆದಾಡುತ್ತ ಬರುತ್ತಿರುವುದನ್ನು ವಿಶ್ವಾಮಿತ್ರ ಮುನಿಗಳು ಕಂಡರು.

ಚಂಡಾಲಕನ್ಯಕಾಪ್ರಸಕ್ತಿ

ಹಂದಿಯನ್ನು ನೋಡುತ್ತಲೇ ವಿಶ್ವಾಮಿತ್ರರ ಕೋಪಾಗ್ನಿಯು ಭಗಿಲ್ ಎಂದಿತು. ಜಪವು ಜಾರಿತು. ತಪವು ತಗ್ಗಿತು. ಮತಿಯು ಗತಿಸಿತು. ದಯೆ ದಾಟಿತು. ನೀತಿ ಬೀತಿತು. ಹಿಂದೆ ನಡೆದುದನ್ನು ನೆನೆದು ಉರಿದೆದ್ದು 'ಸಿಕ್ಕಿದನು ಆ ರಾಜ! ಅವನನ್ನು ಗೋಳಾಡಿಸದೆ ಬಿಡುವುದಿಲ್ಲ' ಎಂದು ಹೂಂಕರಿಸಿದರು. ಅವರ ಹೂಂಕಾರದಿಂದ ಇಬ್ಬರು ತರುಣಿಯರು ಆವಿರ್ಭವಿಸಿದರು. ಅತಿಕೋಪ, ಬದ್ಧದ್ವೇಷ, ಅನಿಮಿತ್ತ ವೈರ – ಎಂಬಿವು ಮುನಿಗೆ ಹೊಲೆ ಇದ್ದಂತೆ. ವಿಶ್ವಾಮಿತ್ರರಲ್ಲಿದ್ದ ಈ ಮೂರು ನಿಮಿತ್ತಿಗಳಿಂದಲೇ ಆ ವನಿತೆಯರು ಜನಿಸಿದರಾದ್ದರಿಂದ ಹೊಲತಿಯರಾದರು. ಅವರು ದೂರದಲ್ಲಿ ನಿಂತು ''ಮುನಿಗಳೆ, ನಮಗೆ ಆಜ್ಞೆ ಯಾವುದು?'' ಎಂದು ಕೇಳಿದರು. ವಿಶ್ವಾಮಿತ್ರರು ''ಈ ತಪೋವನಕ್ಕೆ ಹರಿಶ್ಚಂದ್ರ ರಾಜನು ಬಂದಿದ್ದಾನೆ. ನಿಮ್ಮ ಬುದ್ಧಿ ಕೌಶಲವನ್ನುಪಯೋಗಿಸಿ ಅವನನ್ನು ಮರುಳು ಮಾಡಿರಿ!'' ಎಂದು ಆಜ್ಞಾಪಿಸಿದರು.

ಆ ಸ್ತ್ರೀಯರ ಮುಂಗುರಳಲ್ಲಿ ಕೌಟಿಲ್ಯ, ಕಣ್ಣುಗಳಲ್ಲಿ ಚಾಂಚಲ್ಯ, ಕುಚಗಳಲ್ಲಿ ಕಾಠಿಣ್ಯ, ನಡುವಿನಲ್ಲಿ ಶಿಥಿಲತೆ, ಅಭಿನಯದಲ್ಲಿ ಗೂಢತೆ, ಉಸಿರಿನಲ್ಲಿ ಲಾಘವ, ನಿತಂಬದಲ್ಲಿ ಕೊಬ್ಬಿನ ದರ್ಪ, ನಡಿಗೆಯಲ್ಲಿ ಜಾಡ್ಯ, ನಗೆಯಲ್ಲಿ ಮರುಳು, ನುಡಿಯಲ್ಲಿ ವಕ್ರತೆ- ಇದ್ದವು. ಈ ದುರ್ಗುಣಗಳಿದ್ದುದರಿಂದ ಅವರು ಹೊಲತಿಯರೆನಿಸಿದರು! ದುರ್ಗುಣಗಳು ಯಾರ ಕುಲವನ್ನು ಕೆಡಿಸದೆ ಇರಬಲ್ಲವು! ಶ್ಯಾಮಲವರ್ಣದ ಆ

ಯುವತಿಯರೀರ್ವರು, ಹಗಲನ್ನು ನೋಡಲು ಬಂದ ಯಾಮಿನಿಯ ಹೆಣ್ಣು ಮಕ್ಕಳೋ, ಸುರಾಸುರರು ಸಮುದ್ರವನ್ನು ಮಥಿಸುವಾಗ ಹುಟ್ಟಿದ ವಿಷದ ಹೊಗೆಯಿಂದ ಕಪ್ಪಾದ ಜಲದೇವತೆಗಳೋ, ಬ್ರಹ್ಮನು ನೀಲಮಣಿಯಿಂದ ನಿರ್ಮಿಸಿದ್ದ ಪುತ್ಥಳಿಗಳು ಜೀವಕಳೆಯನ್ನು ಧರಿಸಿ ಬಂದವೋ ಎಂಬಂತೆ ಕಂಗೊಳಿಸುತ್ತ ಹರಿಶ್ಚಂದ್ರನ ಬಳಿಗೆ ಬಂದರು. ಆ ಮಾಯಾಂಗನೆಯರು ಹರಿಶ್ಚಂದ್ರನನ್ನು ನೋಡಿ "ರಾಯ ಜಗಜಟ್ಟಿಮಝು ಭಾಪು! ರಾಯ ಭುಜಬಲಭೀಮ! ರಾಯ ಮರ್ದನರಾಯ! ಜೀಯ ಸ್ಥಿರಂಜೀವ!" ಎಂದು ಹೊಗಳಿ, ಇಂಪಾದ ಧ್ವನಿಯಿಂದ ಹಾಡಲಾರಂಭಿಸಿದರು. ಅವರ ಸಂಗೀತವು ಅತ್ಯಂತ ಮನೋಜ್ಞವಾಗಿತ್ತು. ತಾಳ ಲಯಬದ್ಧವಾಗಿ ಯಥೋಚಿತವಾದ ತಾರಮಂದ್ರ ಧ್ವನಿಗಳಿಂದ ಹಾಡಲು, ಹರಿಶ್ಚಂದ್ರನಿಗೆ ಉಲ್ಲಾಸವು ಮೂಡಿತು. ಹಂದಿಯನ್ನು ಬೆಂಬತ್ತಿ ಬಂದ ಆಯಾಸ, ವಿಶ್ವಾಮಿತ್ರರ ಆಶ್ರಮಕ್ಕೆ ಬಂದನೆಂಬ ಕಳವಳ, ಪರಾಶರ ಮುನಿಗಳ ಆಜ್ಞೆಯನ್ನು ಉಲ್ಲಂಘಿಸಿದನೆಂಬ ಚಿಂತೆ, ಕೆಟ್ಟ ಕನಸಿನ ಭಯ– ಇವೆಲ್ಲವೂ ಹಿಂದೆ ಸರಿದವು. ಆತನು ಸಂಪ್ರೀತಚಿತ್ತನಾಗಿ ಗಾನರಾಣಿಯರೆನಿಸಿದ ಆ ತರುಣಿಯರಿಗೆ ತನ್ನ ಆಭರಣಗಳನ್ನು ಪಾರಿತೋಷಕವನ್ನಾಗಿ ಕೊಟ್ಟನು. ಗಾಯಕಿಯರು ತೃಪ್ತರಾಗದೆ ಹೀಗೆಂದರು :

ಗಾಯಕಿಯರು :– ಮಹಾರಾಜ, ಬಡತನದ ಹೊತ್ತಿನಲ್ಲಿ ಆನೆ ದೊರಕಿದರೆ ಫಲವೇನು? ನೀರಡಸಿರ್ದ ಸಮಯದಲ್ಲಿ ಆಜ್ಯ ದೊರಕಿದರೆ ಫಲವೇನು? ರೋಗದಿಂದ ನರಳುತ್ತ ಬಿದ್ದಿರುವಾಗ ರಂಭೆಯು ದೊರಕಿದರೆ ಏನು ಪ್ರಯೋಜನ? ಸಾಯುವ ಕಾಲದಲ್ಲಿ ಪೊಡವಿಯ ಒಡೆತನ ದೊರಕಿದರೆ ಏನು ಪ್ರಯೋಜನ? ಕಡುಬಿಸಿಲು ಹೊಡೆದು ಬೆಂಡಾಗಿ ಬೀಳ್ವ ನಮಗೆ ನೀನೊಲಿದು ಮಣಿದೊಡಿಗೆಗಳನ್ನಿತ್ತು[1] ಫಲವೇನು? ಅರಸ, ಕಡಲಲ್ಲಿ ಬಿದ್ದವನಿಗೆ ತೆಪ್ಪವನ್ನೂ ಕಡುಬಡವನಿಗೆ ಚಿನ್ನವನ್ನೂ ರೋಗಿಗೆ ಅಮೃತವನ್ನು ಇತ್ತರೆ, ಅವರು ಎಷ್ಟು ಹರ್ಷದಿಂದ ನಲಿಯುವರೆಂಬುದನ್ನು ನೆನಸಿಕೊ. ಸುಡಸುಡನೆ ಸುಡುವ ಈ ಬಿಸುಬಿಸಿಲ ಸೆಕೆಯಿಂದ ಬಾಯ್ಬಿಡುವ ನಮಗೆ ನಿನ್ನ ಮುತ್ತಿನ ಸತ್ತಿಗೆ[2]ಯನ್ನಿತ್ತು ಸಲಹು!

ಹರಿಶ್ಚಂದ್ರ :– ರವಿಕುಲದ ಪೀಳಿಗೆಯ ರಾಯರಿಗೆ ಪಟ್ಟವ ಕಟ್ಟುವಂದು, ಈ

---

1. ರತ್ನಾಭರಣ

2. ಶ್ವೇತಚ್ಛತ್ರ

ಸತ್ತಿಗೆ ಇಲ್ಲದೊಡೆ ಅವರಿಗೆ ಅರಸುತನ ಸಲ್ಲದು. ಇದನ್ನು ಕಂಡ ಹಗೆಗಳು ಯುದ್ಧರಂಗದಲ್ಲಿ ನಿಲ್ಲದೆ ಓಡುವರು. ಇದರ ನೆಳಲೊಳಗಿರುವ ರಾಜನ ಬಳಿಯಲ್ಲಿ ಎಡರು, ಬಡತನ, ಅಪಕೀರ್ತಿ, ಅಪಜಯಗಳು ಸುಳಿಯವು. ಇದನ್ನರಿತು ಶ್ವೇತಚ್ಛತ್ರವನ್ನು ಕೊಡಲು ಶಕ್ಯವೆ?

ಗಾಯಕಿಯರು :- ಕೊಡಬಹುದಾದ ಒಡವೆಯನ್ನು ಯಾರಾದರೂ ಕೊಡುವರು. ಅದರಲ್ಲಿ ಏನು ಹೆಚ್ಚಳ? ಬೇಡಿದುದನ್ನು ಕೊಡುವುದು ದೊರೆಯ ದೊಡ್ಡತನ!

ಹರಿಶ್ಚಂದ್ರ :- ಬೇಡುವುದಕ್ಕೇನು? ಬೇಡುವವರ ಬಾಯಿ ಹರಿವುದೆ? ಈ ಜಗತ್ತಿನಲ್ಲಿ ಬೇಡಿದುದನ್ನೆಲ್ಲ ಕೊಡುವ ದೊರೆ ಯಾರು?

ಗಾಯಕಿಯರು :- ಬಲಿಚಕ್ರವರ್ತಿ, ಶಿಬಿ ದಧೀಚಿಗಳು ಬೇಡಿದುದೆಲ್ಲವನ್ನೂ ಕೊಡಲಿಲ್ಲವೆ?

ಹರಿಶ್ಚಂದ್ರ :- ಸಂತೋಷದಿಂದ ಕೊಡುವ ತ್ಯಾಗಬುದ್ಧಿಯೇ ಬೇರೆ; ಪಾತ್ರವನ್ನರಿತು ಕೊಡುವ ದಾನಗುಣವೇ ಬೇರೆ. ಬಲಿ ಮೊದಲಾದವರು ಕೊಟ್ಟುದು ದಾನಬುದ್ಧಿಯಿಂದ.

ಗಾಯಕಿಯರು :- ಅರಸ, ನಿನ್ನ ಸತ್ತಿಗೆಯನ್ನು ದಾನ ಬುದ್ಧಿಯಿಂದಲೇ ಕೊಡು!

ಹರಿಶ್ಚಂದ್ರ :- ಹಾಗಲ್ಲ; ಹಾಡಿ ನನ್ನನ್ನು ಮೆಚ್ಚಿಸಿದ್ದೀರಿ. ಪಾರಿತೋಷಿಕವಾಗಿ ನಾನು ಕೊಟ್ಟಿದ್ದೇನೆ. ಇದು ತ್ಯಾಗ. ಉದ್ದೇಶಪೂರ್ವಕವಾಗಿ ಯಾಚಿಸಿದವರ ಅರ್ಹತೆಯನ್ನು ಗಮನಿಸಿ ಕೊಡುವುದು ದಾನ. ತ್ಯಾಗ ದಾನಗಳಲ್ಲಿ ತಾರತಮ್ಯ ಉಂಟು. ನಿಮ್ಮಂಥವರಿಗೆ ಕೊಟ್ಟರೆ ಉಪಕಾರವೆನಿಸುತ್ತದೆ. ವಿಶ್ವಾಮಿತ್ರರಂಥ ಮಹಾತ್ಮರಿಗೆ ಕೊಟ್ಟರೆ ಆರಾಧನೆಯಾಗುತ್ತದೆ.

ಗಾಯಕಿಯರು :- ನಾವು ಗಾಡಿಕಾತಿಯರು! ಮಹಾರಾಜ, ನಿಶ್ಶಂಕೆಯಿಂದ ಸತ್ತಿಗೆಯನ್ನು ಕೊಟ್ಟರೆ ನಿನಗೆ ಕೀರ್ತಿ ಬರುತ್ತದೆ. ಕರುಣಿಸಿ ಕೊಟ್ಟರೆ ಪುಣ್ಯ ಬರುತ್ತದೆ!

ಹರಿಶ್ಚಂದ್ರ :- ತ್ಯಾಗಬುದ್ಧಿಯಿಂದ ಎಲ್ಲವನ್ನೂ ಕೊಡಬಹುದು, ಬಿಡಬಹುದು. ಆದರೆ ತನ್ನ ತಂದೆ ತಾಯಿಗಳನ್ನೂ ಕೈ ಹಿಡಿದ ಮಡದಿಯನ್ನೂ ಆರಾಧ್ಯ ದೇವತೆಯನ್ನೂ ಸ್ವಾಮಿಭಕ್ತಿಯಿಂದ ಸೇವಿಸುವ ಸೇನಾಪರಿವಾರವನ್ನೂ ತ್ಯಾಗಮಾಡುವ ಧೀರರು ಈ ಜಗತ್ತಿನಲ್ಲಿ ಜನಿಸಲಾರರು!

ಗಾಯಕಿಯರು :- ಈಗ ನೀನು ಹೇಳಿದ ಯಾವ ವಸ್ತುವನ್ನು ನಾವು ಕೇಳಿಲ್ಲವಲ್ಲ! ನಾವು ಕೇಳಿದ್ದು ಸತ್ತಿಗೆಯನ್ನು!

ಹರಿಶ್ಚಂದ್ರ :- ಈ ಸತ್ತಿಗೆಯೇ ನನ್ನ ತಾಯಿತಂದೆಗಳು! ನೆಳಲ ತಂಪನ್ನು ಕೊಡುವುದರಿಂದ ಇದು ತಾಯಿ, ವಂಶಪರಂಪರೆಯಿಂದ ಬಂದುದರಿಂದ ತಂದೆ, ಪರರಿಗೆ ಕೊಡಬಾರದ ವಸ್ತುವಾದ್ದರಿಂದ ಮಡದಿ, ಪಟ್ಟಾಭಿಷೇಕ ಸಮಯದಲ್ಲಿ ಪೂಜಿಸಲ್ಪಡುವುದರಿಂದ ಆರಾಧ್ಯ ದೇವತೆ, ರಣರಂಗದಲ್ಲಿ ವೈರಿಗಳನ್ನು ನಡುಗಿಸುವುದರಿಂದ ಈ ಸತ್ತಿಗೆಯೇ ನನ್ನ ಸೇನಾಪರಿವಾರ! ಇಂಥ ಶ್ವೇತಚ್ಛತ್ರವನ್ನು ಬೇಡತಕ್ಕವರು ಹುಚ್ಚರು ಎನ್ನಬೇಕಾಗುತ್ತದೆ.

ಗಾಯಕಿಯರು :- ಅರಸ, ನೀನು ವಿಶ್ವವಿಖ್ಯಾತನಾದ ದಾನಿ ಎಂದು ತಿಳಿದು ದೊಡ್ಡ ಆಸೆಯಿಂದ ನಿನ್ನ ಬಳಿಗೆ ಬಂದೆವು. ನಮ್ಮ ಪ್ರಾರ್ಥನೆಯನ್ನು ನಿಷ್ಫಲಗೊಳಿಸುವೆಯಾ? ನಾವು ಮರುಗುವಂತೆ ಬಿಸುಸುಯ್ಯುವಂತೆ ಮಾಡುವೆಯಾ? ಸತ್ತಿಗೆಯನ್ನು ಕೊಡಲಾಗದಿದ್ದರೆ ನಮ್ಮನ್ನು ಮದುವೆಯಾಗು!

ಅವರ ನುಡಿಯನ್ನು ಕೇಳಿ ಹರಿಶ್ಚಂದ್ರನು ಕ್ರೋಧೋದ್ದೀಪನಾದನು. "ಅಬ್ಬಾ! ಈ ಜಗತ್ತು ಹುಟ್ಟಿದಾಗಲೇ ಜನಿಸಿದ ಪ್ರಾಚೀನ ಸೂರ್ಯವಂಶದ ರಾಜರು ನಾವು! ವಂಶದಲ್ಲಿ, ಕೀರ್ತಿಯಲ್ಲಿ, ಭುಜಬಲದಲ್ಲಿ ನಮಗೆ ಸಾಟಿಯೆನಿಸಿ, ಹೆಣ್ಣನ್ನು ಕೊಡಲು ಬರುವ ಭೂಪಾಲರು ಇಂದುತನಕ ಈ ಲೋಕದಲ್ಲಿ ಹುಟ್ಟಲಿಲ್ಲ! ಹೀಗಿರುವಾಗ ಈ ಹೊಲತಿಯರು ಬಂದು 'ನಾವು ಹೆಂಡತಿಯರಾಗುತ್ತೇವೆ!' ಎನ್ನುವರಲ್ಲ! ಇದೇನು ಕಾಲಮಹಿಮೆಯೋ, ಈ ನೆಲದ ಮಹಿಮೆಯೋ! ನೋಡು ನೋಡು!" ಎಂದು ಅಬ್ಬರಿಸಿದನು.

ಗಾಯಕಿಯರು :- ಅರಸ, ಪವಿತ್ರವಾದ ಕ್ಷೀರವನ್ನು ಕೊಡುವ ಹಸುವಿನ ಕೆಚ್ಚಲ ಮಾಂಸ ಉತ್ತಮವೆ? ಸಿಹಿಯಾದ ಜೇನನ್ನು ನಿರ್ಮಿಸುವ ನೊಣವು ಉತ್ತಮವೆ? ಕಸ್ತೂರಿಯನ್ನೀವ ಮೃಗನಾಭಿಯನ್ನು ಶ್ರೇಷ್ಠವೆಂದು ತಿಳಿಯುವೆಯಾ? ಉತ್ತಮ ಗುಣಗಳಿವೆಯೆಂದು ಕ್ಷೀರಾದಿಗಳನ್ನು ದೇವರಿಗೆ ಅರ್ಪಿಸುವುದಿಲ್ಲವೆ? ಗುಣವಿರುವಾಗ ಕುಂದನ್ನು ಲೆಕ್ಕಿಸಬಾರದು! ನಮ್ಮಲ್ಲಿ ರೂಪ ಯೌವನಗಳಿರುವಾಗ ಕುಲದ ಮಾತೇಕೆ!

ಹರಿಶ್ಚಂದ್ರ :- ಹೌದು ಹೌದು! ಬಚ್ಚಲ ನೀರು ತಿಳಿಯಾದರೆ ಸ್ನಾನಕ್ಕೆ ಯೋಗ್ಯವೆ?

ನಾಯಿಯ ಹಾಲು ಕುಡಿಯಲು ಯೋಗ್ಯವೆ? ಮಸಣದಲ್ಲಿ ಬೆಳೆದ ಹೂ ಮುಡಿಯಲು ಯೋಗ್ಯವೆ? ಹೊಲತಿಯರಾದ ನಿಮ್ಮಲ್ಲಿ ಯೌವನದ ಸೊಕ್ಕೂ, ರೂಪಿನ ಗಾಡಿ, ಜಾಣತನಗಳಿದ್ದರೆ ಸ್ಪೃಶ್ಯರಾಗುವಿರಾ? ಶಿವ ಶಿವ! ಎಂತಹ ಹೊಲಸು ಮಾತಿದು!

ಗಾಯಕಿಯರು :- ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ! ಮಾತಾಡಿ ಹೊಗಳಿದ ಬಾಯಿಗೆ ಹೊಲೆಯಿಲ್ಲ! ರೂಪನ್ನು ನೆರೆನೋಡಿದ ಕಣ್ಣಿಗೆ ಹೊಲೆಯಿಲ್ಲ! ಮೈಮುಡಿಗಳಿಂದ ಸುಳಿವ ತಂಗಾಳಿಯ ಸುಗಂಧವನ್ನು ಮೂಸಿದ ಮೂಗಿಗೆ ಹೊಲೆಯಿಲ್ಲ! ಸೋಂಕುವ ಚರ್ಮಕ್ಕೆ ಹೊಲೆಯಾಯಿತೆ? ಪಂಚೇಂದ್ರಿಯಗಳಲ್ಲಿ ನಾಲ್ಕು ಅಧಮವಾಗಿ ಒಂದು ಅಧಿಕವಾಯಿತೆ?

ಹರಿಶ್ಚಂದ್ರ :- ಯಾವುದಕ್ಕೆ ಯಾವುದು ಹೋಲಿಕೆ? ನಯನಾದಿ ಇಂದ್ರಿಯಗಳು ದೂರದಲ್ಲಿರುತ್ತವೆಯೇ ಹೊರತು ಮುಟ್ಟುತ್ತವೆಯೇ? ಎಂತಹ ಭಂಡತನದ ಮಾತಿದು! ಕೆಂಡವನ್ನು ಮುಟ್ಟಿದರೆ ಸುಡುವುದೇ ಹೊರತು, ನೋಡಿದರೆ- ಮೂಸಿದರೆ ಸುಡುತ್ತದೆಯೆ? ನೀವು ಕಾಡಿಸಬೇಡಿರಿ. ತೊಲಗಿರಿ ಇಲ್ಲಿಂದ! ಉತ್ತಮರು ಕೀಳು ಹೆಂಗಸರನ್ನು ನೋಡಬಾರದು, ನೋಡಿದರೂ ನುಡಿಸಬಾರದು, ನುಡಿಸಿದರೂ ಮನ್ನಿಸಬಾರದು. ಮನ್ನಿಸಿದರೂ ಕರೆದು ಏನನ್ನೂ ಕೊಡಬಾರದು ಹೀಗಿದ್ದರೂ ನಿಮ್ಮನ್ನು ಮನ್ನಿಸಿ ಪಾರಿತೋಷಿಕವನ್ನಿತ್ತರೆ, ಸಲ್ಲದ ಮಾತನ್ನಾಡುವಿರಾ?

ಗಾಯಕಿಯರು :- ಮಹಾರಾಜ, ಶಾಪವಶದಿಂದ ನಾವು ದುಷ್ಕುಲದಲ್ಲಿ ಜನಿಸಿದೆವು. ಸತ್ಕುಲಪ್ರಸೂತನಾದ ನಿನ್ನ ಕೈಹಿಡಿದು ಪರಿಶುದ್ಧರಾಗೋಣವೆಂದು ಬಂದೆವು!

ಹರಿಶ್ಚಂದ್ರ :- ನಿಮಗೋಸ್ಕರ ನನ್ನ ಕುಲವನ್ನು ಕೆಡಿಸಿಕೊಳ್ಳಲೆ?

ಗಾಯಕಿಯರು :- ಅರಸ, ನಿನ್ನ ಕುಲವೇಕೆ ಕೆಡುವುದು? ಪಾಪಿಗಳ ಪಾಪವನ್ನು ತೊಳೆಯುವ ಗಂಗಾನದಿಗೆ ಪಾಪದ ಲೇಪ ಉಂಟೆ?

ಹರಿಶ್ಚಂದ್ರ :- ಕುಲಧರ್ಮವು ಈ ಪರಿಯದಲ್ಲ. ಒಂದು ಕೊಡ ಹಾಲನ್ನು ಕೆಡಿಸಲು ಹುಳಿ ಎಷ್ಟು ಬೇಕು?

ಗಾಯಕಿಯರು :- ಮಹಾರಾಜ, ಮಾತಿಗೊಂದು ಮಾತನ್ನಾಡುವುದು

ಯುಕ್ತವಲ್ಲ. ನಿನ್ನ ಖ್ಯಾತಿ, ಪರಾಕ್ರಮ, ರೂಪ, ಯೌವನ, ಸದ್ಗುಣಾದಿಗಳನ್ನು ಕೇಳಿ ಮರುಳಾಗಿ ಮತಿಗೆಟ್ಟು ನಿನ್ನ ಬಳಿಗೆ ಬಂದಿದ್ದೇವೆ, ಒಲಿದು ಬಂದವರನ್ನು ಉಪರಿಸುವುದು ನಿನ್ನ ಧರ್ಮವಲ್ಲವೆ? ನೀನು ನಮಗೆ ಗಂಡನಾಗಲೇಬೇಕು! ನಾವಂತೂ ಬೆನ್ನು ಬಿಡದೆ ನಿನ್ನನ್ನು ಹಿಂಬಾಲಿಸುತ್ತೇವೆ!

ಹರಿಶ್ಚಂದ್ರ :- ಬಂದು ಮಾಡುವುದೇನು? ನನ್ನ ಸೇವಕವರ್ಗದಲ್ಲಿ ಎಷ್ಟು ಮಂದಿ ಹೊಲೆಯರಿಲ್ಲ!

ಗಾಯಕಿಯರು :- ಇರಬಹುದು! ನಾವು ನಿನ್ನನ್ನು ಮೆಚ್ಚಿಸಿ ಮರುಳುಗೊಳಿಸಲು ಯತ್ನಿಸುತ್ತೇವೆ. ನೀನು ಒಪ್ಪದಿದ್ದಲ್ಲಿ, ದೇಶದ ಮೂಲೆಮೂಲೆಯಲ್ಲಿಯೂ ನಿನ್ನನ್ನು ದೂರುತ್ತ ಸಾರುತ್ತ ತಿರುಗುತ್ತೇವೆ.

ಹರಿಶ್ಚಂದ್ರನು ಸಿಟ್ಟಿನಿಂದ ಚಾವಟಿಯನ್ನು ಸೆಳೆದುಕೊಂಡು ಮೇಲೆದ್ದನು! ಮಂತ್ರಿಯು ಮತ್ತೊಂದು ಚಾವಟಿಯನ್ನು ಕೈಗೆತ್ತಿಕೊಂಡನು. ಇಬ್ಬರೂ ಸೇರಿ ಆ ಹೆಂಗಸರನ್ನು ಚಾವಟಿಯಿಂದ ಬಾರಿಸಿ ಚೆನ್ನಾಗಿ ಥಳಿಸಿದರು. ಮಾಯಾಂಗನೆಯರು ಒರಲುತ್ತ ಕಿರಲುತ್ತ ನರಳುತ್ತ ವಿಶ್ವಾಮಿತ್ರರಿದ್ದೆಡೆಗೆ ಓಡಿ ಹೋದರು. ಅವರ ಮುಡಿ ಹರಡಿತ್ತು. ಕಂಬನಿ ಸುರಿದಿತ್ತು. ಉಡುಗೆ ಸಡಿಲಿತ್ತು. ನೆತ್ತರು ಹರಿದಿತ್ತು. ಎದೆ ನಡುಗಿತ್ತು. ಮರಳಿ ಹಿಂದಿರುಗಿ ನೋಡುತ್ತ ಓಡುತ್ತ ಬಂದ ಹೆದರುಗಣ್ಣಿನ ಆ ಹೆಂಗಸರು ಪರ್ಣಶಾಲೆಯ ಸಮೀಪಕ್ಕೆ ಬಂದು "ವಿಶ್ವಾಮಿತ್ರ ಮುನೀಂದ್ರ, ನಿನ್ನ ಮೊರೆ ಹೊಕ್ಕೆವು" ಎಂದು ಕೂಗಿದರು. ಅವರ ದನಿಯನ್ನಾಲಿಸಿ ಕೌಶಿಕ ಮುನಿಗಳು ಹೊರಗೆ ಬಂದರು. ಆ ಸ್ತ್ರೀಯರು "ಮುನಿಗಳೆ, ನಿಮ ಆಜ್ಞೆಯಂತೆ ಹರಿಶ್ಚಂದ್ರನ ಬಳಿಗೆ ಹೋದೆವು. 'ನೀವು ಯಾರು?' ಎಂದು ಅವನು ಕೇಳಲಾಗಿ, 'ನಾವು ಎರಡನೆಯ ಪರಮೇಶ್ವರನಂತಿರುವ ವಿಶ್ವಾಮಿತ್ರ ಮುನಿಗಳ ಮನೆಯವರು!' ಎಂದು ಹೇಳಿದೆವು. ಆಗ ರಾಜನು ತನ್ನ ಕೈಯಿಂದಲೇ ನಮ್ಮನ್ನು ಸದೆಬಡಿದನು. ನಾವು ಯಾವ ಅಪರಾಧವನ್ನೂ ಮಾಡಲಿಲ್ಲ. ನಮ್ಮನ್ನು ಕಳಿಸಿ ಹೀಗೆ ಹೊಡೆಸಿಬಿಟ್ಟರಲ್ಲ!" ಎಂದು ಹಲುಬಿದರು. ವಿಶ್ವಾಮಿತ್ರರು "ಅಳಬೇಡಿರಿ. ನನ್ನ ಮನೋರಥವು ಸಿದ್ಧಿಸಿತು!" ಎಂದರು.

ಸರ್ವಸ್ವದಾನ

ವಿಶ್ವಾಮಿತ್ರರು ಕ್ರುದ್ಧರಾದರು. ಬಡಬಾಗ್ನಿ ಜಡೆಯನ್ನು ಧರಿಸಿತೋ, ಸಿಡಿಲು ಭಸ್ಮವನ್ನು ಹಚ್ಚಿಕೊಂಡಿತೋ, ಕಾಳಗಿಚ್ಚು ಕೃಷ್ಣಾಜಿನವನ್ನು ಉಟ್ಟಿತೋ, ಪ್ರಳಯಾಗ್ನಿ ತಪಸ್ಸಿಗೆ ಎಳಸಿತೋ, ಹರನ ಕೋಪವು ಮುನಿಯ ರೂಪವನ್ನು ತಾಳಿತೋ ಎಂಬಂತೆ ಕಾಣಿಸಿದರು. ಅವರ ಕಣ್ಣು ಕಿಡಿಗೆದರಿತು. ಮೀಸೆಗೂದಲು ಹೊತ್ತಿ ಹೊಗೆಯಿತು. ಬಿರುನುಡಿಗಳು ಉರಿಯುಗಳಿದವು. ಅವರು ನೇರವಾಗಿ ಹರಿಶ್ಚಂದ್ರನಿದ್ದೆಡೆಗೆ ಬಂದರು. ಹರಿಶ್ಚಂದ್ರನು ಚಂದ್ರಮತಿಗೆ ಆ ಮುನಿಗಳನ್ನು ತೋರಿಸಿ "ಪ್ರಿಯೆ, ಅಲ್ಲಿ ನೋಡು, ಗುರ್ವಾಜ್ಞೆಯನ್ನು ಮರೆತು ಮೀರಿದ ಫಲವೂ ನನ್ನ ದುಃಸ್ವಪ್ನದ ಅರ್ಥವೂ ಮೂರ್ತಿಗೊಂಡು ಬರುತ್ತಿದೆ! ಮುಂದಾಗುವುದನ್ನು ಪರಮೇಶ್ವರನೇ ಬಲ್ಲ!" ಎಂದು ಹೇಳಿ, ಮುನಿಗಳನ್ನು ಎದುರುಗೊಂಡು ಅನರ್ಘ್ಯರತ್ನಗಳನ್ನು ಕಾಣಿಕೆಯಾಗಿ ಅರ್ಪಿಸಿ, ಅವರ ಪಾದಗಳಿಗೆ ವಂದಿಸಿದನು. ವಂದಿಸಿದ ರಾಜನನ್ನು ವಿಶ್ವಾಮಿತ್ರರು ಒದೆದು ಆರ್ಭಟಿಸಿ ಹಂಗಿಸಿದರು. ಹರಿಶ್ಚಂದ್ರನು ವಿನಯದಿಂದ ಹೀಗೆಂದನು :

ಹರಿಶ್ಚಂದ್ರ :- ಮಹರ್ಷಿಗಳೆ, ನಾನು ಮಾಡಿದ ದೇವತಾರ್ಚನೆ ಮತ್ತು ಮಹಾತ್ಮರ ಪಾದಸೇವೆ - ಇವುಗಳ ಫಲವಾಗಿ ಇಂದು ತಮ್ಮ ಪಾದಕಮಲಗಳ ದರ್ಶನವಾಯಿತು. ಇದು ನನ್ನ ಸುಕೃತದ ಸೂಚನೆ. ನಾನು ಧನ್ಯನಾದೆ. ಆನಂದದಿಂದ ನಾನು ವಂದಿಸಿದರೆ ನನ್ನನ್ನು ಒದೆದಿರಿ. ನಿಮ್ಮ ಮೃದು ಪಾದಗಳು ನೊಂದವು. ಸ್ಪರ್ಶಮಣಿಯ ಪ್ರತಿಮೆಯು ಒದ್ದರೂ ಕಬ್ಬಿಣವು ಚಿನ್ನವಾಗುತ್ತದೆ!

ವಿಶ್ವಾಮಿತ್ರ :- ನಿನ್ನ ದೆಸೆಯಿಂದ ನನ್ನ ಕಾಲು ಮಾತ್ರವೇ ನೊಂದಿತೆಂದು ತಿಳಿದೆಯೇನು? ನನ್ನ ಮನಸ್ಸು ಬುದ್ಧಿ ಚಿತ್ತಾದಿ ಇಂದ್ರಿಯಗಳೆಲ್ಲವೂ ನೊಂದು ಹೋದವು! ಬೆಂದು ಹೋದವು! ಯಾವ ಯಾವ ದುರುಳತನ ಉಂಟೋ ಅದೆಲ್ಲವನ್ನೂ ಮಾಡಿ ಮುಗಿಸಿ, ಮತ್ತೊಂದು ದುರುಳತನದ ಈ ವಂಚನೆಯ ಮಾತನ್ನಾಡುತ್ತಿರುವೆಯಾ?

ಹರಿಶ್ಚಂದ್ರ :- ಸ್ವಾಮಿ, ನಾನು ಮಾಡಿದ ದುರುಳತನ ಯಾವುದು?

ವಿಶ್ವಾಮಿತ್ರ :- ನಮ್ಮ ಆಶ್ರಮದಲ್ಲಿ ವಾಯುದೇವನು ಬಿರುಗಾಳಿಯನ್ನು ಬೀಸಲಂಜುವನು. ದೇವೇಂದ್ರನು ಆಲಿಗಲ್ಲಿನ ಮಳೆಯನ್ನು ಸುರಿಸಲಂಜುವನು. ಸೂರ್ಯನು ಉರಿಬಿಸಿಲನ್ನು ಸೂಸಲಂಜುವನು. ದಾವಾಗ್ನಿಯು ಇದರ ಗಡಿಯನ್ನು ದಾಟಿ ಒಳಗೆ ಬರಲಾರದು. ಯಮನ ದೂತರು ಗೀತರು ಇದರೊಳಗೆ ಅಡಿಯಿಡಲಾರರು. ಇದೆಲ್ಲವನ್ನೂ ತಿಳಿದಿದ್ದರೂ ನೀನು ನನಗೆ ಅವಮಾನ ಮಾಡುವುದಕ್ಕಾಗಿ ತಪೋವನದೊಳಗೆ ನುಗ್ಗಿ ಬಂದು ಬೀಡು ಬಿಟ್ಟೆಯಲ್ಲವೆ?

ಹರಿಶ್ಚಂದ್ರ :- ಗುರುವನ್ನು ಕಂಡು ವಂದಿಸುವುದಕ್ಕಾಗಿ ಶಿಷ್ಯನು ಗುರು ಮಂದಿರಕ್ಕೆ ಬರುತ್ತಾನೆ. ಇದು ಪುಣ್ಯಾಪೇಕ್ಷೆಯಿಂದ. ಹೀಗಿರಲು ನುಗ್ಗಿ ಬರುವ ಸಾಹಸವೆಂದರೇನು?

ವಿಶ್ವಾಮಿತ್ರ :- ನುಡಿಯಲ್ಲಿ ವಿನಯ, ನಡೆಯಲ್ಲಿ ಸರ್ವಸ್ವಾಪಹರಣ! ಗುರುವಿನ ಪ್ರಾಣಕ್ಕೇ ಸಂಚಕಾರ! ಈ ಶೌರ್ಯದಿಂದ ಯಾವ ಪುಣ್ಯವನ್ನು ಪಡೆಯುತ್ತೀಯೆ? ಇದು ಎಂತಹ ಶಿಷ್ಯತನ? ಅರಸರಿಗೆ ಉಪದೇಶವನ್ನು ಮಾಡಿ ಐಶ್ವರ್ಯವನ್ನು ತಂದು ಈ ಆಶ್ರಮದಲ್ಲಿ ನಾನು ತುಂಬಿಲ್ಲ! ವೈರವನ್ನು ಬಿಟ್ಟು ಹರ್ಷದಿಂದ ತಿರುಗಾಡುವ ಈ ಮೃಗಸಂಕುಲ, ಸರ್ವಋತುಗಳಲ್ಲಿಯೂ ಹಣ್ಣುಗಳನ್ನು ಹೊತ್ತು ಬಾಗುವ ಈ ವೃಕ್ಷರಾಶಿ, ಎಂದಿಗೂ ಬತ್ತದ ಈ ಸರೋವರಗಳು- ಇವೇ ನನ್ನ ಸರ್ವಸ್ವ. ಇವನ್ನು ಇರಿದು ಮುರಿದು ಕುಡಿದು ಮೆರೆಯುವುದು ಸರ್ವಸ್ವಾಪಹರಣವಲ್ಲದೆ ಮತ್ತೇನು?

ಹರಿಶ್ಚಂದ್ರ :- ಮುನಿಗಳೆ, ಬರಿಯ ಮುನಿಸಿನಿಂದಲೇ ಮಾತನಾಡಿದರೆ ಹೇಗೆ? ನಾನು ಇರಿದ ಮೃಗ, ಮುರಿದ ಮರ, ಕುಡಿದು ಒಣಗಿಸಿದ ಕೊಳ ಯಾವುದು?

ಆಗ ವಿಶ್ವಾಮಿತ್ರರು ಘುಡಿಘುಡಿಸುತ್ತ ಹಿಂದೆ ಯಾವಾಗಲೋ ಮುರಿದು ಬಿದ್ದ

ಒಂದು ಮರವನ್ನು ನೀರಿಲ್ಲದ ಒಂದು ಕೊಳವನ್ನೂ ಹರಿಶ್ಚಂದ್ರನ ಬಾಣದಿಂದ ಗಾಯವೆಡೆದು ಬಂದ ಹಂದಿಯನ್ನೂ ತೋರಿಸಿ 'ಇದಕ್ಕೇನು ಹೇಳುವೆ?' ಎಂದು ಗರ್ಜಿಸುತ್ತ ಹೀಗೆಂದರು :

ವಿಶ್ವಾಮಿತ್ರ :- ಹಿಂದೆ ಸಂಪತ್ತಿನ ಸೊಕ್ಕಿನಿಂದ ಮೆರೆದ ಇಂದ್ರನ ಸಿರಿಯನ್ನು ನೀರಲ್ಲಿ ಅದ್ದಿದ ದುರ್ವಾಸಮುನಿಯಂತೆ ಮಾಡುವೆನು! ಅರಸ, ನನ್ನೊಡನೆ ಹಗೆತನವನ್ನು ಬೆಳೆಸಿದೆಯಾ? ಹರನ ಹಣೆಗಣ್ಣಿನ ಅಗ್ನಿಯೊಡನೆ ಹಗೆತನವನ್ನು ಬೆಳೆಸಿದೆಯೆಂದು ತಿಳಿ! ನಿನ್ನ ಬೀಡೆಲ್ಲವನ್ನೂ ಕೊಂದು ಕೂಗಿಡಿಸಿ ನೆರೆ ಸುಟ್ಟು ಬೊಟ್ಟಿಡುವೆನು! ನಾನು ಯಾರೆಂದು ತಿಳಿದೆ?

ಹರಿಶ್ಚಂದ್ರ :- ಮಹಾತ್ಮರೆ, ಸೃಷ್ಟಿಸ್ಥಿತಿಲಯಗಳನ್ನು ಮಾಡಬಲ್ಲ ಸಾಮರ್ಥ್ಯಶಾಲಿಗಳಾದ ನೀವೇ ನನ್ನ ಮೇಲೆ ತಪ್ಪನ್ನು ಹೊರಿಸಿ ಜರಿಯುವಾಗ, ನಾನು ತಪ್ಪಿಸಿಕೊಳ್ಳಲು ಶಕ್ಯವೆ? ನಿಮ್ಮ ಕರುಣೆಯ ತೊಟ್ಟಿಲಲ್ಲಿ ಆಡುವ ಹಸುಳೆ ನಾನು. ಸರ್ವಾಪರಾಧಿ ನಾನು. ಓ ತಂದೆ, ಕರುಣಿಸಬೇಕು. ದಯೆಯನ್ನು ತೊರೆದು ಉದ್ರೇಕಗೊಳ್ಳಬೇಡಿರಿ.

ಹೀಗೆ ಹೇಳಿ ಹರಿಶ್ಚಂದ್ರನು ಆ ಮುನಿಗಳ ಪಾದಗಳ ಮೇಲೆ ತಲೆಯಿಟ್ಟು ವಂದಿಸಿದನು. ಮತ್ತೆ ''ಮಹರ್ಷಿಗಳೇ, ಗುರುವಿಗೆ ಅಭಿವಾದನೆಮಾಡಿ ಹೋಗಲೆಳಸುವ ಈ ಶಿಷ್ಯನನ್ನು ಕ್ಷಮಿಸಿ ಕೃಪೆದೋರಬೇಕು. ಸರ್ವವನ್ನೂ ಬಲ್ಲ ನೀವು ಹೀಗೆ ವಿರಸವನ್ನು ತೋರಿದರೆ ಹೇಗೆ?'' ಎಂದನು.

ವಿಶ್ವಾಮಿತ್ರ :- ಈ ದೂರ್ತತೆಯು ದೂರವಿರಲಿ. ನನ್ನ ಮುದ್ದಿನ ಹೆಣ್ಣು ಮಕ್ಕಳನ್ನು ಹೊಡೆದದ್ದೇಕೆ? ಅವರು ಅಬಲೆಯರೆಂದು ಸಾಯುವಂತೆ ಸದೆಬಡಿದಿರುವೆ. ಎಲೈ ಘೋರಸರ್ಪದ ಬಾಯಲ್ಲಿ ಕೈ ನೀಡಿ ದಾಡೆಯನ್ನು ಮುರಿಯಲು ಯತ್ನಿಸಿದ್ದೀಯೆ!

ಹರಿಶ್ಚಂದ್ರ :- ನಾನು ಆ ಹೆಂಗಸರನ್ನು ಹೊಡೆದದ್ದು ಹೌದು. ಹೊಡೆಯಲಿಲ್ಲವೆಂದು ಹೇಳುವುದಿಲ್ಲ.

ವಿಶ್ವಾಮಿತ್ರ :- ಹಸನಾಯ್ತು! ಏನೋ ಅನ್ಯದೀಯರೆಂದು ತಿಳಿದು ಗೊತ್ತಿಲ್ಲದೆ ಹೊಡೆದೆನೆಂಬ ಉಪಚಾರದ ಮಾತೂ ಇಲ್ಲ! ಹೊಡೆದದ್ದಲ್ಲದೆ 'ಹೊಡೆದೆನು!' ಎಂದು

ನನಗೇ ಹೇಳುವೆಯಾ? ಮೂಗನ್ನು ಕೊಯ್ದು ಕನ್ನಡಿಯನ್ನು ತೋರಿಸುವೆಯಾ? ನಾನು ನಿನ್ನ ಹಂಗಿನಲ್ಲಿರುವ ಬಡವಸಿಷ್ಠನೆಂದು ತಿಳಿದೆಯಾ? ಎಲೈ ರಾಜ, ಹುಲಿಯ ಮೀಸೆಯನ್ನು ಹಿಡಿದು ಅಲುಗಿಸಿದ್ದೀಯೆ!

ಹರಿಶ್ಚಂದ್ರ :- ಋಷಿಗಳೆ, ನಿಮ್ಮ ಮನೆಯವರೆಂದು ಅವರು ಹೇಳಿದ್ದರಿಂದ ಕರುಣಿಸಿ ಅಷ್ಟಕ್ಕೇ ಬಿಟ್ಟೆನು. ಇಲ್ಲದಿದ್ದರೆ ಅವರ ಮೂಗನ್ನು ಕೊರೆದು ನೇಗಿಲನ್ನು ಕಟ್ಟಿ ನೆಲವನ್ನು ಉಳಿಸುತ್ತಿದ್ದೆ!

ವಿಶ್ವಾಮಿತ್ರ :- ಅವರು ಯಾವ ತಪ್ಪನ್ನು ಮಾಡಿದರಯ್ಯಾ?

ಹರಿಶ್ಚಂದ್ರ :- ಮಹರ್ಷಿಗಳೇ, ಏನು ಹೇಳಲಿ? ನನ್ನ ಶ್ವೇತಚ್ಛತ್ರವನ್ನು ಕೊಡಬೇಕೆಂದು ಹಠ ಹಿಡಿದರು. ಇಲ್ಲದಿದ್ದರೆ ಅವರಿಗೆ ಗಂಡನಾಗಬೇಕೆಂದು ಕೇಳಿದರು. ಅದಕ್ಕೊಪ್ಪದಿದ್ದರೆ ದೇಶದ ಮೂಲೆ ಮೂಲೆಗಳಲ್ಲಿ ನನ್ನನ್ನು ದೂರುತ್ತ ತಿರುಗುತ್ತೇವೆ ಎಂದರು.

ವಿಶ್ವಾಮಿತ್ರ :- ನೀನು ಮಹಾದಾನಿಯೆಂದೂ ರಸಿಕನೆಂದೂ ತಿಳಿದು ಒಂದು ವೇಳೆ ಕೇಳಿರಬಹುದು? ಅದು ದೊಡ್ಡ ಅಪರಾಧವಾಯಿತೆ?

ಹರಿಶ್ಚಂದ್ರ :- ರಾಜನು ತನ್ನ ಶ್ವೇತಚ್ಛತ್ರವನ್ನು ಪರರಿಗೆ ಕೊಡುವುದುಂಟೆ? ಹೊಲತಿಯರನ್ನು ಮದುವೆಯಾಗುವುದುಂಟೆ?

ವಿಶ್ವಾಮಿತ್ರ :- 'ಸಾಧ್ಯವಿಲ್ಲ' ಎಂದು ಹೇಳಬಹುದಾಗಿತ್ತು. ಅದಕ್ಕಾಗಿ ಈ ರೀತಿಯಲ್ಲಿ ಸದೆಬಡಿಯಬಹುದೆ?

ಹರಿಶ್ಚಂದ್ರ :- ದೇಶದಲ್ಲೆಲ್ಲಾ ನನ್ನನ್ನು ದೂರಿ ಕೆಟ್ಟ ಹೆಸರು ತರುತ್ತೇವೆಂದು ಸಾರಿದರು. ಅವರ ದುಷ್ಟತನಕ್ಕಾಗಿ ನಾನು ಕೋಪಗೊಂಡು ಹೊಡೆದದ್ದುಂಟು.

ವಿಶ್ವಾಮಿತ್ರ :-ಹೊಡೆಯಲಿಕ್ಕೇನು? ಹೊಡೆದ ಕೈಗಳನ್ನು ಕಡಿಯುವೆನು! ಎನ್ನ ಪರವಾಗಿ ಜನರು ತಿರುಗಿಬಿದ್ದರೆ ದೇಶವನ್ನೇ ಸುಡುವೆನು! ದೇಶವನ್ನುಳಿಸುವುದಕ್ಕಾಗಿ ಆ ಮುನಿಯು ಬಂದರೆ ಅವನ ದರ್ಪವನ್ನಡಗಿಸುವೆನು. ಅವನನ್ನುಳಿಸುವುದಕ್ಕಾಗಿ ದೇವತೆಗಳು ಬಂದರೆ ಅವರನ್ನು ವಿಧ್ವಂಸಗೊಳಿಸುವೆನು! ನನ್ನ ಸಾಮರ್ಥ್ಯವೇನೆಂಬುದು ನಿನಗೆ ತಿಳಿಯದೊ? ವಸಿಷ್ಠನು ನನ್ನನ್ನು ಕೆಣಕಿ ಅನುಭವಿಸಿದ ಬವಣೆಗಳನ್ನು ನಿನಗೆ ಹೇಳಿಲ್ಲವೊ?

ಹರಿಶ್ಚಂದ್ರ :- ಕ್ರೋಧ, ಉಗ್ರತೆ, ಅಸತ್ಯಗಳನ್ನು ತೊರೆದು ಶಾಂತಿ, ಸತ್ಯ, ಭೂತದಯೆಗಳನ್ನು ಗಳಿಸಿ ಬ್ರಹ್ಮರ್ಷಿಗಳೆನಿಸಿದವರು ನೀವು. ನೀವೇ ಉರಿದೆದ್ದು ಮುನಿಗಳನ್ನು ಕೊಂದು ಮೂರು ಲೋಕಗಳನ್ನೂ ಒರೆಸಿ ದೇವತೆಗಳನ್ನು ಹಿಂಡಿ ಹಿಸುಕುವುದಾದರೆ, ಈ ಲೋಕದ ಅರಸನಾಗಿ 'ದುರುಳಕ್ಷತ್ರಿಯ' ನೆನಿಸಿದ ನಾನು ಹಾಗೆ ಮಾಡಲಾದೀತೆ?

ವಿಶ್ವಾಮಿತ್ರ :- ಕುಚೋದ್ಯವಾಡುವೆಯಾ? ನನ್ನೊಡನೆ ಲೇವಡಿ ಮಾಡಿದ ಮೇಲೆ, ಇನ್ನು ನೀನು ಅರಸುತನವನ್ನು ಹೇಗೆ ನಡೆಸುವೆಯೆಂಬುದನ್ನು ನೋಡಿ ಬಿಡುವೆನು! ನೀನು ಹೋದಲ್ಲಿ ಹೋಗಿ ಹೊಕ್ಕಲ್ಲಿ ಹೊಕ್ಕು ಕಾಡಿಸುವೆನು. ಬದುಕಿದ್ದರೆ ಅರಿಯಬಹುದು!

ಹೀಗೆ ನುಡಿದು ಕೌಶಿಕಮುನಿಗಳು ರೋಷಾವಿಷ್ಟರಾದರು. ಲೋಕದಲ್ಲಿ ಖಳಪುರುಷನ ಉಗ್ರತೆ ಕ್ರೂರವಾದುದು. ಅದಕ್ಕಿಂತ ಕಾಡುಗಿಚ್ಚಿನ ಉಗ್ರತೆ ಅಧಿಕ. ಕಾಡುಗಿಚ್ಚಿಗಿಂತ ಸಿಡಿಲು ಉಗ್ರ. ಸಿಡಲಿಗಿಂತ ಬಡಬಾನಲ ಅದಕ್ಕಿಂತ ಪ್ರಳಯಕಾಲಾಗ್ನಿ ಅದಕ್ಕಿಂತಲೂ ರುದ್ರನ ಹಣೆಗಣ್ಣು ಉಗ್ರತಮ. ರುದ್ರನ ಹಣೆಗಣ್ಣಿಗಿಂತಲೂ ಕೌಶಿಕಮುನಿಗಳ ರೋಷವು ಉಗ್ರವಾಯಿತು!

ಅವರ ರೋಷದುಬ್ಬರದ ಬಿರುಬನ್ನರಿದು ಹರಿಶ್ಚಂದ್ರನು "ಈ ಕೋಪವು ತೀವ್ರವಾಯಿತು. ಇದು ಕಿರಿದಿನಿಂದ ತಗ್ಗುವುದಿಲ್ಲ, ಗರ್ವಿಸುವುದು ಉಚಿತವಲ್ಲ" ಎಂದು ಆಲೋಚಿಸಿ, "ಮಹಾತ್ಮರೆ, ಅರಿಯದೆ ತಪ್ಪು ಮಾಡಿದೆನು. ಕ್ಷಮಿಸಬೇಕು, ತಂದೆ" ಎಂದು ನುಡಿದು ಪತ್ನೀಪುತ್ರರೊಡನೆ ನೆಲದ ಮೇಲೆ ದೀರ್ಘದಂಡವಾಗಿ ನಮಸ್ಕರಿಸಿದನು.

ವಿಶ್ವಾಮಿತ್ರ :- ಕೊಂಚವೂ ಸಂಕೋಚವಿಲ್ಲದೆ ನನ್ನ ಆಶ್ರಮದೊಳಗೆ ನುಗ್ಗಿ ಬಂದು ಬೀಡುಬಿಟ್ಟು, ಸಾವಿರ ತಪ್ಪುಗಳನ್ನು ಮಾಡಿ, ನನ್ನ ಮಕ್ಕಳನ್ನು ಸಾಯುವಂತೆ ಸದೆಬಡಿದು, ಮತ್ತೆ ನನ್ನನ್ನು ಲೇವಡಿ ಮಾತುಗಳಿಂದ ಹಂಗಿಸಿ, ಈಗ "ಕ್ಷಮಿಸಬೇಕು, ತಂದೆ!" ಎಂದರೆ ಬಿಡುವೆನೆ? ಮಗನೆ! ನಿನ್ನ ಕೋಡನ್ನು ಕೊರೆಯದೆ ಬಿಡುವೆನೆ?

ಹರಿಶ್ಚಂದ್ರ :- ಮಹರ್ಷಿಗಳೆ, ಲೋಕದಲ್ಲಿ ಕ್ರೂರರು ಅಧಮರು ದುರ್ಜನರು ಧೂರ್ತರೂ ಸಹ 'ಶರಣು' ಎಂದರೆ, ವೈರವನ್ನು ತೊರೆಯುತ್ತಾರೆ. ಹೀಗಿರುವಾಗ

ಸರ್ವಸಂಗ ನಿವೃತ್ತರಾಗಿ ಮಹಾತ್ಮರೆನಿಸಿದ ನೀವು, ಓರಂತೆ ಬೇಡಿಕೊಳ್ಳುತ್ತಿರುವ ನನ್ನಲ್ಲಿ ಕಾರುಣ್ಯವನ್ನು ತೋರಿಸಬಾರದೆ?

ವಿಶ್ವಾಮಿತ್ರ :- ನನ್ನ ಕುಮಾರಿಯರನ್ನು ಮದುವೆಯಾಗು, ಆಗ್ರಹವೆಲ್ಲವನ್ನೂ ಬಿಡುವೆನು.

ಹರಿಶ್ಚಂದ್ರ :- ಮುನಿವರೇಣ್ಯರೆ, ಅರಸರು ಮದದಿಂದ ಮುಂಗಾಣದೆ ಉರವಣಿಸಿ ಅಕೃತ್ಯವನ್ನು ನಡೆಸಿದಾಗ ಅವರನ್ನು ದಂಡಿಸತಕ್ಕವರು ನೀವು. ನೀವೇ ಪ್ರತ್ಯಕ್ಷವಾಗಿ ಬಂದು ಚಂಡಾಲಸ್ತ್ರೀಯರನ್ನು ಮದುವೆಯಾಗೆಂದು ಹೇಳಬಹುದೆ? ಶಿವ ಶಿವ!

ವಿಶ್ವಾಮಿತ್ರ :- ಅರಸ, 'ನೀವೇ ಗುರು, ನೀವೇ ಶಿವ, ನೀವು ಇರಿಸಿದಲ್ಲಿ ಇರುವೆನು, ಹೇಳಿದಂತೆ ನಡೆಯುವೆನು' ಎಂದು ವಿನಯದ ದೊಡ್ಡ ಮಾತನ್ನಾಡುತ್ತೀಯೆ. ಒಡನೆಯೇ ನನ್ನ ಆಜ್ಞೆಯನ್ನು ಮುರಿಯುತ್ತೀಯೆ! ಇದೆಂತಹ ಸೌಜನ್ಯ?

ಹರಿಶ್ಚಂದ್ರ :- ಹೊಲತಿಯರನ್ನು ಮದುವೆಯಾಗೆಂದು ಅಧರ್ಮದ ಆಜ್ಞೆಯನ್ನು ನೀವೀಯಬಹುದೆ? ಅದರಂತೆ ನಾನು ನಡೆಯಬಹುದೆ?

ವಿಶ್ವಾಮಿತ್ರ :- ಗುರುವಾದವನು ವಿವಿಧ ಆಜ್ಞೆಗಳನ್ನು ಮಾಡುತ್ತಾನೆ. ಅವುಗಳಲ್ಲಿ 'ಬೇಕಾದ್ದನ್ನು ಮಾಡುವೆನು, ಬೇಡದ್ದನ್ನು ಬಿಡುವೆನು!' ಎಂದರೆ ಇದು ಯಾವ ಗುರುಭಕ್ತಿ?

ಹರಿಶ್ಚಂದ್ರ :- ನನ್ನ ಮನಸ್ಸಿನ ಹವಣೇನೆಂಬುದನ್ನು ಪರೀಕ್ಷಿಸುವುದಕ್ಕಾಗಿ ನೀವು ಹೀಗೆ ಆಜ್ಞೆ ಮಾಡಿದಿರಲ್ಲದೆ, ಹೃತ್ಪೂರ್ವಕವಾಗಿ ಈ ಮಾತನ್ನು ನುಡಿಯಲಿಲ್ಲ.

ವಿಶ್ವಾಮಿತ್ರ :- ಹಾಗಲ್ಲ; ನಿನ್ನ ಮನಸ್ಸಿನ ಹವಣನ್ನರಿಯುವುದಕ್ಕಾಗಿ ಹೇಳಲಿಲ್ಲ. ಹೃತ್ಪೂರ್ವಕವಾಗಿಯೇ ಹೇಳಿದ್ದೇನೆ. ಈ ವಿಷಯದಲ್ಲಿ ಯಾವ ಶಂಕೆಯೂ ಬೇಡ. ಅವರನ್ನು ಮದುವೆಯಾಗು.

ಆಗ ಹರಿಶ್ಚಂದ್ರನು ''ಶ್ರೇಷ್ಠವಾದ ರವಿಕುಲದಲ್ಲಿ ಜನಿಸಿ ಚಂಡಾಲ ಸ್ತ್ರೀಯರಿಗೋಸ್ಕರ ಘೋರ ನರಕಕ್ಕೆ ಹೋಗಲು ನಾನು ಸಿದ್ಧನಿಲ್ಲ. ಇಂತಹ ಆಜ್ಞೆಯನ್ನೀಯಬೇಡಿರಿ'' ಎಂದು ಹೇಳಿ ಕೈಮುಗಿದನು.

ವಿಶ್ವಾಮಿತ್ರ :- ಹರಿಶ್ಚಂದ್ರ, ಅರಸರು ವೇದಮಾರ್ಗದಲ್ಲಿ ನಡೆದು ಹುಸಿಯನ್ನು ಬಿಟ್ಟು ಮದವನ್ನು ತ್ಯಜಿಸಿ ಲೋಭವನ್ನು ತೊರೆದರೂ ಸಹ, ತುದಿಗೆ ನರಕವು ತಪ್ಪದು! ಇದು ನಿಶ್ಚಯ. ಹೀಗಿರುವಾಗ ಇಂದುವದನೆಯರ ಸಂಗದಿಂದೊದಗುವ ಸೌಖ್ಯವನ್ನು ಅನುಭವಿಸು. ನರಕಕ್ಕೆ ಹಲವಾರು ಕಾರಣಗಳು ಕೂಡಿರುವಾಗ ಇದೊಂದು ಅಧಿಕವೆ? ತುಂಬಿದ ಬಂಡಿಗೆ ಒಂದು ಮೊರ ಭಾರವಾಗುವುದೆ?

ಹರಿಶ್ಚಂದ್ರ :- ಧರೆಯನ್ನಾಳುವ ಅರಸರೆಲ್ಲರಿಗೂ ನರಕವೇ ಗತಿಯೆಂದು ನಿಶ್ಚಯವಾದರೆ, ನಾನೊಬ್ಬನು ಒಲ್ಲೆನೆನ್ನಲಾದೀತೆ? ಆದರೆ ಬುದ್ಧಿಪೂರ್ವಕವಾಗಿ ದುಷ್ಟತನದಿಂದ ನಡೆದು ಅಸತ್ಯವನ್ನು ನುಡಿದು ಹೊಲತಿಯರ ಸಂಗವನ್ನು ಮಾಡಿ, ಘೋರ ನರಕದಲ್ಲಿ ಹೊರಳಲು ನಾನು ಸಿದ್ಧನಿಲ್ಲ! ಮುನಿಗಳಾದ ನಿಮ್ಮಂಥವರು ನಮಗೆ "ಶಿವನನ್ನು ಪೂಜಿಸು, ಧಾನಧರ್ಮಗಳನ್ನು ಮಾಡು, ಭೂಸುರರನ್ನು ಗೌರವಿಸು, ರಾಜ್ಯವನ್ನು ಚೆನ್ನಾಗಿ ಪಾಲಿಸು, ಯಜ್ಞಗಳನ್ನು ನಡೆಸು, ಅಗ್ರಹಾರಗಳನ್ನು ಬಿಡು, ಮಹರ್ಷಿಗಳನ್ನು ಸೇವಿಸು, ಅನಾಥರನ್ನು ಸಲಹು, ದುಷ್ಟರನ್ನು ದೂರ ಮಾಡು, ಸತ್ಯವನ್ನು ಬಿಡಬೇಡ, ಉತ್ತಮ ಕುಲಾಚಾರಗಳನ್ನು ಪರಿಪಾಲಿಸು" ಎಂದು ಬುದ್ಧಿವಾದವನ್ನು ಹೇಳದೆ, 'ಹೊಲತಿಯರನ್ನು ಕೂಡು!' ಎನ್ನುವರೆ?

ವಿಶ್ವಾಮಿತ್ರ :- ಆ ಕನ್ನಿಕೆಯರನ್ನು ಹೊಲತಿಯರೆನ್ನುವ ನೆವವೇಕೆ? ಅವರನ್ನು ಹಡೆದ ನಾನೇ ಹೊಲೆಯನೆಂದು ನಿನ್ನ ಅಭಿಪ್ರಾಯ!

ಹರಿಶ್ಚಂದ್ರ :- ಮುನೀಶ್ವರರೇ, ಒಬ್ಬ ಬೂದಿಬಡಕನನ್ನು ಬೈದರೆ ಪರಮೇಶ್ವರನನ್ನು ನಿಂದಿಸಿದಂತಾಯಿತೆ? ಹೊಲೆಗೇರಿಯ ಜಲದ ನಡುವೆ ಬಿಂಬಿಸುವ ರವಿಯನ್ನು ಹೊಲೆಯನೆನ್ನಬಹುದೆ? ಬ್ರಹ್ಮನೊಡನೆ ಸ್ಪರ್ಧಿಸಿ ಸಕಲ ಜೀವರಾಶಿಯನ್ನೇ ಸೃಜಿಸಬಲ್ಲ ನೀವು, ಆ ಹೆಂಗಸರ ತಂದೆಯೆಂದು ಬಗೆದು ಸಾಮಾನ್ಯ ಮನುಷ್ಯರನ್ನು ಕಂಡಂತೆ ಕಾಣಲಾದೀತೆ? ಹವಣರಿಯದೆ ಈ ಮಾತನ್ನಾಡಿಬಿಟ್ಟಿರಿ.

ವಿಶ್ವಾಮಿತ್ರ :- ಹರಿಶ್ಚಂದ್ರ, 'ಸಮಸ್ತ ಭೂಮಂಡಲದಲ್ಲಿ ವಿಖ್ಯಾತ ಕೀರ್ತಿಯೂ, ಜಗಚ್ಚಕ್ಷುವೆನಿಸಿದ ಸೂರ್ಯನ ವಂಶದಲ್ಲಿ ಅತಿಶ್ರೇಷ್ಠನೂ ನಿಖಿಲರಾಜಾಧಿರಾಜನೂ ಆದ ಹರಿಶ್ಚಂದ್ರ ಚಕ್ರವರ್ತಿಯು ವಿಶ್ವಾಮಿತ್ರ ಮುನಿಯ ಮಕ್ಕಳನ್ನು ಮದುವೆಯಾದನು' ಎಂದರೆ, ನನಗೆ ಲೋಕದಲ್ಲಿ ಒಂದು ಗೌರವ ಬರುತ್ತದೆ, ತೇಜಸ್ಸು ಬರುತ್ತದೆ! ಅದನ್ನು ಒದಗಿಸಿಕೊಡು, ಕೈಮುಗಿದು ಬೇಡುವೆನು.

'ಹರಹರ ಸದಾಶಿವ ಮಹಾದೇವ!' ಎನ್ನುತ್ತ ಹರಿಶ್ಚಂದ್ರನು ತನ್ನ ಎರಡು ಕಿವಿಗಳನ್ನೂ ಮುಚ್ಚಿಕೊಂಡು "ಸಕಲ ಮುನೀಶ್ವರರಿಂದ ಕೈಮುಗಿಸಿಕೊಳ್ಳುವ ಕೀರ್ತಿಶಾಲಿಗಳಾದ ನೀವು, ನನಗೆ ಕೈಮುಗಿದು ನನ್ನನ್ನು ನರಕಕ್ಕೆ ಕಳುಹಿಸಲು ಎಳಸುವಿರಾ? ಮಹರ್ಷಿಗಳೇ, ಇದೇನು?" ಎಂದನು. ವಿಶ್ವಾಮಿತ್ರರು "ನಿನಗೆ ಕೈ ಮುಗಿದು ನನ್ನ ಹಿರಿಯತನಕ್ಕೆ ಕುಂದು ಬಂದರೆ ಬರಲಿ, ಈ ಒಂದು ತೇಜಸ್ಸನ್ನು ನನಗೆ ಒದಗಿಸು" ಎಂದು ಹೇಳಿದರು.

ಹರಿಶ್ಚಂದ್ರ :- ಈ ಪ್ರಕಾರದಲ್ಲಿ ನೀವು ಎಡೆಬಿಡದೆ ಕಾಡುವುದಾದರೆ, ನನ್ನ ಸರ್ವ ರಾಜ್ಯವನ್ನಾದರೂ ಕೊಡುವೆನೇ ಹೊರತು, ಈ ಬೇಡಿಕೆಯನ್ನು ನಡೆಸುವುದಿಲ್ಲ

ವಿಶ್ವಾಮಿತ್ರ :- ತಥಾಸ್ತು! ಸಕಲರೂ ಕೇಳಿರಿ. ಹರಿಶ್ಚಂದ್ರನು ದಾನಿಗಳ ಅರಸು! ಸತ್ಯಾವತಂಸ! ಹರಿಶ್ಚಂದ್ರನು ಸಕಲ ರಾಜ್ಯವನ್ನೂ ನನಗೆ ಧಾರೆಯೆರೆದು ಕೊಟ್ಟಿದ್ದಾನೆಂದು ಎಲ್ಲೆಡೆಯೂ ಸಾರಿಸುವೆನು.

ಒಡನೆಯೇ ವಿಶ್ವಾಮಿತ್ರರು ತಮ್ಮ ಶಿಷ್ಯರನ್ನು ಕರೆದು ಆಶ್ರಮದಲ್ಲಿ ತೋರಣಗಳನ್ನು ಕಟ್ಟಬೇಕೆಂದೂ ಮಹಾದಾನಿಯಾದ ಹರಿಶ್ಚಂದ್ರನ ಮೆರವಣಿಗೆಯು ನಡೆಯುವುದೆಂದು ಹೇಳಿಕಳಿಸಿಯೇಬಿಟ್ಟರು! ಹರಿಶ್ಚಂದ್ರನು ಮೂಗಿನ ಮೇಲೆ ಬೆರಳಿಟ್ಟು ದಿಗ್ಭ್ರಾಂತನಾಗಿ ಹೀಗೆಂದನು :

ಹರಿಶ್ಚಂದ್ರ :- ನಾನು ಯಾವ ದಾನವನ್ನಿತ್ತೆನೆಂದು ನನಗೆ ಮೆರವಣಿಗೆ ನಡೆಯಬೇಕು?

ವಿಶ್ವಾಮಿತ್ರ :- ಸಕಲ ರಾಜ್ಯವನ್ನೂ ನನಗೆ ಕೊಡುತ್ತೇನೆಂದು ಈಗ ತಾನೇ ಹೇಳಲಿಲ್ಲವೆ? ವಂಚನೆಯ ಮಾತಾಡುವೆಯಾ?"

ಹರಿಶ್ಚಂದ್ರ :- 'ಸರ್ವರಾಜ್ಯವನ್ನಾದರೂ ಕೊಡುವೆನೇ ಹೊರತು, ನಿಮ್ಮ ಆ ಬೇಡಿಕೆಯನ್ನು ನಡೆಸಲಾರೆ' ಎಂದು ಹೇಳಿದೆನು. ಆ ಹೆಂಗಸರನ್ನು ಸರ್ವಥಾ ಮದುವೆಯಾಗುವುದಿಲ್ಲೆಂದು ನನ್ನ ಆಶಯ.

ವಿಶ್ವಾಮಿತ್ರ :- ಕೊಡುವೆನು ಎಂದಮೇಲೆ ಕೊಟ್ಟಂತೆಯೇ ಆಯಿತು! ಈಗ ನೀನು ಮಾತನ್ನು ತಿರುಗಿಸಿ ಹುಸಿಯಾಡಿದರೇನಾಗುವುದು? ಇದೆಲ್ಲವೂ ನನ್ನ ರಾಜ್ಯವಾದಂತೆಯೇ.

ಹರಿಶ್ಚಂದ್ರ :- ಉಗ್ರವಾಗಿ ದಂಡಿಸಬಲ್ಲ ಸಾಮರ್ಥ್ಯವಿದೆಯೆಂದು ಹೀಗೆ ಬಲಾತ್ಕಾರದಿಂದ ನನ್ನ ರಾಜ್ಯವನ್ನು ಕಸಿದುಕೊಳ್ಳುವುದು ಯೋಗ್ಯವೆ?

ವಿಶ್ವಾಮಿತ್ರ :- ನಿನಗೆ ಅರಸುತನದ ಮೇಲೆ ಇಷ್ಟು ವ್ಯಾಮೋಹವಿರುವುದಾದರೆ, ನನ್ನ ಕನ್ನಿಕೆಯರನ್ನು ಮದುವೆಯಾಗು! ಈ ರಾಜ್ಯವೆಲ್ಲವನ್ನೂ ಬಳುವಳಿಯಾಗಿ ಕೊಡುವೆನು!

ಹರಿಶ್ಚಂದ್ರ:- ಈ ರಾಜ್ಯದ ಜೊತೆಗೆ ನನ್ನ ದೇಹ, ಈ ಪತ್ನಿ ಈ ಪುತ್ರ- ಇವರೆಲ್ಲರೂ ಕೈತಪ್ಪಿ ಹೋದರೂ, ಚಂಡಾಲ ಸ್ತ್ರೀಯರನ್ನು ನಾನು ಮದುವೆಯಾಗತಕ್ಕವನಲ್ಲ. ನಿರ್ಮಲವಾದ ರವಿಕುಲವನ್ನು ನೀರೊಳಗೆ ಮುಳುಗಿಸಲು ನಾನು ಸಿದ್ಧನಿಲ್ಲ. ನನ್ನ ಮನಸ್ಸಿನ ಆಳವನ್ನು ನೀವು ಕಾಣಲಿಲ್ಲ. ಮುನೀಶ್ವರರೆ, ಕೈಮುಗಿದು ಬೇಡುವೆನು- ಮತ್ತೆ ಮತ್ತೆ ಈ ವಿಚಾರವನ್ನು ಎತ್ತಬೇಡಿರಿ.

ವಿಶ್ವಾಮಿತ್ರ :- ತಳದ ಬೇರನ್ನು ಬಲ್ಲವನಿಗೆ ಎಲೆಯನ್ನು ತೋರಿಸಿ ಗುರುತು ಹೇಳಬೇಕೆ? ಹೊಲತಿಯರನ್ನು ಮದುವೆಯಾದರೆ ನಿನ್ನ ಕುಲವು ಕೆಡುವುದೆ? ಎಲವೊ! ನಿನ್ನ ಕುಲದ ಕುಂದನ್ನು ನಾನರಿಯೆನೆ?

ಹರಿಶ್ಚಂದ್ರ :- ನನ್ನ ಕುಲದಲ್ಲಿ ಕುಂದನ್ನು ತೋರಿಸಲು ಬ್ರಹ್ಮನಿಗೆ ಅಳವಲ್ಲ; ಶಿವನಿಗೆ ಶಕ್ಯವಲ್ಲ.

ವಿಶ್ವಾಮಿತ್ರ :- ಓಹೊ! ಹಾಗಾದರೆ ಕೇಳು: ವಸಿಷ್ಠ ಮುನಿಯ ಶಾಪದಿಂದ ನಿನ್ನ ತಂದೆ ತ್ರಿಶಂಕು ಹೊಲೆಯನಾಗಿದ್ದ! ರಾಜ್ಯಭ್ರಷ್ಟನಾಗಿದ್ದ! ಅವನನ್ನು ಉದ್ಧರಿಸಿದ ಸತ್ವಶಾಲಿ ನಾನು! ಇನ್ನು ಯಾವನಿಗೆ ಅವನನ್ನು ಮೇಲೆತ್ತಲು ಸಾಧ್ಯವಿತ್ತು? ಶಾಪದಿಂದ ಬಂದ ಹೊಲೆತನವನ್ನೇ ತೊಳೆದು ಹಾಕಿದ ನನಗೆ ನನ್ನ ಆಜ್ಞೆಯಂತೆ ಮದುವೆಯಾದರೆ ಬರುವ ಕೊಳೆಯನ್ನು ತೊಳೆಯಲು ಸಾಮರ್ಥ್ಯವಿಲ್ಲವೆ?

ಹರಿಶ್ಚಂದ್ರ :- ನನ್ನ ತಂದೆ ಯಾವ ಪಾಪಕರ್ಮವನ್ನೂ ಮಾಡಲಿಲ್ಲ. ಯಾಗವನ್ನು ಮಾಡಲು ಉದ್ಯೋಗಿಸಿದಾಗ ಶಾಪವಶದಿಂದ ಅದೊಂದು ಲೋಪವುಂಟಾಯಿತು. ಅದರೊಡನೆ ಇದರ ಹೋಲಿಕೆ ಸಲ್ಲದು. ಹೊಲತಿಯರನ್ನು ಮದುವೆಯಾಗಿ ಚಂಡಾಲನಾಗು ಎನ್ನುವುದು ಯಾವ ನೀತಿ? ನಾನು ಒಪ್ಪುವುದಿಲ್ಲ.

ವಿಶ್ವಾಮಿತ್ರ :- ಹಾಗೊ! ನಿನ್ನನ್ನು ಚಂಡಾಲನನ್ನಾಗಿ ಮಾಡದೆ ಬಿಡುವೆನೆ?

ಹರಿಶ್ಚಂದ್ರ :- ಹೊತ್ತಿರುವ ಭೂಮಿಯೇ ಮುನಿದು ಕಂಪಿಸಿದಾಗ, ಆಕಾಶವೇ ಒಡೆದಾಗ, ಉಸಿರೇ ಒಡಲನ್ನು ಇರಿದಾಗ, ಮೊಲೆಯೇ ಹಾಲನ್ನು ಕುಡಿದಾಗ, ಮಡಕೆಯೇ ಅಡಿಗೆಯನ್ನು ತಿಂದಾಗ- ಯಾರು ಏನು ಮಾಡಬಲ್ಲರು? ಹರಸಿ ರಕ್ಷಿಸಬೇಕಾದ ನೀವೇ ಕ್ರೋಧದಿಂದ ನನಗೆ ಶಾಪವನ್ನೀಯುವುದಾದರೆ ಯಾರು ರಕ್ಷಿಸಬಲ್ಲರು? ಆ ಮಾತಿರಲಿ. ಶಾಪವಾದರೂ ಬರಲಿ, ಅಪಕೀರ್ತಿಯಾದರೂ ಗಂಟುಬೀಳಲಿ - ಹರಿಶ್ಚಂದ್ರ ರಾಜನು ಅಧರ್ಮ ಮಾರ್ಗದಲ್ಲಿ ನಡೆಯತಕ್ಕವನಲ್ಲ.

ವಿಶ್ವಾಮಿತ್ರ :- ಸರಿ ಸರಿ, ಅಪಕೀರ್ತಿ ಶಾಪಗಳಿಗೂ ನೀನು ಹೆದರುವುದಿಲ್ಲವೆಂದ ಮೇಲೆ ಸುಳ್ಳಿಗೆ ಜಗ್ಗುವೆಯಾ? ಅನೃತವನ್ನೇ ಅರಿಯದ ಸೂರ್ಯವಂಶದಲ್ಲಿ ಕಳಂಕವಾಗಿ ಜನಿಸಿದೆ ನೀನು! ಈಗ ತಾನೇ ರಾಜ್ಯವನ್ನು ನನಗೆ ದಾನವಾಗಿ ಕೊಟ್ಟು 'ಇಲ್ಲ' ಎನ್ನುವೆಯಾ? ಇದು ನಿನ್ನ ತಪ್ಪಲ್ಲ, ನಿನ್ನ ಮಾತನ್ನು ನಂಬಿದ ನಮ್ಮದೇ ತಪ್ಪು!

ಹರಿಶ್ಚಂದ್ರ :- ನನಗೆ ಅಪಕೀರ್ತಿಯೂ ಬರದು, ನನ್ನ ಬಾಯಿಂದ ಅನೃತವೂ ಬರದು. ಸೂರ್ಯವಂಶದಲ್ಲಿ ಕಳಂಕವೂ ಇರದು! ನಿಮಗೆ ರಾಜ್ಯದ ಮೇಲೆ ಇಷ್ಟೊಂದು ಅಭಿಮಾನವಿದ್ದರೆ, ಇದೋ ಮನಃಪೂರ್ವಕವಾಗಿ ರಾಜ್ಯವನ್ನು ನಿಮಗೆ ಕೊಟ್ಟಿದ್ದೇನೆ!

ಕೌಶಿಕ ಮುನಿಗಳು ರಾಜನ ಧೀರತೆಯನ್ನು ಕಂಡು ಮೆಚ್ಚಿ ಬೆರಗಾಗಿ ತಲೆದೂಗಿದರು. "ಎಷ್ಟು ಕೋಪಿಸಿದರೂ ಎಷ್ಟು ನೋಯಿಸಿದರೂ ಈ ರಾಜನು ಜಗ್ಗುವುದಿಲ್ಲವಲ್ಲ! ಈತನ ಬಾಯಿಂದ ಹುಸಿಯನ್ನು ಹೊರಡಿಸುವುದು ನನಗೆ ಸಾಧ್ಯವೆ?" ಎಂದು ಚಿಂತಾಕ್ರಾಂತರಾದರು. ಮತ್ತೆ ಮನಸ್ಸಿನಲ್ಲಿ ಏನನ್ನೋ ನೆನೆದು "ಹರಿಶ್ಚಂದ್ರ, ನನ್ನ ಕಾಟಕ್ಕೆ ಬೇಸತ್ತು ನೀನೊಬ್ಬನು ರಾಜ್ಯವನ್ನು ಕೊಟ್ಟೆನು ಎಂದರೆ ಸಾಲದು. ನಿನ್ನ ಹೆಂಡತಿ ಮಕ್ಕಳ ಮತ್ತು ಮಂತ್ರಿಗಳ ಅಭಿಪ್ರಾಯ ಹೇಗಿದೆಯೊ? ಅವರನ್ನು ಒಡಂಬಡಿಸು" ಎಂದು ಹೇಳಿದರು.

ಹರಿಶ್ಚಂದ್ರ :- ಮುನಿಗಳೆ, ನಿಮಗೇನು ಭ್ರಾಂತಿಯೆ? ನಾನೊಬ್ಬ ಸಾಲದೆ? ಹೆಂಗಸರೂ ಹುಡುಗರೂ ಏನನ್ನಾದರೂ ನುಡಿಯಬಹುದು. ಇದು ಅವರ ಇಚ್ಛೆಯೆ? ಸಂತೋಷದಿಂದ ಕೊಡುತ್ತಿದ್ದೇನೆ, ತೆಗೆದುಕೊಳ್ಳಿರಿ.

ವಿಶ್ವಾಮಿತ್ರ :- ಹಾಗಿದ್ದರೆ ಧಾರೆಯೆರೆದು ವಿಧಿಪೂರ್ವಕವಾಗಿ ದಾನ ಮಾಡು.

ಹರಿಶ್ಚಂದ್ರ :- ಅಡವಿಯನ್ನೇ ಸುಡುವ ಅಗ್ನಿಗೆ ಆಪೋಶನವನ್ನು ಹಾಕಬೇಕೆ? ಛಲದಿಂದ ರಾಜ್ಯವನ್ನು ತೆಗೆದುಕೊಳ್ಳುವ ನಿಮಗೆ ಧಾರೆ ಏಕೆ? ಧಾರೆಯೆರೆಯದಿದ್ದರೆ ನೀವೇನು ರಾಜ್ಯವನ್ನು ಬಿಟ್ಟುಕೊಡುವಿರಾ?

ವಿಶ್ವಾಮಿತ್ರ :- ಬಿಟ್ಟುಕೊಡುವೆನು; ನೀನು ನನ್ನ ಮಕ್ಕಳನ್ನು ಮದುವೆಯಾದರೆ!

ಹರಿಶ್ಚಂದ್ರ :- ಆ ಕೆಟ್ಟ ನುಡಿಯನ್ನು ಮತ್ತೆ ಹೇಳಬೇಡಿರಿ. ವಿಧಿಪೂರ್ವಕವಾಗಿ ರಾಜ್ಯವನ್ನು ಧಾರೆಯೆಗದು ಕೊಡುವೆನು.

ಹರಿಶ್ಚಂದ್ರನು ಮಂತ್ರಿಯ ಮುಖವನ್ನು ನೋಡಿದನು. ಆಗ ಸಾಮ್ರಾಜ್ಞಿಯಾದ ಚಂದ್ರಮತಿದೇವಿಯು "ಮಹಾರಾಜ, ಸಾಕ್ಷಾತ್ ಪರಮೇಶ್ವರನಂತಿರುವ ವಿಶ್ವಾಮಿತ್ರಮುನಿಗಳು ಬೇಡುತ್ತಿರುವಾಗ, ಮಂತ್ರಾಲೋಚನೆಯ ಪ್ರಸಂಗವೇನು? ಸಮಸ್ತ ರಾಜ್ಯವನ್ನೂ ನಿಶ್ಶಂಕೆಯಿಂದ ದಾನ ಮಾಡು!" ಎಂದಳು. ಹರಿಶ್ಚಂದ್ರನು ನೀರನ್ನು ತೆಗೆದುಕೊಂಡು ಸಕಲ ರಾಜ್ಯವನ್ನೂ ವಿಶ್ವಾಮಿತ್ರಮುನಿಗಳಿಗೆ ಧಾರೆಯೆರೆದು ಅರ್ಪಿಸಿದನು. ನೆರೆದಿದ್ದ ನಿಖಿಲ ಮುನಿಗಳೂ ತಲೆದೂಗಿದರು.

ವಿಶ್ವಾಮಿತ್ರ :- ಯಾವ ಯಾವುದನ್ನು ದಾನ ಕೊಟ್ಟಿದ್ದೀಯೆ?

ಹರಿಶ್ಚಂದ್ರ :- ಚತುರಂಗಸೇನೆ, ಸಕಲ ಭಂಡಾರ, ರಾಜಧಾನಿ, ಆಜ್ಞೆಯನ್ನೀಯುವ ಅಧಿಕಾರ, ಬಿರದುಬಾವಲಿ ಸಹಿತವಾಗಿ ಸಪ್ತದ್ವೀಪಗಳನ್ನು ಕೊಟ್ಟಿದ್ದೇನೆ! ಇನ್ನು ಆಗ್ರಹವನ್ನು ಬಿಟ್ಟು ಕರುಣಿಸಿ ಹರಸಿರಿ.

ಹೀಗೆ ಹೇಳಿ ಹರಿಶ್ಚಂದ್ರನು ಕೌಶಿಕ ಮುನಿಗಳ ಪಾದಗಳಿಗೆ ನಮಸ್ಕರಿಸಿದನು. ಅವರು ಹರಿಶ್ಚಂದ್ರನನ್ನು ಅಣಕಿಸಿ ನಕ್ಕು "ಹೋಗಯ್ಯ, ಹೋಗು!" ಎಂದು ನುಡಿದರು.

ಹರಿಶ್ಚಂದ್ರನು ಮನಸ್ಸಿನಲ್ಲಿ "ನನ್ನ ಪ್ರಾಣವನ್ನು ಕೇಳದೆ ಉಳಿಸಿದರಲ್ಲ! ಲೇಸಾಯಿತು" ಎಂದುಕೊಳ್ಳುತ್ತ ತನ್ನ ರಥದ ಬಳಿಗೆ ಹೊರಟನು. ವಿಶ್ವಾಮಿತ್ರರು ಅವನನ್ನು ಕೈಬೀಸಿ ಕರೆದರು. ಹರಿಶ್ಚಂದ್ರನು ಅವರ ಸಮೀಪಕ್ಕೆ ಹಿಂದಿರುಗಿ ಬಂದು ಕೈ

ಮುಗಿದು "ಅಪ್ಪಣೆಯೇನು?" ಎಂದು ಕೇಳಿದನು. ಮುನಿಗಳು "ಸರ್ವಸ್ವವನ್ನೂ ನನಗೆ ಕೊಟ್ಟ ಮೇಲೆ, ಧರಿಸಿರುವ ಒಡವೆಗಳನ್ನು ಕೊಡದೆ ಹೋಗುವುದೇಕೆ? ನೀನು, ಮಂತ್ರಿ ನಿನ್ನ ಹೆಂಡತಿ ಮಕ್ಕಳು ಧರಿಸಿರುವ ಒಡವೆಗಳನ್ನು ಇಲ್ಲಿ ಇಟ್ಟು ಹೋಗಿ" ಎಂದರು. ಅವರೆಲ್ಲರೂ ಒಡವೆಗಳನ್ನು ತೆಗೆದು ಮುಂದಿರಿಸಿದರು. ಆಮೇಲೆ "ನೀವು ಧರಿಸಿರುವ ಪೀತಾಂಬರಗಳನ್ನೂ ತೆಗೆದಿರಿಸಿರಿ" ಎನ್ನಲು, ರಾಜನಿಗೆ ದಿಕ್ಕು ತೋಚದಂತಾಗಿ ಕೈಮುಗಿದು ಸುಮ್ಮನೆ ನಿಂತನು. ವಿಶ್ವಾಮಿತ್ರರು "ಇದಕ್ಕಾಗಿಯೇ ಅರಸರು ಮರುಳರು ಎನ್ನುವುದು! ಉಪಾಯವು ತೋರದಾಯಿತೆ? ನಾನು ತೋರಿಸುವೆನು!" ಎಂದು ಹೇಳಿ, ಒಂದು ಹಳೆಯ ಬಟ್ಟೆಯನ್ನೂ ಸೀರೆಯನ್ನೂ ತರಿಸಿ ಹರಿಸಿ, ನಾಲ್ವರಿಗೂ ಹಂಚಿಸಿದರು. ಆಗ ಹರಿಶ್ಚಂದ್ರನೇ ಮೊದಲಾದ ನಾಲ್ವರೂ ಸ್ವಲ್ಪವೂ ಅಳುಕದೆ, ಹಳೆಯ ಹರಕು ಅರಿವೆಗಳನ್ನುಟ್ಟು ತಮ್ಮ ದಿವ್ಯಾಂಬರಗಳನ್ನು ವಿಶ್ವಾಮಿತ್ರರಿಗೆ ಒಪ್ಪಿಸಿದರು. ಪೂರ್ಣಚಂದ್ರನಂತೆ ಕಂಗೊಳಿಸುತ್ತಿದ್ದ ಹರಿಶ್ಚಂದ್ರ ಮಹಾರಾಜನು ತನ್ನ ದಿವ್ಯಾಂಬರಗಳನ್ನು ಕಳಚಿ ಹಳೆಯ ಬಟ್ಟೆಯನ್ನು ಸುತ್ತಿಕೊಳ್ಳಲು, ತನ್ನ ಷೋಡಶಕಲೆಗಳಿಂದ ಗಿಡಮರಗಳನ್ನು ಪೋಷಿಸಿ ಕಳಾಹೀನನಾಗಿ ಅಂಬರವನ್ನು ಬಿಟ್ಟು ಇಳಿಯುವ ಪಾಡ್ಯದ ಚಂದ್ರನಂತೆ ಕಾಣಿಸಿದನು. ಆತನು ಮುನಿಗಳಿಗೆ ಮತ್ತೆ ಕೈ ಮುಗಿದು "ನಾನು ಹೋಗಬಹುದೆ? ತಂದೆ" ಎನ್ನಲು, "ಹೋಗು, ಹೋಗು" ಎಂದು ಅಸಡ್ಡೆಯಿಂದ ಅವರು ಹೇಳಿದರು. ಅವನು ಸ್ವಲ್ಪ ದೂರ ಹೋಗುವಷ್ಟರಲ್ಲಿ ಪುನಃ ಕೈಬೀಸಿ ಕರೆದು ಹೀಗೆಂದರು :

ವಿಶ್ವಾಮಿತ್ರ :- ನನ್ನ ಮನಸ್ಸಿನಲ್ಲಿರುವ ಒಂದು ವಿಷಯವನ್ನು ಹೇಳಬೇಕಾಗಿದೆ. ಕೋಪವೇನೂ ಇಲ್ಲವಷ್ಟೆ?

ಹರಿಶ್ಚಂದ್ರ :- ಯಾವುದನ್ನು ಹೇಳಿದಾಗ ನಾನು ಕೋಪಿಸಿಕೊಂಡಿದ್ದೇನೆ?

ವಿಶ್ವಾಮಿತ್ರ :- ಹಿಂದೆ ಬಹುಸುವರ್ಣಯಾಗವನ್ನು ಮಾಡಿದಾಗ, ಒಂದು ಸುವರ್ಣರಾಶಿಯನ್ನು ನನಗೆ ದಕ್ಷಿಣೆಯಾಗಿ ಕೊಟ್ಟೆಯಲ್ಲವೆ? ಎಲ್ಲವನ್ನೂ ನಿನ್ನ ಬಳಿಯಲ್ಲಿಯೇ ಇಟ್ಟಿದ್ದೆನು. ಅದನ್ನು ಈಗ ಕೊಟ್ಟು ಹೋಗು! ದೇಶವನ್ನು ಬಿಟ್ಟು ಹೋಗತಕ್ಕ ನೀನು ಸಾಲವನ್ನು ಉಳಿಸಿಕೊಂಡು ಹೋಗಲು ಸಾಧ್ಯವಿಲ್ಲ.

ಹರಿಶ್ಚಂದ್ರ :- ನಿಮಗೆ ಕೊಟ್ಟಿದ್ದ ದಕ್ಷಿಣೆಯಲ್ಲವೂ ರಾಜಭಂಡಾರದಲ್ಲಿ

ಸುರಕ್ಷಿತವಾಗಿದೆ. ಸಕಲ ಭಂಡಾರವನ್ನು ನಿಮಗೆ ಒಪ್ಪಿಸಿದಾಗ, ನನ್ನ ವಶದಲ್ಲಿ ಯಾವ ಸಾಲದ ಹಣ ಇದೆ?

ವಿಶ್ವಾಮಿತ್ರ :- (ಗಟ್ಟಿಯಾಗಿ ನಕ್ಕು) ಭಲಾ ಭಲಾ! ನನಗೆ ಧಾರೆಯನ್ನೆರೆಯುವಾಗ ದಕ್ಷಿಣೆಯ ಹಣವೂ ಅದರಲ್ಲಿ ಸೇರಿತು ಎಂದು ಹೇಳಿದೆಯಾ?

ಹರಿಶ್ಚಂದ್ರ :- ತುಂಬಿದ ಬಂಡಿಯನ್ನೇ ಒಪ್ಪಿಸಿದವನು ಸುಂಕವನ್ನು ಕೊಡಬೇಕೆ?

ವಿಶ್ವಾಮಿತ್ರ :- ಸಾಲಿಗನು ಸತ್ತರೂ ಸಾಲ ತೀರುವುದಿಲ್ಲ! ರಾಜ್ಯದ ಒಡೆತನ ಹೋದಮಾತ್ರದಿಂದ ಸಾಲವೂ ಹೋಗಿಬಿಡುವುದೇ? ಆ ಹಣವನ್ನು ನೀನು ಕೊಡಲೇಬೇಕು.

ಕಪಟೋಪಾಯನಿಪುಣರಾದ ವಿಶ್ವಾಮಿತ್ರರ ನುಡಿಯನ್ನು ಕೇಳಿ ಧರ್ಮನಿಷ್ಠನಾದ ಹರಿಶ್ಚಂದ್ರನು ಕುಗ್ಗಿದನೆ? ಕೊರಗಿದನೆ? ಆ ಧೀರೋದಾತ್ತನು ''ಮುನಿಗಳೆ, ಈಗ ನನ್ನ ಬಳಿಯಲ್ಲಿ ಹಣವಿಲ್ಲ. ಒಂದು ಅವಧಿಯನ್ನು ಕೊಟ್ಟರೆ ಆ ಹಣವನ್ನು ತಂದು ಕೊಡುವೆನು'' ಎಂದನು.

ವಿಶ್ವಾಮಿತ್ರ :- ಒಳ್ಳೆಯದು. ಹತ್ತು ದಿನ ಅವಧಿ!

ಹರಿಶ್ಚಂದ್ರ :- ಅವಧಿ ಸಾಲದು.

ವಿಶ್ವಾಮಿತ್ರ :- ಇಪ್ಪತ್ತು ದಿನ.

ಹರಿಶ್ಚಂದ್ರ :- ಸಾಧ್ಯವಾಗದು.

ವಿಶ್ವಾಮಿತ್ರ :- ಮೂವತ್ತು ದಿನ.

ಹರಿಶ್ಚಂದ್ರ :- ಸಾಧ್ಯವೆಂದು ಹೇಳಲಾರೆ.

ವಿಶ್ವಾಮಿತ್ರ :- ಇಂದಿನಿಂದ ನಲವತ್ತೆಂಟು ದಿನ! ಅದರ ಮುಂದೆ ಅವಧಿಯನ್ನು ಕೊಡಲು ಶಕ್ಯವಿಲ್ಲ.

ಹರಿಶ್ಚಂದ್ರ :- ಅವಧಿಯು ಅಲ್ಪ; ತೀರಿಸಬೇಕಾದ ಧನ ಅಧಿಕ. ನನಗೆ ಯಾರು ಕೊಡುತ್ತಾರೆ? ಆಗಲಿ. ಹೇಗಾದರೂ ಗಳಿಸಿ ತಂದುಕೊಡುತ್ತೇನೆ.

ವಿಶ್ವಾಮಿತ್ರ :- ವಸೂಲಿಗಾಗಿ ನಿನ್ನ ಹಿಂದೆ ಒಬ್ಬ ತೆರೆಕಾರನನ್ನು

ಕಳಿಸಿಕೊಡುತ್ತೇನೆ. ಅವನಿಗೆ ಸಾಲವೆಲ್ಲವನ್ನೂ ಕೊಟ್ಟುಬಿಡಬೇಕು. ಸಾಲದ ಹಣ ಎಷ್ಟು? ದೊಡ್ಡ ಆನೆಯಮೇಲೆ ನಿಂತು ಕವಡೆಯನ್ನು ಮೇಲಕ್ಕೆಸೆದರೆ ಎಷ್ಟು ಎತ್ತರ ಹೋಗುವುದೋ ಅಷ್ಟೆತ್ತರದ ಚಿನ್ನದ ನಾಣ್ಯಗಳು! ನೆನಪಿರಲಿ. ಕೊಡುತ್ತೀಯೆ ಎಂಬ ನಂಬಿಕೆಗಾಗಿ ಆಣೆಯಿಟ್ಟು ಹೋಗು!

ಹರಿಶ್ಚಂದ್ರ :- ಅವಧಿಯಲ್ಲಿ ನಿಮ್ಮ ಹಣವನ್ನು ತೀರಿಸದಿದ್ದರೆ, ಶಿವಪೂಜೆಯನ್ನು ಮಾಡದವನೂ ಗುರ್ವಾಜ್ಞೆಯನ್ನು ಉಲಂಘಿಸತಕ್ಕವನೂ ಪರಸ್ತ್ರೀಯರನ್ನು ಕಾಮಿಸತಕ್ಕವನೂ ತಾಯಿತಂದೆಯನ್ನು ಧಿಕ್ಕರಿಸುವವನೂ ಅನ್ಯರ ಮನೆಗೆ ಬೆಂಕಿ ಇಡುವವನೂ ಕುಲಧರ್ಮವನ್ನು ಪಾಲಿಸದವನೂ ಇಳಿಯುವ ನರಕದಲ್ಲಿ ನಾನು ಇಳಿಯುವೆನು!

ವಿಶ್ವಾಮಿತ್ರ :- ಒಳ್ಳೆಯದು; ನಾನು ಆಳುವ ಈ ರಾಜ್ಯದಲ್ಲಿ ನೀನು ಬೇಡಬಾರದು, ಸೇವಾವೃತ್ತಿಯನ್ನು ಕೈಗೊಳ್ಳಬಾರದು, ಕೃಷಿಯನ್ನು ನಡೆಸಬಾರದು. ಈ ದೇಶದಲ್ಲಿಯೇ ನೀನು ನೆಲೆಸಬಾರದು! ದೇಶಾಂತರದಲ್ಲಿದ್ದು ಅವಧಿಯಲ್ಲಿ ನನ್ನ ಸಾಲವನ್ನು ತೀರಿಸಬೇಕು.

ಹರಿಶ್ಚಂದ್ರ :- ಆಗಲಿ.

ವಿಶ್ವಾಮಿತ್ರ :- ಈ ಸಪ್ತದ್ವೀಪಗಳೂ ನನಗೆ ಸೇರಿದವು! ನೀನು ಎಲ್ಲಿಗೆ ಹೋಗುವೆ?

ಹರಿಶ್ಚಂದ್ರ :- ಮಹರ್ಷಿಗಳೆ, ಕಾಶೀಕ್ಷೇತ್ರ ಮತ್ತು ಈ ಪಂಪಾಕ್ಷೇತ್ರಗಳು ನಿಮಗೆ ಸೇರಿದವುಗಳಲ್ಲ, ಅಲ್ಲಿ ನಿಮ್ಮ ಆಜ್ಞೆಗೆ ಎಡೆಯಿಲ್ಲ. ಅವುಗಳಿಗೆ ವಿಶ್ವನಾಥ, ವಿರೂಪಾಕ್ಷರೇ ಒಡೆಯರು. ಪಂಪಾಕ್ಷೇತ್ರವು ಈಗ ನನಗೆ ತಕ್ಕುದಲ್ಲ. ನಾನು ಕಾಶೀಕ್ಷೇತ್ರವನ್ನು ಸೇರಿ ನಿಮಗೆ ಕೊಡಬೇಕಾದ ಹಣವನ್ನು ಕೊಡುತ್ತೇನೆ. ಶಿವಸ್ವರೂಪರಾದ ನೀವು ಕರುಣಿಸಬೇಕು.

ವಿಶ್ವಾಮಿತ್ರ :- ಸರಿ; ಗೊತ್ತಾದ ಅವಧಿಯಲ್ಲಿ ತೀರಿಸಿಬಿಡು.

ಧೈರ್ಯನಿಧಿಯಾದ ಹರಿಶ್ಚಂದ್ರನು ಮುನಿಗಳ ಅಡಿಗಳಿಗೆರಗಿ ಹೊರಟುಬಿಟ್ಟನು. ಅವನ ಮುಖದ ತೇಜಸ್ಸು ಸ್ವಲ್ಪವೂ ಕಂದಲಿಲ್ಲ. ಹರಿಶ್ಚಂದ್ರನ ಧೀರೋದಾತ್ತ ಕಳೆಯನ್ನು ನೋಡಿ ವಿಶ್ವಾಮಿತ್ರರು ಮನಸ್ಸಿನಲ್ಲಿ "ಆಹಾ! ಇವನ ಸಕಲೈಶ್ವರ್ಯವನ್ನು

ಸೆಳೆದುಕೊಂಡರೂ ಕುಗ್ಗಲಿಲ್ಲ, ಕುಸಿಯಲಿಲ್ಲ. ಸಾಲವನ್ನು ತೀರಿಸುವೆನೆಂದು ಶಪಥ ಮಾಡಲೂ ಹಿಂಜರಿಯಲಿಲ್ಲ. ಇವನ ಬಾಯಿಂದ ಹುಸಿಯೆಂದಿಗೂ ಬರದು. ಅಕಟ! ಮುಂದೇನು? ನಾನು ಅನಂತಕಾಲದಿಂದ ಮಹಾಕ್ಲೇಶಗೊಂಡು ಸಂಪಾದಿಸಿದ ತಪಸ್ಸಿನ ಫಲವನ್ನು ಈತನಿಗೆ ಧಾರೆಯೆರೆಯುವ ಪ್ರಸಂಗ ಬಂದಿತಲ್ಲ! ತಪಸ್ಸಿನ ಬಲವಿಲ್ಲದಾಗ ಈ ಮುನಿಗಳು ನನ್ನನ್ನು ತಮ್ಮ ಗುಂಪಿನಲ್ಲಿ ಸೇರಿಸುವರೆ? ಇರಲಿ. ಆಗ ನಾನು ಪಂಚಾಗ್ನಿಗಳ ಮಧ್ಯದಲ್ಲಿ ನಿಂತು. ಮತ್ತೆ ಉಗ್ರತಪಸ್ಸನ್ನು ಕೈಗೊಳ್ಳಬಹುದು. ಉಕ್ಕಿನ ಸೂಜಿಯ ಮೇಲೆ ತಲೆಕೆಳಗಾಗಿ ನಿಂತು ಘೋರವ್ರತಗಳನ್ನಾಚರಿಸಿ ತಪೋಬಲವನ್ನು ಸಂಪಾದಿಸಿಯೇನು ಮತ್ತೆ ಶಿವನನ್ನು ಮೆಚ್ಚಿಸುವ ಚಿತ್ತಸ್ಥೈರ್ಯ ನನಗುಂಟು. ಅದಕ್ಕೆ ನಾನು ಅಂಜುವುದಿಲ್ಲ. ಆದರೆ ಈ ವಸಿಷ್ಠ ಮುನಿಯ ಪ್ರತಿಜ್ಞೆಯೇ ಗೆದ್ದು ಬಿಡುವುದಲ್ಲ!'' ಎಂದು ಮರುಗಿದರು. ಮತ್ತೆ ''ಮುನಿಸಭೆಯಲ್ಲಿ ನನಗೆ ಅವಮಾನವಾಗುವುದು. 'ವಸಿಷ್ಠರೊಡನೆ ಮಲೆತು ಕೈಲಾಗದೆ ತನ್ನ ತಪಃ ಫಲ ವನ್ನು ಹೋಗಲಾಡಿಸಿಕೊಂಡವನೀತನು!' ಎಂದು ನನ್ನನ್ನು ತೋರಿಸಿ ಮುನಿಗಳು ನಗದೆ ಇರುವುದಿಲ್ಲ. ಇರಲಿ. ಇದಕ್ಕೆ ತಕ್ಕುದನ್ನು ಕಾಣಲೇಬೇಕು'' ಎಂದು ಚಿಂತಿಸಿ ಒಂದು ಉಪಾಯವನ್ನು ಕಂಡರು : ''ಹರಿಶ್ಚಂದ್ರನನ್ನು ರಾಜಧಾನಿಗೆ ಕರೆದೊಯ್ಯಬೇಕು. ನಗರದ ಸಿರಿಯನ್ನು ಅರಮನೆಯ ವೈಭವವನ್ನೂ ತನ್ನ ಭಂಡಾರವನ್ನೂ ಅಂತಃಪುರ ಸ್ತ್ರೀಯರನ್ನು ಕಂಡಾಗ ಇವನ ಮನಸ್ಸು ಚಂಚಲವಾಗದಿರುವುದೆ?'' ಎಂದು ಆಲೋಚಿಸಿ ಪುನಃ ಹರಿಶ್ಚಂದ್ರನನ್ನು ಕರೆದು ಹೀಗೆಂದರು :

ವಿಶ್ವಾಮಿತ್ರ :- ಹರಿಶ್ಚಂದ್ರ, ಇಲ್ಲಿ ಬಾ. ಇನ್ನೊಂದು ಮಾತನ್ನು ಹೇಳಬೇಕಾಗಿದೆ. ನಿನ್ನ ಮಾತನ್ನು ನಂಬಿ ಅಧಿಕಾರವನ್ನು ವಹಿಸಿಕೊಳ್ಳಲು ನಾನು ಅಯೋಧ್ಯೆಗೆ ಹೋದರೆ, ಪುರಜನರು ಸುಮ್ಮನಿರುವರೆ? 'ಎಲೆ ಮರುಳೆ, ನಿನಗೆಲ್ಲಿ ಅರಸುತನ?' ಎಂದು ಅಬ್ಬರಿಸಿ ಅವರೆಲ್ಲರೂ ಕಲ್ಲುಗುಂಡುಗಳನ್ನು ನನ್ನ ಮೇಲೆ ಎಸೆಯದಿರುವರೆ? ಆದ್ದರಿಂದ ನೀನೇ ರಾಜಧಾನಿಗೆ ಬಂದು ಪ್ರಜೆಗಳಿಗೆ ತಿಳಿಯಹೇಳಿ ಒಂದು ವ್ಯವಸ್ಥೆಯನ್ನು ಮಾಡಿ ಹೋಗು.

ಹರಿಶ್ಚಂದ್ರ :- ಆಗಬಹುದು.

ವಿಶ್ವಾಮಿತ್ರ :- ನಡೆ ಹಾಗಾದರೆ. ರಥವನ್ನೇರು.

ಹರಿಶ್ಚಂದ್ರ :- ನಾನು ರಥವನ್ನು ಹತ್ತಲಾರೆ.

ವಿಶ್ವಾಮಿತ್ರ :- ಏಕೆ?

ಹರಿಶ್ಚಂದ್ರ :- ಪರರ ವಸ್ತುವನ್ನು ನಾನು ಉಪಯೋಗಿಸಲಾರೆ.

ವಿಶ್ವಾಮಿತ್ರ :- ನಾನು ಕೊಟ್ಟರೆ ಏಕೆ ಉಪಯೋಗಿಸಬಾರದು?

ಹರಿಶ್ಚಂದ್ರ :- ನಾವು ಕ್ಷತ್ರಿಯರು. ನಮಗೆ ಪ್ರತಿಗ್ರಹ ಸಲ್ಲದು.

ವಿಶ್ವಾಮಿತ್ರ :- ಎಷ್ಟಾದರೂ ರಥವು ನಿನ್ನದೇ ಸರಿಯಷ್ಟೆ?

ಹರಿಶ್ಚಂದ್ರ :- ಅಲ್ಲ; ದಾನವಾಗಿ ಕೊಡುವುದಕ್ಕೆ ಮೊದಲು ನನ್ನದಾಗಿತ್ತು. ಈಗ ಅದು ಹೇಗೆ ನನ್ನದಾದೀತು?

ವಿಶ್ವಾಮಿತ್ರ :- ಹರಿಶ್ಚಂದ್ರ, ಬೇಡಿಕೊಳ್ಳುತ್ತೇನೆ ರಥವನ್ನೇರು.

ಹರಿಶ್ಚಂದ್ರ :- ಮುನಿಗಳೆ, ನಿಶ್ಚಯವಾಗಿಯೂ ನಾನು ರಥವನ್ನು ಹತ್ತುವುದಿಲ್ಲ. ನಾನು ಮಾಡಿದುದನ್ನು ನಾನು ಕಣ್ಣಾರೆ ನೋಡುವೆನು. ನೀವು ರಥವನ್ನೇರಿ ವೈಭವದಿಂದ ಚತುರಂಗಬಲದೊಡನೆ ರಾಜಧಾನಿಗೆ ಬಿಜಯ ಮಾಡಿಸಿರಿ. ನನ್ನನ್ನು ಕಾಡಿಸಬೇಡಿ. ಸಾಲವನ್ನು ತೀರಿಸಬೇಕಾದ ಅವಧಿ ಅತ್ಯಲ್ಪ. ನಾನು ಹೋಗಬೇಕಾದ ದಾರಿ ಅತಿದೂರ. ನನ್ನ ಕಾಲವನ್ನು ಹರಣಮಾಡದಿದ್ದರೆ, ನನ್ನನ್ನು ಸ್ವರ್ಗಕ್ಕೇರಿಸಿದ ಪುಣ್ಯ ನಿಮಗುಂಟು! ಕೈಮುಗಿದು ಬೇಡುತ್ತೇನೆ.

ವಿಶ್ವಾಮಿತ್ರ :- ರಥವನ್ನು ಹತ್ತೆಂದು ನಿನ್ನಲ್ಲಿ ಮರುಕದಿಂದ ನಾನು ಹೇಳಲಿಲ್ಲ! ಒಪ್ಪಿಕೊಂಡಂತೆ ನೀನು ರಾಜಧಾನಿಗೆ ಬರದೆ ಓಡಿಹೋದೀಯೆ ಎಂದು ಹಾಗೆ ಹೇಳಿದೆನು!

ಹರಿಶ್ಚಂದ್ರ :- ನನ್ನ ಮೇಲೆ ಕಾವಲು ಹಾಕಬಹುದಲ್ಲವೆ?

ವಿಶ್ವಾಮಿತ್ರ :- ಕಾವಲಿನವರೆಂದರೆ ನಿನ್ನ ಸೈನಿಕರೆ!

ಹರಿಶ್ಚಂದ್ರ :- ಅವರು ಬೇಡ; ನಿಮ್ಮ ಶಿಷ್ಯರು ಕಾವಲಾಗಿ ಬರಲಿ.

ಅದರಂತೆ ವಿಶ್ವಾಮಿತ್ರರು ಆಶ್ರಮದ ಕೆಲವು ಮುನಿಗಳನ್ನು ಕರೆದು ಹರಿಶ್ಚಂದ್ರನನ್ನು ಕಾಯುತ್ತ ರಾಜಧಾನಿಗೆ ಕರೆತರಬೇಕೆಂದು ಆಜ್ಞಾಪಿಸಿ, ರಥವನ್ನೇರಿ, ಚತುರಂಗಸೇನೆಯೂ ತಮ್ಮೊಡನೆ ಬರಬೇಕೆಂದು ಆದೇಶವನ್ನಿತ್ತು, ಸಂಭ್ರಮದಿಂದ ಅಯೋಧ್ಯಾನಗರಕ್ಕೆ ಪ್ರಯಾಣ ಮಾಡಿದರು.

ರಾಜಧಾನಿಯು ಸಮೀಪಿಸಿದಂತೆ ಸೈನಿಕರ ವಾದ್ಯಘೋಷಗಳು ಮೊಳಗಲು, ಪುರಜನರು ತಮ್ಮ ಮಹಾರಾಜನು ಬರುತ್ತಿರುವನೆಂದು ಸಂಭ್ರಮದಿಂದ ಮನೆಮನೆಗಳನ್ನೂ ಕೇರಿಕೇರಿಗಳನ್ನೂ ಸಿಂಗರಿಸಿ, ಉಲ್ಲಾಸದಿಂದ ಉಬ್ಬುತ್ತ ಎದುರುಗೊಳ್ಳಲು ಗುಂಪು ಗುಂಪಾಗಿ ಬಂದರು. ಚಂದ್ರೋದಯವನ್ನು ಕಂಡು ಸಮುದ್ರವು ಉಕ್ಕುವಂತೆ ನೆರೆದರು. ಸೇನೆಯ ನಡುವೆ ರಾಜರಥವು ಠೀವಿಯಿಂದ ಬರುತ್ತಿತ್ತು. ಮುತ್ತಿನ ಝುಲ್ಲರಿಗಳು, ಚಾಮರಗಳು, ಶ್ವೇತಚ್ಛತ್ರ - ಮುಂತಾದ ಕುರುಹುಗಳಿಂದ ಅದೇ ಹರಿಶ್ಚಂದ್ರ ಮಹಾರಾಜನು ಕುಳಿತಿರುವ ರಥವೆಂದು ಬಗೆದು, ಅದರ ಬಳಿಗೆ ಹೋದರು. 'ಮಹಾರಾಜನಿಗೆ ಜಯವಾಗಲಿ' ಎಂದು ಜಯಕಾರ ಮಾಡುತ್ತ ರಥವನ್ನು ಸಮೀಪಿಸಿದಾಗ, ರಥದಲ್ಲಿ ಒಬ್ಬ ಗಡ್ಡದ ಮುನಿಗಳು ದರ್ಪದಿಂದ ಕುಳಿತಿರುವುದು ಕಾಣಿಸಿತು! ಆಹಾ! ಆ ಸಂದರ್ಭವನ್ನು ಏನೆಂದು ವರ್ಣಿಸುವುದು! ತಮ್ಮ ಮಹಾರಾಜನನ್ನು ನೋಡುತ್ತೇವೆಂದು ಉಲ್ಲಾಸದಿಂದ ಬಂದ ಪೌರರು, ಎಳೆಮೊಗ್ಗಿಗೆ ಮುಸುಕಿದ ದುಂಬಿಗಳಂತಾದರು! ಕಡುಹಸಿರು ಕಸುಗಾಯನ್ನಗಿದ ಗಿಳಿಗಳಂತಾದರು! ಕಹಿಯನ್ನು ನೆಕ್ಕಿದ ಶಿಶುಗಳಂತಾದರು! ಮರದ ಕೊರಡನ್ನು ಕದುಕಿದ ಕೋಗಿಲೆಗಳಂತಾದರು! ಹೊಲಬುಗೆಟ್ಟ ಕರು ತಾಯನ್ನರಸುವಂತೆ, ಆ ಪೌರರು ಬೇಸತ್ತು ಬಸವಳಿದು, ಮಹಾರಾಜನು ಮುನಿಗಳ ನಡುವೆ ನಡೆಯುತ್ತ ಹಿಂದೆ ಬರುತ್ತಿರುವನೆಂದು ಕೇಳಿ ಅಲ್ಲಿಗೆ ಹೋದರು.

ಆ ಮುನಿಗಳ ಮಧ್ಯದಲ್ಲಿ ಹರಿಶ್ಚಂದ್ರನು, ಹಗಲು ಕಾಣಿಸುವ ಚಂದ್ರ ಕಲೆಯಂತೆ, ಬಿರುಬೇಸಿಗೆಯ ವನದಂತೆ, ಬಿಸಿಲಲ್ಲಿ ಬಿಸುಟ ತಳಿರಂತೆ ಕಳೆಗುಂದಿ ಕಂದಿ ಹರಕು ಅರುವೆಯನ್ನುಟ್ಟು ಒಪ್ಪಗೆಟ್ಟು ಪತ್ನೀ ಪುತ್ರ ಮಂತ್ರಿಗಳೊಡನೆ, ಕೌಶಿಕ ಮುನಿಗಳ ಕಾವಲಿನಲ್ಲಿ ನಡೆದು ಬರುತ್ತಿದ್ದನು. ಏನನ್ನೂ ಅರಿಯದ ಪ್ರಜೆಗಳು ಆತನ ಸ್ಥಿತಿಯನ್ನು ನೋಡಿ ಬೆದರಿದರು. ಕಳವಳಿಸುತ್ತಲೇ ಮುಂದೆ ಬಂದು ವಂದಿಸಿ ''ಮಹಾರಾಜ ಕಾಣಿಕೆಯನ್ನು ಸ್ವೀಕರಿಸು'' ಎಂದು ನುಡಿದು ಯಥೋಚಿತವಾದ ಕಾಣಿಕೆಯನ್ನು ಮುಂದಿಟ್ಟರು. ಹರಿಶ್ಚಂದ್ರನು ''ಪ್ರಿಯ ಜನರೆ, ನನಗೆ ಅರಸುತನ ಹೋಯಿತು. ಇನ್ನು ಮೇಲೆ ವಿಶ್ವಾಮಿತ್ರಮುನಿಗಳೇ ಅರಸರು. ಅವರ ಆಜ್ಞೆಯನ್ನು ಪಾಲಿಸಿರಿ'' ಎಂದನು. ಪ್ರಜೆಗಳು ಒಪ್ಪಲಿಲ್ಲ. ಹರಿಶ್ಚಂದ್ರನು ಅವರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ಹೀಗೆಯೇ ನಡೆಯಬೇಕೆಂದು ಬೋಧಿಸಿ ಒತ್ತಾಯಪಡಿಸಿ,

ಕಾಣಿಕೆಯನ್ನು ವಿಶ್ವಾಮಿತ್ರರಿಗೆ ಕೊಡಿಸಿದನು. ಅನಂತರ ವಿಶ್ವಾಮಿತ್ರರ ರಥವು ನಗರವನ್ನು ಪ್ರವೇಶಿಸಿತು. ಹರಿಶ್ಚಂದ್ರನು ಮೌನದಿಂದ ನೆರೆದ ಜನರನ್ನು ನೋಡುತ್ತ ನಗರದ ಬೀದಿಯಲ್ಲಿ ನಡೆದನು. ಮಹಾರಾಜನನ್ನು ನೋಡುವುದಕ್ಕಾಗಿ ಪುರಸ್ತ್ರೀಯರು ಬೀದಿಯಲ್ಲಿಯೂ ಮನೆಯ ಬಾಗಿಲಲ್ಲಿಯೂ ಉಪ್ಪರಿಗೆಯ ಮೇಲೂ ನಿಂತಿದ್ದರು. ಕೆಲವರು ಹರಿಶ್ಚಂದ್ರನನ್ನು ಹರಸಬೇಕೆಂದೂ ಆರತಿಯನ್ನೆತ್ತಬೇಕೆಂದೂ ಸೇಸೆಯನ್ನಿಕ್ಕಬೇಕೆಂದೂ ಆಶಿಸಿದ್ದರು. ಕೆಲವು ಸ್ತ್ರೀಯರು ತಮ್ಮ ರೂಪನ್ನೂ ಸೊಬಗನ್ನೂ ಮೆರೆಸಬೇಕೆಂದು ನವರತ್ನಖಚಿತವಾದ ಚಿನ್ನದ ಒಡವೆಗಳನ್ನು ತೊಟ್ಟು ಉತ್ಸಾಹದಿಂದ ಕಾದಿದ್ದರು. ಅವರೆಲ್ಲರೂ ರಾಜನ ಇರವನ್ನು ನೋಡಿ, ಬೆಂಕಿಯ ತಾಪಕ್ಕೆ ಸಿಲುಕಿದ ಹೂವಿನ ರೆಂಬೆಗಳಂತಾದರು! ವಿಶ್ವಾಮಿತ್ರರು ಇದಾವುದನ್ನೂ ಗಣಿಸದೆ ನೇರವಾಗಿ ಹೋಗಿ ಅರಮನೆಯನ್ನು ಪ್ರವೇಶಿಸಿದರು. ಹಿಂದೆ ಬಂದ ಹರಿಶ್ಚಂದ್ರನ ಕೈಹಿಡಿದು ಸಿಂಹಾಸನದ ಬಳಿಗೆ ಹೋಗಿ "ಎಲೈ ಹರಿಶ್ಚಂದ್ರ. ಈ ಸಿಂಹಾಸನವನ್ನು ನೋಡು. ಆನೆ ಕುದುರೆ ರಥಗಳಿಂದ ತುಂಬಿರುವ ಸೇನೆಯನ್ನು ನೋಡು. ಅಪರಿಮಿತವಾದ ಭಂಡಾರವನ್ನು ನೋಡು. ಪ್ರಬಲವಾದ ಕೋಟೆಯಿಂದ ಸುರಕ್ಷಿತವಾದ ರಾಜಧಾನಿಯುಂಟು. ಅಸಂಖ್ಯಾತರಾದ ಪರಿಜನರಿದ್ದಾರೆ. ನಿನ್ನ ಈ ಪತ್ನಿ ಈ ಪುತ್ರ, ಈ ಮಂತ್ರಿ, ಈ ಅಂತಃಪುರ ಸ್ತ್ರೀಯರು – ಇವರಾರು ಶೋಕಿಸಬಾರದು ಎಂಬ ಬಯಕೆ ನಿನಗಿದ್ದರೆ, ನನ್ನ ಕನ್ನಿಕೆಯರನ್ನು ಮದುವೆಯಾಗು! ನಿನ್ನನ್ನು ಕಾಡದೆ ಬಿಟ್ಟುಹೋಗುವೆನು" ಎಂದರು. ಆಗ ಹರಿಶ್ಚಂದ್ರನು "ಮಹರ್ಷಿಗಳೇ, ಹೆತ್ತ ತಾಯಿಯನ್ನು ಮಾರಿ ತೊತ್ತನ್ನು ಕೊಳ್ಳುವರೆ? ಮೂಗನ್ನು ಕೊಯಿಸಿಕೊಂಡು ಕನ್ನಡಿಯಲ್ಲಿ ನೋಡಿಕೊಳ್ಳುವರೆ? ಮಾಣಿಕ್ಯದ ಒಡವೆಯನ್ನು ಒತ್ತೆಯಿಟ್ಟು ಗಾಜನ್ನು ತರುವರೆ? ಮದುವೆಗಾಗಿ ಪ್ರಾಣವನ್ನರ್ಪಿಸುವರೆ? ಕಸ್ತೂರಿಯನ್ನು ಕೊಟ್ಟು ಹುರಿಗಾಳನ್ನು ತಿನ್ನುವರೆ? ಹೊಲತಿಯರನ್ನು ನೆರೆದು ಇಪ್ಪತ್ತೊಂದು ತಲೆಯವರೆಗೆ ನನ್ನವರನ್ನು ನರಕಕ್ಕೆ ಕಳಿಸಲೆ? ಎಂದನು.

ವಿಶ್ವಾಮಿತ್ರ :– ಹರಿಶ್ಚಂದ್ರ, ಒಲ್ಲೆನೆಂದು ಹೇಳಬೇಡ.

ಹರಿಶ್ಚಂದ್ರ :– ಒಲ್ಲೆನೆಂದೇ ಹೇಳುತ್ತೇನೆ!

ವಿಶ್ವಾಮಿತ್ರ :– ಏಕೆ?

ಹರಿಶ್ಚಂದ್ರ :- ಏಕೆ ಹೇಳಬಾರದು? ಒಲ್ಲೆನೆಂದರೆ ತಪ್ಪೇನು?

ವಿಶ್ವಾಮಿತ್ರ :- ಸರಿ; ಹಾಗಿದ್ದರೆ- ನಿನ್ನ ಅಧಿಕಾರಿಗಳು, ಸೇನಾಪತಿಗಳು- ಮೊದಲಾದವರೆಲ್ಲರನ್ನೂ ಕರೆಸಿ, ಅವರೆದುರಿಗೆ ದೇಶಕೋಶ ಬೀಗಮುದ್ರೆಗಳೆಲ್ಲವನ್ನೂ ನನಗೆ ಓರಣವಾಗಿ ಒಪ್ಪಿಸಿ ತೊಲಗು ಇಲ್ಲಿಂದ! ಬೇಗನೆ!

ಹರಿಶ್ಚಂದ್ರನು ಒಡನೆಯೇ ಮಂತ್ರಿ ಮೊದಲಾದವರನ್ನು ಅರಮನೆಗೆ ಕರೆಸಿದನು.

ಕಾನನ ಪರಿಭ್ರಮಣ

ಅನಂತರ ಧೈರ್ಯನಿಧಿಯಾದ ಹರಿಶ್ಚಂದ್ರ ಭೂಪಾಲನು ತನ್ನ ನಿಖಿಲ ಪರಿವಾರವನ್ನೂ ಚತುರಂಗ ಬಲವನ್ನೂ ಅರಮನೆಯ ಸ್ತ್ರೀಜನರನ್ನು ಪುರಜನರನ್ನೂ ವಿಶ್ವಾಮಿತ್ರರಿಗೆ ತೋರಿಸಿ ಪರಿಚಯ ಮಾಡಿಸಿದನು. ನೆರೆದಿದ್ದ ನಿಖಿಲ ಜನರ ಮುಖವೂ ದುಗುಡದಿಂದ ಬಾಡಿತ್ತು. ಬಾಯಿ ಒಣಗಿತ್ತು. ಕಂಬನಿ ಸುರಿದಿತ್ತು. ಬುದ್ಧಿ ಕುಗ್ಗಿತ್ತು. ನಿಟ್ಟುಸಿರು ಬೆಳೆದಿತ್ತು. ಕೈಕಾಲು ಕುಸಿದಿತ್ತು. ಮನಸ್ಸು ಮರುಗಿತ್ತು. ಮುದವು ಮಾಸಿತ್ತು. ಅರಮನೆಯಲ್ಲಿ ಸಿರಿಮುಡಿಯನ್ನು ಕಟ್ಟುವ ತಾಂಬೂಲವನ್ನು ಸಜ್ಜುಗೊಳಿಸುವ, ಆರತಿಗಳನ್ನು ಸಿದ್ಧಪಡಿಸುವ, ಚಾಮರಗಳನ್ನು ಬೀಸುವ, ಗಂಧವನ್ನು ತೇಯುವ, ಕನ್ನಡಿ ಕಳಶವನ್ನು ಹಿಡಿಯುವ- ನಾನಾ ವಿಧದ ಸೇವೆಯನ್ನು ಸಲ್ಲಿಸುವ ಪರಿಚಾರಿಕೆಯರನ್ನು ಹರಿಶ್ಚಂದ್ರನು ವಿಶ್ವಾಮಿತ್ರ ಮುನಿಗಳ ವಶಕ್ಕೆ ಒಪ್ಪಿಸಿದನು. ಆ ಸತ್ಯನಿಷ್ಠನು ಕೌಶಿಕ ಮುನಿಗಳನ್ನು ಪ್ರತಿಯೊಂದು ಸ್ಥಳಕ್ಕೂ ಕರೆದುಕೊಂಡು ಹೋಗಿ "ಇದು ರತ್ನಭಂಡಾರ, ಇದು ಹೇಮಭಂಡಾರ, ಇದು ನಾಣ್ಯಗಳ ಕೋಶಾಗಾರ, ಇದು ಬೆಳ್ಳಿಯ ಉಗ್ರಾಣ, ಇದು ಕಂಚಿನ ಉಗ್ರಾಣ, ಇದು ಆಯುಧಾಗಾರ, ಇದು ಸೇನಾನಿವಹ– ಇವೆಲ್ಲವನ್ನೂ ನೋಡಿಕೊಳ್ಳಿರಿ. ಇದು ಬಿರುದಿನ ಮುದ್ರೆ, ಇದು ನಗರ, ಇದು ಅರಮನೆ, ಇದು ಲೆಕ್ಕದ ಪುಸ್ತಕ'– ಹೀಗೆಂದು ಸರ್ವಸ್ವವನ್ನೂ ಅರ್ಪಿಸಿದನು. ಆಮೇಲೆ "ಮುನಿಗಳೆ, ಎಲ್ಲವೂ ನಿಮಗೆ ಸಂದಿತಲ್ಲವೆ? ಇನ್ನು ನಾನು ಹೊರಡಬಹುದೆ?" ಎಂದು ಹೇಳಿ ನಮಸ್ಕರಿಸಿ ಹೊರಟನು.

ಹೀಗೆ ಹರಿಶ್ಚಂದ್ರನು ಸರ್ವಸ್ವವನ್ನೂ ವಿಶ್ವಾಮಿತ್ರರಿಗೆ ಒಪ್ಪಿಸಿ ಹೋಗುತ್ತಿರಲು, ಪ್ರಜೆಗಳು ಕಂಗೆಟ್ಟು ಮರುಗಿ ಬಸವಳಿದು ಬಿಸುಸುಯ್ದು ಮೊರೆಯಿಟ್ಟು ಒರಲುತ್ತ ಬಂದು "ಮಹಾರಾಜ, ನಿನ್ನನ್ನು ನಂಬಿ ನೆಚ್ಚಿದ್ದ ನಮ್ಮೆಲ್ಲರನ್ನೂ ಮರೆತೆಯಾ, ತೊರೆದೆಯಾ, ಮಾರಿದೆಯಾ?" ಎಂದು ಹಲುಬುತ್ತ ಮಿಡಮಿಡನೆ ಮಿಡುಕಿದರು. "ಆನೆಯಿಂದಿಳಿದು ನಡೆಯಲರಿಯದ ನೀನು ಬರಿಗಾಲೊಳೆಂತಡಿಯನಿಡುವೆ? ಹಾಸಿಗೆಯೊಳು ಪವಡಿಸುವಾತ ಕಲ್ಲು ನೆಲದಲ್ಲಿ ಹೇಗೆ ಮಲಗುವೆ? ಶ್ವೇತಚ್ಛತ್ರದ ತಂಪಿನೊಳು ಬರುವ ನೀನು ಬಿರುಬಿಸಿಲನ್ನು ಹೇಗೆ ಸಹಿಸುವೆ? ಕಾಡಿನಲ್ಲಿ ಹೇಗೆ ವಾಸ ಮಾಡುವೆ? ಜನಮಧ್ಯದಲ್ಲಿ ಬೆಳೆದವನು ಏಕಾಕಿಯಾಗಿ ಇರಬಲ್ಲೆಯಾ?" ಎಂದು ಗೋಳಾಡಿದರು. ಆ ಪುರಜನರು ವಿಶ್ವಾಮಿತ್ರನನ್ನು ನಿಂದಿಸುತ್ತ "ಎಲೈ ನಿರ್ದಯ ಮೂರ್ಖ! ರಾಜಧಾನಿಯಿಂದ ಹೊರಗೆ ಬಂದಾಗ ನಿಷ್ಕಾರಣವಾಗಿ ದಾರಿಯಲ್ಲಿ ದಾನವನ್ನು ಯಾರಾದರೂ ಬೇಡುತ್ತಾರೆಯೆ? ಕೇಳಿದ್ದನ್ನು ಕೊಡುವ ಸರಳ ಸ್ವಭಾವದ ರಾಜನು ಸಿಕ್ಕಿದನೆಂದು ಸರ್ವಸ್ವವನ್ನೂ ದೋಚಿದೆಯಾ? ನೀರಸ! ನಿರ್ಗುಣ! ನೀಚ! ನಮ್ಮೆಲ್ಲರನ್ನೂ ಕೊಂದೆಯಾ? ನಮ್ಮ ಒಡಲಲ್ಲಿ ಉರಿಯುವ ಅಳಲಿನ ಬೆಂಕಿ ನಿನ್ನನ್ನು ಇರಿಯದೆ ಇದ್ದೀತೆ! ವಿಶ್ವಾಮಿತ್ರನಲ್ಲ ನೀನು, ವಿಶ್ವದ ಮೃತ್ಯು!" ಎಂದು ಹೇಳಿಕೊಳ್ಳುತ್ತಿದ್ದರು. "ಎಲೈ ಮುನಿಯೆ, ಜಟೆಯನ್ನು ತೆಗೆದು ಕಿರೀಟವನ್ನು ಧರಿಸಲು ಆಸೆಯಾಯಿತೆ? ನಾರುಬಟ್ಟೆಯನ್ನು ಕಳೆದು ಪೀತಾಂಬರವನ್ನುಡುವೆಯಾ? ರುದ್ರಾಕ್ಷಮಾಲೆಯನ್ನೆಸೆದು ಮಣಿಭೂಷಣಗಳನ್ನು ಧರಿಸುವೆಯಾ? ಕಂದಮೂಲವನ್ನು ಬಿಟ್ಟು ಮೃಷ್ಟಾನ್ನವನ್ನು ತಿನ್ನಲು ಇಚ್ಛಿಸಿದೆಯಾ? ದರ್ಭೆಯ ಕಟ್ಟನ್ನು ಎಸೆದು ಕತ್ತಿಯನ್ನು ಹಿಡಿಯುವೆಯಾ? ಅಡವಿಯನ್ನು ತ್ಯಜಿಸಿ ರಾಜಧಾನಿಯಲ್ಲಿರಲು ಬಯಕೆಯಾಯಿತೆ? ವಿಭೂತಿಗೆ ಬದಲಾಗಿ ಸುಗಂಧ ದ್ರವ್ಯಗಳನ್ನು ಪೂಸಿಕೊಳ್ಳಬೇಕೆ? ಜಿತೇಂದ್ರಿಯತ್ವವನ್ನು ದೂರಮಾಡಿ ಮಡದಿಯನ್ನು ಕಟ್ಟಿಕೊಳ್ಳುವೆಯಾ? ಈ ಮುಪ್ಪಿನಲ್ಲಿ ನಿನ್ನ ತಪಸ್ಸಿಗೂ ಮುಪ್ಪು ಬಂದಿತೆ!" ಎಂದು ಹಂಗಿಸಿದರು. ಮತ್ತೆ ಕೆಲವರು "ಎಲೈ ಕೌಶಿಕ, ಮಲೆತು ಬೆನ್ನಟ್ಟಿರುವ ಅರಿಷಡ್ವರ್ಗಗಳನ್ನು ಗೆಲ್ಲಲಾರದವನು ಶತ್ರುಗಳನ್ನು ರಣರಂಗದಲ್ಲಿ ಗೆಲ್ಲುವನೆ? ಇಂದ್ರಿಯಗಳನ್ನೇ ವಶದಲ್ಲಿಟ್ಟುಕೊಳ್ಳಲಾರದ ನೀನು ಯಾವ ರಾಜ್ಯವನ್ನು ವಶದಲ್ಲಿಟ್ಟುಕೊಂಡೀಯೆ? ತಪೋಬಲದಿಂದ ಪುರುಷಾರ್ಥವನ್ನು ಗಳಿಸಲಾರದ ನೀನು ಯಾವ ಬಲದಿಂದ ಅರ್ಥಸಂಚಯವನ್ನು ಗಳಿಸೀಯೆ? ಮೂರ್ಖ!" ಎಂದು ಹೇಳಿಕೊಳ್ಳುತ್ತಿದ್ದರು.

ಸುತ್ತಲೂ ನೆರೆದ ಪೌರಜನರು ಹರಿಶ್ಚಂದ್ರನನ್ನು ನೋಡಿ ಕಂಗೆಟ್ಟು ''ಅಯ್ಯೋ! ನಮ್ಮ ನಗರದ ಪುಣ್ಯವು ಪುರುಷರೂಪವನ್ನು ಧರಿಸಿ ಹೊರಟುಹೋಗುತ್ತಿದೆ. ನಮ್ಮ ಭಾಗ್ಯವು ಅಡವಿಗೆ ನಡೆಯುತ್ತಿದೆ. ಸಪ್ತಸಮುದ್ರ ಪರಿವೃತವಾದ ಭೂಮಂಡಲದ ಸಿರಿಯ ಸೊಬಗು ಅಜ್ಞಾತವಾಸವನ್ನು ಕೈಗೊಳ್ಳುತ್ತಿದೆ. ದೀನರ ಮತ್ತು ಅನಾಥರ ಆನಂದವು ಅಡಗುತ್ತಿದೆ. ಮುನಿಗಳ ಯಾಗರಕ್ಷಾಬಲವು ಅಳಿಯುತ್ತಿದೆ'' ಎಂದು ಮೊರೆಯಿಟ್ಟರು. ಎಲ್ಲೆಲ್ಲಿಯೂ ದುಃಖದ ಹಾಹಾಕಾರವೆದ್ದಿತು. ಭೂಮಿ ಬಾಯ್ದೆರೆಯಿತೋ ದಿಕ್ಕುಗಳು ಅಸವಳಿದು ಅಳುತ್ತಿವೆಯೋ ಅಂಬರವು ಕಂಬನಿಗರೆಯುತ್ತಿದೆಯೋ ಎಂಬಂತಿರಲು, ಹರಿಶ್ಚಂದ್ರನು ಅವರೆಲ್ಲರನ್ನೂ ಸಂತೈಸುತ್ತ ನಗರದ ಹೊರಗೆ ಬಂದನು. ಹಿಂದೆ ಕೌಶಿಕ ಮುನಿಗಳು ಬರುತ್ತಿದ್ದರು. ಹರಿಶ್ಚಂದ್ರನು ಅವರನ್ನು ಕುರಿತು ''ಮುನಿಗಳೆ, ಹಿಂದೆ ನಾನು ರಾಜನೆಂಬ ಗರ್ವದಿಂದಲೂ ಹೊಲತಿಯರನ್ನು ತಂದು ಕುಲವನ್ನು ಕೆಡಿಸಬಾರದೆಂಬ ಅಳಲಿಂದಲೂ ನಿಮ್ಮನ್ನು ದಟ್ಟಿಸಿ ಮಾರುತ್ತರವನ್ನು ಕೊಟ್ಟು ಆಡಬಾರದ ಮಾತನ್ನಾಡಿದೆನು. ಅವಿನಯದ ನುಡಿಯನ್ನಾಡಿದ ಚಂಡಾಲ ನಾನು! ನನಗಿಂತ ಅಧಮರಿಲ್ಲ! ಸರ್ವಾಪರಾಧಿ ಯಾದೆನು. ತಂದೆ, ನನ್ನಲ್ಲಿ ಕರುಣೆಯನ್ನು ತೊರೆಯಬಾರದು'' ಎಂದು ಕೈಮುಗಿದು ಬೇಡಿದನು. ಪರಿವಾರದ ಜನರನ್ನು ನೋಡಿ ''ನೀವು ಮನದಲ್ಲಿ ಮರುಗಬೇಡಿರಿ. ಮುನಿಯದಿರಿ, ನೋಯದಿರಿ, ಧೃತಿಗೆಡದಿರಿ. ಎರಡನೆಯ ಪರಶಿವನಂತಿರುವ ವಿಶ್ವಾಮಿತ್ರ ಮುನಿಗಳು ನಿಮ್ಮ ಒಡೆಯರು. ನನಗೆ ಸೇವೆಯನ್ನು ಸಲ್ಲಿಸಿದಂತೆ ಅವರ ಪಾದಕಮಲಗಳಿಗೆ ಸೇವೆಯನ್ನು ಸಲ್ಲಿಸಿರಿ. ಅಂಜುತ್ತ ವಿನಯದಿಂದ ನಡೆದುಕೊಳ್ಳಿರಿ'' ಎಂದು ಹೇಳಿ ಕೈಮುಗಿದು ಪ್ರಾರ್ಥಿಸಿದನು. ಮತ್ತೆ ವಿಶ್ವಾಮಿತ್ರರ ಕಡೆಗೆ ತಿರುಗಿ ''ಮಹಾತ್ಮರೆ, ಲೋಕವಿಖ್ಯಾತರಾದ ಸೂರ್ಯವಂಶದಲ್ಲಿ ಜನಿಸಿದ ಇಕ್ಷ್ವಾಕು ಮಹಾರಾಜನೇ ಮೊದಲಾದ ಭೂಪಾಲರು ಪಾಲಿಸಿಕೊಂಡು ಬಂದ ರಾಜ್ಯವಿದು. ಈ ಪರಿಜನರೂ ಪುರಜನರೂ ಇದುವರೆಗೆ ಯಾವ ಎಡರನ್ನೂ ಬಡತನವನ್ನೂ ಕಂಡವರಲ್ಲ. ಇವರನ್ನು ಪ್ರೀತಿಯಿಂದ ಪಾಲಿಸುತ್ತ ಬರಬೇಕೆಂದು ನಿಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಸಾಲದ ವಸೂಲಿಗಾಗಿ ನನ್ನೊಡನೆ ಬರುವ ತೆರಕಾರನಾರು?'' ಎಂದನು. ವಿಶ್ವಾಮಿತ್ರರು ತಮ್ಮ ಶಿಷ್ಯರ ಗುಂಪನ್ನು ವೀಕ್ಷಿಸಿ, ಹುಸಿ ಅಸೂಯೆ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕಾರುಣ್ಯಗಳಲ್ಲಿ ಅಗ್ರಣಿಯೆನಿಸಿದ ನಕ್ಷತ್ರಕನೆಂಬ ಶಿಷ್ಯನನ್ನು ಆರಿಸಿದರು. ಅವನನ್ನು

ದೂರ ಕರೆದೊಯ್ದು ಕಿವಿಯಲ್ಲಿ ''ಎಲೈ ನಕ್ಷತ್ರಕ, ನೀನು ಹರಿಶ್ಚಂದ್ರನ ಬೆಂಬಿಡಿದು ಹೋಗಿ ನನ್ನ ಸಾಲವನ್ನು ವಸೂಲು ಮಾಡಬೇಕು. ಅವನು ಕೊಡುವ ಸಾಲ ಬರಲಿ ಬಾರದಿರಲಿ, ನನಗೆ ಅದು ಮುಖ್ಯವಲ್ಲ. ಹರಿಶ್ಚಂದ್ರನು ಸುಳ್ಳಾಡಿದನೆಂದು ಸ್ಥಾಪಿಸಬೇಕಾದದ್ದು ಮುಖ್ಯ. ಕಾನನದಲ್ಲಿ ಅವನನ್ನು ಕೆಲವು ದಿನ ಬಂಧನದಲ್ಲಿರಿಸಿ, ಉಪವಾಸ ಬೀಳಿಸಿ, ನನ್ನ ದೇಹಸ್ಥಿತಿ ಸರಿಯಿಲ್ಲವೆಂದು ಕೆಲವು ದಿನ ನೆವವೊಡ್ಡಿ ದಾರಿತಪ್ಪಿಸಿ, ಆಣೆಯಿಟ್ಟು- ಹೇಗಾದರೂ ನಲವತ್ತೆಂಟು ದಿನಗಳ ಅವಧಿ ಕಳೆದುಹೋಯಿತೆಂದು ಸ್ಥಾಪಿಸಬೇಕು. ಅವನ ವಿಷಯದಲ್ಲಿ ಸ್ವಲ್ಪವೂ ಕರುಣೆಯನ್ನು ತೋರಿಸಬೇಡ. ಅನುಸರಿಸಿ ನಡೆಯಬೇಡ. ಸುಮ್ಮನೆ ನಿಲ್ಲಲೂ ಅವಕಾಶ ಕೊಡಬೇಡ. ಯಾವ ಯಾವ ಉಪಾಯವನ್ನಾದರೂ ನೀನು ಕೈಗೊಳ್ಳಬಹುದು. ನೀನು ಬುದ್ಧಿಶಾಲಿಯಾದರೆ, ಗುರುಭಕ್ತಿಯುಳ್ಳವನಾದರೆ, ಹೇಗಾದರೂ ಅವನ ಪ್ರತಿಜ್ಞೆಯನ್ನು ಕೆಡಿಸಿ ಅವನ ಬಾಯಿಂದ ಹುಸಿ ಬರುವಂತೆ ಮಾಡಬೇಕು!'' ಎಂದು ಬೋಧಿಸಿದರು. ನಕ್ಷತ್ರಕನು ''ಗುರುಗಳೇ, ಹರಿಶ್ಚಂದ್ರನು ಇವುಗಳಿಗೆ ಜಗ್ಗುವನೆ? ಈ ಕಾರ್ಯ ನನ್ನಿಂದ ಸಾಧ್ಯವಾದೀತೆ?'' ಎಂದನು. ಆಗ ವಿಶ್ವಾಮಿತ್ರರು ''ನಕ್ಷತ್ರಕ, ನೆವಕ್ಕೆ ನೀನಿರು. ನಿನ್ನಿಂದಾದುದನ್ನು ಮಾಡು. ನಾನು ಬಂದೇ ಬರುವೆನು. ನಾನು ಬಿಸಿಲಾಗಿ, ಬಿರುಗಾಳಿಯಾಗಿ, ಕಲ್ಲುನೆಲವಾಗಿ, ವಿಷಮಾಗ್ನಿಯಾಗಿ, ನಾನಾ ಕ್ರೂರ ಮೃಗವಾಗಿ ಮಸಗಿ, ಘೋರಾರಣ್ಯವಾಗಿ, ಗರ್ಜಿಸಿ ಕವಿರ ಭೂತಭೇತಾಳರಾಗಿ, ಹಸಿವು ನೀರಡಿಕೆ ನಿದ್ರಾಲಸ್ಯಗಳನ್ನಿತ್ತು ಕಾಡಿಸಿ, ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ ಅವನು ಹುಸಿಯಾಡುವಂತೆ ಮಾಡಿಯೇ ತೀರುವೆನು! ನನಗೆ ಗೊತ್ತಿಲ್ಲದ ಮಾರ್ಗ ಉಂಟೆ?'' ಎಂದು ಹೇಳಿ ನಕ್ಷತ್ರಕನನ್ನು ಒಪ್ಪಿಸಿದರು. ಆಮೇಲೆ ಹರಿಶ್ಚಂದ್ರನನ್ನು ಕುರಿತು ''ಈತನು ನನ್ನ ಶಿಷ್ಯ; ನಕ್ಷತ್ರಕ. ಇವನು ತೆರಕಾರನಾಗಿ ನಿನ್ನೊಡನೆ ಬರುವನು. ಇವನು ಸುಖದಲ್ಲಿ ಬೆಳೆದಿದ್ದಾನೆ. ಆಯಾಸವನ್ನು ಸಹಿಸಲಾರ. ಇವನಿಗೆ ತೊಂದರೆ ಕೊಡದೆ ಕ್ಲುಪ್ತಕಾಲದೊಳಗೆ ಹಣವನ್ನು ಕೊಟ್ಟುಬಿಡು. ಇನ್ನು ಹೋಗಬಹುದು!'' ಎಂದರು. ಹರಿಶ್ಚಂದ್ರನು ಅವರ ಪಾದಕ್ಕೆ ನಮಿಸಿ ತನ್ನ ಪತ್ನೀಪುತ್ರರೊಡನೆ ಹೊರಟನು. ಮಂತ್ರಿಯೂ ಅವನನ್ನು ಹಿಂಬಾಲಿಸಿದನು. ರಿಪುಬಲ ಸೂರೆಕಾರನೆನಿಸಿದ ಆ ಧೀರನು ಹೊರಡಲಾಗಿ, ನೆರೆದಿದ್ದ ಪ್ರಜೆಗಳು ಬಾಯಾರುತ್ತ, ಚೀರುತ್ತ ಗೋಳಾಡತೊಡಗಿದರು. ಹರಿಶ್ಚಂದ್ರನು ಮುಂದೆ ನಡೆದನು. ಜನರೆಲ್ಲರೂ ಕಂಬನಿ ಸುರಿಸುತ್ತ ಎಡವುತ್ತ, ಬೀಳುತ್ತ, ಅವನನ್ನು

ಹಿಂಬಾಲಿಸಿದರು. ಆಗ ಹರಿಶ್ಚಂದ್ರನು ಕೈ ಎತ್ತಿ ''ನೀವು ನನ್ನೊಡನೆ ಬರಬಾರದು. ನನ್ನ ಸತ್ಯಮಾರ್ಗಕ್ಕೆ ಹಿತರಾದವರೆಲ್ಲರೂ ಇಲ್ಲಿಯೇ ನಿಲ್ಲಿರಿ. ನನಗೆ ಲೇಸನ್ನು ಬಯಸುತ್ತ ನಿಮ್ಮ ಮನೆಗಳಲ್ಲಿದ್ದು ಕರ್ತವ್ಯವನ್ನು ಪಾಲಿಸಿರಿ. ನನ್ನೊಡನೆ ಬರಬೇಡಿರಿ. ತ್ರಿಶಂಕು ಮಹಾರಾಜನ ಆಣೆ!'' ಎಂದನು. ಪ್ರಜೆಗಳು ''ಆಣೆಯನ್ನು ಮೀರಿದರೂ ಚಿಂತೆ ಇಲ್ಲ, ನಾವು ನಿನ್ನನ್ನು ಬಿಟ್ಟಿರಲಾರೆವು'' ಎಂದು ಹೇಳಿದರು. ''ಪ್ರಜೆಗಳೆ, ಇಂದಿನವರೆಗೆ ಅನೃತದ ಲೇಶವೂ ಅಂಟದ ಈ ಸೂರ್ಯವಂಶಕ್ಕೆ ಕುಂದನ್ನು ಬಯಸುವಿರಾ? ಸತ್ಯಕ್ಕೆ ನಾನು ಅಳುಕಿದಾಗ 'ಬೇಡ' ಎನ್ನಬೇಕಾದವರು ನೀವು. ನಾನು ಸತ್ಯಮಾರ್ಗದಲ್ಲಿ ಹೋಗುವಾಗ ಹೀಗೆ ಬಳಲುವುದುಂಟೆ? ನನ್ನೊಡನೆ ಬರುವುದುಂಟೆ? ಹೇಗಾದರೂ ಸಾಲವನ್ನು ನಿರ್ಣಯಿಸಿ ತೀರಿಸಿದ ಮೇಲೆ ನಿಮಗೆ ತಿಳಿಸುವೆನು. ಅಲ್ಲಿಯವರೆಗೆ ನೀವು ಇಲ್ಲಿಯೇ ಇದ್ದು ವಿಶ್ವಾಮಿತ್ರಮುನಿಗಳ ಆಜ್ಞೆಯಂತೆ ನಡೆದುಕೊಳ್ಳಬೇಕು'' ಎಂದು ತಿಳಿಸಿ ಸರ್ವರಿಗೂ ಕೈಮುಗಿದನು. ಆ ಪ್ರಜೆಗಳು ''ಮಹಾರಾಜ, ಪೂರ್ಣಚಂದ್ರನೂ ಸಹ ಕಾಲಹೀನನಾಗಿ ಕಾಣದೆ ಹೋಗುವುದುಂಟು. ಆದರೆ ಬೆಳದಿಂಗಳನ್ನು ಕುಡಿದಿರುವ ಚಕೋರ ಪಕ್ಷಿಗಳು ಪುನಃ ಆತನು ಪೂರ್ಣಕಲೆಗಳೊಡನೆ ಮರಳುವವರೆಗೂ ಹಸಿದಿರುತ್ತವೆಯೇ ಹೊರತು ಸೂರ್ಯನ ಬಿಸಿಲನ್ನು ಕುಡಿಯುತ್ತವೆಯೆ? ನಮ್ಮೆಲ್ಲರ ಅರಸನಾದ ನೀನು ನಿನ್ನೊಡನೆ ನಮ್ಮನ್ನು ಕರೆದೊಯ್ದಿದ್ದರೆ, ಮರಳಿ ಬರುವವರೆಗೂ ಕಣ್ಣಲ್ಲಿ ಜೀವವನ್ನು ಹಿಡಿದಿರುತ್ತೇವಲ್ಲದೆ ಅನ್ಯ ಪುರುಷನನ್ನು ನಾವು ಸೇವಿಸುವುದಿಲ್ಲ'' ಎಂದು ಹೇಳಿದರು. ಹರಿಶ್ಚಂದ್ರನು ''ಮಹಾಜನರೆ, ಇನ್ನು ಕಾಡಬೇಡಿರಿ. ಈ ಛಲವು ಬೇಡ.. ಈ ಬಗೆಯ ಹಠಮಾರಿತನ ಸಲ್ಲದು. ಕೈ ಮುಗಿದು ಪ್ರಾರ್ಥಿಸುತ್ತೇನೆ' ಎಂದು ನುಡಿದು ಎರಡು ಕೈಗಳನ್ನೂ ಜೋಡಿಸಿ ನಮಸ್ಕರಿಸಿದನು. ಅನ್ಯಮಾರ್ಗವನ್ನು ಕಾಣದೆ ಆ ಪ್ರಜೆಗಳು ''ಮಹಾರಾಜ, ನಿನ್ನ ಚಿತ್ತಕ್ಕೆ ಸರಿಯೆಂದಂತೆ ಮಾಡು. ನಮ್ಮ ಚಿಂತೆ ಬೇಡ'' ಎಂದು ನುಡಿದರು. ಹರಿಶ್ಚಂದ್ರನು ಅವರನ್ನು ಸಂತೈಸಿ ಮುಂದೆ ಸಾಗಿದನು. ನೆರೆದ ಜನರೆಲ್ಲರೂ ಭೂಪತಿಯ ಸದ್ಗುಣಗಳನ್ನು ಕೊಂಡಾಡುತ್ತ ಬೆಕ್ಕಸ ಬೆರಗಾಗಿ ಅವನನ್ನೇ ನೋಡುತ್ತ ನಿಂತರು. ಹರಿಶ್ಚಂದ್ರನು ಪರಿಜನ ಪುರಜನರೆಲ್ಲರನ್ನೂ ತೊರೆದು ಹೊರಟು ಹೋಗಲು, ಅವರು ತಾಯಿಯಿಲ್ಲದ ಶಿಶುವಿನಂತಾದರು. ಚಂದ್ರನಿಲ್ಲದ ನೈದಿಲೆಯಂತೆ, ಸೂರ್ಯನು ತೊರೆದ ತಾವರೆಯಂತೆ, ಐಶ್ವರ್ಯವು ತೊಲಗಿದ ಗೃಹದಂತೆ, ಜೀವವಿಲ್ಲದ ದೇಹದಂತೆ, ತೈಲವಿಂಗಿದ ದೀಪದಂತೆ, ನೀರಿಲ್ಲದ ಕೊಳದಂತೆ, ಹಣ್ಣುಗಳನ್ನು ಕಿತ್ತಿಳಿಸಿದ ಮರದಂತೆ ೬ ವರು.

ಮಂತ್ರಿಯಾದ ಸುಮತಿಯು ದಾರಿಯನ್ನು ತೋರಿಸುತ್ತ ಮುಂದೆ ಹೋಗುತ್ತಿದ್ದನು. ಅವನ ಹಿಂದೆ ಹರಿಶ್ಚಂದ್ರನು ಬಾಲಕನಾದ ಲೋಹಿತಾಶ್ವನ ಕೈ ಹಿಡಿದು ನಡೆಯುತ್ತಿದ್ದನು. ಹರಿಶ್ಚಂದ್ರನ ಹಿಂದೆ ಚಂದ್ರಮತಿ. ಸರ್ವಸ್ವವನ್ನೂ ಕಳೆದುಕೊಂಡೆನೆಂಬ ಚಿಂತೆಯನ್ನು ಆ ಭೂಪಾಲನು ಬದಿಗೊತ್ತಿ ಮುನಿಗಳ ದಕ್ಷಿಣೆಯ ಧನವನ್ನು ತೀರಿಸುವುದಕ್ಕಾಗಿ ದಕ್ಷಿಣ ದಿಕ್ಕನ್ನು ತೊರೆದು, ಸಾಲದ ಕೇಳಿಕೆಗೆ ಉತ್ತರವನ್ನು ಕಂಡುಕೊಳ್ಳುವುದಕ್ಕಾಗಿ ಉತ್ತರ ದಿಕ್ಕಿನ್ನು ಹಿಡಿದು ಹೊರಟನು! ಆತನು ಮನಸ್ಸಿನಲ್ಲಿ "ಸತ್ಯ ಪಾಲನೆಗಾಗಿ ನಾನು ಎಷ್ಟು ಕಷ್ಟವನ್ನಾದರೂ ಸಹಿಸಿಯೇನು. ಆದರೆ ಈ ಬಾಲಕನೂ ಮಡದಿಯೂ ಚಳಿಗಾಳಿ ಬಿಸಿಲು ಹಸಿವುಗಳನ್ನು ಕಂಡವರಲ್ಲ. ಮೆಟ್ಟಲು ಪಾದರಕ್ಷೆ ಇಲ್ಲ, ಬೆನ್ನು ಮುಚ್ಚಲೂ ಸೀರೆ ಇಲ್ಲ. ಕೊಂಡುಕೊಳ್ಳಲು ಕೈಯಲ್ಲಿ ಕಾಸಿಲ್ಲ. 'ಹಸಿವಾಗುವುದು' ಎಂದು ಇವರು ನುಡಿದರೆ ಏನು ಮಾಡಲಿ? ನಡೆಯಲಾರೆವೆಂದರೆ ನಿಲ್ಲಲು ಎಡೆ ಯಾವುದು?" ಎಂದು ಚಿಂತಿಸಿ ವಿಷಾದಿಸುತ್ತಿದ್ದನು.

ಮುಗ್ಧಸ್ವಭಾವದ ಲೋಹಿತಾಶ್ವನೂ ಚಂದ್ರಮತಿಯೂ ಅಡವಿಯ ಗಿಡಮರಗಳನ್ನೂ ಖಗಮೃಗಗಳನ್ನೂ ಅಲೆದಾಡುವ ಬೇಡರ ಸಂಕುಲವನ್ನೂ ನೋಡುತ್ತ ಸ್ವಲ್ಪ ದೂರದವರೆಗೆ ಗೆಲುವಿನಿಂದ ನಡೆದರು. ಅನಂತರ ಕವಿವ ಗಾಳಿಗೆ, ಬಿಸಿಲ ಬಿಸಿಗೆ ಧೃತಿಗೆಟ್ಟರು. ಹಸಿವು ತೃಷೆಗಳು ಉಲ್ಬಣಿಸಿದವು. ನಡಿಗೆ ಹಿಮ್ಮೆಟ್ಟಿತು. ಚಂದ್ರಮತಿಯು "ನಾನು ಹಿಂದುಳಿದರೆ ಪತಿಯು ಕೋಪಿಸಿಕೊಳ್ಳಬಹುದು. ಶಕ್ತಿಮೀರಿ ನಡೆಯೋಣವೆಂದರೆ ಕಾಲುಗಳು ಬಹಳ ನೋಯುತ್ತಿವೆ. ಏನು ಮಾಡಲಿ?" ಎಂದು ವಿಷಣ್ಣಳಾದಳು. ಮಡದಿಯು ಹಿಂದುಳಿದುದನ್ನು ಕಂಡು ಹರಿಶ್ಚಂದ್ರನು ಅವಳು ಬರಲೆಂದು ಕಾಯುತ್ತ ಯಾವುದಾದರೊಂದು ಮರದ ಕೆಳಗೆ ನಿಂತುಕೊಳ್ಳುತ್ತಿದ್ದನು. ಸಪ್ತದ್ವೀಪಾಧಿಪತಿಯಾಗಿದ್ದ ಹರಿಶ್ಚಂದ್ರ ಚಕ್ರವರ್ತಿಯು ತನ್ನ ರಾಣಿಯ ಬಾಡಿದ ತುಟಿಯನ್ನೂ ಒಣಗಿದ ಬಾಯನ್ನೂ ಕೆದರಿದ ಮುಂಗುರುಳನ್ನೂ ಸುರಿಯುವ ಬೆವರನ್ನೂ ಬೆನ್ನಿನ ಮೇಲೆ ಹರಡಿದ ಮುಡಿಯನ್ನೂ ಸೊರಗಿದ ಕಣ್ಣುಗಳನ್ನೂ ಕಲ್ಲುಹರಳೊತ್ತಿ ಬೊಕ್ಕೆಗಳೆದ್ದ ಕಾಲುಗಳನ್ನೂ ಬಾತ ಬೆರಳುಗಳನ್ನೂ ಮೆಲ್ಲಗೆ ಅಡಿಯಿಡುವ ಪರಿಯನ್ನು ನೋಡಿ ನಿಟ್ಟುಸಿರು ಬಿಡುತ್ತಿದ್ದನು. ಮಗನನ್ನು ಆಗಾಗ ಎತ್ತಿಕೊಳ್ಳುತ್ತ, ನಡೆಯಲಾರದ ಮಡದಿಯನ್ನು ಸಂತೈಸುತ್ತ, ಬಳಲಿದ ಮಂತ್ರಿಯನ್ನು ಉಪಚರಿಸುತ್ತ, ಕಲ್ಲು ಮುಳ್ಳು ಗಾಳಿ ಬಿಸಿಲು ಹಸಿವು ಬಾಯಾರಿಕೆಗಳ ಕಾಟವನ್ನು

ಸಹಿಸುತ್ತ, ಅಕಟಕಟ! ಹರಿಶ್ಚಂದ್ರನು ಕಾಲಮಹಿಮೆಗೆ ಕೈಮುಗಿಯುತ್ತ ನಡೆದನು. ಹೀಗೆ ಆಯಾಸ ಪಡುತ್ತ ಅವರೆಲ್ಲರೂ ಹೋಗುತ್ತಿರುವಾಗ, ಚಂದ್ರನ ಬಳಿ ರಾಹು ಬರುವಂತೆ ತೆರಕಾರನಾದ ನಕ್ಷತ್ರಕನು ಹರಿಶ್ಚಂದ್ರನ ಸಮೀಪಕ್ಕೆ ಬಂದು ಸೇರಿದನು. ವಿಶ್ವಾಮಿತ್ರ ಮುನಿಗಳು ಬಿಸಿಲಿನ ಬೇಗೆಯನ್ನು ನೂರ್ಮಡಿಯಾಗಿ ಹೆಚ್ಚಿಸಿ, ದಾರಿಯಲ್ಲಿ ಗಿರಿದರಿಗಳನ್ನೂ ಖಗಮೃಗಗಳನ್ನೂ ತರುಮೆಳೆಗಳನ್ನೂ ನಿರ್ಮಿಸಿ ಪರಿಪರಿಯ ಕಿರುಕುಳಗಳನ್ನು ಒಡ್ಡಿದರು. ತಮ್ಮ ಮಾಯಾಶಕ್ತಿಯಿಂದ ದಾರಿಯಲ್ಲಿ ಬಂಡೆಗಳನ್ನೊಟ್ಟಿ ನೆಲವನ್ನು ಸುಡುವಂತೆ ಕಾಯಿಸಿ, ನೆರಳಲ್ಲಿ ಮುಳ್ಳುಗಳನ್ನು ಪೇರಿಸಿ, ಕೊಳದ ನೀರನ್ನು ಕುಡಿಯಲಾರದಷ್ಟು ಕೆಡಿಸಿ, ನಾನಾ ಕ್ರೂರಮೃಗಗಳ ರೂಪದಿಂದ ಗರ್ಜಿಸುತ್ತ ಅಡ್ಡಗಟ್ಟಿದರು. ದೈವವೇ ಕಡೆಗಣಿಸಿದಾಗ ಯಾವುದು ಅಸಂಭವ? ಹರಿಶ್ಚಂದ್ರನು ಜನನಾಥನೆನಿಸಿದ್ದರೂ ಈಗ ಉಪಚರಿಸುವ ಜನರಿಲ್ಲ. ಭೂಮೀಶ್ವರನಾಗಿದ್ದರೂ ಭೂಮಿಯೇ ಕಾಸಿದೊಲೆಯಂತೆ ಕಾದು ಕಾಲಿಡಲು ಅವಕಾಶವನ್ನು ಕೊಡಲಿಲ್ಲ. ಅಕಟ! ರವಿವಂಶಸಂಭೂತನಾಗಿದ್ದರೂ ಉರಿಬಿಸಿಲನ್ನು ತೋರುತ್ತಿದ್ದ ರವಿಗೆ ಹರಿಶ್ಚಂದ್ರನು ಅನ್ಯನೆಂಬಂತೆ ತೋರಿದನು. ಮಾತನಾಡಲು ಶಕ್ತಿಯಿಲ್ಲದೆ ಬಸವಳಿಯುತ್ತಿದ್ದ ಸತಿಯನ್ನು ಸಂತೈಸುತ್ತಿರುವಾಗ, ಬಾಲಕನಾದ ಲೋಹಿತಾಶ್ವನು ಹಸಿವನ್ನು ತಡೆಯಲಾರದೆ ಅಳತೊಡಗಿದನು. ಹರಿಶ್ಚಂದ್ರನು ಕಾಡಿನಲ್ಲಿದ್ದ ಒಂದೆರಡು ಹಣ್ಣುಗಳನ್ನು ಕಿತ್ತು ತಂದು ಮಗನಿಗೆ ಕೊಡಬೇಕೆಂದಿರುವಾಗ, ತೆರಕಾರನಾದ ನಕ್ಷತ್ರಕನು ಮಾರಿಯಂತೆ ಮುಂದೆ ಬಂದು "ನನಗೆ ಹಸಿವಾಗಿದೆ. ಮೊದಲು ನನಗೆ ಊಟವನ್ನು ಹಾಕು! ಈ ಉರಿ ಬಿಸಿಲಲ್ಲಿ ನನ್ನನ್ನು ದಣಿಸುತ್ತಿರುವೆಯಾ?" ಎಂದು ಗಂಟುಬಿದ್ದನು. ಹರಿಶ್ಚಂದ್ರನು "ನನ್ನ ಹತ್ತಿರ ಏನಿದೆ? ಮುಂದೆ ಯಾವುದಾದರೊಂದು ಊರು ಸಿಕ್ಕಿದಾಗ ಹೇಗಾದರೂ ಗಳಿಸಿ ತರುವೆನು" ಎಂದನು. "ಹಸಿಯುತ್ತ ನಿನ್ನೊಡನೆ ಅಲೆಯುವುದು ನನಗೆ ಶಕ್ಯವಿಲ್ಲ. ಊಟವನ್ನು ಹಾಕಲು ಸಾಧ್ಯವಿಲ್ಲದಿದ್ದರೆ, ಕೊಡಬೇಕಾದ ಸಾಲವನ್ನು ಈಗಲೇ ಕೊಟ್ಟುಬಿಡು!" ಎಂದು ನಕ್ಷತ್ರಕನು ಪೀಡಿಸತೊಡಗಿದನು. ಹೀಗೆ ವಿವಿಧ ಹಿಂಸೆಗಳನ್ನನುಭವಿಸುತ್ತ ಹರಿಶ್ಚಂದ್ರನು ಸಾಗುತ್ತಿರುವಾಗ ಸಂಜೆಯಾಯಿತು. ಸೂರ್ಯನು ಪಶ್ಚಿಮದ ತುದಿಯನ್ನು ಸೇರಿದನು. "ಪ್ರಸಿದ್ಧವಾದ ನನ್ನ ವಂಶದಲ್ಲಿ ಜನಿಸಿ, ಸಾರ್ವಭೌಮನಾಗಿ, ವಿಶ್ವವಿಖ್ಯಾತ ಕೀರ್ತಿಯನ್ನು ಗಳಿಸಿದ ಹರಿಶ್ಚಂದ್ರನು ಕೌಶಿಕ ಮುನಿಯ ಕಾಟದಿಂದ ಈ

ಪರಿಯ ಬವಣೆಗೆ ಗುರಿಯಾದನೆ?'' ಎಂಬ ಚಿಂತೆಯಿಂದ ಅವನ ಕಷ್ಟವನ್ನು ನೋಡಲಾರದೆ ಅಡಗಿದನೋ ಎಂಬಂತೆ ಸೂರ್ಯನು ಪಡುವಣ ಕಡಲಲ್ಲಿ ಮುಳುಗಿದನು. ಹರಿಶ್ಚಂದ್ರನ ಕಷ್ಟವನ್ನು ನೋಡಲಾರದ ಜಗತ್ತಿನ ಉಮ್ಮಳಿಕೆಯೋ ಎಂಬಂತೆ ಕಾಳಗತ್ತಲೆ ಕವಿಯಿತು. ಶೋಕಾತುರನಾದ ಭೂಪಾಲನು ನಟ್ಟಡವಿಯಲ್ಲಿ ಏನು ಮಾಡುತ್ತಿರವನೋ ನೋಡಬೇಕೆಂಬ ಕುತೂಹಲದಿಂದ ಗಗನವು ಕಣ್ಣರಳಿಸಿತೋ ಎಂಬಂತೆ ತಾರೆಗಳು ಮೂಡಿದವು! ಈ ಕಾರ್ಗತ್ತಲೆಯಲ್ಲಿ ಮಹಾರಾಜನ ಪತ್ನೀ ಪುತ್ರರು ಅಂಜಬಹುದೆಂಬ ಶಂಕೆಯಿಂದ ನಿಶಾದೇವಿಯು ದೀಪವನ್ನು ಹಚ್ಚಿಸಿದಳೋ ಎಂಬಂತೆ ಚಂದ್ರಮಂಡಲ ಉದಯಿಸಿತು. ಆಗ ವಿಶ್ವಾಮಿತ್ರರು ತಮ್ಮ ಮಾಯಾಶಕ್ತಿಯಿಂದ ಮೋಡವನ್ನು ನಿರ್ಮಿಸಿ ಚಂದ್ರನಿಗೆ ಮರೆಮಾಡಿ ಕೈ ಬೀಸಲು ಹರಿಶ್ಚಂದ್ರನಿದ್ದ ಅಡವಿಯಲ್ಲಿ ಕಾರ್ಗತ್ತಲೆ ಮುಸುಕಿತು. ಅದರ ಸಾಂದ್ರತೆ ಎಷ್ಟಾಯಿತೆಂದರೆ, ಹರಿಶ್ಚಂದ್ರಾದಿಗಳು ತಮ್ಮ ಮೈಯನ್ನು ಮುಟ್ಟಿ ನೋಡಿ ತಾವು ಇದ್ದೇವೆ ಎಂದು ನಿಶ್ಚಯಿಸಿಕೊಳ್ಳಬೇಕಾಯಿತು! ಉರಿಬಿಸಿಲಲ್ಲಿ ದಿನವೆಲ್ಲವೂ ನಡೆದು ದಣಿದು ಹಸಿದು ಬೆಂಡಾಗಿದ್ದ ಹರಿಶ್ಚಂದ್ರನು ಅಡವಿಯ ನೆಲದ ಮೇಲೆ ಮಲಗಿದನು. ಹಿಂದೆ ಅರಮನೆಯ ಕರುಮಾಡದೊಳಗೆ ಮರಿಹಂಸೆಯ ತುಪ್ಪಳದ ಹಾಸಿಗೆಯಲ್ಲಿ, ಮಣಿಖಚಿತ ಸಾಲಭಂಜಿಕೆಗಳ ತಿಳಿಬೆಳಕಿನಲ್ಲಿ ಸುಖದಿಂದ ಪವಡಿಸುತ್ತಿದ್ದ ಮಹಾರಾಜನು ಅಡವಿಯ ನಡುವೆ, ಕವಿದ ಕತ್ತಲಿನಲ್ಲಿ, ಹಳ್ಳತಿಟ್ಟುಗಳ ಕಲ್ಲುನೆಲದ ಮೇಲೆ ಮುಳ್ಳಿನ ಹಾಸಿಗೆಯಲ್ಲಿ ಮಲಗಬೇಕಾಯಿತು. ಹೊದೆಯಲು ಹೊದಿಕೆಯೂ ಇಲ್ಲದಾಗ ಹಿಮವು ಸುರಿಯತೊಡಗಿತು. ತನ್ನ ಸಡಬಲಗಳಲ್ಲಿ ಒರಗಿದ್ದ ಮಡದಿಯನ್ನೂ ಮಗನನ್ನೂ ಆಗಾಗ ಹರಿಶ್ಚಂದ್ರನು ತಡವಿ ನೋಡುತ್ತಿದ್ದನು. ಮಂತ್ರಿಯೊಡನೆ ನುಡಿಯಲೂ ಹಿಂಜರಿದನು. ಏಕೆಂದರೆ, ಮನುಷ್ಯರ ಸುಳಿವನ್ನರಿತು ಶರಭವೋ ಶಾರ್ದೂಲವೋ ಬಂದು ತನ್ನನ್ನು ಬಗಿದು ತಿನ್ನಬಹುದು. ತಿಂದರೂ ತಿನ್ನಲಿ, ಆದರೆ ಮುನಿಗಳಿಗೆ ನುಡಿಯಿತ್ತ ಪರಿಯಲ್ಲಿ ಸಾಲವನ್ನು ತೀರಿಸದೆ ಸತ್ತನೆಂಬ ಅಪಕೀರ್ತಿ ತನಗೆ ತಗುಲುವುದೆಂಬುದೇ ಆ ಪೊಡವೀಶನ ಅಂಜಿಕೆ. ಆ ಸಮಯದಲ್ಲಿ ಕೌಶಿಕ ಮುನಿಗಳ ಪ್ರೇರಣೆಯಿಂದ ಬಾಲಕನ ಎದೆಯ ಮೇಲೆ ಚೇಳು ಹರಿದಾಡಿತು! ಮಡದಿಯ ಬಳಿಯಲ್ಲಿ ಸರ್ಪವು ಭುಸ್ಸೆಂದು ಭೋರ್ಗರೆಯಿತು! ಅವಳು ಹಾ ಎಂದು ಹೆದರಿ ಕೂಗಿಕೊಂಡಳು. ದೂರದಲ್ಲಿ ಹುಲಿಕರಡಿಗಳ ಗರ್ಜನೆ ಕೇಳಿಸಿತು! ಅರಣ್ಯದಲ್ಲಿದ್ದ

ಭೂತಭೇತಾಳಗಳು ಸುಳಿದಾಡಿದವು! ಚಂದ್ರಮತಿಯೂ ಲೋಹಿತಾಶ್ವನೂ ಗಡಗಡನೆ ನಡುಗಿ ಹರಿಶ್ಚಂದ್ರನನ್ನು ಗಟ್ಟಿಯಾಗಿ ತಬ್ಬಿಕೊಂಡರು. ಭೂಪಾಲನು ಅವರನ್ನು ನಂಬಿಸುತ್ತ ಸಂತೈಸುತ್ತ 'ಶಿವ ಶಂಕರ ವಿರೂಪಾಕ್ಷ' ಎಂದು ಭಗವಂತನನ್ನು ಸ್ಮರಿಸುವಂತೆ ಹೇಳುತ್ತಿದ್ದನು. ಸಮೀಪದಲ್ಲಿಯೇ ಇದ್ದ ತೆರಕಾರನಾದ ನಕ್ಷತ್ರಕನು "ಹರಿಶ್ಚಂದ್ರ, ನೀನು ಅಡವಿ ಪಾಲಾಗಿ ಮಡದಿ ಮಕ್ಕಳನ್ನು ನೋಯಿಸುವುದೇಕೆ? ಇದು ಕಡು ಮೂರ್ಖತನವಲ್ಲದೆ ಮತ್ತೇನು? ಈಗಲಾದರೂ ನನ್ನ ಗುರುಗಳು ಹೇಳಿದಂತೆ ಮಾಡಿ ಸುಖವಾಗಿರು!" ಎಂದನು. ಹರಿಶ್ಚಂದ್ರನು "ಆ ಮಾತನ್ನು ಮಾತ್ರ ಹೇಳಬೇಡ. ಇದು ಯಾವ ನೋವು? ಯಾವ ಕಷ್ಟ? ದುರ್ಮಾರ್ಗದಲ್ಲಿ ನಡೆದು ನನ್ನ ವಂಶಕ್ಕೆ ಕೆಟ್ಟ ಹೆಸರನ್ನು ತರಬೇಕೆ? ಎಲೆ ಮರುಳೆ! ನನ್ನ ಮನಸ್ಸಿನ ದೃಢತೆಯನ್ನು ಮತ್ತೆ ಮತ್ತೆ ಪರೀಕ್ಷಿಸಲು ಬರಬೇಡ!" ಎಂದು ಜಡಿದು ಹೇಳಿದನು. ಈ ರೀತಿಯಲ್ಲಿ ರಾತ್ರಿಯು ಕಳೆಯಿತು. ಸೂರ್ಯನು ಉದಯಿಸಿದನು.

ವಿಶ್ವನಾಥ ದರ್ಶನ

ಹರಿಶ್ಚಂದ್ರನು ಒಂದು ತೊರೆಯಲ್ಲಿ ಸ್ನಾನವನ್ನು ಮಾಡಿ ಸಂಧ್ಯಾವಂದನೆಯನ್ನು ಆಚರಿಸಿ ಇಂದುಶೇಖರನ ಅಡಿದಾವರೆಗಳನ್ನರ್ಚಿಸಿ ಗುರುವನ್ನು ಸ್ತುತಿಸಿದನು. ಅನಂತರ ಆ ಧೀರೋದಾತ್ತನು ಮಗನನ್ನು ಎತ್ತಿಕೊಂಡು ಸತಿಯನ್ನು ಸಂತೈಸುತ್ತ ಮಂತ್ರಿಯೊಡನೆ ಮಾತಾಡುತ್ತ ನಕ್ಷತ್ರಕನ ಪ್ರಶ್ನೆಗೆ ಉತ್ತರಕೊಡುತ್ತ ಮುಂದಿನ ದಾರಿಯನ್ನು ಹಿಡಿದು ನಡೆದನು. ಏರುವ ಬಿಸಿಲಿಂದ ನೆತ್ತಿ ಬಿಸಿಯಾಯಿತು. ಕಾಲು ಸುಡತೊಡಗಿತು. ಬಿಸಿಗಾಳಿ ಬೀಸಲಾರಂಭಿಸಿತು. ಉದರದಲ್ಲಿ ಹಸಿವಿನ ಬಿಸಿ, ಬಾಯಲ್ಲಿ ನೀರಡಿಕೆಯ ಬಿಸಿ. ಅಳುಕುತ್ತ ಬಳುಕುತ್ತ ಮುಂದೆ ಸಾಗುತ್ತಿರಲು, ನಿಷ್ಕರುಣೆಯಿಂದ ವಿಶ್ವಾಮಿತ್ರರು ಮತ್ತೊಂದು ಕುಟಿಲತಂತ್ರವನ್ನು ಹೂಡಿದರು.

ಎದುರಿಗೆ ಅತಿಭೀಕರವಾದ ಕಾಳ್ಗಿಚ್ಚು ಮೇಲೆದ್ದು ಇವರೆಡೆಗೆ ಸರಿಯುತ್ತ ಆವರಿಸಿತು. ಕಾರ್ತವೀರ್ಯನು ಜಮದಗ್ನಿ ಮುನಿಯನ್ನು ಕೊಂದುದರಿಂದ ಭುಗಿಲೆದ್ದ ಜಾಮದಗ್ನ್ಯನ ಕ್ರೋಧಾಗ್ನಿಯು ಕಡಲನ್ನು ಕುಡಿದು ಹಸಿವಡಗದೆ ಪೊಡವಿಯನ್ನು ಸುಡುತ್ತ ನಡೆತರುವುದೋ, ಕಾಲಾಗ್ನಿರುದ್ರನು ಅಕಾಲದಲ್ಲಿ ಪ್ರಳಯಾಗ್ನಿಯನ್ನು ಕೈಬೀಸಿ ಕರೆದನೋ ಎಂಬಂತೆ ದಾವಾನಲವು ರಭಸದಿಂದ ನುಗ್ಗಿ ಬಂದಿತು. ಹುಲುಸಾದ ಹೆಮ್ಮೆಳೆಗಳನ್ನು ಸುಟ್ಟು ಬೂದಿಮಾಡುತ್ತ, ಬೆಟ್ಟವನ್ನು ಸೀಳಿ ಒಡೆಯುತ್ತ, ನೆಲವನ್ನು ಸುಟ್ಟು ಕರಕುಗೈಯುತ್ತ, ಬೆಳೆದ ಮರಗಳನ್ನು ಉರುಬುತ್ತ, ಹೊತ್ತುತ್ತ ಹೊಗೆಯುತ್ತ ಹಬ್ಬುತ್ತ ಹರಿದು ನೆಗೆಯುತ್ತ, ಗಗನವನ್ನು ತುಡುಕುತ್ತ ಸುತ್ತಲೂ ಮುತ್ತಿತು.

ಭುಗಿಭುಗಿಲ್ ಛಿಳಿಛಿಳಿಲ್ ಛಿಟಿಛಿಟಿಲ್ ಛುರಿಛುರಿಲ್ ಛಟಛಟೆಂದು ಧಗಧಗಿಸುತ್ತ ಘುಳು ಘುಳಿಸುತ್ತ ಉಬ್ಬಿ ನೆಗೆದ ದಳ್ಳುರಿ ಬಳ್ಳಿವರಿದು ಕೆಂಗಿಡಿಗೆದರಿ ಸುತ್ತಲೂ ಆವರಿಸಿತು. ಹರಿಶ್ಚಂದ್ರನು ಮಡದಿ ಮಕ್ಕಳ ಕೈ ಹಿಡಿದು ಹೆದರಿ ಗಜಬಜಿಸಿ ಕಾಳ್ಗಿಚ್ಚಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅತ್ತಿಂದಿತ್ತ ಪರದಾಡಿದನು. ಎತ್ತಲೂ ತಪ್ಪಿಸಿಕೊಳ್ಳದಂತೆ ದಾವಾಗ್ನಿಯು ಸುತ್ತಲೂ ಆವರಿಸಿ ಬರಲಾಗಿ, ಹರಿಶ್ಚಂದ್ರನು ಮುಂಗಾಣದೆ ದಿಗ್ಭ್ರಾಂತನಾಗಿ ಸುಮ್ಮನೆ ನಿಂತು ಬಿಟ್ಟನು. ಆ ಸಮಯದಲ್ಲಿ ಬೆಂಕಿಗೆ ಬೆದರಿ ವನದಲ್ಲಿದ್ದ ಶ್ವಾಪದಗಳು ಹರಿಶ್ಚಂದ್ರಾದಿಗಳಿದ್ದಲ್ಲಿಗೆ ಓಡಿಬಂದವು. ಸರ್ಪ, ಸಾರಂಗ, ಹುಲಿ, ಸಿಂಹ, ನರಿ, ತೋಳ, ಕಾಡುಕೋಣ, ಹಂದಿ ಮೊದಲಾದವು ಅರೆಬೆಂದು ಕಂಗೆಟ್ಟು ಸುತ್ತಲೂ ಕವಿದವು. ಕಾಡಾನೆಗೆ ಹೆದರಿ ಸರಿದರೆ ಹಿಂದೆ ಹುಲಿ ಗರ್ಜಿಸುವುದು! ಇನ್ನೊಂದೆಡೆ ಹೋದರೆ ಕರಡಿ ಮಲೆತು ನಿಂತಿರುವುದು! ಮತ್ತೊಂದೆಡೆ ತಿರುಗಿದರೆ ಸಿಂಹ ಆರ್ಭಟಿಸುವುದು! ಅತ್ತ ಕಾಡುಕೋಣ; ಇತ್ತ ಸೀಳ್ನಾಯಿ; ಮತ್ತೊಂದು ಕಡೆ ಭುಸ್ಸೆನ್ನುವ ಸರ್ಪ! ಆ ಅದ್ಭುತವನ್ನು ಏನೆಂದು ವರ್ಣಿಸುವುದು? ಸಕಲರೂ ಬಾಯ್ಬಿಟ್ಟು ಮರುಗಿದರು. ದೇವತೆಗಳು ಹರಿಶ್ಚಂದ್ರನಿಗೊದಗಿದ ವಿಪತ್ತನ್ನು ಕಂಡು ಕರಗಿ "ಶಿವ ಶಿವ ಮಹಾದೇವ ಕರುಣಾಕರನೆ, ಹರಿಶ್ಚಂದ್ರ ನೃಪನನ್ನು ರಕ್ಷಿಸು" ಎಂದು ಪರಮೇಶ್ವರನಲ್ಲಿ ಮೊರೆಯಿಟ್ಟರು. ಆ ಪರಿಸ್ಥಿತಿಯಲ್ಲಿ ತೇಜಸ್ವಿಯೂ ಮಹಾಧೀರನೂ ಆದ ಹರಿಶ್ಚಂದ್ರನು ನಡುಗಿದನೆ? ಬೆದರಿದನೆ? ತೆಕ್ಕಿದನೆ? ತೆರಳಿದನೆ? ಇಲ್ಲ. ಪರಿವೇಶವು ಸುತ್ತಿದಾಗ ಮಧ್ಯದಲ್ಲಿ ತೊಳಗುವ ರವಿಯಂತೆ, ಸಮುದ್ರಮಥನ ಕಾಲದಲ್ಲಿ ತ್ರೈಲೋಕ್ಯವನ್ನೂ ಆವರಿಸುತ್ತಿದ್ದ ಕಾಲಕೂಟದೆದುರಿಗೆ ನಿಂತ ಪರಶಿವನಂತೆ, ದಳ್ಳುರಿಯು ದಾಳಿ ಮಾಡುವಾಗ ದೇದೀಪ್ಯಮಾನವಾಗಿ ಕಂಗೊಳಿಸಿದನು. "ಕಾಶಿಯನ್ನು ಸೇರಲಿಲ್ಲ, ಮುನಿಗಳ ಋಣವನ್ನು ತೀರಿಸಲಿಲ್ಲ, ದಾನವಾಗಿ ಕೊಟ್ಟ ಭೂಮಿಯನ್ನು ದಾಟಿ ಹೋಗಲಿಲ್ಲ, ಆಯುಸ್ಸು ತುಂಬಿ ಮಡಿಯುವಂತಾಗಲಿಲ್ಲ, ನಾನೊಬ್ಬನೇ ಅಲ್ಲದೆ ಸತೀಸುತ ಮಂತ್ರಿಗಳೊಡನೆ ನಟ್ಟಡವಿಯಲ್ಲಿ ದುರ್ಮರಣಕ್ಕೆ ಗುರಿಯಾಗಬೇಕಾಯಿತೆ?" ಎಂಬ ಚಿಂತೆ ಅವನನ್ನು ಬಾಧಿಸಿತು. "ಸಂಗ್ರಾಮ ಭೂಮಿಯಲ್ಲಿ ಶತ್ರುಗಳನ್ನು ಸದೆಬಡಿದು ಮಾರಿಗೆ ಔತಣವನ್ನೀಯುತ್ತ ಮಡಿದು ವೀರಸ್ವರ್ಗವನ್ನು ಸೇರದೆ, ಬೆಂಕಿಗೆ ಸಿಕ್ಕಿ ಅಳಿಯುವಂತಾಯಿತು!" ಎಂದು ಮರುಗಿದನು. ಅನಂತರ ಮಂತ್ರಿಯನ್ನು ಕುರಿತು "ಸತ್ಯಕೀರ್ತಿ, ನನ್ನ ಪತ್ನಿಯೂ

ಪುತ್ರನೂ ಅಗ್ನಿಯಲ್ಲಿ ಸಿಕ್ಕಿ ನನ್ನ ಕಣ್ಣೆದುರಿಗೆ ಸಾಯುವುದನ್ನು ನೋಡಲಾರೆ. ಆಮೇಲೆ ನಾನು ಸಾಯುವುದು ತಪ್ಪಿದ್ದಲ್ಲ. ಆದ್ದರಿಂದ ಮೊದಲು ನಾನು ಈ ಅಗ್ನಿಯಲ್ಲಿ ಅಡಗುವೆನು. ನನ್ನನ್ನು ತಡೆಯಬೇಡ. ಉಮ್ಮಳಿಸಬೇಡ'' ಎಂದನು. ಆಗ ಸತ್ಯಕೀರ್ತಿಯು ''ಮಹಾರಾಜ, ಒಡೆಯನ ಅಳಿವನ್ನು ಸೇವಕನು ನೋಡಬಹುದೆ? ನನಗಿಂತ ಪಾಪಿ ಯಾರಿದ್ದಾರು? ಆಮೇಲೆ ಸತ್ತರೆ ದೊರೆಯುವ ಫಲವಾದರೂ ಯಾವುದು? ಒಡೆಯನೆದುರಿಗೆ ಆಳು ಮಡಿದರೆ ಪುಣ್ಯ ಉಂಟು. ಆಳು ಮುಂದೆ ಹೋದಲ್ಲದೆ ಅರಸನು ನಡೆಯಬಹುದೆ? ತಂದೆ, ಕೆಟ್ಟ ನುಡಿಗಳನ್ನಾಡಬೇಡ'' ಎಂದು ಕೈಮುಗಿದನು.

ಹರಿಶ್ಚಂದ್ರ :- ಸತ್ಯಕೀರ್ತಿ, ಶ್ರೇಷ್ಠ ಕುಲದಲ್ಲಿ ಜನಿಸಿದ ವಿಪ್ರೋತ್ತಮನಾಗಿದ್ದೀಯೆ. ಸಕಲ ವೇದಗಳನ್ನೂ ಆಗಮಗಳನ್ನೂ ಕಲಿತ ಶಿವಭಕ್ತನಾಗಿದ್ದೀಯೆ. ಮನೆಮಕ್ಕಳನ್ನು ತೊರೆದು, ವೃದ್ಧನಾದರೂ ನನ್ನನ್ನು ನಂಬಿ ಬಂದಿದ್ದೀಯೆ. ನಿನ್ನನ್ನು ಕಣ್ಣೆದುರಿಗೆ ಅಗ್ನಿಯಲ್ಲಿ ನೂಕಿದರೆ ನನಗೆ ನರಕವಾಗದಿದ್ದೀತೆ? ಇಂಥ ಅಪಕೀರ್ತಿಗೆ ನಾನು ಗುರಿಯಾಗಲಾರೆ. ಮುಂದೆ ಹೆಜ್ಜೆಯಿಟ್ಟರೆ ನನ್ನಾಣೆ!

ಲೋಹಿತಾಶ್ವ :- ಅಪ್ಪ, ಅಗ್ನಿದೇವನು ನನ್ನನ್ನು ಬಲಿಯಾಗಿ ತೆಗೆದುಕೊಳ್ಳಲಿ. ಅದರಿಂದ ತೃಪ್ತನಾಗಿ ನಿಮ್ಮೆಲ್ಲರನ್ನೂ ಉಳಿಸುವನು. ನನ್ನನ್ನು ಕಳಿಸು.

ಹರಿಶ್ಚಂದ್ರ :- ಮಗು, ಚಿರಂಜೀವಿಯಾಗಿ ಬಾಳು. ನೀನು ಸಾಮ್ರಾಜ್ಯವನ್ನು ಆಳಬೇಕು.

ಲೋಹಿತಾಶ್ವ :- ಸಾಮ್ರಾಜ್ಯವನ್ನು ವಿಶ್ವಾಮಿತ್ರಮುನಿಗಳಿಗೆ ಕೊಡಲಿಲ್ಲವೆ? ಇನ್ನೆಲ್ಲಿಯ ರಾಜ್ಯ?

ಹರಿಶ್ಚಂದ್ರ :- ಮಗು, ಭಗವಂತನ ಕೃಪೆಯಿದ್ದರೆ ಯಾವುದು ಅಸಾಧ್ಯ? ಮಲತಾಯಿ ಸುರುಚಿಯು ಧ್ರುವನನ್ನು ತಿರಸ್ಕರಿಸಿದರೂ, ಅವನು ಚಕ್ರವರ್ತಿಯಾಗಲಿಲ್ಲವೆ? ಶಿವನಿದ್ದಾನೆ. ರಾಜ್ಯವಾಳುವ ಭಾಗ್ಯ ನಿನಗುಂಟು.

ಅಷ್ಟರಲ್ಲಿ ಚಂದ್ರಮತಿಯು ''ಮಾತು ಮುಗಿಯಲಿಲ್ಲವೆ? ಕಾಳ್ಗಿಚ್ಚು ನುಗ್ಗಿ ಬರುತ್ತಿದೆ. ಅರಸ, ಅನುಮತಿಯನ್ನು ಕೊಡು. ಮೊದಲು ನಾನು ಅಗ್ನಿಗೆ ಆಹುತಿಯಾಗುವೆನು'' ಎಂದಳು. ಹರಿಶ್ಚಂದ್ರನು ''ಅರಸಿ, 'ಹರಿಶ್ಚಂದ್ರನು ಸತ್ಯಕ್ಕಾಗಿ

ಸಕಲ ಸಿರಿಯನ್ನೂ ಕಳೆದುಕೊಂಡು ಪತ್ನೀಪುತ್ರರನ್ನು ರಕ್ಷಿಸುತ್ತ ಅಗ್ನಿಯಲ್ಲಿ ಹುತನಾದನು' ಎಂಬ ಮಾತು ಉಳಿಯಬೇಕಲ್ಲದೆ, 'ಕೈಹಿಡಿದ ಮಡದಿಯನ್ನು ಅಗ್ನಿಗೆ ತಳ್ಳಿದನು ಎಂಬ ಮಾತು ಬರಕೂಡದು'' ಎಂದು ಹೇಳಿದನು. ಚಂದ್ರಮತಿಯು ''ನನ್ನ ಸ್ವಾಮಿಯೆ, ಈ ಅಗ್ನಿಯು ಎಲ್ಲರನ್ನೂ ನಾಶಮಾಡದೆ ನನ್ನೊಬ್ಬಳನ್ನು ನಾಶಮಾಡುವುದೆ? ನಿನ್ನ ತರುವಾಯ ನಾನು ಪ್ರಾಣ ಬಿಡುವುದು ಅಧಮತನ. ಮುತ್ತೈದೆತನದಲ್ಲಿ ನಿನ್ನೆದುರಿಗೆ ಕಣ್ಣು ಮುಚ್ಚುವೆನು. ನನ್ನನ್ನು ಕಳಿಸಿಕೊಡು'' ಎಂದು ಲಲ್ಲೆಗರೆದು ಕಾಲಿಗೆ ಬಿದ್ದು ಬೇಡಿಕೊಂಡಳು. ಮಾತು ಬೆಳೆಸಲು ಸಮಯವಿಲ್ಲದ್ದರಿಂದ ಹರಿಶ್ಚಂದ್ರನು ಉಕ್ಕುವ ಅಳಲನ್ನು ಬಿಗಿಹಿಡಿದು ಆಗಲೆಂದು ಒಪ್ಪಿದನು. ಚಂದ್ರಮತಿಯು ಗಂಡನ ಪಾದಗಳಿಗೆ ವಂದಿಸಿ ಹೊರಡಲು, ಲೋಹಿತಾಶ್ವನು ''ಅಮ್ಮ, ನಾನೂ ನಿನ್ನೊಡನೆ ಬರುವೆನು'' ಎಂದನು. ಚಂದ್ರಮತಿಯು ಮಗನನ್ನು ಬಿಗಿದಪ್ಪಿ ಮುಂಡಾಡಿ ಕಣ್ಣೀರೊರಸಿ ''ಕಂದ, ಅಳಬೇಡ'' ಎಂದು ನುಡಿದು ಪತಿಯನ್ನು ನೋಡಿ ಹೀಗೆಂದಳು : ''ಅರಸ, ನಾನು ಬೇಡಿದ್ದನ್ನು ಸಲ್ಲಿಸುತ್ತೀಯೆ ಎಂಬ ಸಲುಗೆಯಿಂದ ನನ್ನ ಯೋಗ್ಯತೆಗೆ ಮಿಕ್ಕು ನಡೆದಿದ್ದೇನೆ. ನಿನಗೆ ಅಂಜದೆ ಅಳುಕದೆ ನೀನು ಕುಳಿತುಕೊಳ್ಳುವ ಪೀಠದಲ್ಲಿ ಕುಳಿತಿದ್ದೇನೆ. ಒಮ್ಮೊಮ್ಮೆ ಎದುರು ಉತ್ತರವನ್ನು ಕೊಟ್ಟಿರಬಹುದು. ನನ್ನ ಸರ್ವಾಪರಾಧಗಳನ್ನೂ ಮನ್ನಿಸಿ ಕರುಣಿಸು'' ಎಂದು ಪತಿಯ ಪಾದಗಳಿಗೆರಗಿ ಬೀಳ್ಕೊಂಡು ಅಗ್ನಿಗೆ ಎದುರಾಗಿ ನಡೆದಳು. ಧೈರ್ಯದಿಂದ ಎದುರಿಗೆ ನಿಂತು ದಿಕ್ಕುಗಳಿಗೆ ನಮಿಸಿ ದೈವಕ್ಕೆ ಎರಗಿ ರವಿಗೆ ವಂದಿಸಿ ಕೈ ಮುಗಿದುಕೊಂಡು ''ಜನ್ಮ ಜನ್ಮಗಳಲ್ಲಿಯೂ ನನಗೆ ಹರಿಶ್ಚಂದ್ರಮಹಾರಾಜನೇ ಗಂಡನಾಗಲಿ, ಲೋಹಿತಾಶ್ವನೇ ಮಗನಾಗಲಿ, ಸತ್ಯಕೀರ್ತಿಯೇ ಮಂತ್ರಿಯಾಗಲಿ, ಇಂದುಶೇಖರನೇ ದೈವವಾಗಲಿ!'' ಎಂದು ಬೇಡಿಕೊಂಡಳು. ಅನಂತರ 'ನಾನು ಉಭಯಕುಲ ಪರಿಶುದ್ಧಳಲ್ಲದಿದ್ದರೆ, ಹರಿಶ್ಚಂದ್ರಭೂಪಾಲನನ್ನಲ್ಲದೆ ಅನ್ಯರನ್ನು ನೆನೆದಿದ್ದರೆ, ಪತಿಗೆ ಒಂದನ್ನಿತ್ತು ಇನ್ನೊಂದನ್ನು ತಿಂದಿದ್ದರೆ, ಈಶ್ವರನನ್ನು ಅನನ್ಯಭಕ್ತಿಯಿಂದ ಭಜಿಸಿಲ್ಲದಿದ್ದರೆ ಈ ದಾವಾಗ್ನಿ ನನ್ನನ್ನು ಸುಟ್ಟು ಬೂದಿ ಮಾಡಲಿ! ಅಲ್ಲದಿದ್ದರೆ ದಾರಿಯನ್ನಿತ್ತು ದೂರ ಸರಿಯಲಿ!'' ಎಂದು ನುಡಿದು ಆ ಸಾಧ್ವಿಯು 'ಶಿವ ಶಿವ ಮಹಾದೇವ! ಅಗ್ನಿಯನ್ನು ಹೊಕ್ಕಳು ಹೊಕ್ಕಳು!'

ಏನಾಶ್ಚರ್ಯ! ಬೆಳಗುವ ಸೂರ್ಯನು ಕಾರ್ಗತ್ತಲೆಯನ್ನು ಹೊಕ್ಕಂತಾಯಿತು!

ಕೌಶಿಕಮುನಿಗಳ ಕೃತಕಾಗ್ನಿಯು ಹರಿದೋಡಿತು! ಉತ್ತಮರ ಮುಂದೆ ಠಕ್ಕುತನ ಎಲ್ಲಿಯವರೆಗೆ ನಡೆದೀತು? ಸುರರು ಹೂಮಳೆಗರೆದರು. ನೆಲದ ಬಿಸಿ ಆರಿತು. ಹರಿಶ್ಚಂದ್ರನು ಪತ್ನಿಯನ್ನು ಆನಂದದಿಂದ ಆಲಂಗಿಸಿಕೊಂಡನು. ಮಂತ್ರಿಯು ಅವಳ ಪಾದಗಳಿಗೆ ಅಡ್ಡಬಿದ್ದನು. ಲೋಹಿತಾಶ್ವನು ನಲಿದನು. ಆಮೇಲೆ ಭೂಪಾಲನು ''ಹರನ ಕೃಪೆಯಿಂದ ಅಗ್ನಿಭಯವು ನೀಗಿತು. ಮುನಿಗಳಿಗೆ ಇತ್ತ ಅವಧಿ ಸಮೀಪಿಸಿತು. ಇನ್ನು ತಡೆಯಬಾರದು. ಬೇಗಬೇಗನೆ ನಡೆಯಿರಿ'' ಎನ್ನುತ್ತ ಅವರೆಲ್ಲರೊಡನೆ ತ್ವರೆಯಿಂದ ಸಾಗಿದನು. ಹಲವು ನಗರಗಳನ್ನೂ ಅರಣ್ಯಗಳನ್ನೂ ಗಿರಿಗಳನ್ನೂ ದಾಟಿ ಹೋದಮೇಲೆ ಎದುರಿಗೆ ಗಂಗಾನದಿ ಕಾಣಿಸಿತು. ಆ ನದಿಯಲ್ಲಿ ಘುಳುಘುಳಿಸಿ ಕವಿವ ತೆರೆಗಳು. ತೆರೆಗಳ ಹಿಂದೆ ಸುಳಿಗಳ ಬಳಗ, ಅದನ್ನು ಬಳಸಿ ಕೊಚ್ಚಿಕೊಂಡು ಬರುವ ಜಲಪ್ರವಾಹ, ಪ್ರವಾಹದ ಹೋರಟೆಯಿಂದ ಉಕ್ಕುವ ನೊರೆಗಳ ರಾಶಿ, ನೊರೆಗಳನ್ನಡಗಿಸಿ ಮತ್ತೆ ನುಗ್ಗಿ ಬರುವ ತೆರೆಗಳು! ಗಂಗಾನದಿಯ ಮಹಿಮೆಗೆ ವೇದವೇ ಸಾಕ್ಷಿ. ಕೇಳಿದರೆ ಪಾಪಹಾರಿಣಿ. ನೆನೆದರೆ ಪುಣ್ಯಕಾರಿಣಿ. ನುಡಿದರೆ ಸಿದ್ಧಿದಾಯಿನಿ, ಕಂಡರೆ ಭವನಾಶಿನಿ. ಆ ನದಿಯನ್ನು ಸ್ತುತಿಸಿದವರಿಗೆ ದೇವೇಂದ್ರಪದವಿ, ಸ್ಪರ್ಶಿಸಿದವರಿಗೆ ಬ್ರಹ್ಮಪದವಿ, ಅದರ ಜಲವನ್ನು ಕುಡಿದವರಿಗೆ ಮುಕ್ತಿ.

ಅವರೆಲ್ಲರೂ ಉಲ್ಲಾಸಗೊಂಡು ಪವಿತ್ರವಾದ ಗಂಗಾನದಿಯಲ್ಲಿ ಸ್ನಾನವನ್ನು ಮಾಡಿ ವಿಶ್ವನಾಥ ದೇವಾಲಯದ ಕಡೆಗೆ ನಡೆದರು. ದೂರದಲ್ಲಿ ಉನ್ನತವಾದ ವ್ಯಾಸಹಸ್ತವು ಗೋಚರಿಸಿತು. ಅತ್ಯುನ್ನತವಾದ ಆ ವ್ಯಾಸಹಸ್ತವು 'ಮದನಹರನಾದ ವಿಶ್ವನಾಥಸ್ವಾಮಿಗೆ ಎಣೆಯಾದ ಇನ್ನೊಂದು ದೈವವು ಹದಿನಾಲ್ಕು ಲೋಕಗಳಲ್ಲಿಯೂ ಇಲ್ಲ! ಎಂದು ಸಾರಿಹೇಳುವುದೋ, 'ಎಲೈ ಪಾತಕಿಗಳೆ, ಹೆದರಬೇಡಿರಿ! ವಿಶ್ವನಾಥನನ್ನು ಸೇವಿಸಿ ಕೃತಾರ್ಥರಾಗಿರಿ' ಎಂದು ಅಭಯವನ್ನು ನೀಡುತ್ತಿದೆಯೋ, 'ಪುಣ್ಯಫಲವನ್ನು ಬಯಸುವವರು ಇಲ್ಲಿಗೆ ಬನ್ನಿರಿ!' ಎಂದು ಕರೆಯುತ್ತಿದೆಯೋ ಎಂಬಂತೆ ಕಾಣಿಸಿತು. ದಾರಿಯಲ್ಲಿ ವಿವಿಧ ಶಿವಾಲಯಗಳ ಸುವರ್ಣಕಲಶಗಳನ್ನು ನೋಡುತ್ತ, ಈಶ್ವರನ ಮಹಿಮೆಯನ್ನು ಹಾಡುತ್ತ ಹೊಗಳುತ್ತ ವಂದಿಸುತ್ತಲಿದ್ದ ಭಕ್ತಜನರನ್ನು ಒತ್ತರಿಸಿ ಹೋಗಿ ಶ್ರೀ ವಿಶ್ವನಾಥನನ್ನು ಹರಿಶ್ಚಂದ್ರನು ಸಂದರ್ಶಿಸಿದನು. ದೇವಾಲಯದ ಆವರಣದಲ್ಲಿ ಭಕ್ತಜನರು ನೆರೆದು–

ಜಯ ಜನಾರ್ದನವಂದ್ಯ, ಜಯ ಜಲಜಭವಪೂಜ್ಯ
ಜಯ ಜಂಭರಿಪುನಾಥ, ಜಯ ಪೂಜನಾತೀತ
ಜಯ ಜಾತವೇದಾಕ್ಷ, ಜಯ ಜಾಹ್ನವೀಮಕುಟ, ಜಯ
ಜರಾಮರಣದೂರ ।
ಜಯ ಜಯ ಜಿತಾನಂಗ, ಜಯ ಜಯ ಜಗತ್ರಾಣ
ಜಯ ಜಯ ಚಿದಾನಂದ, ಜಯ ಜಯೋಮಾರಮಣ

ಎಂದು ಜಯಕಾರ ಮಾಡುತ್ತಿರಲು, ಜಗದೀಶ್ವರನನ್ನು ಹರಿಶ್ಚಂದ್ರನು ನೋಡಿದನು. ಅವನ ಹೃದಯಕ್ಕೆ ಪರಮಾನಂದವಾಯಿತು. ಅವನು ಸುಖ ರಸದಲ್ಲಿ ಓಲಾಡಿ, ಭಗವಂತನನ್ನು ಕೀರ್ತಿಸಿ ಹಾಡಿ, ಸ್ಥಿರಭಕ್ತಿಯನ್ನು ಬೇಡಿ ವಂದಿಸಿ ಅಲ್ಲಿಂದ ಹೊರಟನು. ಆಮೇಲೆ ಕಾಮೇಶ್ವರ, ವಿಭಾಂಡೇಶ್ವರ, ದಕ್ಷೇಶ್ವರ- ಮೊದಲಾದ ಲಿಂಗಗಳನ್ನು ಸಂದರ್ಶಿಸಿದನು. ತನಗೆ ಬಂದ ಕಷ್ಟಗಳೆಲ್ಲವನ್ನೂ ಮರೆತು ದೇವಾಲಯಗಳ ವೈಭವವನ್ನು ನೋಡಿ ಸಂತೋಷಿಸುತ್ತಿರುವಾಗ, ನಕ್ಷತ್ರಕನು ಮಾರಿಯಂತೆ ಎದುರಿಗೆ ಬಂದು ನಿಂತನು! "ನನ್ನ ಹಣವನ್ನು ಮೊದಲು ಕೊಟ್ಟುಬಿಡು! ಇನ್ನು ತಡೆದರೆ ನನ್ನ ಗುರುಗಳು ಸೈರಿಸುವುದಿಲ್ಲ. ನಿನಗೋಸ್ಕರ ನಾನು ಜರಿಸಿಕೊಳ್ಳಬೇಕೆ?" ಎಂದು ಹೇಳಿ ಹರಿಶ್ಚಂದ್ರನ ಬಟ್ಟೆಯನ್ನು ಹಿಡಿದುಕೊಂಡನು. ಹರಿಶ್ಚಂದ್ರನು "ಮುನಿಯೆ, ದಯವಿಟ್ಟು ಶಾಂತನಾಗು. ದೇವರ ದರ್ಶನವನ್ನು ಮಾಡುತ್ತಿದ್ದೇನೆ" ಎನ್ನಲು, "ನೀನು ಹೇಳಿದ್ದ ಅವಧಿ ಇಂದಿಗೆ ಮುಗಿದುಹೋಗುತ್ತದೆ. ಈ ದಿನ ನೀನು ಕೊಡದಿದ್ದರೆ ನಿನ್ನ ಸತ್ಯವ್ರತವೂ ಮುಗಿದು ಹೋಗುತ್ತದೆ!" ಎಂದು ನಕ್ಷತ್ರಕನು ಅಡ್ಡಗಟ್ಟಿದನು.

ಪತ್ನೀಪುತ್ರವಿಕ್ರಯ, ಆತ್ಮವಿಕ್ರಮ

ಸಾಲವನ್ನು ತೀರಿಸಲು ಅದೇ ಕಡೆಯ ದಿನವೆಂಬುದು ನಕ್ಷತ್ರಕನು ಹೇಳಿದಾಗಲೇ ಹರಿಶ್ಚಂದ್ರನಿಗೆ ಸ್ಮೃತವಾದುದು. ಅವನು ಹವ್ವನೆ ಹಾರಿ ಗಾಬರಿಗೊಂಡನು. ಅವಧಿಯು ಮುಟ್ಟಿ ಬಂದಿತು. ತೆರಕಾರನಾದರೋ ಅತ್ಯುಗ್ರನು. ನನಗೆ ಪರಿಚಿತರು ಒಬ್ಬರೂ ಈ ನಗರದಲ್ಲಿಲ್ಲ. ಕಾಲೂರಲು ಸ್ಥಳವಿಲ್ಲ. ತಿರುಪೆ ಬೇಡುವುದು ಅವಮಾನಕರವಾದುದು. ಬೇಡಿದರೂ ಕೊಡುವ ದೊರೆ ಯಾರು! ದುಡಿಯಲು ಎಡೆ ಇಲ್ಲ, ಏನು ಮಾಡಲಿ? ಸತ್ಯದ ನಿಮಿತ್ತವಾಗಿ ಸಕಲ ಸಾಮ್ರಾಜ್ಯವನ್ನು ತೆತ್ತು ಬಂದೆನು. ಆದರೂ ಕಡೆಗೆ ಸತ್ಯವನ್ನು ಉಳಿಸಿಕೊಳ್ಳಲಾರದೆ ಹೋದೆನೆ! ಎಂತಹ ಪಾಪಿಯಾದೆನು! ಎಂದು ಚಿಂತಿಸುತ್ತ ಭೂನಾಥನು ಮನನೊಂದು ಮತಿಯುಡುಗಿ ಧೃತಿಗೆಟ್ಟು ಮರವಟ್ಟು ಕಂಬನಿದುಂಬಿ ಬಿಸುಸುಯ್ದನು. ಮುಖವು ಕಪ್ಪಿಟ್ಟಿತು. ತಲೆಯನ್ನು ತಗ್ಗಿಸಿದನು. ತೆರಕಾರನಾದ ನಕ್ಷತ್ರಕನು ಬಿರುನುಡಿಗಳನ್ನು ಸುರಿಸುತ್ತಲೇ ಇದ್ದನು.

ಸಾಧ್ವಿಯಾದ ಚಂದ್ರಮತಿಯು "ಚಿಂತಾಗ್ನಿಯ ಉರಿಯಲ್ಲಿ ನನ್ನ ಅರಸನು ಕರಗಿಹೋದಾನು" ಎಂದು ಆಲೋಚಿಸಿ ಹೀಗೆಂದಳು :

ಚಂದ್ರಮತಿ :- ಅರಸ, ಅವಧಿ ಇರುವುದು ಇನ್ನು ಎರಡು ಜಾವ ಮಾತ್ರ. ಸುಮ್ಮನೆ ಚಿಂತಿಸಿದರೆ ಏನಾದೀತು? ನನ್ನನ್ನೂ ಈ ಮಗುವನ್ನೂ ಮಾರಿ ಸಾಲವನ್ನು ತೀರಿಸು!

ಹರಿಶ್ಚಂದ್ರ :-ನಿಮ್ಮನ್ನು ಇಷ್ಟು ಕಷ್ಟಕ್ಕೆ ಒಳಪಡಿಸಿ ಪರದೇಶಕ್ಕೆ ತಂದದ್ದಲ್ಲದೆ ಮಾರಬೇಕೆ? ಶಿವ ಶಿವ! ನಾನು ಜೀವಂತನಾಗಿದ್ದು ಈ ಕೆಲಸವನ್ನು ಮಾಡಲೆ?

ಚಂದ್ರಮತಿ :- ಮಡದಿ ಮಕ್ಕಳನ್ನು ತೊರೆದಾದರೂ ಧರ್ಮವನ್ನು ರಕ್ಷಿಸಿಕೊಳ್ಳಬೇಕಲ್ಲವೆ? ಸತ್ಯವ್ರತಕ್ಕೆ ಅಳುಕಿದರೆ ಶಿವನು ಮೆಚ್ಚುವನೆ? ನಿಶ್ಶಂಕೆಯಿಂದ ನಮ್ಮನ್ನು ವಿಕ್ರಯಿಸು. ಮುಂದೆ ಆದುದಾಗಲಿ.

ಬೇರೆ ದಾರಿ ತೋರದೆ ಹರಿಶ್ಚಂದ್ರನು ಮಡದಿಯ ಮಾತಿಗೆ ಒಡಂಬಟ್ಟನು. ನಾಚಿಕೆಯನ್ನು ಬದಿಗೊತ್ತಿ ಅವರೀರ್ವರ ತಲೆಯ ಮೇಲೆ ಹುಲ್ಲುಕಡ್ಡಿಯನ್ನಿಟ್ಟು ನಗರದ ಬೀದಿಬೀದಿಗಳಲ್ಲಿಯೂ ಕೇರಿಕೇರಿಗಳಲ್ಲಿಯೂ ''ಇವರನ್ನು ವಿಕ್ರಯಿಸುತ್ತೇನೆ. ಯಾರಾದರೂ ಕೊಳ್ಳಬಹುದು!'' ಎಂದು ಸಾರುತ್ತ ಸತ್ಯನಿಧಿಯೆನಿಸಿದ ಹರಿಶ್ಚಂದ್ರನು ಅಲೆದನು. ಆ ಸಮಯದಲ್ಲಿ ವಿಶ್ವಾಮಿತ್ರ ಮುನಿಗಳ ಆದೇಶದಿಂದ ಅಗ್ನಿದೇವನು ವಿಪ್ರವೇಷದಲ್ಲಿ ಬಂದು ''ಯಾರು ಯಾರನ್ನು ಮಾರುತ್ತೀಯೆ?'' ಎಂದು ಕೇಳಿದನು. ರಾಜನು ತನ್ನ ಮಡದಿಯನ್ನೂ ಮಗನನ್ನೂ ತೋರಿಸಲಾಗಿ ''ಅಯ್ಯಾ, ಈತನು ಚಿಕ್ಕ ಹುಡುಗ. ಇವಳು ವಯಸ್ಸಾದವಳು. ಇನ್ನು ಬೇರೆ ಯಾರಿದ್ದಾರೆ?'' ಎಂದು ಆ ಬ್ರಾಹ್ಮಣನು ವಿಚಾರಿಸಿದನು. ಹರಿಶ್ಚಂದ್ರನು ''ನನಗೆ ಇರತಕ್ಕವರು ಇವರಿಬ್ಬರೇ. ಇವರನ್ನು ಕೊಂಡು ಉಪಕಾರ ಮಾಡು'' ಎಂದನು. ಬ್ರಾಹ್ಮಣನು ''ಒಳ್ಳೆಯದು. ನೀನು ಕೇಳುವ ಬೆಲೆ ಎಷ್ಟು? ಗಿಟ್ಟಿದರೆ ಕೊಂಡುಕೊಳ್ಳುತ್ತೇನೆ! ಆದರೆ ಹಣವನ್ನು ಕೊಡಲು ಇನ್ನು ಏಳೆಂಟು ದಿನಗಳಾಗುತ್ತವೆ'' ಎಂದು ಉತ್ತರಿಸಿದನು. ಹರಿಶ್ಚಂದ್ರನು ''ಸ್ವಾಮಿ, ಈ ದಿನ ಸಾಯಂಕಾಲದೊಳಗೆ ಒಂದು ರಾಶಿ ಸುವರ್ಣ ನಾಣ್ಯಗಳನ್ನು ಕೊಡುತ್ತೇನೆಂದು ಭಾಷೆಯಿತ್ತಿದ್ದೇನೆ. ಭಾಷೆಯನ್ನು ಸಲ್ಲಿಸದಿದ್ದರೆ ಅನರ್ಥ ಒದಗುವುದು. ಆದ್ದರಿಂದ, ತಂದೆ, ಕರುಣಿಸು. ಚೌಕಾಶಿ ಮಾಡದೆ ನಿನಗೆ ಸರಿಯೆನಿಸಿದಷ್ಟು ಹಣವನ್ನು ಈಗಲೇ ಕೊಟ್ಟು ವ್ಯಾಪಾರವನ್ನು ಮುಗಿಸು'' ಎಂದು ಹೇಳಿದನು. ಆ ವಿಪ್ರನು ''ಈ ಹುಡುಗನಿಗೆ ಇಪ್ಪತ್ತು ಸಾವಿರ, ಈ ಹೆಂಗಸಿಗೆ ಇಪ್ಪತ್ತು ಸಾವಿರ - ಒಟ್ಟು ನಲವತ್ತು ಸಾವಿರ ನಾಣ್ಯಗಳನ್ನು ಕೊಡುತ್ತೇನೆ'' ಎಂದನು. ಹರಿಶ್ಚಂದ್ರನು ನಕ್ಷತ್ರಕನನ್ನು ತೋರಿಸಿ ''ಈತನು ಸಾಲಿಗ. ಸಂದಿತು ಎಂದು ಈತನು ಹೇಳಿದರೆ ಸಾಕು'' ಎಂದನು. ವಿಪ್ರನು ಒಡನೆಯೇ ಅಷ್ಟು ನಾಣ್ಯಗಳನ್ನೂ ತಂದು ಮುಂದಿಟ್ಟನು. ಹರಿಶ್ಚಂದ್ರನು ''ನಕ್ಷತ್ರಕ, ಈ ಹಣ ತೆಗೆದುಕೊ. ನಿನ್ನ ಹಣ ಸಂದಿತೆ?'' ಎಂದು ಕೇಳಿದನು. ಆ ಮುನಿಶಿಷ್ಯನು

"ಸಲ್ಲಬೇಕಾದ ನನ್ನ ಭತ್ಯ ಸಂದಿತು! ಸಾಲವಲ್ಲ! ಇಷ್ಟು ದಿನಗಳವರೆಗೆ ನಿನ್ನೊಡನೆ ಅಲೆದಲೆದು ನಾನು ಬಹಳ ಶ್ರಮವನ್ನು ವಹಿಸಿದ್ದೇನೆ. ಅದಕ್ಕೆ ಬರಬೇಕಾದ ಪ್ರತಿಫಲ ಇದು! ನನ್ನ ಗುರುಗಳಿಗೆ ಕೊಡಬೇಕಾದ ಸಾಲವನ್ನು ಪೂರ್ತಿಯಾಗಿ ಕೊಟ್ಟುಬಿಡು!" ಎಂದು ಉತ್ತರಿಸಿದನು. ಹರಿಶ್ಚಂದ್ರನು ದಿಗ್ಭ್ರಾಂತನಾಗಿ ಆ ಬ್ರಾಹ್ಮಣನನ್ನು ನೋಡಿ "ವಿಪ್ರೋತ್ತಮ, ಇಷ್ಟು ಹಣವನ್ನು ಭತ್ಯವೆಂದು ಈತನು ತೆಗೆದುಕೊಳ್ಳುವುದು ಉಚಿತವೆ? ಪಕ್ಷಪಾತವಿಲ್ಲದೆ ನೀನೇ ಮಧ್ಯಸ್ಥನಾಗಿ ಹೇಳು" ಎನ್ನಲು, ಆ ಬ್ರಾಹ್ಮಣನು "ಆನೆಗಿಂತ ಎತ್ತರದ ಸುವರ್ಣ ರಾಶಿಯನ್ನು ನೀನು ಸಾಲವಾಗಿ ಕೊಡಬೇಕಂತೆ. ಅಷ್ಟು ಹಣವನ್ನು ತೆರಬೇಕಾಗಿರುವಾಗ ಈ ನಲವತ್ತು ಸಾವಿರ ಅತ್ಯಲ್ಪ! ಇದು ತೆರಕಾರನ ಭತ್ಯವೇ ಸರಿ! ಇಷ್ಟು ಮರ್ಯಾದೆ ಸಲ್ಲಲೇಬೇಕು!" ಎಂದು ಹೇಳಿದನು. ಹರಿಶ್ಚಂದ್ರನು ವಿಷಣ್ಣನಾಗಿ "ತಾವರೆಯು ನೀರಿಂದ ಹೊರಗೆ ಬಿದ್ದಾಗ ಸೂರ್ಯನಿಗೂ ಅದರ ಮೇಲೆ ಮುನಿಸು! ನೆಲೆಗೆಟ್ಟ ದೀನರನ್ನು ಕಂಡು ಮುಳಿಯದವರಾರು?" ಎಂದು ಉದ್ಗರಿಸಿದನು. ಆ ವಿಪ್ರನು "ಕಂಡದ್ದನ್ನು ಹೇಳಿದರೆ ಕೆಂಡದಂಥ ಕೋಪವಂತೆ! ನಾನು ಮುಳಿದೆನೆ? ಹೋಗಯ್ಯ ಹೋಗು. ನೀನು ಕೋಪಿಸಿ ಮಾಡುವುದೇನು?" ಎಂದು ಹೇಳಿ ಚಂದ್ರಮತಿ ಮತ್ತು ಲೋಹಿತಾಶ್ವರ ಕಡೆಗೆ ತಿರುಗಿ "ಎಲೆ ಹೆಂಗಸೆ- ಕೆಲಸಕ್ಕೆ ಬಾರದವಳೆ! ನಡೆ ಮನೆಯ ಕೆಲಸಕ್ಕೆ. ಎಲವೊ ಹುಡುಗ, ಕಾಡಿಗೆ ಹೋಗಿ ಹುಲ್ಲು ಸೌದೆಗಳನ್ನು ತರಬೇಕು ನೀನು. ಹೊರಡು ಬೇಗ!" ಎಂದು ಕಟುವಾಗಿ ನುಡಿದನು. ಲೋಹಿತಾಶ್ವನಿಗೆ ದುಃಖವು ಒತ್ತರಿಸಿತು. "ಅಪ್ಪ ಹೋಗಿಬರಲೆ?" ಎಂದು ಹೇಳಿ ತಂದೆಯನ್ನು ಬಿಗಿದಪ್ಪಿಕೊಂಡು ಕೋಡಿಕೋಡಿಯಾಗಿ ಕಣ್ಣೀರು ಹರಸಿದನು. ಚಂದ್ರಮತಿಯು ಪತಿಯ ಪಾದಗಳಿಗೆ ವಂದಿಸಿ ತಲೆಬಾಗಿ ನಿಂತಳು. ಆ ವಿಪ್ರನ ಕಣ್ಣು ಕೆಂಪೇರಿತು. "ಅಬ್ಬ! ನೋಡು ನೋಡು! ಕ್ರಯಕ್ಕೆ ಕೊಂಡಿರುವ ಒಡೆಯನು ನಾನಿರುವಾಗ ಮಾರಿದವನ ಒಪ್ಪಿಗೆ ಕೇಳುವ ಸಾಹಸವೆ!" ಎಂದು ಅವರಿಬ್ಬರನ್ನೂ ನೂಕಿ ಜರಿದು ತನ್ನೊಡನೆ ಕರೆದುಕೊಂಡು ಹೋದನು.

ಹರಿಶ್ಚಂದ್ರನು "ಸಂಗ್ರಾಮದಲ್ಲಿ ಹೋರಾಡಿ ಸೋಲಲಿಲ್ಲ, ಜೂಜಾಡಲಿಲ್ಲ, ರಾಜ್ಯ ಹೋಯಿತು. ರಾಜಧಾನಿ ಹೋಯಿತು. ಐಶ್ವರ್ಯ ಹೋಯಿತು. ಪರಿವಾರ ಕೈಬಿಟ್ಟರು. ಕಡೆಗೆ ಮಡದಿ ಮಕ್ಕಳೂ ಅಗಲಿದರು. ಕ್ರೂರವಾದ ಸಾಲದ ಅವಧಿಯು ತೀರುತ್ತ ಬಂದೇ ಬಿಟ್ಟಿತು. ಋಣವನ್ನು ಯಾವ ಪರಿಯಲ್ಲಿ ಉತ್ತರಿಸಿ ಶುಚಿಯಾದೇನು?

ಪ್ರಾಚೀನ ದುಷ್ಕರ್ಮವು ನನ್ನನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ'' ಎಂದು ಶೋಕಾವಿಷ್ಟನಾದನು. ಆಗ ಮಂತ್ರಿಯಾದ ಸತ್ಯಕೀರ್ತಿಯು ''ಮಹಾಪ್ರಭು, ಸಂಗ್ರಾಮದಲ್ಲಿ ಈರೇಳು ಲೋಕಗಳನ್ನೂ ಜಯಿಸಿ ಸೂರೆಗೊಳ್ಳಬಲ್ಲ ಸಾಮರ್ಥ್ಯಶಾಲಿ ನೀನು. ಮಹಾವೀರನಾದ ನಿನ್ನನ್ನು ಆ ಬಡಮುನಿಯೊಬ್ಬನು ಮಾತಿನ ಥಳುಕಿನಿಂದ ಠಕ್ಕಿಸಿ ಸಮಸ್ತ ರಾಜ್ಯವನ್ನೂ ಅಪಹರಿಸಿ, ಸಾಲದೆಂಬಂತೆ ಋಣವನ್ನೂ ಹೊರಿಸಿದ್ದಾನೆಂದರೆ ಇದು ದುರ್ದೈವದ ಕೈವಾಡವೇ ಸರಿ. ಎಂದಿಗೂ ದುಷ್ಕರ್ಮವಲ್ಲ, ಧೈರ್ಯಗೆಡಬೇಡ, ನಡೆ'' ಎಂದನು. ಆಮೇಲೆ ಹರಿಶ್ಚಂದ್ರನು ತನ್ನನ್ನು ಮಾರಿಕೊಳ್ಳಬೇಕೆಂದು ನಿಶ್ಚಯಿಸಿ ನಗರದ ಬೀದಿಯಲ್ಲಿ ''ಸೂರ್ಯವಂಶದ ಇಕ್ಷ್ವಾಕು ಮಹಾರಾಜನ ಪೀಳಿಗೆಯಲ್ಲಿ ಜನಿಸಿದ ತ್ರಿಶಂಕುಭೂಪಾಲನ ಹಿರಿಯ ಮಗ ನಾನು! ನನ್ನ ಹೆಸರು ಹರಿಶ್ಚಂದ್ರ. ನನ್ನನ್ನು ಯಾರಾದರೂ ಖರೀದಿಗೆ ಕೊಂಡು ಸೇವೆಯನ್ನು ಸಲ್ಲಿಸಿಕೊಳ್ಳಬಹುದು!'' ಎಂದು ಸಾರುತ್ತ ಹೋದನು. ಕೇರಿಕೇರಿಗಳಲ್ಲಿಯೂ ತೊಳಲಿದನು. ''ಈ ನಗರದಲ್ಲಿ ನನ್ನನ್ನು ಕೊಳ್ಳುವವರೇ ಇಲ್ಲವೆ! ಕೊಳ್ಳುವುದಿರಲಿ, ವಿಚಾರಿಸುವವರೂ ಇಲ್ಲ, ಕಣ್ಣೆತ್ತಿ ನೋಡುವವರೂ ಇಲ್ಲ. ಸಾಲದ ಅವಧಿಗೆ ಇನ್ನು ಅರ್ಧ ಜಾವ ಉಂಟು. ಅವಧಿ ಮೀರಿದ ಮೇಲೆ ಆ ಮುನಿಗಳು ಸುಮ್ಮನಿರುವರೆ? ಆಮೇಲೆ ಎಷ್ಟು ಕೊಟ್ಟರೂ ಒಪ್ಪದೆ ಕಠೋರವಾಗಿ ನನ್ನನ್ನು ಹಂಗಿಸದೆ ಇರುವುದಿಲ್ಲ. ಏನು ಗತಿ?'' ಎಂದು ಅವನು ಚಿಂತಾಕ್ರಾಂತನಾದನು.

ಇತ್ತ ವಿಶ್ವಾಮಿತ್ರ ಮುನಿಗಳು ಆಲೋಚಿಸಿದರು : ''ಕನ್ನಿಕೆಯರನ್ನು ಮದುವೆಯಾಗು ಎಂದರೆ 'ಹೊಲತಿಯರನ್ನು ಮದುವೆಯಾಗಲೆ?' ಎಂದು ಈ ದೊಡ್ಡ ಮನುಷ್ಯನು ಧಿಕ್ಕರಿಸಿದನಲ್ಲವೆ? ಇವನು ಹೊಲೆಯನ ಆಳಾಗಿ ಸುಡುಗಾಡನ್ನು ಕಾಯುವಂತೆ ಮಾಡುವೆನು!'' ಹೀಗೆಂದು ನಿಶ್ಚಯಿಸಿ ಕಡುಮೂರ್ಖರಾದ ಆ ಮುನಿಗಳು ಯಮನನ್ನು ಕರೆದು ''ನೀನು ಚಂಡಾಲ ವೇಷಧಾರಿಯಾಗಿ ಕಾಶಿಯಲ್ಲಿ ನೆಲೆಸು. ಹರಿಶ್ಚಂದ್ರನನ್ನು ಕೊಂಡು ಸುಡುಗಾಡು ಕಾಯಲು ನೇಮಿಸು!'' ಎಂದು ತಿಳಿಸಿದರು. ಅದರಂತೆ ಯಮನು ವೀರಬಾಹುಕನೆಂಬ ಹೆಸರಿನಿಂದ ಕಾಶೀನಗರದಲ್ಲಿ ನೆಲೆಸಿದ್ದನು. ಹರಿಶ್ಚಂದ್ರನು ಬೀದಿಯಲ್ಲಿ ತನ್ನನ್ನು ಮಾರಿಕೊಳ್ಳುವುದಾಗಿ ಘೋಷಿಸುತ್ತಿರುವಾಗ, ವೀರಬಾಹುಕನು ಮನೆಯಿಂದ ಹೊರಗೆ ಬಂದನು. ಅವನ ದೇಹ ಅಚ್ಚಗಪ್ಪು, ಕೆಂಗಣ್ಣು, ಕುಡಿದು ಕೊಬ್ಬಿದ ಹೊಟ್ಟೆ, ಕೈಯಲ್ಲೊಂದು ದೊಣ್ಣೆ,

ಮುಪ್ಪುರಿಯ ಭಾರಿ ಜಡೆಯನ್ನು ಕೆದರಿದ ತಲೆಗೆ ಅಡಸಿ ಸುತ್ತಿಕೊಂಡಿದ್ದನು. ಅವನು ಡರ್‍ರನೆ ತೇಗುತ್ತ ತನ್ನ ಸೇವಕರನ್ನು ಗದ್ದರಿಸುತ್ತ ಒಬ್ಬ ಆಳನ್ನು ಹರಿಶ್ಚಂದ್ರನ ಬಳಿಗೆ ಕಳಿಸಿದನು. ಆತನು ಸಮೀಪಕ್ಕೆ ಬಂದು ''ಏನಯ್ಯಾ, ಕ್ರಯಕ್ಕೆ ಕೊಡತಕ್ಕವನು ಯಾರು? ಬೆಲೆ ಏನು? ಮಾರಿಸಿಕೊಳ್ಳುವ ಆ ರಾಜನು ಎಲ್ಲಿದ್ದಾನೆ? ನನ್ನ ಒಡೆಯನಾದ ವೀರಬಾಹುಕನು ಕೊಳ್ಳಬೇಕೆಂದಿದ್ದಾನೆ'' ಎಂದು ತಿಳಿಸಿದನು. ಹೊಲೆಯನು ತನ್ನನ್ನು ಕೊಳ್ಳಬಯಸುವನೆಂಬುದನ್ನು ತಿಳಿದು ಹರಿಶ್ಚಂದ್ರನು ಕೆರಳಿದನು. ''ಅಬ್ಬ! ಸೂರ್ಯವಂಶಸಂಜಾತ ಕ್ಷತ್ರಿಯನಾಗಿ, ವಸಿಷ್ಠಮುನಿಗಳ ಕಾರುಣ್ಯವನ್ನು ಪಡೆದಿರುವ ನನ್ನನ್ನು ಚಂಡಾಲನು ಕೊಳ್ಳುವನೆ? ಏನು ಧಾರ್ಷ್ಟ್ಯವಿದು! ಸ್ವಲ್ಪವೂ ಅಂಜದೆ ಮೇರೆದಪ್ಪಿ ಬಂದು ನನ್ನ ಒಡೆಯನಿಗೆ ದಾಸನಾಗೆಂದು ಈತನು ಹೇಳುವನಲ್ಲ. ಇದೇನು ಕಾಲಗುಣವೊ ಅಥವಾ ನನ್ನ ಕರ್ಮದ ಫಲವೊ? ಮೆಣಸು ಹುಳಿತರೂ ಜೋಳಕ್ಕಿಂತ ಕಳಪೆಯೆ?'' ಎಂದು ಘುಡುಘುಡಿಸಿದನು. ಈಗ ವೀರಬಾಹುಕನು ಮುಂದೆ ಬಂದು ''ಯಾರನ್ನು ಆಕ್ಷೇಪಿಸುತ್ತಿದ್ದೀಯೆ?'' ಎಂದು ಕೇಳಿದನು.

ಹರಿಶ್ಚಂದ್ರ :- ನಿನ್ನ ಸೇವಕನನ್ನು ಆಕ್ಷೇಪಿಸಿದೆ. ಕೀಳು ಮೇಲನ್ನು ವಿಚಾರಿಸದೆ, ಚಂಡಾಲನಿಗೆ ದಾಸನಾಗುವೆಯಾ?- ಎಂದು ಈತನು ಕೇಳಬಹುದೆ?

ವೀರಬಾಹುಕ :- ಕೀಳು ಯಾರು?- ಮೇಲು ಯಾರು? ಕರ್ತವ್ಯ ನಿಷ್ಠನಾಗಿರುವ ನಾನು ಚಂಡಾಲನೊ? ಹುಸಿಯ ಹೊಲೆಯನ್ನು ಹೊರುವ ನೀನು ಚಂಡಾಲನೊ?

ಹರಿಶ್ಚಂದ್ರ :- ನಾನು ಯಾವ ಹುಸಿಯಾಡಿದೆನು?

ವೀರಬಾಹುಕ :- ಯಾರಾದರು ಧನಿಕರು ನನ್ನನ್ನು ಕೊಂಡುಕೊಳ್ಳಬಹುದೆಂದು ನೀನು ಹೇಳಲಿಲ್ಲವೆ?

ಹರಿಶ್ಚಂದ್ರ :- ದಿಟ.

ವೀರಬಾಹುಕ :- ಆದ್ದರಿಂದಲೇ ನಾನು ಕೇಳಿದೆ. ಉತ್ತಮ ದ್ವಿಜರು ಮಾತ್ರ ಕೊಂಡುಕೊಳ್ಳಬೇಕೆಂದು ನೀನು ಹೇಳಿದೆಯಾ? ನೀನು ಸತ್ಯವಂತನೆಂದು ತಿಳಿದುಕೊಳ್ಳುವುದಕ್ಕಾಗಿ ಬಂದೆನು. ನಿನ್ನ ನುಡಿಯೇ ನಿನಗೆ ಹಗೆಯಾಯಿತೆ? ಹುಸಿಯೇ ಹೊಲೆ. ಈ ಹೊಲೆಯನ್ನು ಹೊತ್ತವನು ಹೊಲೆಯನಲ್ಲದಿದ್ದರೆ ಇನ್ನು

ಯಾರು? ರಾಜನೆಂದು ಹೇಳಿಕೊಳ್ಳುತ್ತೀಯೆ. ರಾಜನಾದವನಿಗೆ ನರಕ ತಪ್ಪಿದ್ದೇ ಅಲ್ಲ! ಇನ್ನು ಸುಳ್ಳಿನ ನರಕಕ್ಕೆ ಹೇಸುತ್ತೀಯಾ! ನಿನ್ನೊಡನೆ ಮಾತಾಡಿ ನಾನೇಕೆ ದೋಷವನ್ನು ಕಟ್ಟಿಕೊಳ್ಳಲಿ!

ಹೀಗೆ ಹೇಳಿ ವೀರಬಾಹುಕನ ಹಿಂದಿರುಗಿದನು. ಹರಿಶ್ಚಂದ್ರನು ವಿಸ್ಮಿತನಾಗಿ "ಭಾಪುರೆ! ವಿಧಿಯು ನನ್ನನ್ನು ಇಲ್ಲಿಗೆ ಮುಟ್ಟಿಸಿತೆ! ಈತನಿಗೆ ಮಾರಿಕೊಳ್ಳದಿದ್ದರೆ ಇದೊಂದು ಹುಸಿಯಾಗುವುದು. ಈಗಲೇ ನನ್ನನ್ನು ಕೊಳ್ಳುವವರಾದರೂ ಯಾರು? ಅವಧಿಯು ಕಳೆದು ಹೋದರೆ ವಿಶ್ವಾಮಿತ್ರರಿಗೆ ಕೊಟ್ಟ ಮಾತಿನಂತೆ ನಡೆಯಲಿಲ್ಲವೆಂದು ಇನ್ನೊಂದು ಹುಸಿ ಗಂಟುಬೀಳುವುದು. ಇತ್ತ ರಾಜ್ಯವನ್ನೂ ಕಳೆದುಕೊಂಡು ಅತ್ತ ಅನೃತವಾದಿಯೆಂಬ ಅಪಖ್ಯಾತಿಯನ್ನೂ ಪಡೆಯಲೆ? ವಿಧಿಯ ಗೊಡ್ಡಾಟ ಏನಿದೆಯೋ ನಡೆದು ಹೋಗಲಿ!" ಎಂದು ಆಲೋಚಿಸಿ ವೀರಬಾಹುಕನನ್ನು ಕರೆದನು. ಅವನು ಹಿಂದಿರುಗಿ ನೋಡಿ "ಮತ್ತೇಕೆ ಕರೆಯುವೆ? ಹುಸಿಯ ಹೊಲೆ ಹೊತ್ತವನೆ!" ಎಂದನು.

ಹರಿಶ್ಚಂದ್ರ :- ಸಾಲದ ಹೊರೆಯಲ್ಲಿ ಹೊರಳುತ್ತ ಅರಿಯದೆ ಒಂದು ನುಡಿಯನ್ನಾಡಿದೆನು. ನೀನು ಹೊರಿಸಿದ ಹುಸಿಯನ್ನು ಅಳಿಸಬೇಕೆಂದು ನಿಶ್ಚಯಿಸಿದೆನು.

ವೀರಬಾಹುಕ :- ಹಾಗಿದ್ದರೆ ನೀನು ನನ್ನ ದಾಸನಾಗಬೇಕು. ನಿನ್ನ ಕುಲ ಅಳಿಯದೆ ಹುಸಿ ಅಳಿಯದು!

ಹರಿಶ್ಚಂದ್ರ :- ನಾಡಮದ್ದನ್ನು ತಿಂದ ಮೇಲೆ, ನಾಯಿ ಕೆಡದೆ ಇದ್ದೀತೆ? ಇರಲಿ. ಸೂರ್ಯವಂಶಕ್ಕೆ ಕುಂದು ಬಂದರೂ ಬರಲಿ. ಸಾಲ ತೀರಬೇಕಾಗಿದೆ. ಹಣವನ್ನು ಕೊಟ್ಟು ಸಾಲದ ಹೊರೆಯಿಂದ ನನ್ನನ್ನು ಬಿಡಿಸು.

ವೀರಬಾಹುಕ :- ಎಷ್ಟು? ಒಂದು ಲಕ್ಷ ಸುವರ್ಣ ನಾಣ್ಯಗಳಾಗಬಹುದೊ?

ಹರಿಶ್ಚಂದ್ರ :- ಆನೆಯ ಮೇಲೆ ನಿಂತು ಕವಡೆಯನ್ನು ಮೇಲಕ್ಕೆ ಚಿಮ್ಮಿದರೆ ಎಷ್ಟು ಎತ್ತರ ಹೋಗುವುದೋ ಅಷ್ಟೆತ್ತರದ ಸುವರ್ಣರಾಶಿ.

ವೀರಬಾಹುಕ :- ಒಳ್ಳೆಯದು; ಅಷ್ಟು ಹಣವನ್ನು ತೆತ್ತರೆ ನೀನು ಮಾಡುವ ಕೆಲಸವಾದರೂ ಯಾವುದು?

ಹರಿಶ್ಚಂದ್ರ :- ಯಾವ ಹೊತ್ತು ಯಾವ ಕೆಲಸವನ್ನು ಹೇಳಿದರೂ ಇಲ್ಲವೆನ್ನದೆ ಮಾಡುವೆನು!

ವೀರಬಾಹುಕ :- ಹಾಗಾದರೆ ಕೊಡುವೆನು!

ಅಕಟಕಟ! ಸೂರ್ಯವಂಶೋತ್ಪನ್ನನಾದ ಹರಿಶ್ಚಂದ್ರ ಸಮ್ರಾಟನು ಚಂಡಾಲನ ದಾಸನಾದನು. ವೀರಬಾಹುಕನ ಆಜ್ಞೆಯಂತೆ ಸೇವಕರು ಹೆಡಗೆ ಹೆಡಗೆಗಳಲ್ಲಿ ಹೊನ್ನಿನ ರಾಶಿಯನ್ನು ತುಂಬಿ ತಂದು ಸುರಿದರು. ಆನೆಯ ಮೇಲೆ ನಿಂತು ಏಸೆದ ಕವಡೆಯಷ್ಟೆತ್ತರದ ನಾಣ್ಯಗಳ ರಾಶಿ ಪೇರಿಸಿತು. ನಕ್ಷತ್ರಕನು ಬೆರಗಾಗಿ ತಲೆದೂಗಿದನು. ಹರಿಶ್ಚಂದ್ರನೂ ನಕ್ಷತ್ರಕನೂ ನೋಡುತ್ತಿರುವಾಗ ಪರ್ವತಾಕಾರದ ಆ ಧನರಾಶಿಯು, ಸೂರ್ಯಚಂದ್ರರು ಸುತ್ತುವರಿಯುವ ಮೇರುಗಿರಿಯೋ ಹರಿಯೂ ಬ್ರಹ್ಮನೂ ತಮ್ಮ ಹಿರಿಯತನಕ್ಕಾಗಿ ವಾದಿಸುತ್ತಿರುವಾಗ ಮಧ್ಯದಲ್ಲಿ ಆವಿರ್ಭವಿಸಿದ ಬೃಹದಾಕಾರದ ಜ್ಯೋತಿರ್ಲಿಂಗವೋ ಎಂಬಂತೆ ಕಾಣಿಸಿತು.

ಹರಿಶ್ಚಂದ್ರನು ನಕ್ಷತ್ರಕನನ್ನು ನೋಡಿ ''ಮಹರ್ಷಿಯೆ ನಾನು ಹೇಳಿದ್ದ ಅವಧಿಗೆ ಇನ್ನೂ ಎರಡು ಗಳಿಗೆಗಳಿವೆ. ಮಾತಿನಂತೆ ಸಾಲವು ಸಂದಿತೆ? ನಾನು ಸುಳ್ಳನ್ನು ಹೇಳಲಿಲ್ಲವಷ್ಟೆ? ನನ್ನಿಂದ ನಿನಗೆ ಬಹಳ ಆಯಾಸವಾಯಿತು. ಬಹು ದೂರ ಅಲೆದಾಡಿಸಿದೆನು. ನನ್ನ ತಪ್ಪನ್ನು ಮನ್ನಿಸಬೇಕು. ಉದಾರ ಹೃದಯದಿಂದ ಕ್ಷಮಿಸಬೇಕು. ಸಾಲವನ್ನು ತೀರಿಸಿದ್ದೇನೆಂಬ ಸಂಗತಿಯನ್ನು ವಿಶ್ವಾಮಿತ್ರ ಮುನಿಗಳಿಗೆ ಅರಿಕೆ ಮಾಡು'' ಎಂದು ಹೇಳಿ ವಂದಿಸಿದನು.

ನಕ್ಷತ್ರಕನು ''ಹರಿಶ್ಚಂದ್ರ, ನನ್ನನ್ನೇಕೆ ನಾಚಿಸುವೆ? ನಿನ್ನಂತಹ ಸತ್ಯನಿಷ್ಠರೂ ದೈವಭಕ್ತರೂ ಈ ಜಗತ್ತಿನಲ್ಲಿಲ್ಲ. ನಿನಗೆ ಶುಭವಾಗಲಿ!'' ಎಂದು ಮನಃಪೂರ್ವಕವಾಗಿ ಆಶೀರ್ವದಿಸಿ, ಧನವನ್ನು ಸಾಗಿಸುವ ಏರ್ಪಾಡಿನಲ್ಲಿ ತೊಡಗಿದನು. ಸತ್ಯನಿಧಿಯಾದ ಹರಿಶ್ಚಂದ್ರನು ತನ್ನ ಒಡೆಯನಾದ ವೀರಬಾಹುಕನೊಡನೆ ಹೊಲೆಗೇರಿಗೆ ನಡೆದನು. ದೇವತೆಗಳು ಜಯಕಾರ ಮಾಡಿದರು.

ವೀರಬಾಹುಕನ ಮನೆಯ ಹೊರಗಡೆ ನಾನಾ ಪ್ರಾಣಿಗಳ ಹಸಿಯ ಚರ್ಮಗಳನ್ನು ತೂಗುಹಾಕಿತ್ತು. ಒಂದು ಕಡೆ ಅರಚುತ್ತಿದ್ದ ಪ್ರಾಣಿಗಳನ್ನು ಹಿಡಿದೆಳೆದು ಕಡಿದು ಕೊಚ್ಚಿ ಬೇಯಿಸುತ್ತಿದ್ದರು. ಇನ್ನೊಂದೆಡೆ ಕರುಳುಗಳನ್ನು ಹಿಂಡಿ ಹರಹುತ್ತಿದ್ದರು. ಗೋಡೆಗಳಿಗೆ ರಕ್ತವು ಸಿಡಿದು ಹೇಸಿಕೆಯಾಗಿತ್ತು. ವೀರಬಾಹುಕನು ಮನೆಯನ್ನು ಪ್ರವೇಶಿಸಿ, ನರಗಳನ್ನು ಬಿಗಿದು ಮೂಳೆಗಳಿಂದ ರಚಿತವಾದ ಒಂದು ಮಂಚದಲ್ಲಿ ಹಸಿದೊಗಲಿನ ಹಾಸಿಗೆಯ ಮೇಲೆ ಠೀವಿಯಿಂದ ಕುಳಿತನು. ಹರಿಶ್ಚಂದ್ರನು ಮಂಚದ

ಬಳಿ ನೆಲದಲ್ಲಿ ಕುಳಿತುಕೊಂಡನು. ಆಮೇಲೆ ವೀರಬಾಹುಕನು ನರಕಪಾಲದಲ್ಲಿ ಹಸಿಯ ಗೋಮಾಂಸವನ್ನು ತರಿಸಿ ಮೆಲ್ಲುತ್ತ ಮದ್ಯವನ್ನು ಕುಡಿಯತೊಡಗಿದನು. ಮದ್ಯವನ್ನು ಕುಡಿಯುತ್ತ ಕುಡಿಯುತ್ತ ಆ ಹೊಲೆಯನು, ಅಕಟಕಟ! ರವಿಕುಲತಿಲಕನಾದ ಹರಿಶ್ಚಂದ್ರ ಭೂಪಾಲನ ಹೆಗಲ ಮೇಲೆ ತನ್ನ ಕಾಲುಗಳನ್ನು ನೀಡಿದನು! ಹರಿಶ್ಚಂದ್ರನು ಅಲ್ಲಾಡದೆ ಶಾಂತನಾಗಿದ್ದನು.

ವೀರಬಾಹುಕ :- ಎಲವೊ! ನೀನು ರಾಜನಾಗಿದ್ದೆ ಎಂಬುದು ದಿಟವೆ? ರಾಜನಾದವನು ಅಲುಕದೆ ಬಂದು ನೆಲದಲ್ಲಿ ಕುಳ್ಳಿರುವನೆ? ಸತ್ಕುಲ ಜಾತನಾಗಿದ್ದರೆ ಹೊಲೆಯನಾದ ನನ್ನ ಕಾಲನ್ನು ಹೊರುತ್ತಿದ್ದೆಯಾ? ಮುನಿಗಳು ಹೇಳಿದಂತೆ ಸಾತ್ವಿಕ ಶಿವಾರ್ಚನೆಯನ್ನು ಮಾಡಕ್ಕವನಾಗಿದ್ದರೆ, ಇಲ್ಲಿರುವ ಹೊಲಸಿಗೆ ಹೇಸದೆ ಇರುತ್ತಿದ್ದೆಯಾ? ರಾಜ್ಯಲಕ್ಷ್ಮಿಯು ಕೈಬಿಟ್ಟರೂ ಪೂರ್ವದ ಗುಣಗಳು ತೊಲಗುತ್ತವೆಯೆ? ಇಲ್ಲ ಇಲ್ಲ, ನೀನು ರಾಜನಲ್ಲ! ಯಾವನೋ ಒಬ್ಬ ಭವಿಯ ಮನೆಯಲ್ಲಿ ದುಡಿಯುತ್ತಿದ್ದ ಬೆಪ್ಪನಾಗಿರಬೇಕು!

ಹರಿಶ್ಚಂದ್ರ :- ಬೆಸಸಿದ ಕಾರ್ಯವನ್ನು ಮಾಡುತ್ತೇನೆಂದು ಒಪ್ಪಿಕೊಂಡಿದ್ದೇನೆ. 'ಹಸುವನ್ನು ಕೊಲ್ಲು, ದ್ವಿಜನನ್ನು ಇರಿ, ಸುತನನ್ನು ತಿವಿ, ಸತಿಯನ್ನು ಕಡಿ, ವಿಷವನ್ನು ಕುಡಿ, ಹಾವನ್ನು ಹಿಡಿ, ಬೆಂಕಿಯಲ್ಲಿ ಬೀಳು'- ಎಂದು ಆಜ್ಞೆಯನ್ನಿತ್ತರೂ ನಾನು ಮಾಡಲೇಬೇಕು. ಹೀಗಿರುವಾಗ ಈ ಅಲಕ್ಷೆ ನಾನು ಸೆಡೆಯಬಹುದೆ? ನುಡಿದದ್ದನ್ನು ನಡೆಸುವೆನೆಂಬ ನುಡಿ ಸಡಿಲವಾಗದೆ?

ವೀರಬಾಹುಕ :- ಹಾಗಾದರೆ, ನಾನು ಯಾವ ಕೆಲಸಕ್ಕೆ ನೇಮಿಸಿದರೂ ತಪ್ಪದೆ ನಡೆಸುವೆಯಾ?

ಹರಿಶ್ಚಂದ್ರ :- ನಿಶ್ಚಯವಾಗಿಯೂ ನಡೆಸುವೆನು. ಆನೆಯನ್ನು ಹೂಳುವಷ್ಟು ಹಣದ ರಾಶಿಯನ್ನು ನೀನು ತೆರಲಿಲ್ಲವೆ? ಅದೇನು ನನಗೆ ಕೊಟ್ಟ ದಾನವೆ? ಕೊಟ್ಟ ಮಾತನ್ನು ನಡೆಸದಿದ್ದರೆ ಈ ನೆಲ ನನ್ನನ್ನು ಹೊತ್ತೀತೆ?

ವೀರಬಾಹುಕ :- ಸರಿ; ಈ ನಗರದ ಸುಡುಗಾಡನ್ನು ಕಾಯಲು ನಿನ್ನನ್ನು ನೇಮಿಸಿದ್ದೇನೆ!

ಹರಿಶ್ಚಂದ್ರ :- ಆಗಲಿ. ಅದರ ನಿಯಮಗಳೇನು?

ವೀರಬಾಹುಕ :- ಇದು ನಿಯಮ : ಅಲ್ಲಿಗೆ ತರುವ ಒಂದು ಹೆಣಕ್ಕೆ ನಾಲ್ಕು ಹಾಗಗಳಂತೆ ತಲೆದೆರಿಗೆ, ಆ ತೆರಿಗೆಯನ್ನೂ ಹೆಣದ ಉಡುಗೆಯನ್ನೂ ವಸೂಲುಮಾಡಿ ನನಗೆ ತಂದುಕೊಡಬೇಕು. ಹೆಣದ ಮೇಲೆ ಮನೆಯವರು ಎಸೆಯುವ ಅಕ್ಕಿ ನಿನ್ನ ಸಂಬಳ! ನಿನ್ನ ಊಟ ಮುಂತಾದ್ದನ್ನು ಅದರಿಂದ ಸಾಗಿಸಿಕೊಳ್ಳಬೇಕು. ಯಾವ ಸಂದರ್ಭದಲ್ಲಿಯೂ ಹಿಂಜರಿಯಬಾರದು, ಹುಸಿಯಬಾರದು, ತೆರಿಗೆಯನ್ನು ಬಿಡಬಾರದು.

ಹೀಗೆ ತಿಳಿಸಿ ವೀರಬಾಹುಕನು ಅಧಿಕಾರದ ಸಂಕೇತವಾಗಿ ವೀಳೆಯದ ಪಟ್ಟಿಯನ್ನೂ ಸಂಬಳಿಗೋಲನ್ನೂ ಹರಿಶ್ಚಂದ್ರನಿಗೆ ಕೊಟ್ಟನು. ಸಮಸ್ತ ಪೃಥ್ವಿಮಂಡಲವನ್ನು ಪಾಲಿಸುತ್ತಿದ್ದ ಸಾರ್ವಭೌಮನಿಗೆ ಸ್ಮಶಾನವನ್ನು ಕಾಯುವ ಅಧಿಕಾರ ಮುದ್ರೆ! ಆಮೇಲೆ ಆ ಹೊಲೆಯನು "ಎಲವೊ! ನೀನು ಸುಡುಗಾಡಿನ ತೆರಿಗೆಯ ಅಧಿಕಾರಿ ಎಂಬುದು ನಗರದ ಜನರಿಗೆ ತಿಳಿಯಬೇಕು. ಬೀದಿಬೀದಿಗಳಲ್ಲಿಯೂ ತಮಟೆಯನ್ನು ಹಿಡಿದು ಡಂಗುರ ಹೊಯ್ದು ನೀನು ಯಾರೆಂಬುದನ್ನು ಜನರಿಗೆ ಪರಿಚಯ ಮಾಡಿಸು. ಇನ್ನು ಹೊರಡು" ಎಂದನು. ಸತ್ಯಸಂಪನ್ನನಾದ ಹರಿಶ್ಚಂದ್ರನು ಒಡನೆಯೇ ತಮಟೆಯನ್ನು ಹಿಡಿದು ಬಡಿಯುತ್ತ ತಾನು ಯಾರೆಂಬುದನ್ನು ಸಾರಿ ಹೇಳುತ್ತ ಬೀದಿಬೀದಿಗಳಲ್ಲಿಯೂ ನಡೆದನು: "ಎಲ್ಲರೂ ಕೇಳಿರಿ! ಸುಡುಗಾಡಿನ ಅಧಿಕಾರ ಮುದ್ರೆಯನ್ನು ನಾನು ವಹಿಸಿಕೊಂಡಿದ್ದೇನೆ. ಒಂದು ಹೆಣಕ್ಕೆ ನಾಲ್ಕು ಹಾಗ ತೆರಿಗೆ, ಶವದ ಬಟ್ಟೆ, ತಲೆಯಕ್ಕಿ– ಇವಿಷ್ಟು ನನ್ನ ವಶಕ್ಕೆ ಬರಬೇಕು. ಈ ಶುಲ್ಕವನ್ನು ಕೊಡದೆ ಯಾರಾದರೂ ರಾತ್ರಿಯಲ್ಲಿ ಕಳ್ಳತನದಿಂದ ಹೆಣವನ್ನು ಸುಟ್ಟರೆ, ನನ್ನ ಆಣೆ! ಒಡೆಯ ವೀರಬಾಹುಕನ ಮಡದಿಯ ಪಾದದಾಣೆ! ಶುಲ್ಕವನ್ನು ಕೊಡದಿದ್ದರೆ ಅವರನ್ನು ತಡೆದು ಅಡ್ಡಗಟ್ಟುವೆನು!" ಎಂದು ಸಾರುತ್ತ ಹೋದನು.

ನಗರದ ಕೇರಿಕೇರಿಗಳಲ್ಲಿಯೂ ಸಾರಿದ ಮೇಲೆ ಹರಿಶ್ಚಂದ್ರನು ರುದ್ರಭೂಮಿಗೆ ಹೋದನು. ಎರಡನೆಯ ರುದ್ರನೆನಿಸಿದ ವಸಿಷ್ಠ ಮುನಿಗಳಿಗೆ ಶಿಷ್ಯನೂ ಸ್ವತಃ ರುದ್ರಾರ್ಚಕನೂ ಪಾರ್ವತೀಪ್ರಮಥಗಣಪಸಹಿತನಾದ ರುದ್ರನನ್ನು ಮೆಚ್ಚಿಸಿ ಕರೆತರಬಲ್ಲ ರುದ್ರಭಕ್ತನೂ, ರುದ್ರದರ್ಶನಸಂತುಷ್ಟನೂ ಆದ ಹರಿಶ್ಚಂದ್ರನು ರುದ್ರಭೂಮಿಯಲ್ಲಿ ನೆಲೆಸಿದನು. ಹುಸಿಯಾಡುವವನೊಬ್ಬ ಹೊಲೆಯ. ಅವನನ್ನು ಮುಟ್ಟುವವನು ಇನ್ನೊಬ್ಬ ಹೊಲೆಯ. ಹೀಗಿರಲು ಧರೆಯಲ್ಲಿ ಹೊಲೆಯನಲ್ಲದವನು ಯಾರು? ಈ

ಹೊಲೆಯರ ಸಂಪರ್ಕವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸತ್ಯನಿಧಿ ಹರಿಶ್ಚಂದ್ರನು ಹೊಲೆಯರ ವೇಷವನ್ನು ಧರಿಸಿ ಸುಡುಗಾಡಿನಲ್ಲಿ ನೆಲೆಸಲು ನಿಶ್ಚಯಿಸಿರಬಹುದೆ! ಸುಡುವ ಹೆಣಗಳನ್ನು ನೋಡುತ್ತ, ಹೊಗೆಯ ಕಮರು ವಾಸನೆಯನ್ನು ಮೂಸುತ್ತ, ಹೆಂಗಸರು ಅಳುವ ಅಮಂಗಳ ಧ್ವನಿಯನ್ನು ಕೇಳುತ್ತ, ನೆಲದಲ್ಲಿ ಹರಡಿದ್ದ ಮನುಷ್ಯರ ಮೂಳೆಗಳನ್ನು ತುಳಿಯುತ್ತ ಹರಿಶ್ಚಂದ್ರನು ಸ್ಮಶಾನ ಭೂಮಿಯನ್ನು ಹೊಕ್ಕನು. ಒಡನೆಯೇ ಸುಡಲು ಬಂದವರನ್ನು ತಡೆದು ಹಣದ ತೆರಿಗೆಯನ್ನು ವಸೂಲು ಮಾಡುತ್ತ, ಶವದ ಊಡಿಗೆಯನ್ನು ಗಂಟುಕಟ್ಟಿ ಹೊರುತ್ತ, ತಲೆಯಕ್ಕಿಯನ್ನು ಆರಿಸಿಕೊಳ್ಳುತ್ತಾ ಸುಡುಗಾಡಿನಲ್ಲಿ ಸುಳಿದಾಡಿದನು. ಅನಂತರ ಶವಗಳನ್ನು ಸುಡಲು ಉಪಯೋಗಿಸಿದ ಉರಿಕರಿಯಾದ ಕೊಳ್ಳಿಗಳನ್ನು ಆರಿಸಿ, ಚಟ್ಟದ ಹಗ್ಗಗಳನ್ನು ತಂದು, ಎತ್ತರವಾದ ಒಂದು ಅಟ್ಟಣೆಯನ್ನೂ ಅದರ ಮೇಲೆ ಒಂದು ಗುಡಿಸಿಲನ್ನೂ ಕಟ್ಟಿಕೊಂಡನು. ಅಟ್ಟಣೆಯ ಮೇಲೆ ಕುಳಿತರೆ ಸ್ಮಶಾನ ಭೂಮಿಯೆಲ್ಲವೂ ಗೋಚರಿಸುತ್ತಿತ್ತು. ಹಗಲೆನ್ನದೆ ಇರುಳೆನ್ನದೆ ಹರಿಶ್ಚಂದ್ರನು ಅಟ್ಟಣೆಯ ಮೇಲಿದ್ದು ಸ್ಮಶಾನವನ್ನು ಕಾಯತೊಡಗಿದನು.

ಮಂತ್ರಿಯಾದ ಸತ್ಯಕೀರ್ತಿಯು ತನ್ನ ಅರಸನ ಸೇವೆಯಲ್ಲಿ ತೊಡಗಿದ್ದನು. ಅವನು ಉಷಃಕಾಲದಲ್ಲೆದ್ದು ಗಂಗಾ ನಂದಿಯಲ್ಲಿ ಸ್ನಾನವನ್ನು ಮಾಡಿ ವಿಶ್ವನಾಥನನ್ನು ಅರ್ಚಿಸಿ ದೈನ್ಯದಿಂದ ''ಮಹಾದೇವ- ವಿಶ್ವೇಶ್ವರ, ಕರುಣಿಸು. ನನ್ನ ಅರಸನನ್ನು ಈ ಬಂಧನದಿಂದ ಬಿಡುಗಡೆ ಮಾಡಿಸು'' ಎಂದು ಬೇಡುತ್ತಿದ್ದನು. ಅನಂತರ ರಾಜನ ಬಳಿಗೆ ಬಂದು ಆತನ ಮೈ- ಕೈ ಕಾಲುಗಳನ್ನು ಒತ್ತಿ ನೀವು ''ಮಹಾರಾಜ, ಹಿಂದಿನದನ್ನು ನೆನಸಿಕೊಳ್ಳಬೇಡ. ಉಮ್ಮಲಿಸಬೇಡ. ಧೈರ್ಯದಿಂದಿರು. ವಿಶ್ವನಾಥನು ಅನುಗ್ರಹಿಸುವನು'' ಎಂದು ಸಂತೈಸುತ್ತಿದ್ದನು. ಹರಿಶ್ಚಂದ್ರನಾದರೋ ಹೆಣದ ತಲೆಯಕ್ಕಿಯನ್ನು ತಂದು ಸತ್ಯಕೀರ್ತಿಗೆ ಕೊಡುತ್ತಿದ್ದನು. ಅವನು ಅದನ್ನು ಗೊತ್ತಾದ ಒಂದಾನೊಂದು ವೃಷಭಕ್ಕೆ ಕೊಟ್ಟು ತಿನ್ನಿಸುತ್ತಿದ್ದನು. ಆಮೇಲೆ ಅದರ ಗೋಮಯವನ್ನು ತಂದು ಗಂಗಾಜಲದಲ್ಲಿ ತೊಳೆದು ಜೀರ್ಣಸದೆ ಉಳಿದಿದ್ದ ಅಕ್ಕಿಯನ್ನು ಬೇರ್ಪಡಿಸಿ ಹರಿಶ್ಚಂದ್ರನಿಗೆ ಕೊಡುತ್ತಿದ್ದನು. ಹರಿಶ್ಚಂದ್ರನು ಅದನ್ನು ''ಮಹಾಲಿಂಗ- ವಿಶ್ವನಾಥ, ನಿನಗೇ ಅರ್ಪಿತ'' ಎಂದು ಭಗವಂತನಿಗೆ ಅರ್ಪಿಸಿ ತಿಂದು ಗಂಗಾಜಲವನ್ನು ಕುಡಿದು

ದಿನವನ್ನು ಕಳೆಯುತ್ತಿದ್ದನು. ''ಕಾಶೀಪುರವೇ ಅಯೋಧ್ಯೇ, ಸ್ಮಶಾನವೇ ಅರಮನೆ, ಕಾವಲಿನ ಅಟ್ಟಣೆಯೇ ಸಿಂಹಾಸನ, ಮನಃಶಾಂತಿಯೇ ಭೋಜನ, ಧೈರ್ಯವೇ ಚತುರಂಗಸೇನೆ, ಸಂಬಳಿಗೋಲೇ ಕರವಾಳ, ಸತ್ಯವೇ ಭಂಡಾರ, ವೀರಬಾಹುಕನ ಆಜ್ಞಾ ಪಾಲನವೇ ಕ್ಷತ್ರಿಯ ಧರ್ಮ'' ಎಂದು ಹರಿಶ್ಚಂದ್ರನು ಬಗೆದನು.

ಲೋಹಿತಾಶ್ವಮರಣ

ಈ ರೀತಿಯಲ್ಲಿ ಹರಿಶ್ಚಂದ್ರ ಭೂಪಾಲನು ತನ್ನ ಒಡೆಯನ ಆಜ್ಞೆಯನ್ನು ಪಾಲಿಸುತ್ತ, ಸುಡುವ ಹೆಣಗಳ ಕಮರು ವಾಸನೆಯನ್ನು ಆರಯ್ಯುತ್ತ, ಶವಗಳಿಗೆ ಎರೆದ ಅಕ್ಕಿಯನ್ನೂ ಬಟ್ಟೆಯನ್ನೂ ತೆಗೆದುಕೊಳ್ಳುತ್ತ ದಿನಗಳನ್ನು ಕಳೆಯುತ್ತಿದ್ದನು. ಸತತವೂ ಪರಶಿವಧ್ಯಾನಾಮೃತವನ್ನು ಈಂಟಿ ತೃಪ್ತನಾಗಿ, ಹಿಡಿದ ಚಿಂತೆಯನ್ನು ಮರೆಯಲು ಯತ್ನಿಸುತ್ತಿದ್ದನು. ಹೀಗೆ ಹರಿಶ್ಚಂದ್ರನು ತನ್ನ ಸತ್ಯನಿಷ್ಠೆಯನ್ನು ಮೆರೆಸುತ್ತಿರಲು, ಆತನ ಪತ್ನೀಪುತ್ರರಿದ್ದ ಗೃಹದ ಪರಿಸ್ಥಿತಿಯನ್ನು ಏನೆಂದು ಬಣ್ಣಿಸುವುದು? ಅವರು ಒತ್ತೆಯಾಗಿದ್ದ ಮನೆಯೆಂಬುದು ಕಟುಕರ ನಿಲಯವಾಗಿತ್ತು. ಅದು ರಕ್ಕಸಿಯ ಬೀಡು. ಹಾವಿನ ಪೆಟ್ಟಿಗೆ. ಯಮನ ನಗರಿ. ಮೃತ್ಯುವಿನ ಅಡುಗೆ ಮನೆ. ಮಾರಿಯ ಕಟವಾಯಿ. ಮಹಾರಾಜನ ಸತೀಸುತರು ಅಲ್ಲಿ ಹೇಗೆ ನೆಮ್ಮದಿಯಿಂದ ಇದ್ದಾರು?

ಮನೆಯ ಒಡೆಯ ಅತಿ ಕೋಪಿ. ಅವನ ಹೆಂಡತಿ ಮಹಾಮೂರ್ಖೆ. ಮಗನು ಕಡು ಧೂರ್ತ. ಸೊಸೆ ಅತ್ಯಂತ ನಿಷ್ಠುರೆ. ಮನೆಯಲ್ಲಿದ್ದ ಇತರರು ದುಷ್ಟರು. ನೆರೆಮನೆಯವರು ಸುಳ್ಳರು. ಸಾಕಿದ ದನಗಳು ಬಹು ತುಂಟು. ಮನೆಯೊಡೆಯನು ಅಡಿಗಡಿಗೂ ಕೋಪಿಸಿಕೊಂಡು ಈ ತಾಯಿ ಮಕ್ಕಳನ್ನು ಬಡಿಯುತ್ತಿದ್ದನು. ಏನು ಮಾಡಿದರೂ ತಪ್ಪನ್ನು ಸಾಧಿಸಿ ಮನೆಯವರೆಲ್ಲರೂ ಇವರಿಬರನ್ನು ಬಯ್ದು ಸೆಣಸಿ ಕರಕರಿಸುತ್ತಿದ್ದರು. ಈ ತಾಯಿ ಮಕ್ಕಳು ಪ್ರತಿದಿನವೂ ಸತ್ತು ಹುಟ್ಟುತ್ತಿದ್ದರು. ಚಂದ್ರಮತಿಯು ನೀರು ಸೇದುವುದು, ಬತ್ತ ಕುಟ್ಟುವುದು– ಮುಂತಾದ ಕೆಲಸಗಳನ್ನು

ಎಡೆಬಿಡದೆ ಮಾಡುತ್ತ ಹಾಕಿದ ಕೂಳನ್ನು ತಿನ್ನುತ್ತ ಇರಬೇಕಾಯಿತು. ಅವಳಿಗೆ ಹಗಲು ರಾತ್ರಿಗಳು ಒಂದೇ ತೆರನಾದವು. ಬಾಲಕನಾದ ಲೋಹಿತಾಶ್ವನು ಬೆಳಗಾದೊಡನೆ ಎದ್ದು ಒಡನಾಡಿಗಳಾದ ಹುಡುಗರೊಡನೆ ಅಡವಿಗೆ ಹೋಗಿ ಹುಲ್ಲು ಸೌದೆಗಳನ್ನು ಒಟ್ಟು ಹಾಕಿ ಸಂಜೆಗೆ ಹೊತ್ತುಕೊಂಡು ಹಿಂದಿರುಗಬೇಕಾಗಿತ್ತು. ಮನೆಯಲ್ಲಿ ಎಲ್ಲಾದರೂ ಸ್ವಲ್ಪ ಕಸವು ಬಿದ್ದಿದ್ದರೆ, ಮನೆಯೊಡೆಯನು ಚಂದ್ರಮತಿಯ ಮೇಲೆ ರೇಗಿ ಬೀಳುವನು. ದನಗಳನ್ನು ಕಟ್ಟಹೋದರೆ, ಆ ತುಂಟ ಪಶುಗಳು ಒದೆಯುವುವು. ಬೆನ್ನನ್ನು ಸರಿಯಾಗಿ ಒರಸಲಿಲ್ಲವೆಂದು ಸೊಸೆಯು ಚಂದ್ರಮತಿಯನ್ನು ಹೊಡೆಯುವಳು. ಯಜಮಾನನ ಮಗನು ತನ್ನ ಕಾಲಿಗೆ ನೀರು ಕೊಡಲಿಲ್ಲವೆಂದೂ ಸರಿಯಾಗಿ ಉಜ್ಜಲಿಲ್ಲವೆಂದೂ ಒದೆಯುವನು. ನೆರೆಮನೆಯಲ್ಲಿದ್ದ ಪಿಸುಣರು ಚಂದ್ರಮತಿಯು ಕಳ್ಳಿಯೆಂದು ಅಪವಾದವನ್ನು ತರುವರು. ಆಗ ಮನೆಯೊಡತಿಯು ಇವಳನ್ನು ಬಡಿಯುವಳು. ಹೀಗೆ ಚಂದ್ರಮತಿಯು ತನ್ನ ಪತಿಯಾದ ಹರಿಶ್ಚಂದ್ರ ಮಹಾರಾಜನ ಸತ್ಯಕ್ಕೆ ಚ್ಯುತಿಯಾಗಬಾರದೆಂಬ ಒಂದೇ ನಿಶ್ಚಯದಿಂದ ಮನೆಯವರ ಪೀಡೆಗಳನ್ನು ಸಹಿಸಿಕೊಂಡು ನರಕಜೀವನವನ್ನು ಸವೆಸುತ್ತಿರುವಾಗ, ಇದು ಸಾಲದೆಂಬಂತೆ ಆಕೆಯ ಮುದ್ದುಮಗನಿಗೆ ಒಂದು ವಿಪತ್ತು ಬಂದೆರಗಿತು. ಇರಬಾರದು– ಹೋಗಬಾರದು, ಬದುಕಬಾರದು– ಸಾಯಬಾರದು ಎಂಬ ಸ್ಥಿತಿಯಲ್ಲಿದ್ದ ಚಂದ್ರಮತಿಗೆ ಪುತ್ರಶೋಕವು ಒದಗಿ ಬಂದಿತು.

ಎಂದಿನಂತೆ ಲೋಹಿತಾಶ್ವನು ಉದಯಕಾಲದಲ್ಲೆದ್ದು ಓರಗೆಯ ಬಾಲಕರೊಂದಿಗೆ ಅರಣ್ಯಕ್ಕೆ ಹೋಗಿ ಹುಲ್ಲನ್ನೂ ಸೌದೆಯನ್ನೂ ಒಟ್ಟು ಹಾಕಿದನು. ಮಧ್ಯಾಹ್ನದ ಉರಿಬಿಸಿಲಲ್ಲಿ ಬೆವರಿ ಬೆಂದು ಅದೆಲ್ಲವನ್ನೂ ಹೊರೆಯಾಗಿ ಕಟ್ಟಿ ತಲೆಯ ಮೇಲೆ ಹೊತ್ತನು. ತಲೆ ಕುಸಿದು ನಡೆಗೆಟ್ಟು ಬಾಯಾರಿ ತೇಂಕುತ್ತ ಬರುವಾಗ ಒಂದು ಹುತ್ತವು ಕಾಣಿಸಿತು. ಅದರ ಸುತ್ತಲೂ ಎಳೆಯ ಹುಲ್ಲು ನಳನಳಿಸಿ ಬೆಳೆದಿದ್ದಿತು. ಲೋಹಿತಾಶ್ವನು ಮನಸ್ಸಿನಲ್ಲಿ "ಈ ಹಸಿ ಹುಲ್ಲನ್ನು ಕೊಯ್ದು ಮನೆಗೆ ಒಯ್ದರೆ ಯಜಮಾನನು ಸಂತೋಷಪಡುವನು. ಈ ದಿನವಾದರೂ ನನ್ನ ಮೇಲೆ ಸಿಡುಕದೆ ಇದ್ದಾನು!" ಎಂದು ಎಣಿಸಿದನು. ಕೂಡಲೇ ಹೊತ್ತಿದ್ದ ಹೊರೆಯನ್ನು ಕೆಳಗಿಳಿಸಿ ಕುಡುಗೋಲನ್ನು ಹಿಡಿದು ಹುತ್ತದ ಬಳಿಗೆ ಹತ್ತಿ ಹೋದನು! ಹರಹರ! ಸೂರ್ಯನು ಅಸ್ತಾದ್ರಿಯ ಬಳಿಗೆ ಹೋದಂತಾಯಿತು! ಲೋಹಿತಾಶ್ವನು ಹುತ್ತವನ್ನು ಹತ್ತಿ ಸುತ್ತಲೂ

ಹುಲುಸಾಗಿ ಬೆಳೆದ ಹುಲ್ಲನ್ನು ಕೊಯ್ಯುತ್ತಿರುವಾಗ ಅಲ್ಲಿದ್ದ ರೌದ್ರ ಸರ್ಪವು ಅವನ ಕೈ ಮಣಿಕಟ್ಟನ್ನು ಕಚ್ಚಿ ಭೋಂಕನೆ ಮೇಲೆದ್ದು ಭೋರ್ಗರೆಯಿತು. ಬಾಲಕನು ಹೆದರಿ ಹವ್ವನೆ ಹಾ ಹಾರಿ ಎಂದು ಕೂಗಿ, ಕೈ ಕಾಲು ಕೆದರಿ ಕೊರಳಡಿಯಾಗಿ ಬಿದ್ದನು. ಹುತ್ತಿನಿಂದೆದ್ದ ಹಾವು ಲೋಹಿತಾಶ್ವನನ್ನು ಕಡಿಯಿತೆಂಬುದನ್ನು ತಿಳಿದು ಜೊತೆಯ ಹುಡುಗರು ಹೆದರಿ ಅವನನ್ನು ಅಲ್ಲಿಯೇ ಬಿಟ್ಟು ಓಡಿಹೋದರು. ಲೋಹಿತಾಶ್ವನು ತಾಯಿತಂದೆಗಳನ್ನು ಕರೆದು ಅಳುತ್ತಿರಲು, ವಿಷವು ನೆತ್ತಿಗೇರಿತು. 'ನನ್ನ ವಂಶದ ಕುಡಿ ಇಂದಿಗೆ ಮುರಟಿತು' ಎಂಬ ಶೋಕದಿಂದಲೋ ಎಂಬಂತೆ ಸೂರ್ಯನು ಪಡುವಣ ಕಡಲಿಗೆ ಧುಮುಕಿದನು.

'ಸಂಜೆಯಾದರೂ ಮಗನು ಬರಲಿಲ್ಲ, ದಿನವೂ ಬರುವ ಹೊತ್ತು ಮೀರಿತು' ಎಂದು ಚಂದ್ರಮತಿಗೆ ಚಿಂತೆಯಾಯಿತು. 'ನನ್ನ ಕಂದನು ಇಂದೇಕೆ ತಡವಾದನು?' ಎಂದು ಮನಸ್ಸು ನೊಂದಿತು. ಬಿಸುಸುಯ್ದಳು, ಮರುಗಿದಳು, ಕಳವಳಿಸಿದಳು, ಕೊನೆ ಬೆರಳನ್ನು ಮುರಿದಳು. ತನ್ನ ದೇಹವನ್ನೇ ಮರೆತು, ಹೊರಗೆ ಬರುವ ಶಬ್ದಕ್ಕಾಗಿ ಅಡಿಗಡಿಗೆ ಆಲಿಸಿದಳು. ಇತ್ತ ಒಡತಿಗೆ ಅಂಜಿ ಕೆಲಸವನ್ನು ಮಾಡುತ್ತಲೇ ಇದ್ದಳು. ಚಂದ್ರಮತಿಯ ಮನಸ್ಸಿನ ಕಳವಳವನ್ನು ಮನೆಯವರೇನು ಬಲ್ಲರು?' 'ಕಂದನು ಬಂದಿರಬಹುದೆ?'– ಎಂದು ಚಂದ್ರಮತಿಯು ಮನೆಯ ಹೊರಗೆ ಹೋಗಿ ನೋಡಿದರೆ, 'ಓಹೋ! ಇವಳು ಓಡಿಹೋಗಲು ಹವಣಿಸುತ್ತಿದ್ದಾಳೆ!' ಎಂದು ಮನೆಯವರು ಆಡಿಕೊಳ್ಳುವರು. ಕಂಬನಿದುಂಬಿ ಮುಸಮುಸನೆ ಅಳುತ್ತಿದ್ದರೆ, 'ಛೇ! ಅಮಂಗಳದ ಹೆಂಗಸು ಎಲ್ಲಿಂದ ಬಂದಳೊ!' ಎನ್ನುವರು. ಮನಸ್ಸಿನಲ್ಲಿಯೇ ಮಗನ ಗುಣಗಳನ್ನು ನೆನೆದು ಹಲುಬಿಕೊಳ್ಳುತ್ತಿದ್ದರೆ, 'ಯಾರನ್ನು ಬಯ್ಯುತ್ತೀಯೆ?' ಎಂದು ಗದರಿಸುವರು. ದಿಗ್ಭ್ರಮೆಯಿಂದ ಮುಂಗಾಣದೆ ಸುಮ್ಮನಿದ್ದರೆ, 'ಅಬ್ಬ! ಎಂತಹ ಕೆಲಸಗಳ್ಳಿ!' ಎಂದು ಜರಿಯುವರು. ದುಃಖದಿಂದ ನಿಟ್ಟುಸಿರೆಳೆದರೆ 'ಆಹಾ! ಕೆಲಸಮಾಡಿ ಸಾಕಾಗಿ ಹೋಯಿತೊ?' ಎಂದು ಹೊಡೆಯುವರು. ಮಾರಿಗಳಂತಿದ್ದ ಮನೆಯವರ ಮಧ್ಯದಲ್ಲಿದ್ದ ಚಂದ್ರಮತಿಯ ಪುತ್ರಶೋಕವು ಬಾಣದ ತುದಿ ಒಳಗೆ ಸಿಕ್ಕಿಕೊಂಡಿರುವಾಗ ಆಗುವ ಗಾಯದ ನೋವಿನಂತೆ, ಕುಂಬಾರನ ಆವುಗೆಯ ಬೆಂಕಿಯಂತೆ, ಮಿತ್ರರಂತೆ ನಟಿಸುವ ಶತ್ರುಗಳ ಹೃದಯದ ಮುಳಿಸಿನಂತೆ ಒಳಗೊಳಗೇ ಕೊರೆಯುತ್ತಿತ್ತು. ಅವಳಿಗೆ ಎದೆ ಒಡೆಯುವಂತಾಯಿತು. ಅಳ್ಳೆಗಳು ಬಿಕ್ಕುತ್ತಿದ್ದವು. ಕಣ್ಣಿಂದ ನೀರು ಹರಿಯುತ್ತಲೇ

ಇತ್ತು. ಗಂಟಲ ಸೆರೆಗಳು ಉಬ್ಬಿದವು. ಗಂಟಲು ಬಿಗಿಯಿತು. ಆ ಸಾಧ್ವಿಯು ಸೀಗೆಯ ಪೊದೆಯಲ್ಲಿರುವ ಬಾಳೆಯ ಗಿಡದಂತಾದಳು.

ಉರಿವ ಬಿಸಿಲಲ್ಲಿ ಲೋಹಿತಾಶ್ವನು ಹಸಿದು ಬಳಲಿ ಬಸವಳಿದು ಬಿದ್ದು ಹೋದನೇನೋ ಎಂದು ಒಮ್ಮೆ ಚಿಂತಿಸುವಳು. ಹಸುಗಳನ್ನು ಕಟ್ಟುವಾಗ ಅವು ಇರಿದು ಬೀಳಿಸಿದವೋ ಎಂದು ಒಮ್ಮೆ ಕೊಟ್ಟಿಗೆಗೆ ಹೋಗಿ ನೋಡುವಳು. ಹುಲ್ಲು ಸೌದೆಗಳು ಸಿಗಲಿಲ್ಲವೆಂದು ಮನೆಗೆ ಬರಲಂಜಿ ಹೊರಗೆ ನಿಂತಿರುವನೋ ಎಂದು ಬೀದಿಗೆ ಬಂದು ನೋಡುವಳು. ಅಡವಿಯಲ್ಲಿ ದಾರಿ ತಪ್ಪಿರಬಹುದೆ, ಹುಲಿಯ ಬಾಯಿಗೆ ಸಿಕ್ಕಿರಬಹುದೆ, ಕಳ್ಳರು ಹಿಡಿದು ಒಯ್ದಿರಬಹುದೆ, ಭೂತಚೇಷ್ಟೆಗೆ ಒಳಗಾಗಿರಬಹುದೆ, ಮಡುವಿನಲ್ಲಿ ಕಾಲು ಜಾರಿ ಬಿದ್ದುಹೋದನೆ, ಸೌದೆಗಾಗಿ ಮರವನ್ನೇರಿದಾಗ ಕೊಂಬೆ ಮುರಿದು ಬಿದ್ದನೆ, ಹಸಿವಿನ ಬಾಧೆಗೆ ನಡೆಯಲಾರದೆ ನಿಂತುಬಿಟ್ಟನೆ, ಅಥವಾ ಯಾವುದಾದರೊಂದು ಸರ್ಪವು ಕಚ್ಚಿರಬಹುದೆ!– ಎಂಬ ಚಿಂತೆಗಳು ತೆರೆತೆರೆಯಾಗಿ ಚಂದ್ರಮತಿಯನ್ನು ಮುಸುಕಿದವು. ದಿಕ್ಕುಗಾಣದೆ ಅಂಗಳದ ಕತ್ತಲೆಯಲ್ಲಿ ನಿಂತು ರೋಧಿಸಿದಳು. ಹೊರಗೆ ಹೋಗಿ ಹುಡುಕುವೆನೆಂದರೆ ಮನೆಯ ಒಡತಿ ಧಟ್ಟಿಸುವಳು ಎಂದು ಮಿಡುಕಿದಳು. ಕೆನ್ನೆಯ ಮೇಲೆ ಕೈಯಿಟ್ಟು 'ಅಯ್ಯೋ ಕೆಟ್ಟೆನು!' ಎಂದು ಗೋಳಾಡಿದಳು. ಬೀದಿಯಲ್ಲಿ ಯಾರಾದರೂ ಬಂದರೂ ನಿಂತರೂ ಗಾಳಿ ಗಿರುಕೆಂದರೂ 'ಲೋಹಿತಾಶ್ವಾ ಲೋಹಿತಾಶ್ವಾ' ಎಂದು ಬೀದಿಯ ಕರುವಿನಂತೆ ಕರೆದಳು. ಆಗ ಒಬ್ಬ ಹುಡುಗನು ಬಂದು ಚಂದ್ರಮತಿಯನ್ನು ನೋಡಿ ''ನಿನ್ನ ಮಗನನ್ನು ಒಂದು ಸರ್ಪವು ಕಚ್ಚಿತು! ಅವನು ಅಲ್ಲಿಯೇ ಬಿದ್ದು ಹೋದನು'' ಎಂದು ತಿಳಿಸಿದನು. ಚಂದ್ರಮತಿಯ ಎದೆ ಝುಲ್ಲೆಂದಿತು. ಅವಳು ''ಏಕೆ ಕಚ್ಚಿತು? ಎಲ್ಲಿ? ಯಾವಾಗ?'' ಎಂದು ಕೇಳಲು, ಆ ಬಾಲಕನು ಈ ದಿಕ್ಕಿನಲ್ಲಿ ಇಂತಹ ಮರದ ಕೆಳಗೆ ಒಂದು ಹುತ್ತವಿದೆಯೆಂದೂ ಅಲ್ಲಿ ಹುಲ್ಲನ್ನು ಕೊಯ್ಯುವಾಗ ಹಾವು ಕಚ್ಚಿತೆಂದೂ ಆ ಸ್ಥಳವು ಹೆಚ್ಚು ದೂರವಿಲ್ಲೆಂದೂ ಹೇಳಿದನು.

ಚಂದ್ರಮತಿಯ ದುಃಖವನ್ನು ಯಾರಿಗೆ ಬಣ್ಣಿಸಲು ಸಾಧ್ಯ? ಅಳಲು ಮೇರೆ ಮೀರಿ ಉಕ್ಕಿತು ಅವಳು ಒಳಗೆ ಹೋಗಿ ಮನೆಯೊಡೆಯನ ಪಾದಗಳಿಗೆ ಅಡ್ಡ ಬಿದ್ದು ''ನನ್ನ ಕಂದನು ಹಾವು ಕಚ್ಚಿ ಮಡಿದನಂತೆ'' ಎಂದಳು. ಆ ವಿಪ್ರನು ಸ್ವಲ್ಪವೂ ಲೆಕ್ಕಿಸದೆ ಹೀಗೆಂದನು :

ವಿಪ್ರ :- ಒಳ್ಳೆಯದಾಯಿತು! ಸತ್ತರೆ ಸತ್ತನು!

ಚಂದ್ರಮತಿ :- ತಂದೆ, ಆಳನ್ನು ಕಳಿಸಿ ಹುಡುಕಿಸು.

ವಿಪ್ರ :- ಈಗ ಬಹಳ ರಾತ್ರಿಯಾಗಿದೆ. ಆಳುಗಳು ಎಲ್ಲಿದ್ದಾರೆ? ನಾನು ನಿದ್ರಿಸಬೇಕು! ಸುಮ್ಮನೆ ಕಾಡಬೇಡ, ಹೋಗು.

ಚಂದ್ರಮತಿ :- ನರಿಗಳೆಳೆಯದ ಮುನ್ನ ದಹಿಸಬೇಡವೆ, ತಂದೆ?

ವಿಪ್ರ :- ದುರ್ಮರಣದಿಂದ ಸತ್ತ ಶೂದ್ರನನ್ನು ನಾವು ದಹಿಸತಕ್ಕವರಲ್ಲ!

ಚಂದ್ರಮತಿ :- ನಾನಾದರೂ ಹೋಗಿ ಬೆಂಕಿಗೆ ಒಪ್ಪಿಸಿ ಬರಲೆ?

ವಿಪ್ರ :- ಮನೆಗೆಲಸವನ್ನು ಪೂರ್ತಿಯಾಗಿ ಮಾಡಿ ಮುಗಿಸಿ ಹೋಗಬಹುದು!

ಅನಂತರ ಚಂದ್ರಮತಿಯು ಉಕ್ಕುವ ಶೋಕವನ್ನು ನುಂಗಿಕೊಂಡು ಮನೆಗೆಲಸವನ್ನೆಲ್ಲವನ್ನೂ ಪೂರ್ತಿಯಾಗಿ ಮಾಡಿ ಮುಗಿಸಿ ಹೊರಟಳು. ಮನೆಯಿಂದ ಹೊರಟ ಕೂಡಲೆ ಹಿಡಿದು ತಡೆದಿದ್ದ ಅಳು ಉಕ್ಕಿತು. 'ಹೋ' ಎಂದು ಅಳುತ್ತ ಕಾರ್ಗತ್ತಲೆಯಲ್ಲಿ ಎಡವುತ್ತ ಬೀಳುತ್ತ ಮುಳ್ಳು ತುಳಿಯುತ್ತ ಕುಳಿಗಳಲ್ಲಿ ಮುಗ್ಗರಿಸುತ್ತ ಮೊರೆಯಿಡುತ್ತ, ತಲೆ ಬಿಚ್ಚಿತೆ, ಉಡುಗೆ ಸಡಿಲಿತೆ- ಎಂಬುದನ್ನೂ ಲೆಕ್ಕಿಸದೆ ಓಡುತ್ತ ಹೋದಳು. ಜೊತೆಗಾರ ಹುಡುಗನು ಹೇಳಿದ ಗುರುತನ್ನು ಹಿಡಿದು ಹೋಗಲಾಗಿ ಒಂದು ಮರಕ್ಕೆ ಚಾಚಿ ನಿಲ್ಲಿಸಿದ್ದ ಹುಲ್ಲಿನ ಹೊರೆ ಕಾಣಿಸಿತು. ಸಮೀಪದಲ್ಲಿಯೇ ನನ್ನ ಕಂದನಿರಬೇಕು ಎಂದು ಊಹಿಸಿ ಆ ತಾಯಿ "ಮಗನೆ, ಮಗನೆ, ಮಗನೆ, ಹರಿಶ್ಚಂದ್ರಮಹಾರಾಜನ ಕಂದನೆ, ಎಲ್ಲಿರುವೆ? ಎಲ್ಲಿದ್ದೀಯೆ? ಓ ಎನ್ನಬಾರದೆ? ಇಲ್ಲಿ ಬಾ ಎನ್ನಬಾರದೆ? ನಾನು ನಿನಗೆ ಬೇಡವಾದೆನೆ?" ಎಂದು ಹಲುಬಿದಳು. ತವಕದಿಂದ ಅಲ್ಲಲ್ಲಿ ತಡಕಿದಳು. ಕಂಬನಿಯನ್ನು ಒರಸಿಕೊಂಡು ಒರಸಿಕೊಂಡು ನೋಡಿದಳು. ಹೊಟ್ಟೆಯ ಉರಿಯಿಂದ ಒರಲಿ ಕರೆದಳು. ಅಳಲುತ್ತ ಬಳಲುತ್ತ ಹುಡುಕುತ್ತ ಕಡೆಗೆ ಹುತ್ತದ ಬಳಿಗೆ ಬಂದಳು. ಆ ಹರಿಶ್ಚಂದ್ರನ ರಾಣಿಯು ಮಡಿದು ಮಲಗಿದ್ದ ಮಗನನ್ನು ಕಂಡಳು.

ವಿಷದ ಹೊಗೆ ಹೊಯ್ದು ಹಸುರಾದ ಮೈ. ನೊರೆಯೊಸರಿದ ಗಲ್ಲ, ಕಂದಿದ ಉಗುರು. ಅರೆದೆರೆದ ಕಣ್ಣು, ಹರಡಿದ ಹುಲ್ಲು ಹಿಡಿದ ಕೈ. ಹಸಿದು ಬೆನ್ನಿಗೆ ಅಡರಿದ ಉದರ. ಬಾಗಿದ ಕತ್ತು. ಹುಡಿಹೊರಳಿ ಬರತ ಬಾಯಿ. ಮಗನನ್ನು ಕಂಡೊಡನೆ

ಚಂದ್ರಮತಿಯು ಅಲ್ಲಿಯೇ ಕುಸಿದು ಹೋದಳು. ಶಿವಶಿವ! ಮಗುವನ್ನು ಬಿಗಿದಪ್ಪಿ ಹೊರಳಾಡಿದಳು. ಮುಖದ ಮೇಲೆ ಮುಖವಿಟ್ಟು ಮುಂಡಾಡಿದಳು. ಮತ್ತೆ ಮತ್ತೆ ಮುದ್ದಿಸಿದಳು. ಲಲ್ಲೆ ಗರೆದಳು. ಅತ್ತತ್ತು ಬೆಂಡಾದಳು. ಮಗನಿಗೆ ಜೀವವಿರಬಹುದೆ ಎಂಬ ಆಸೆಯಿಂದ ಮೂಗಿನಲ್ಲಿ ಉಸಿರಾಡುವುದೆ ಎಂದು ಪರೀಕ್ಷಿಸಿದಳು. ಹೃದಯವು ಮಿಡಿಯುವುದೆ ಎಂದು ನೋಡಿದಳು. ಉಗುರಲ್ಲಿ ರಕ್ತವಿದೆಯೆ ಎಂದು ಆರಯ್ದಳು. ಕಡೆಗೆ ಅಂಗದಲ್ಲಿ ಸಂವೇದನಾಶಕ್ತಿಯನ್ನೂ ಕಣ್ಣಲ್ಲಿ ಬಿಳುಪನ್ನೂ ಹಣೆಯಲ್ಲಿ ಬೆವರನ್ನೂ ಕಂಠದಲ್ಲಿ ಅದರುವಿಕೆಯನ್ನೂ ಅಂಗಾಲಿನಲ್ಲಿ ಬಿಸಿಯನ್ನೂ ಕಾಣಲು ಯತ್ನಿಸಿದಳು. ಬೆರಳನ್ನೂ ನಾಲಗೆಯನ್ನೂ ಕೂದಲನ್ನೂ ನಿರೀಕ್ಷಿಸಿದಳು. ಜೀವಿತದ ಯಾವ ಚಿಹ್ನೆಯೂ ಕಾಣಲಿಲ್ಲ. ಮತ್ತೆ ರೋಧಿಸಲು ಆರಂಭಿಸಿದಳು.

“ಮಗನೆ, ಹಡೆದೊಡಲು ಹುಡಿಯಾಯಿತು. ಮಗನೊಬ್ಬನಿರುವನೆಂದು ಉಬ್ಬಿದ ಮನಸ್ಸು ಹೊತ್ತಿ ಹೋಗೆಯಿತು. ನಿನ್ನನ್ನು ನೋಡಿ ನಲಿಯುತ್ತಿದ್ದ ಕಣ್ಣು ಇಂಗಿತು. ಮೈಸವರಿ ರೋಮಾಂಚಗೊಳ್ಳುತ್ತಿದ್ದ ಕೈ ಮುರಿಯಿತು. ಲೋಹಿತಾಶ್ವ- ಎಂದು ಕರೆದು ಸಂತೋಷಿಸುತ್ತಿದ್ದ ನಾಲಗೆಯ ಕುಡಿ ಮುರಟಿತು. ನಿನ್ನ ನುಡಿಯನ್ನಾಲಿಸಿ ಹಿಗ್ಗುತ್ತಿದ್ದ ಕಿವಿ ಕಿವುಡಾಯಿತು. ಓ ನನ್ನ ಕಂದ, ಎಂತಹ ಕಷ್ಟ ಬಂದರೂ ನಿನ್ನನ್ನು ನೋಡಿ ಜೀವವನ್ನು ಹಿಡಿದಿದ್ದೆನು. ಸಿರಿಹೋದ ಮರುಕವನ್ನು , ನೆಲೆಗೆಟ್ಟ ಚಿಂತೆಯನ್ನು, ಪರದೇಶವನ್ನು ಹೊಕ್ಕ ನಾಚಿಕೆಯನ್ನು, ಅನ್ಯರ ಮನೆಯ ತೊತ್ತಾದ ಅವಮಾನವನ್ನು, ನಿನ್ನ ತಂದೆಯ ಅಜ್ಞಾತವಾಸವನ್ನು, ಮನೆಯವರ ಕಿರುಕುಳವನ್ನು ಇದುವರೆಗೆ ಮರೆತಿದ್ದೆ. ನನ್ನ ಕುತ್ತಿಗೆಯನ್ನು ಕೊರೆದೆಯಲ್ಲ ಕಂದ. ಇನ್ನು ಯಾರಿಗಾಗಿ ಬದುಕಲಿ? ನಿನ್ನ ತಂದೆ ಹರಿಶ್ಚಂದ್ರಮಹಾರಾಜನು ಹಸಿವು ನಿದ್ದೆಯನ್ನು ತೊರೆದು ಬಹುಶ್ರಮದಿಂದ ದುಡಿದು ಧನವನ್ನು ಸಂಪಾದಿಸಿ ನಮ್ಮನ್ನು ಬಿಡಿಸುವುದಕ್ಕಾಗಿ ಬಂದು ಮಗನನ್ನು ಕರೆಯೆಂದರೆ ಯಾವ ಉತ್ತರವನ್ನು ಕೊಡಲಿ? ಹಾವು ಕಚ್ಚಿ ಮಡಿದನು ಎಂದು ಹೇಳಲೆ? ಮಗನೆ, ನಮ್ಮನ್ನು ಕೈ ಬಿಟ್ಟು ಹೊರಟೆಯಾ? ಅರಮನೆಯ ಮಣಿಗೃಹದಲ್ಲಿ ಆನೆಗಳ ದಂತದಿಂದ ಮಾಡಿದ ಮಂಚದಲ್ಲಿ, ಹಂಸತೂಲಿಕಾತಲ್ಪದಲ್ಲಿ, ಅಂತಃಪುರದ ಹೆಂಗಸರ ಜೋಗುಳವನ್ನು ಕೇಳುತ್ತ ಪವಡಿಸುವ ಸುಕುಮಾರನಾದ ನೀನು ಈ ಕಾಡಿನ ಕತ್ತಲೆಯಲ್ಲಿ ಕಲ್ಲಿನ ಮೇಲೆ ಮಲಗುವುದು ಉಚಿತವೆ? ನನ್ನ ಹಣೆಬರಹ ಈ ರೀತಿ ಆಯಿತೆ? ಓ ಕಂದ, ಎಲ್ಲಿಂದ ಈ ಸಿಡಿಲು ಎರಗಿತು? ಹಾವು ಕಚ್ಚಿದಾಗ ಹಾ ಎಂದು

ಕೂಗಿದೆಯಾ? ಸಾಯುವಾಗ ಅಮ್ಮಾ ಎಂದು ಕರೆದೆಯಾ?'' ಎಂದು ವಿಲಪಿಸುತ್ತಾ ಹೊರಳಾಡಿದಳು. ಪುತ್ರಶೋಕದ ಉರಿ ಭುಗಿಲೆಂದಿತು. ಚಂದ್ರಮತಿಯು ಬಿಕ್ಕಿ ಬಿಕ್ಕಿ ಅಳುತ್ತಾ, ''ದೇವ, ರನ್ನದ ಕನ್ನಡಿ ಒಡೆಯಿತು. ಹೊನ್ನಿನ ಕಳಶವು ಉರುಳಿತು. ಚಿನ್ನದ ಪ್ರತಿಮೆಯ ಪ್ರಾಣ ಹೋಯಿತು. ಸೂರ್ಯವಂಶದ ಕುಡಿ ಒಣಗಿತು. ಮಹಾರಾಜನು ಸಾಕಿದ ಕಲ್ಪವೃಕ್ಷ ಮುರಿದು ಬಿತ್ತು. ಓ ಮಗನೆ, ಮಗನೆ, ಮಣಿಮಕುಟವನ್ನು ಧರಿಸುವ ಶಿರದಲ್ಲಿ ಒಣ ಸೌದೆಯ ಹೊರೆಯನ್ನು ಹೊತ್ತೆಯಾ? ಖಡ್ಗವನ್ನು ಹಿಡಿಯುವ ಕರದಲ್ಲಿ ಕೊಡಲಿಯನ್ನು ಹಿಡಿದೆಯಾ? ಮೃಷ್ಟಾನ್ನವನ್ನು ಭುಂಜಿಸುವ ನೀನು ಅಂಬಲಿಯನ್ನು ಕುಡಿಯಬೇಕಾಯಿತೆ? ಓ ಭಗವಂತ, ಈ ದುಃಖವನ್ನು ಹೇಗೆ ಸಹಿಸಲಿ? ನನಗೆ ಸಾವನ್ನು ಕರುಣಿಸು ದೇವ. ಇನ್ನು ಬದುಕಲಾರೆ' ಎಂದು ಗೋಳಾಡಿದಳು.

''ಜನ್ಮಾಂತರದಲ್ಲಿ ಯಾರ ಸಿರಿಯನ್ನು ಅಪಹರಿಸಿದೆನೋ, ಯಾರಿಗೆ ಅಳಲನ್ನು ತಂದೊಡ್ಡಿದೆನೋ, ಯಾರು ಬೆಳೆಸಿದ ವನವನ್ನು ಕಡಿಸಿದೆನೋ- ಇಲ್ಲದಿದ್ದರೆ ಈ ಬಗೆಯ ಸಂಕಟ ನನಗೆ ಬರುತ್ತಿತ್ತೇ? ಹೆತ್ತ ಹೊಟ್ಟೆ ಉರಿಯುತ್ತಿದೆ ಮಗನೆ, ಎತ್ತಿದ ತೋಳನು ಕೆತ್ತಿದೆ ಮಗನೆ, ಹಾಡುವ ಬಾಯೊಳು ಮಣ್ಣನು ಹೊಯ್ದೆ, ನೋಡುವ ಕಣ್ಣೊಳು ಸುಣ್ಣವ ಹೊಯ್ದೆ. 'ಅಳಬೇಡ ಅಮ್ಮಾ' ಎನ್ನಲೆ ಮಗನೆ, ನುಡಿದರೆ ಪಾಪವೆ ಹೆತ್ತವರೊಡನೆ, ಕಡು ಮುಳಿಸೆ ಮಗನೇ ನನ್ನೊಡನೆ? ತಂದೆ ತಾಯಿಗಳಿಗ್ನಿಯ ಕೊಡದೆ ಮುಂದಕೆ ನೀನೇ ಹೋಗಲುಬಹುದೇ?'' ಎಂದು ವಿಲಪಿಸಿದಳು.

ಹೀಗೆ ಚಂದ್ರಮತಿಯು ಬಹಳ ಹೊತ್ತು ಅತ್ತ ಮೇಲೆ ಎಚ್ಚೆತ್ತಳು. ''ಹೀಗೆಯೇ ನಾನು ಇದ್ದರೆ ಮನೆಯೊಡೆಯನು ಬಂದು ನನ್ನನ್ನು ಮನೆಗೆಲಸಕ್ಕೆ ಎಳದೊಯ್ಯಬಹುದು. ಮಗುವಿನ ದಹನಕ್ರಿಯೆಗೆ ಅಡ್ಡಿಯಾಗುವುದು?'' ಎಂದು ಆಲೋಚಿಸಿ ಪುತ್ರನನ್ನು ಎತ್ತಿಕೊಂಡು ಹೊರಟಳು. ಶ್ಮಶಾನವೆಲ್ಲಿದೆಯೆಂದು ಹುಡುಕುತ್ತಿರುವಾಗ ಶವಗಳನ್ನು ಸುಡುವ ಉರಿಯ ಬೆಳಕು ದೂರದಲ್ಲಿ ಕಾಣಿಸಿತು. ಅದು ಶ್ಮಶಾನವೆಂದು ಬಗೆದು ಚಂದ್ರಮತಿಯು ಅಲ್ಲಿಗೆ ಹೋದಳು. ದಾರಿಯಲ್ಲಿ ವಿಶ್ವಾಮಿತ್ರರ ಪ್ರೇರಣೆಯಿಂದ ಭೂತಭೇತಾಳಗಳು ಚಂದ್ರಮತಿಯನ್ನು ಹೆದರಿಸಬೇಕೆಂದು ವಿಕೃತವೇಷದಲ್ಲಿ ಸುಳಿದಾಡಿದವು. ಶೋಕಾವಿಷ್ಟಳಾದ ಚಂದ್ರಮತಿಯು ಯಾವುದನ್ನೂ ಲೆಕ್ಕಿಸದೆ ಮಗನನ್ನ ಹೊತ್ತುಕೊಂಡು ಸುಡುಗಾಡನ್ನು ಸೇರಿದಳು. ಹರಿಶ್ಚಂದ್ರನು ಕಾಯುತ್ತಿದ್ದ ಸ್ಮಶಾನವು ಅದೇ ಆಗಿತ್ತು. ಚಂದ್ರಮತಿಯು

ತನ್ನ ಪುತ್ರನ ಶವವನ್ನು ಕೆಳಗಿಳಿಸಿ, ಅಲ್ಲಿ ಬೆಂದು ಉಳಿದಿದ್ದ ಕರಿಗೊಳ್ಳಿಗಳನ್ನು ಆರಿಸಿ ತಂದು ಒಟ್ಟಿದಳು. ಆ ಚಿತೆಯ ಮೇಲೆ ಲೋಹಿತಾಶ್ವನನ್ನು ಮಲಗಿಸಿದಳು. ಇನ್ನೊಂದೆಡೆ ಉರಿಯುತ್ತಿದ್ದ ಬೆಂಕಿಯನ್ನು ತಂದು ಚಿತೆಯ ಬಳಿಯಲ್ಲಿ ನಿಂತು ''ಮಗನೆ, ಹುಟ್ಟಿದಲ್ಲಿ ಹುಟ್ಟು ಬೆಳೆದಲ್ಲಿ ಬೆಳೆ'' ಎಂದು ನುಡಿದು ಚಿತೆಗೆ ಬೆಂಕಿಯನ್ನು ಹಚ್ಚಲು ಕೈ ನೀಡಿದಳು. ಆದರೆ ಬೆಂಕಿಯನ್ನು ಚಿತೆಗೆ ಮುಟ್ಟಿಸಲಾರದೆ ಕುಸಿದುಹೋದಳು. 'ಹೋ' ಎಂದು ಗಟ್ಟಿಯಾಗಿ ಅಳಲಾರಂಭಿಸಿದಳು.

ರಾತ್ರಿಯಲ್ಲಿ ಅಳುವ ಧ್ವನಿಯನ್ನು ಕೇಳಿ ಅಟ್ಟಣೆಯ ಮೇಲೆ ಮಲಗಿದ್ದ ಹರಿಶ್ಚಂದ್ರನಿಗೆ ಎಚ್ಚರವಾಯಿತು. 'ಆ! ಈ ನಟ್ಟಿರುಳಲ್ಲಿ ಒಬ್ಬಳೇ ಈ ಸುಡುಗಾಡಿಗೆ ಬಂದಿರುವಳಲ್ಲ, ಈ ವೀರನಾರಿ ಯಾರು?' ಎಂದು ಚಕಿತನಾಗಿ ಕೆಳಗಿಳಿದು ಬೇಗಬೇಗನೆ ಬರುತ್ತ ''ಎಲೌ, ತೆರಿಗೆಯನ್ನು ಕೊಡದೆ ಕಳ್ಳತನದಲ್ಲಿ ಸುಡಲು ಬಂದೆಯಾ? ಬೆಂಕಿಯನ್ನು ಮುಟ್ಟಿಸಿದರೆ ವೀರಬಾಹುಕನ ಆಣೆ! ಮೂಳೆಯನ್ನು ಮುರಿದೇನು!'' ಎಂದು ಜರಿದನು. ಒಡನೆಯೇ ಸಿಟ್ಟಿನಿಂದ ಚಂದ್ರಮತಿಯ ಕೈಯಲ್ಲಿದ್ದ ಕೊಳ್ಳಿಯನ್ನು ಕಿತ್ತು ಬಿಸುಟು, ಚಿತೆಯ ಮೇಲಿದ್ದ ಲೋಹಿತಾಶ್ವನ ಕಾಲುಗಳನ್ನು ಹಿಡಿದೆಳೆದು ಹಾಕಿದನು. ಚಂದ್ರಮತಿಯು 'ಎಸೆಯಬೇಡ, ಎಸೆಯಬೇಡ! ಹಸುಳೆಗೆ ನೋವಾಗುವುದು!' ಎಂದು ಅರಚುತ್ತ ಶವವನ್ನಪ್ಪಿ ತನ್ನ ಎದೆಗೆ ಒರಗಿಸಿಕೊಂಡಳು. ಅನಂತರ ಶವವನ್ನು ನೇವರಿಸುತ್ತ ಕಾವಲುಗಾರನ ಕಡೆಗೆ ತಿರುಗಿ ''ಅಪ್ಪಾ! ಕುಲವನ್ನು ನೋಡದೆ ಬೇಡಿಕೊಳ್ಳುತ್ತಿದ್ದೇನೆ. ಇವನು ನಿನ್ನ ಮಗನೆಂದು ತಿಳಿದು ಕರುಣಿಸು. ಸುಡಲು ಅನುಮತಿಯನ್ನು ಕೊಡು'' ಎಂದು ಕೇಳಿಕೊಂಡಳು. ಆ ಕಾವಲುಗಾರನು ''ಮರುಳೆ, ಹೆಣ ಸುಡುವ ನೆಲದ ತೆರಿಗೆಯನ್ನೂ ಹಣದ ಬಟ್ಟೆಯನ್ನೂ ಕೊಡಬೇಕು. ಇನ್ನು ಏನು ಹೇಳಿದರೂ ಬಿಡುವುದಿಲ್ಲ'' ಎಂದನು. ಚಂದ್ರಮತಿಯು ''ತೆರಿಗೆಯನ್ನು ಕೊಡಲು ನನ್ನ ಕೈಯಲ್ಲಿ ಒಂದು ಹಣವೂ ಇಲ್ಲ, ಪರರ ಮನೆಯಲ್ಲಿ ಕೆಲಸಮಾಡುವ ಬಡದಾಸಿ ನಾನು'' ಎಂದಳು. ಕಾವಲುಗಾರನು ''ನಿನ್ನ ಕೊರಳಲ್ಲಿ ಚಿನ್ನದ ತಾಳಿ ಇದೆಯಲ್ಲ! ಅದನ್ನು ಅಡವಿಟ್ಟು ತೆರಿಗೆಯನ್ನು ತಂದುಕೊಂಡು. ಆಮೇಲೆ ತಾಳಿಯನ್ನು ಬಿಡಿಸಿಕೊ'' ಎಂದು ಹೇಳಿದನು.

ಚಂದ್ರಮತಿಯು ಬೆಕ್ಕಸ ಬೆರಗಾದಳು. ''ಶಿವ ಶಿವ! ನನ್ನ ಪತಿಯಾದ ಹರಿಶ್ಚಂದ್ರಮಹಾರಾಜನು ಜೀವಿಸಿದ್ದರೆ, ಶ್ವಪಚನಿಗೆ ಈ ತಾಳಿ ಕಾಣಿಸುವುದೆ? ನನ್ನ

ಮುತ್ತೈದೆತನವೂ ಮುಗಿತಿಯಿತೆ?'' ಎಂಬ ಚಿಂತೆಯು ಅಡರಿ ಅವಳ ಶೋಕವು ಉಕ್ಕಿತು. ''ಓ ನನ್ನ ಕಂದ, ಸಪ್ತದ್ವೀಪಾಧಿಪತಿಯ ಮಗನಾಗಿ ಜನಿಸಿದ ನಿನಗೆ ಈ ಸುಡುಗಾಡು ಹಗೆಯಾಯಿತು? ಇಲ್ಲಿಯೂ ನಿನಗೆ ಸ್ಥಳವಿಲ್ಲದಾಯಿತೆ? ಮೂರುಲೋಕಗಳಿಗೂ ಆಜ್ಞೆಯನ್ನೀಯಬಲ್ಲ ವೀರಾಗ್ರಣಿಯ ಸುಕುಮಾರನನ್ನು ಒಬ್ಬ ಚಂಡಾಲನು ಆಜ್ಞಾಪಿಸುವಂತಾಯಿತೆ? ನವನಿಧಿಗಳ ಒಡೆಯನ ಪುತ್ರನಾದ ನಿನಗೆ ತೆಲೆದೆರಿಗೆ ಕೊಡಲು ಹಣ ಇಲ್ಲವಾಯಿತೆ? ಅಯ್ಯೋ ಮಗನೆ!'' ಎಂದು ಹಂಬಲಿಸಿದಳು. ಅವಳ ಹಂಬಲಿನ ನುಡಿಯನ್ನು ಕೇಳಿ ಹರಿಶ್ಚಂದ್ರನ ಎದೆ ನಡುಗಿತು. ''ವಿಶ್ವಾಮಿತ್ರ ಮುನಿಗಳು ಮತ್ತೊಂದು ತೊಡರನ್ನು ನನಗೆ ತಂದಿಟ್ಟರೋ ಹೇಗೆ?'' ಎಂದು ಚಿಂತಿಸುತ್ತ, ''ಎಲೌ ವನಿತೆ, ಈ ಬಾಲಕನು ಯಾವ ಮಹಾರಾಜನ ಮಗ? ತೆರಿಗೆಯನ್ನು ಕೊಡಲಾರದೆ ದೊಡ್ಡವರ ಹೆಸರನ್ನು ಹೇಳಿ ಜಾರಿಕೊಳ್ಳಲು ಬಯಸುವೆಯಾ? ಆಳುವಾಗ ಸುಳ್ಳನ್ನು ಸೇರಿಸುವೆಯಾ? ತೆರಿಗೆಯನ್ನೆಂದಿಗೂ ನಾನು ಬಿಡುವುದಿಲ್ಲ'' ಎಂದನು.

ಚಂದ್ರಮತಿ :- ಹಿಂದೆ ಗತಿಸಿ ಹೋದ ಸಿರಿಯನ್ನು ಈಗ ನೆನೆಸಿಕೊಂಡರೆ ಬರುವುದೆ? ನನ್ನ ಪಾಲಿಗೆ ಅದು ಸುಳ್ಳೇ ಆಯಿತು. ತಪ್ಪೇನು?

ಹರಿಶ್ಚಂದ್ರ :- ಆ ರಾಜನ ಹೆಸರೇನು? ಅವನ ಯಾರ ಮಗ? ಆಳುತ್ತಿದ್ದ ರಾಜ್ಯ ಯಾವುದು?

ಚಂದ್ರಮತಿ :- ಆತನು ರವಿಕುಲತಿಲಕನೆನಿಸಿದ ಹರಿಶ್ಚಂದ್ರಮಹಾರಾಜ. ತ್ರಿಶಂಕು ಮಹಾರಾಜನ ತನಯ. ಅಯೋಧ್ಯೆಯ ಅಧಿಪತಿ.

ಹರಿಶ್ಚಂದ್ರ (ದಿಗ್ಭ್ರಾಂತನಾಗಿ) :- ಅವನ ಪತ್ನೀಪುತ್ರರು ಏನಾದರು? ಎಲ್ಲಿದ್ದಾರೆ?

ಚಂದ್ರಮತಿ :- ಆ ಪೃಥ್ವೀಪತಿಯು ಹರಕೆಯನ್ನು ಹೊತ್ತು ಪಡೆದ ಪುತ್ರನೇ ಈ ಬಾಲಕ. ನಾನು ಆತನ ಪತ್ನಿ.

ಹರಿಶ್ಚಂದ್ರ :- ಈ ಬಾಲಕನು ಮಡಿಯಲು ಕಾರಣವೇನು?

ಚಂದ್ರಮತಿ :- ನಮ್ಮಿಬ್ಬರನ್ನೂ ಒಬ್ಬ ವಿಪ್ರನು ಕ್ರಯಕ್ಕೆ ಕೊಂಡನು. ಒಡೆಯನ ಮನೆಗೆ ಹುಲ್ಲು ಸೌದೆಗಳನ್ನು ತರುವುದಕ್ಕಾಗಿ ಈ ಬಾಲಕನು ಅಡವಿಗೆ ಹೋದಾಗ ಒಂದು ಸರ್ಪವು ಕಚ್ಚಿದ್ದರಿಂದ ಮಡಿದುಹೋದನು. ಇವನ ವಿಧಿ ಈ ರೀತಿಯಾಯಿತು. ನನ್ನ ಪತಿಯ ಗತಿ ಏನಾಯಿತೊ!

ಹರಿಶ್ಚಂದ್ರ :-ಆತನ ಕಥೆಯನ್ನು ನಾನು ಕೇಳಿದ್ದೇನೆ! ಬುದ್ಧಿವಂತಿಕೆಯಿಂದ ಮಾತಾಡಲು ಬರದೆ ಸಕಲ ರಾಜ್ಯವನ್ನು ಕಳೆದುಕೊಂಡು ಸಾಲಗಾರನಾಗಿ ದೇಶಭ್ರಷ್ಟನಾದ ಮಂದಮತಿ ಅವನು! ಅಡವಿಯಲ್ಲಿ ಕುರಿಯಂತೆ ಅಲೆದು, ಕೈ ಹಿಡಿದ ಮಡದಿಯನ್ನು ಮಗನನ್ನೂ ಮಾರಿದ ಅವಿವೇಕಿ! ಕಾಶೀಕ್ಷೇತ್ರಕ್ಕೆ ಬಂದು ಕುಲಾಚಾರವನ್ನು ತ್ಯಜಿಸಿ ಚಂಡಾಲನ ಕಿಂಕರನಾಗಿದ್ದಾನೆ. ನಗೆಗೇಡಿಯಾದ ಆ ಪಾತಕಿಯನ್ನು ಏಕೆ ನೆನೆಸಿಕೊಳ್ಳುವೆ?

ಚಂದ್ರಮತಿ :- ನನ್ನ ಪತಿಯ ಯೋಗ್ಯತೆಯನ್ನರಿಯದೆ ನುಡಿಯಬೇಡ! ಶಿವನು ಜಟಾಧಾರಿಯಾಗಿ ಚರ್ಮವನ್ನುಟ್ಟಿದ್ದರೂ ಶ್ಮಶಾನದಲ್ಲಿ ನೆಲಸಿ ಕಪಾಲವನ್ನು ಹಿಡಿದು ಭಿಕ್ಷೆಬೇಡಿದರೂ ವಿಷವನ್ನು ಕುಡಿದರೂ ಮುಂಡಮಾಲೆಯನ್ನು ಧರಿಸಿ ಭೂತಗಳೊಡನೆ ಅಲೆದಾಡಿದರೂ ಅವನು ಪರಮೇಶ್ವರನೇ! ಲೋಕಕ್ಕೆ ಒಡಯನೇ. ಹಾಗೆಯೇ ನನಗೆ ಹರಿಶ್ಚಂದ್ರನೇ ಗತಿ, ಅವನೇ ಮತಿ!

ಸತಿಯ ನುಡಿಯು ಹರಿಶ್ಚಂದ್ರನ ಕಿವಿಯನ್ನು ಪ್ರವೇಶಿಸಿ ಅವನ ಅಂತಃಕರಣವನ್ನು ಕೊರೆದು ಧೀರತೆಯನ್ನು ಅಳಿಸಿ ಸಕಲೇಂದ್ರಿಯಗಳನ್ನೂ ಕದಡಿ ಹೆಮ್ಮೆಯನ್ನು ಹರಿದು ದುಃಖವನ್ನು ಒದೆದು ಎಬ್ಬಿಸಿತು! ಕಂಬನಿಗಳು ಪಳಪಳನೆ ಉದುರಿದವು. ನಂಬಿದ ಮಡದಿಗೆ ಅಪರಾಧವನ್ನು ಮಾಡಿದೆನೆನಿಸಿತು. "ಈ ಸಾಧ್ವಿಯನ್ನು ಈ ಪುಣ್ಯಮೂರ್ತಿಯನ್ನು ಈ ಪತಿವ್ರತೆಯನ್ನು- ಇಷ್ಟು ಕಷ್ಟಕ್ಕೆ ಒಳಗು ಮಾಡಿದೆನು. ಕ್ರೂರನಾದ ಆ ವಿಪ್ರನಿಗೆ ಮಾರಿದೆನು. ಈ ಸುತನನ್ನು ಈ ಸುಖಿಯನ್ನು ಈ ಮುದ್ದಿನ ಸುಕುಮಾರನನ್ನು - ಹಾವು ಕಡಿದು ಕೊಲ್ಲುವಂತೆ ಮಾಡಿದೆನು. ಎಂತಹ ಹೇಸಿಕೆಯ ಹೊರೆಯನ್ನು ಹೊತ್ತೆನು" ಎಂದು ಅಳಲೆದ್ದು ಕಳವಳಿಸಿ ಶೋಕವನ್ನು ತಡೆಹಿಡಿಯಲು ಯತ್ನಿಸಿದರೂ ಸಾಗದೆ ಮಗನ ದೇಹದ ಬಳಿ ದೊಪ್ಪನೆ ಬಿದ್ದನು. ಚಂದ್ರಮತಿಗೆ ಅವನು ಯಾರೆಂದು ಗೊತ್ತಾಯಿತು. "ಓ ನನ್ನ ಸ್ವಾಮಿಯೆ, ನಿನಗೆ ಈ ಗತಿ ಬಂದಿತೆ? ಸರಿದೂಗುವ ಭೂಪಾಲರನ್ನಾಶ್ರಯಿಸಿ ಧನವನ್ನು ದುಡಿದು ತಂದು ನಮ್ಮ ಸೆರೆಯನ್ನು ಮಹಾರಾಜನು ಬಿಡಿಸುವನೆಂದು ನಾನು ತಿಳಿದಿದ್ದೆನು. ಮಾದಿಗನಿಗೆ ಆಳಾಗಿ ಸುಡುಗಾಡನ್ನು ಕಾಯುವ ಭಾಗ್ಯ ನಿನಗೆ ಒದಗಿದೆ?" ಎಂದು ಹಲುಬಿದಳು. ಮಗನ ಮರಣದೆದುರಿಗೆ ಪತಿಯ ಗತಿ ಹೀಗಾಯಿತೆ- ಎಂದು ಆ ಸಾಧ್ವಿಯು ಚಿಂತಿಸಿ ಕಂಗೆಟ್ಟು ಮರವಟ್ಟು ತೂಕದ ಕೋಲ ತೊಲೆಯಾದಳು.

ಅರಸನು ಅಳತೊಡಗಿದನು : ''ಓ ಕಂದ, ನಾನಂತೂ ರಾಜ್ಯಭ್ರಷ್ಟನಾಗಿ ಚಂಡಾಲ ಸೇವಕನಾಗಿ ಪಾಪಿಯಾಗಿ ನೀಚನಾಗಿ ಕುಲಹೀನನಾದೆನು. ನೀನು ನನ್ನಂತಾಗದೆ ನಿಮ್ಮಜ್ಜನಾದ ತ್ರಿಶಂಕು ಮಹಾರಾಜನಂತೆ ಸಕಲ ರಾಜ್ಯಕ್ಕೂ ಒಡೆಯನಾಗುವೆ ಎಂಬ ನಂಬಿಕೆಯಿಂದ ಇದ್ದೆನು. ಅಕಟ, ಹೀಗೆ ನಿಷ್ಕಾರಣವಾಗಿ ಮಡಿದೆಯಾ? ಅಪ್ಪಾ ಮಗು, 'ಕಾಶೀಕ್ಷೇತ್ರದಲ್ಲಿ ಭಕ್ತರ ಇಷ್ಟದಾತನಾದ ವಿಶ್ವೇಶ್ವರನ ಪಾದಕಮಲವನ್ನು ಭಕ್ತಿಯಿಂದ ಪೂಜಿಸುತ್ತೀಯೆ. ಅವನ ಅನುಗ್ರಹದಿಂದ ಮರಳಿ ಸಿರಿಯನ್ನು ಪಡೆದು ಧರೆಯಲ್ಲಿ ವಿಖ್ಯಾತನಾಗಿ ಸೂರ್ಯವಂಶದ ರಾಜರ ಹೆಸರನ್ನು ಸ್ಥಿರವಾಗಿ ನಿಲ್ಲಿಸುತ್ತೀಯೆ' ಎಂದು ನಂಬಿದ್ದೆನು. ಬಾಳದೆ ಬದುಕದೆ ಈ ಪರಿಯಲ್ಲಿ ಉರಗನಿಗೆ ಸವಿದುತ್ತಾದೆಯಾ? ಹೀಗೆ ಮಾಡಬಹುದೆ, ಹೇಳು ಮಗನೆ, ನನ್ನೊಡನೆ ಏಕೆ ಮಾತಾಡುವುದಿಲ್ಲ? ಮುಂದೆ ನೀನಾಳಲಿಹ ಧರೆಯನ್ನು ಅನ್ಯರಿಗಿತ್ತನೆಂದು ನುಡಿಸೆಯಾ? ನಮ್ಮಿಬ್ಬರನ್ನು ತಂದು ಮಾರಿದನೆಂದು ನುಡಿಸೆಯಾ? ಚಂಡಾಲ ಸೇವ ಮಾಡಿ ನಿಂದೆಯಿಲ್ಲದ ಸೂರ್ಯಕುಲಕ್ಕೆ ಕುಂದು ತಂದನೆಂದು ನುಡಿಸೆಯಾ? ನುಡಿಯದಿಹ ಹದನೇನು? ಹೇಳು. ಅರಿರಾಜರೊಳು ಕಾದಿ ಮಡಿದಾತನಲ್ಲ, ಮುನಿವರರ ಯಾಗವನ್ನು ಕಾಯ್ದು ಮಡಿದಾತನಲ್ಲ, ದೇವರಿಗೆ ಹಿತವಾಗಿ ಮಡಿದವನಲ್ಲ, ಮಾಂಸದಾನವನ್ನು ಬೇಡಿದವರಿಗೆ ಒಡಲನ್ನು ಅರಿದರಿದು ಕೊಟ್ಟು ಮಡಿದವನಲ್ಲ. ಹುಲ್ಲನ್ನು ತರಹೋಗಿ ಕಾಡೊಳಗೆ ಬಡಹಾವು ಕಚ್ಚಿ ಮಡಿದೆಯಾ? ನಿಂದಕರಿಗೆ ನಗೆಗೇಡಿಯಾದೆಯಾ? ಹೀಗೆ ಮಡಿಯುವುದುಂಟೆ, ಕಂದ'' ಎಂದು ಹಲುಬಿದನು.

ಆಗ ಚಂದ್ರಮತಿಯು ''ಅರಸ, ಮಗುವಿನ ಗುಣವನ್ನು ನೆನೆಸಿಕೊಂಡು ಅಳುತ್ತಿದ್ದರೆ ತುದಿ ಇಲ್ಲ. ಹೀಗೆಯೇ ರಾತ್ರಿ ಕಳೆದುಹೋಗುವುದು. ಬೆಳಗಾದರೆ ಮನೆಯವರು ಹುಡುಕಿಸಿ ಎಳತಂದು ನನ್ನನ್ನು ಬಡಿಯುವರು. ಈಗ ಕುಮಾರನನ್ನು ದಹಿಸಬೇಕು'' ಎಂದಳು. ಹರಿಶ್ಚಂದ್ರನು ''ಸುಂಕವನ್ನು ಕೊಡದೆ ಸುಡಲು ಸಾಧ್ಯವಿಲ್ಲ. ಇದ್ದರೆ ಕೊಡು. ಇಲ್ಲದಿದ್ದರೆ ನಿನ್ನ ಒಡೆಯನನ್ನು ಬೇಡಿ ತಂದುಕೊಡು'' ಎಂದನು. ''ಒಡೆಯನು ಕೊಡುವವನಲ್ಲ'' ಎಂದು ಅವಳು ಹೇಳಲು. ''ಬೇಡಿ ನೋಡು. ಕೊಡದಿದ್ದರೆ ಸಾಲವನ್ನು ಮಾಡಿ ತಂದುಕೊಡು. ಸಾಲವೂ ಹುಟ್ಟದಿದ್ದರೆ ಸುಡುವ ಚಿಂತೆ ಬೇಡ. ಬಂದದ್ದು ಬರಲಿ!'' ಎಂದು ಹರಿಶ್ಚಂದ್ರನು ಹೇಳಿಬಿಟ್ಟನು. ಅನಂತರ

ಲೋಹಿತಾಶ್ವನ ಬಟ್ಟೆಯನ್ನು ತೆಗೆದುಕೊಂಡು ತನ್ನ ಅಟ್ಟಣಿಗೆಯ ಕಡೆಗೆ ನಡೆದನು. ಚಂದ್ರಮತಿಯು ದಿಕ್ಕುಗಾಣದೆ ತನ್ನ ಒಡೆಯನಾದ ವಿಪ್ರನನ್ನು ಕೇಳಿನೋಡುವೆನೆಂದು ನಗರದ ಕಡೆಗೆ ಹೊರಟಳು.

ಕೌಶಿಕ ಮುನಿಗಳು ಆ ದಂಪತಿಗಳನ್ನು ಇನ್ನೂ ಕಾಡಿಸಬೇಕೆಂದು ಆಲೋಚಿಸಿ ಒಂದು ಉಪಾಯವನ್ನು ಚಿಂತಿಸಿದರು. ಮಾಯಾಶಕ್ತಿಯಿಂದ ಕಳ್ಳರನ್ನು ನಿರ್ಮಿಸಿ "ಎಲೈ, ನೀವು ಕಾಶೀರಾಜನ ಅರಮನೆಗೆ ಹೋಗಿ ಅವನ ಮಗುವನ್ನು ಕೊಂದು, ಚಂದ್ರಮತಿಯು ಬರುವ ದಾರಿಯಲ್ಲಿ ಇರಿಸಿರಿ!" ಎಂದು ಆಜ್ಞಾಪಿಸಿದರು. ಅದರಂತೆ ಕಳ್ಳರು ಅರಮನೆಗೆ ಹೋದರು.

ವಿಶ್ವನಾಥಸಾಕ್ಷಾತ್ಕಾರ

ಚೋರರು ಅರಮನೆಯೊಳಗೆ ಹೋಗಿ ರಾಜಕುಮಾರನನ್ನು ಕದ್ದು ನಗರದ ಒಂದು ಗೊಂದಿಗೆ ತಂದರು. ಮೈಮೇಲಿದ್ದ ಒಡವೆಗಳನ್ನು ಅವರು ಅಪಹರಿಸಲು ಆ ಬಾಲಕನು ಗಟ್ಟಿಯಾಗಿ ಆಕ್ರಂದಿಸಿದನು. ಕಳ್ಳರು ಅವನ ಕತ್ತನ್ನು ಕತ್ತರಿಸಿ ಒಡವೆಗಳನ್ನು ಅಲ್ಲಿಯೇ ಬಿಟ್ಟು ಓಡಿ ಹೋದರು. ಆ ದಾರಿಯಲ್ಲಿಯೇ ಚಂದ್ರಮತಿ ಬರುತ್ತಿದ್ದಳು. ದುಃಖದ ಭಾರದಿಂದ ಮತಿಗೆಟ್ಟು ಹುಚ್ಚಿಯಂತಾಗಿದ್ದ ಚಂದ್ರಮತಿಗೆ ಆಕ್ರಂದನ ಧ್ವನಿಯು ಕೇಳಿಸಿತು. ''ಓ ನನ್ನ ಮಗನನ್ನು ಯಾರೋ ಪೀಡಿಸುತ್ತಿದ್ದಾರೆ!'' ಎಂದು ಭ್ರಮಿಸಿ ಆ ಸ್ಥಳಕ್ಕೆ ಧಾವಿಸಿದಳು. ಕಳ್ಳರ ಕತ್ತಿಯಿಂದ ಬಸವಳಿದ ಹಸುಳೆಯನ್ನು ತನ್ನ ಮಗನೆಂದೇ ಬಗೆದು, ಕರೆಕರೆದು ತಲೆದಡವಿ ತಡವರಿಸಿದಳು. ಅಷ್ಟು ಹೊತ್ತಿಗೆ ನಗರವನ್ನು ಕಾಯುತ್ತಿದ್ದ ರಾಜಭಟರು ಅಳುವ ಧ್ವನಿಯನ್ನು ಕೇಳಿ ಅಲ್ಲಿಗೆ ರಭಸದಿಂದ ಬಂದರು. ರಕ್ತವು ಬಸಿಯುತ್ತಿದ್ದ ಹುಡುಗನ ಸಮೀಪದಲ್ಲಿ ಚಂದ್ರಮತಿಯನ್ನು ಕಂಡು ''ಎಲೆಲೆ, ಇವಳು ರಕ್ಕಸಿಯೇ ಸರಿ. ಒಡವೆಯ ಆಸೆಗೆ ಹುಡುಗನನ್ನು ಕೊಂದಿದ್ದಾಳೆ. ಇವಳನ್ನು ಹೆಡಮುರಿಗೆ ಕಟ್ಟಿ ಕಳ್ಳಮಾಲಿನೊಡನೆ ರಾಜನ ಬಳಿಗೆ ಒಯ್ಯೋಣ'' ಎಂದು ನಿಶ್ಚಯಿಸಿದರು. ಕಡಿದು ಮಡಿದಿದ್ದ ಹುಡುಗನನ್ನು ಅವಳಿಂದಲೇ ಹೊರಿಸಿಕೊಂಡು ಹೊಡೆಯುತ್ತ ಖಡ್ಗದ ಪಹರೆಯಲ್ಲಿ ಅರಮನೆಗೆ ನಡೆಸಿಕೊಂಡು ಹೋದರು. ಬಾಲಕನ ನೆತ್ತರು ಸುರಿದು ಅವಳ ಮೈಯೆಲ್ಲವೂ ಒದ್ದೆಯಾಯಿತು. ಚಂದ್ರಮತಿಯು ದಾರಿ ಹಿಡಿದು ನಡೆಯುತ್ತ ಮನಸ್ಸಿನಲ್ಲಿ ''ಈ ಜನರು ನನ್ನನ್ನು ವಿಚಾರಣೆಗೆ ಒಳಪಡಿಸಿದಾಗ

ಯಾವ ಉತ್ತರವನ್ನು ಕೊಡಲಿ? ಯಾವ ಯಾವ ದುಃಖ ಉಂಟೋ ಅದೆಲ್ಲವನ್ನೂ ಕಂಡದ್ದಾಯಿತು. ಉಂಡು ತಣಿದೆನು. ಇನ್ನು ಯಾವ ಹೆಚ್ಚಿನ ಕಷ್ಟ ಬಂದೀತು? ಈ ನಗರದ ಅರಸನು ಕೇಳಿದಲ್ಲಿ 'ಹೌದು, ನಾನೇ ಈ ಹುಡುಗನನ್ನು ಕೊಂದಿದ್ದೇನೆ ಎಂದು ಹೇಳಿ ಈ ಒಡವೆಗಳನ್ನು ತೋರಿಸುತ್ತೇನೆ. ಸಾವನ್ನು ಅಪ್ಪುತ್ತೇನೆ'' ಎಂದು ನಿಶ್ಚಯಿಸಿಕೊಂಡಳು.

ಇತ್ತ ಅರಮನೆಯಲ್ಲಿ ಗೊಂದಲವೆದ್ದಿತು. 'ಮಲಗಿದ್ದ ರಾಜಕುಮಾರನು ಕಾಣೆಯಾಗಿದ್ದಾನೆ. ಚೋರರು ಅಪಹರಿಸಿದ್ದಾರೆ' ಎಂದು ಹಾಹಾಕಾರ ಉಂಟಾಯಿತು. 'ಅಲ್ಲಿ ನೋಡು. ಇಲ್ಲಿ ನೋಡು! ಏರು ಅಶ್ವವನ್ನು! ಹುಡುಕಿರಿ; ಬೀದಿಯನ್ನೂ ಮನೆಮನೆಯನ್ನೂ ಶೋಧಿಸಿರಿ. ಕಳ್ಳರು ಕಂಡರೆ ಮೊದಲು ಕೊಲ್ಲಿರಿ!' ಎಂಬ ಕೋಲಾಹಲವು ಎಲ್ಲೆಲ್ಲಿಯೂ ಕೇಳಿಸಿತು. ಕೋಪದಿಂದ ಕೆಂಡವಾದ ಕಾಶೀರಾಜನು ಸೇವಕರಿಗೆ ಆಜ್ಞೆಯನ್ನೀಯುತ್ತ ಪೀಠದಲ್ಲಿ ಕುಳಿತಿದ್ದನು. ಆ ಸಮಯದಲ್ಲಿ ರಾಜಭಟರು ಚಂದ್ರಮತಿಯನ್ನು ಎಳತಂದು ಎದುರಿಗೆ ನಿಲ್ಲಿಸಿ ''ಮಹಾಸ್ವಾಮಿ. ರಾಜಕುಮಾರನನ್ನು ಕದ್ದೊಯ್ದು ಕೊಂದಿರುವ ರಕ್ಕಸಿಯನ್ನು ಹಿಡಿದು ತಂದಿದ್ದೇವೆ. ಅವಧರಿಸಬೇಕು'' ಎಂದು ಅರಿಕೆಮಾಡಿದರು. ರಾಜನು ಚಂದ್ರಮತಿಯನ್ನು ನೋಡಿ ''ಯಾರು ನೀನು? ಬಾಲಕನನ್ನು ಏಕೆ ಕೊಂದೆ?'' ಎಂದು ಕೇಳಿದನು. ಚಂದ್ರಮತಿಯು ನಾನು ರಾಕ್ಷಸಿಯಲ್ಲ, ಮನುಷಿ. ಒಡವೆಯ ಆಸೆಯಿಂದ ಈ ಮಗುವನ್ನು ಕೊಂದೆನು!'' ಎಂದು ಉತ್ತರಿಸಿದಳು. ರಾಜನು ಹೆದರಬೇಡ, ಇದ್ದುದನ್ನು ಹೇಳು. ಜನರ ಪ್ರೇರಣೆಯಿಂದ ಹೀಗೆ ಹೇಳುವೆಯಾ ಅಥವಾ ನಿನ್ನ ಕೃತ್ಯವು ದಿಟವೊ? ಅಂಜದೆ ನುಡಿ. ಧರ್ಮಾಧಿಕಾರಿಗಳನ್ನು ಕರೆಸಿ ವಿಚಾರಣೆ ನಡೆಸುತ್ತೇನೆ. ನಿನಗೆ ರಕ್ಷಣೆಯನ್ನೀಯುತ್ತೇನೆ'' ಎಂದನು. ಚಂದ್ರಮತಿಯು ''ಇದಕ್ಕೆ ಧರ್ಮಾಧಿಕಾರಿಗಳೇಕೆ? ಅವರು ಬಂದೇನು ಮಾಡುವರು? ನಾನು ಮಗುವನ್ನು ಕೊಂದದ್ದು ದಿಟ. ಸತ್ತ ಮಗು ಕೈಯಲ್ಲಿದೆ. ಇನ್ನು ವಿಚಾರಣೆ ಏಕೆ? ತೋರಿದ ಶಿಕ್ಷೆಯನ್ನು ವಿಧಿಸಬಹುದು'' ಎಂದಳು.

ಅಲ್ಲಿ ನೆರೆದಿದ್ದ ಜನರು ''ನಾನು ಕೊಂದೆನೆಂದು ಇವಳೇ ಒಪ್ಪಿಕೊಳ್ಳುವಾಗ ವಿಚಾರಣೆ ಏಕೆ? ಇವಳನ್ನು ಕೊಲ್ಲಿಸುವುದೇ ಧರ್ಮ. ಸಂದು ಸಂದುಗಳನ್ನು ಕತ್ತರಿಸಿ ಚೆಲ್ಲಬೇಕು. ಕಿವಿಮೂಗುಗಳನ್ನು ಕೆತ್ತಬೇಕು'' ಎಂದು ತಮಗೆ ತೋರಿದಂತೆ

ಮಾತನಾಡಿಕೊಳ್ಳುತ್ತಿದ್ದರು. ರಾಜನು ಆಲೋಚಿಸಿ ವೀರಬಾಹುಕನನ್ನು ಕರೆಸಿದನು. "ವೀರಬಾಹುಕ, ಈ ಹೆಂಗಸು ರಾಜಕುಮಾರನನ್ನು ಕೊಂದ ಪಾತಕಿ. ಇವಳನ್ನು ಶ್ಮಶಾನಕ್ಕೆ ಎಳೆದೊಯ್ದು ನಿನ್ನ ಸೇವಕನಿಂದ ಕೊಲ್ಲಿಸು" ಎಂದು ರಾಜನು ಆಜ್ಞಾಪಿಸಲು, ವೀರಬಾಹುಕನು ಅವಳನ್ನು ಕರೆದೊಯ್ದನು. ಆಮೇಲೆ ವೀರಬಾಹುಕನು ತನ್ನ ಸೇವಕರನ್ನು ಕರೆದು "ಎಲೈ, ರುದ್ರಭೂಮಿಗೆ ಹೋಗಿ ಈ ಚೆಂದುಗನನ್ನು* ಕರೆತನ್ನಿರಿ. ಯಾವ ಕೆಲಸವನ್ನು ನೇಮಿಸಿದರೂ ಮಾಡುತ್ತೇನೆಂದು ಅವನು ಹೇಳಿದ್ದಾನೆ!" ಎಂದು ಆಜ್ಞೆಯನ್ನಿತ್ತನು. ಅದರಂತೆ ಸೇವಕರು ಹೋಗಿ ತಿಳಿಸಲು, ಒಡೆಯನ ಆಣತಿಯಂತೆ ಚೆಂದುಗನು ಬಂದು ನಿಂತನು!

"ಎಲೈ ಚೆಂದುಗ! ಈ ರಕ್ಕಸಿ ನಮ್ಮ ಮಹಾರಾಜನ ಮಗನನ್ನು ಕೊಂದ ಪಾತಕಿ. ಇವಳನ್ನು ಶ್ಮಶಾನಕ್ಕೆ ಎಳೆದೊಯ್ದು ಕೊರಳನ್ನು ಕತ್ತರಿಸಿ ಬಿಸುಡು!" ಎಂದು ವೀರಬಾಹುಕನು ಆಜ್ಞಾಪಿಸಿದನು. ಚೆಂದುಗನು ಹಿಂದು ಮುಂದು ನೋಡದೆ ಅವಳ ಮುಂದಲೆಯನ್ನು ಹಿಡಿದು ಶ್ಮಶಾನಕ್ಕೆ ಎಳೆದೊಯ್ದು ತನ್ನ ಅಟ್ಟಣೆಗೆಯ ಬಳಿಯಲ್ಲಿ ತಂದು ನಿಲ್ಲಿಸಿದನು. ಅಷ್ಟರಲ್ಲಿ ಬೆಳಗಾಯಿತು.

"ನನ್ನ ವಂಶದಲ್ಲಿ ಜನಿಸಿದ ಹರಿಶ್ಚಂದ್ರ ಭೂಪಾಲನು ಈ ದಿನ ವಿಶ್ವ ವಿಖ್ಯಾತನಾಗುವನು. ಬಾಲೇಂದು ಶೇಖರನಾದ ವಿಶ್ವನಾಥನು ಸಂಭ್ರಮದಿಂದ ಪ್ರತ್ಯಕ್ಷನಾಗಿ ಅನುಗ್ರಹಿಸುವನು. ಆ ಸಡಗರವನ್ನು ನಾನು ನೋಡಬೇಕು!" ಎಂಬ ಕುತೂಹಲದಿಂದಲೋ ಎಂಬಂತೆ ಆದಿತ್ಯನು ಉದಯಗಿರಿ ಶಿಖರವನ್ನೇರಿದನು.

ಹರಿಶ್ಚಂದ್ರನು ಚಂದ್ರಮತಿಗೆ ಬಿಗಿದಿದ್ದ ಹಗ್ಗವನ್ನು ಬಿಚ್ಚಿ ಪೂರ್ವದಿಕ್ಕಿಗೆ ಅಭಿಮುಖವಾಗಿ ಕುಳಿತುಕೊಳ್ಳುವಂತೆ ತಿಳಿಸಿ ಖಡ್ಗವನ್ನು ಸೆಳೆದನು. ಅವಳ ಹಿಂದುಗಡೆ ನಿಂತು ಖಡ್ಗವನ್ನು ಝಳಪಿಸಿ ಪರೀಕ್ಷಿಸಿ ನೋಡಿ ಅವಳ ಕೊರಳಿಗೆ ಗುರಿಯಿಟ್ಟನು. "ಎಲೌ, ಹೆಂಗಸೆ,. ನಾನು ಸಿದ್ಧನಾದೆನು. ನೀನೂ ಸಿದ್ಧಳಾಗು! ದೈವವನ್ನು ಸ್ಮರಿಸಿಕೊ. ನನ್ನ ಒಡೆಯನಾದ ವೀರಬಾಹುಕನನ್ನು ಹರಸು!" ಎಂದನು.

"ಶಿವ ಶಿವ, ಅಷ್ಟಮೂರ್ತಿ, ಅನಾಥರಕ್ಷಕ! ನೀನೇ ಶರಣು. ಈ ಅಬಲೆಯನ್ನು

---

1. ಚೆಂದುಗ = ಹರಿಶ್ಚಂದ್ರ. ಅವರಿಗೆ ವೀರಬಾಹುಕನು ಇಟ್ಟ ಹೆಸರು.

ರಕ್ಷಿಸು. ಎಲೈ ವಿಶ್ವಾಮಿತ್ರ, ಹಠವಾದಿ! ಪಾಪಿ! ಇನ್ನಾದರೂ ಈ ಪತಿವ್ರತೆಯ ಕೊಲೆಯನ್ನು ನಿಲ್ಲಿಸು'' ಎಂದು ದೇವತೆಗಳು ಗಗನದಲ್ಲಿ ನಿಂತು ಬೇಡಿಕೊಳ್ಳುತ್ತಿದ್ದರು.

ಚಂದ್ರಮತಿಯು ಶಾಂತಚಿತ್ತದಿಂದ ಪದ್ಮಾಸನದಲ್ಲಿ ಕುಳಿತು ಕಣ್ಣುಗಳನ್ನು ಮುಚ್ಚಿ ಗುರುಗಳಾದ ವಸಿಷ್ಠ ಮುನಿಗಳಿಗೆ ಕೈ ಮುಗಿದು, ಪರಶಿವನ ನಿರ್ಮಲ ರೂಪವನ್ನು ನೆನೆದಳು. ಅನಂತರ ಮೇಲೆ ನೋಡಿ ''ಈ ಪೃಥ್ವಿಯೂ ಸೂರ್ಯ ಚಂದ್ರ ನಕ್ಷತ್ರಗಳೂ ಇರುವವರೆಗೆ ಹರಿಶ್ಚಂದ್ರ ಮಹಾರಾಜನು ಸತ್ಯಸಂಧನೆಂದು ಕೀರ್ತಿಶಾಲಿಯಾಗಿ ಬಾಳಲಿ, ನನ್ನ ಮಗನು ಮುಕ್ತನಾಗಲಿ, ಮಂತ್ರಿ ನೆನೆದುದಾಗಲಿ, ರಾಜ್ಯದೊಡೆಯರಾದ ವಿಶ್ವಾಮಿತ್ರರು ಚಿರಕಾಲ ಜೀವಿಸಲಿ! ಇದು ಹರಕೆ- ಹೊಡೆ!'' ಎಂದಳು.

ಹರಕೆಯನ್ನು ಕೇಳಿ ಹರಿಶ್ಚಂದ್ರನ ಎದೆ ಝಲ್ಲೆಂದಿತು. ಅವನು ಹವ್ವನೆ ಹಾರಿ ನಿಬ್ಬೆರಗಾಗಿ ಮರವಟ್ಟು ''ಭಾಪುರೆ! ಇವಳು ಚಂದ್ರಮತಿ! ವಿಧಿಯ ಮುಳಿಸು ಇಲ್ಲಿಯವರೆಗೆ ಬಂದಿತೆ! ನಿನ್ನೆಯ ರಾತ್ರಿ ಮಗನ ದುರ್ಮರಣವನ್ನು ಕಾಣಿಸಿ, ಈಗ ನನ್ನ ಮಡದಿಯ ತಲೆಯನ್ನು ನಾನೇ ಕೈಯಾರೆ ಹಿಡಿದು ಕಡಿಯುವಂತೆ ಮಾಡಿತೆ? ಇರಲಿ; ಇದಕ್ಕೆ ನಾನು ಹೇವರಿಸುವವನಲ್ಲ. ಒಡೆಯನ ಆಜ್ಞೆಯನ್ನು ನಡೆಸಲೇಬೇಕು'' ಎಂದು ಖಡ್ಗವನ್ನು ಹಿಡಿದು ಅನುವಾದನು. ನಿಶ್ಶಂಕೆಯಿಂದ ಹೊಡೆಯಲನುವಾದ ಹರಿಶ್ಚಂದ್ರನ ಸ್ಥಿರಭಾವವನ್ನು ಕಂಡು ವಿಶ್ವಾಮಿತ್ರರು ಆಕಾಶದಲ್ಲಿ ನಿಂತು, ''ಹೊಡೆಯಬೇಡ! ನನ್ನ ಕನ್ನಿಕೆಯನ್ನು ಮದುವೆಯಾಗು! ಮದುವೆಯಾದರೆ ನಿನ್ನ ಸತ್ತ ಮಗನನ್ನು ಎತ್ತುವೆನು. ಇವಳನ್ನು ರಕ್ಷಿಸುವೆನು. ನಿನ್ನಿಂದ ಕಿತ್ತುಕೊಂಡ ಸಿರಿಯನ್ನು ನಿನಗೆ ಒಪ್ಪಿಸಿ ಹೊಲೆಯನ ಬಂಧನದಿಂದ ಬಿಡಿಸಿ, ರಾಜ್ಯಕ್ಕೆ ಕರೆದೊಯ್ದು ಸಿಂಹಾಸನದಲ್ಲಿ ಮೊದಲಿನ ಪರಿಯಲ್ಲಿಯೇ ಇರಿಸುವೆನು!'' ಎಂದರು. ಹರಿಶ್ಚಂದ್ರನು ತಲೆಯೆತ್ತಿ ಮೇಲೆ ನೋಡಿ ವಿಶ್ವಾಮಿತ್ರ ಮುನಿಗಳನ್ನು ಕಂಡು ''ಮುನಿಗಳೆ, ನಿಮ್ಮ ಹಿರಿಯತನಕ್ಕೆ ಈ ಮಾತು ಯೋಗ್ಯವೆ? ಕೇಳಿರಿ! ಸಿರಿ ಹೋದರೇನು, ರಾಜ್ಯ ಹೋದರೇನು, ನಾನು ಯಾರನ್ನು ಸೇವಿಸಿದರೇನು? ಮಗನು ಅಳಿದರೇನು; ಮಡದಿಯನ್ನು ಕೈಯಾರೆ ಕೊಂದರೇನು? ಹರಿಶ್ಚಂದ್ರನು ಸತ್ಯವನ್ನು ಬಿಡದೆ ಪಾಲಿಸಿದನು- ಎಂದರೆ ಸಾಕು'' ಎಂದನು. ಎತ್ತಿದ ಖಡ್ಗವನ್ನು ಝಳಪಿಸುತ್ತ ಮತ್ತೆ ''ನನ್ನ ದುಷ್ಕರ್ಮವಶದಿಂದ ಆದ ಬವಣೆಯನ್ನು ಇಂದಿನವರೆಗೂ ಅನುಭವಿಸುತ್ತ ಇದ್ದೇನೆ. ಈಗಲೂ ನಿಮ್ಮ ಗೊಡ್ಡಾಟವನ್ನು ತೋರಿಸುವಿರಾ? ಹೊಲೆಯನಾದವನು

ಸತಿಯ ಕೊಲೆಗೆ ಹೇಸಿ ಬೆನ್ನೀವೆನೆ? ಇಕ್ಕಟ್ಟಿನಲ್ಲಿ ಸಿಕ್ಕಿಸಲು ಬಂದ ನಿಮ್ಮ ಗನ್ನಗತನಕ್ಕೆ ಸೆಡೆವೆನೆ? ಸಡಿಫಢ!'' ಎಂದು ನುಡಿದು ಖಡ್ಗವನ್ನೆತ್ತಿ ಮಡದಿಯ ಕೊರಳಿನ ಮೇಲೆ 'ಎಲೆಲೆ ಶಿವ ಶಿವ ಮಹಾದೇವ ಹೊಡೆದನು, ಹೊಡೆದನು!'

ಹೊಡೆದ ಖಡ್ಗದ ಬಾಯ ಕಡೆಯ ಹೊಡೆಯನ್ನು ಹಿಡಿದು, ಎಡಗಡೆಯಿದ್ದ ಗಿರಿಜೆಯ ಕೊರಳನ್ನು ಆಲಂಗಿಸಿಕೊಂಡು, ಕೆಂಜೆಡೆಯ ಶಶಿಕಳೆಯ ಸುರನದಿಯ ಬಸಿಗಣ್ಣ ಫಣಿಕುಂಡಲದ ಪಂಚಮುಖದ ಹುಲಿದೊಗಲಿನುಡುಗೆಯ ಕಾಶೀರಮಣ ವಿಶ್ವನಾಥನು ಮೆಲ್ಲಡಿಯಿಡುತ್ತ ಮೂಡಿದನು! ಸುರರ ನೆರವಿ 'ಜಯ ಜಯ!' ಎಂದು ಉದ್ಗರಿಸಿತು.

ವರಪ್ರದಾನ, ಸಿಂಹಾಸನಾರೋಹಣ

ಪುರಹರನು ಹರಿಶ್ಚಂದ್ರನಲ್ಲಿ ಕರುಣಿಸಿದನೆಂಬ ಪುಣ್ಯವಾರ್ತೆಯನ್ನು ಕೇಳಿ ದೇವಾದಿಗಳು ಬಂದು ನೆರೆದರು. ಗಣೇಶ್ವರನು ಅಷ್ಟವಸುಗಳು, ನವಬ್ರಹ್ಮರು, ಸುರರು, ಮುನಿವರು, ಯಕ್ಷರು, ಗುಹ್ಯಕರು, ಸಿದ್ಧರು– ಮೊದಲಾದವರು ಬಂದು ಸೇರಿದರು; ಮಹಾವಿಷ್ಣು ಬ್ರಹ್ಮ ಚಂದ್ರ, ಷಣ್ಮುಖ, ದ್ವಾದಶರವಿಗಳು, ನವಗ್ರಹಗಳು– ಎಲ್ಲರೂ ಬಂದರು. ಅವರು ಇವರು ಎಂದು ಹೆಸರು ಹೇಳುವುದೇನು? ಅಪ್ರತಿಮ ದೇವಾಧಿ ದೇವ ಪಂಪಾ ವಿರೂಪಾಕ್ಷನೆಡೆಗೆ ಸಕಲ ದೇವತೆಗಳೂ ಬಂದರು. ಮುನಿವರೇಣ್ಯರಾದ ವಿಶ್ವಾಮಿತ್ರರು ವಸಿಷ್ಠ ಮಹರ್ಷಿಗಳೊಡನೆ ಆಗಮಿಸಿದರು!

ಔಷಧವು ಬಾಯಿಗೆ ಕಹಿಯಾದರೂ ಒಡಲಿಗೆ ಸುಖಕರವಾದದು. ವಿಶ್ವಾಮಿತ್ರಮುನಿಗಳು ಲೋಕದ ಕಣ್ಣಿಗೆ ಕಡುಕೋಪಿಗಳಾಗಿ ತೋರಿಸಿಕೊಂಡರೂ ಹರಿಶ್ಚಂದ್ರನಿಗೆ ಕಲ್ಯಾಣಪರಂಪರೆಯನ್ನು ತಂದುಕೊಟ್ಟರು. ಅವನನ್ನು ಕಾಡಿ ಕಾಡಿ ಸತ್ಯವನ್ನು ಒರೆಗೆ ಹಚ್ಚಿ, ಕಡೆಯಲ್ಲಿ ವಿಶ್ವನಾಥಸ್ವಾಮಿಯನ್ನು ಸಾಕ್ಷಾತ್ಕಾರಗೊಳಿಸಿ ಸತ್ಯಸಂಧನೆಂಬ ಕೀರ್ತಿಯನ್ನು ಮೂರು ಲೋಕದಲ್ಲಿಯೂ ಹರಡಿದರು.

ಅಂಬರದಿಂದ ಸುರರು ಹೂಮಳೆಗರೆದರು. ಶಂಖ, ಭೇರಿ ಮೊದಲಾದ ಮಂಗಳ ವಾದ್ಯಗಳು ಧ್ವನಿಗೈದವು. ಗಿರಿಜಾರಮಣನಾದ ಪರಮೇಶ್ವರನು ಹರಿಶ್ಚಂದ್ರನನ್ನು ಪ್ರೀತಿಯಿಂದ ಆಲಂಗಿಸಿದನು. ಹರಿಶ್ಚಂದ್ರನು ಕೈಮುಗಿದುಕೊಂಡು ''ಹೇ

ಪಾವನಮೂರ್ತಿಯೆ, ನಾನು ಚಂಡಾಲ ಕಿಂಕರನಾಗಿ ಕೊಲೆವೇಷವನ್ನು ಹೊತ್ತು ಸುಡುಗಾಡನ್ನು ಕಾದು ಶವಶಿರದ ಅಕ್ಕಿಯನ್ನೂ ಹೇಸದೆ ಉಂಡು ಜೀವಿಸುವ ಅಧಮ. ಪುತ್ರನು ಅಳಿದುದನ್ನು ಕಣ್ಮಾರೆ ಕಂಡು ಪತಿವ್ರತೆಯಾದ ಪತ್ನಿಯನ್ನು ಕೈಯಿಂದ ಕೊಂದ ನೀಚನಾಗಿದ್ದೇನೆ. ಈ ಮೂರ್ಖನ ಬಳಿಗೆ, ಹೇ ಸ್ವಾಮಿ ನೀನು ಏಕೆ ಬಿಜಯಮಾಡಿಸಿದೆ?'' ಎಂದು ಹೇಳಿ ಶಿವನ ಪಾದಗಳಿಗೆ ಸಾಷ್ಟಾಂಗವಾಗಿ ವಂದಿಸಿದನು. ಆಗ ಪರಮೇಶ್ವನು ''ಹರಿಶ್ಚಂದ್ರ, ಸತ್ಯವೇ ಪ್ರಾಣವೆಂದು ತಿಳಿದಿರುವ ನಿನಗೆ ಹೊಲೆಯನ ಸೇವೆ ಗುರುಸೇವೆ; ಹೊತ್ತ ಹೊಲೆವೇಷ ಪಾವನ ಪುಣ್ಯವೇಷ; ಸುಡುಗಾಡಿನ ರಕ್ಷಣೆಯೆಂಬುದು ಯಜ್ಞರಕ್ಷಣೆ; ಶವಶಿರದ ಅಕ್ಕಿಯನ್ನು ತಿಂದುದು ಚಂದ್ರಾಯಣ ವ್ರತ. ಪುತ್ರನ ಅಳಿವು ಜನನ ಮರಣಗಳ ಅಳಿವು. ಪತ್ನಿಯ ವಧೆಯೆಂಬುದು ಮಾಯೆಯ ವಧೆ. ಅಂಜಬೇಡ. ಏಳು, ಭೂರಮಣ'' ಎಂದು ನುಡಿದು ಹರಿಶ್ಚಂದ್ರನನ್ನು ಕೈ ಹಿಡಿದು ಮೇಲೆತ್ತಿದನು. ಅವನ ಕಣ್ಣೀರನ್ನು ಒರೆಸಿ ಹಣೆಯಲ್ಲಿ ಭಸ್ಮವನ್ನು ಹಚ್ಚಿ ಅಪ್ಪಿಕೊಂಡನು. ಅನಂತರ ವಿಶ್ವಾಮಿತ್ರ ಮುನಿಗಳನ್ನು ಕರೆದು ''ಎಲೈ ಮುನಿಪ, ಆ ಸುಕುಮಾರನ ಕೈಯನ್ನು ಹಿಡಿದು ಮೇಲೆತ್ತು'' ಎಂದು ಹೇಳಿ ಲೋಹಿತಾಶ್ವನ ಕಡೆಗೆ ಕೈ ತೋರಿಸಿದನು. ವಿಶ್ವಾಮಿತ್ರರು ಆ ಬಾಲಕನ ಬಳಿಗೆ ಹೋಗಿ ಕೈ ಹಿಡಿದು ''ಮಗು- ಲೋಹಿತಾಶ್ವ, ಏಳು!'' ಎನ್ನಲು ವಿಷವೇರಿ ಸತ್ತ ಬಾಲಕನು ಕಣ್ದೆರೆದನು! ರಾಹುವಿನ ಬಾಯಿಂದ ಹೊರಬಂದ ಇಂದುಬಿಂಬದಂತೆ ತೇಜೋಮಯನಾಗಿ ತೊಳತೊಳಗಿ ಬೆಳಗುತ್ತ, ನಿದ್ರೆ ತಿಳಿದೇಳುವಂತೆ ಲೋಹಿತಾಶ್ವನು ಎದ್ದನು. ಎದ್ದೊಡನೆ ಬಾಲಕನು ರೋಮಾಂಚಿತನಾಗಿ ತನ್ನ ತಾಯಿಯನ್ನು ಅಪ್ಪಿಕೊಂಡು. ''ವಿರೂಪಾಕ್ಷಸ್ವಾಮಿಯೇ, ಶರಣಾದೆನು'' ಎನ್ನುತ್ತ ಶಿವನ ಪಾದಗಳಿಗೆ ವಂದಿಸಿದನು. ಪಾರ್ವತೀಪತಿಯು ಹರಿಶ್ಚಂದ್ರನ ತಲೆಯನ್ನು ನೇವರಿಸಿ ''ಸುಳ್ಳು ಹೇಳುವ ಯತಿಯೇ ಹೊಲೆಯ. ಸುಳ್ಳನ್ನು ಎಂದೂ ಹೇಳದ ಹೊಲೆಯನೇ ನಿಜವಾದ ಯತಿ. ಸುಳ್ಳನ್ನು ಆಚರಿಸುವ ಪಂಚಮಹಾಯಜ್ಞಗಳು ಪಂಚಪಾತಗಳೇ ಸರಿ. ಸತ್ಯಪಾಲನೆಯೇ ಶಿವಾರ್ಚನೆ. ಇದು ವೇದಗಳ ಸಾರ. ನನ್ನ ಆಜ್ಞೆ, ಹರಿಶ್ಚಂದ್ರ, ನಿನ್ನಂತಹ ಸತ್ಯಸಂಧರು ಈ ಲೋಕದಲ್ಲಿ ಯಾರಿದ್ದಾರೆ?'' ಎಂದು ಶ್ಲಾಘಿಸಿದನು. ವಿಶ್ವಾಮಿತ್ರನನ್ನು ಕುರಿತು ''ಎಲೈ ಮುನೀಶ್ವರ, ಹರಿಶ್ಚಂದ್ರನು ಸತ್ಯಸಂಧನೆಂದೂ ಅವನಲ್ಲಿ ಅನೃತವು ಲೇಶವು ಇಲ್ಲವೆಂದೂ ಸ್ಥಿರವಾದರೆ, ಯಾವುದನ್ನು ಧಾರೆಯೆರೆದು

ಕೊಡುವೆನೆಂದು ಹೇಳಿದ್ದೆಯೋ ಅದೆಲ್ಲವನ್ನೂ ಈಗ ಕೊಟ್ಟುಬಿಡು!'' ಎಂದು ತಿಳಿಸಿದರು. ವಿಶ್ವಾಮಿತ್ರಮುನಿಗಳು, ''ನಾನು ಐವತ್ತು ಕೋಟಿ ವರ್ಷಗಳವರೆಗೆ ನಿಷ್ಠೆಯಿಂದ ತಪಸ್ಸನ್ನು ಆಚರಿಸಿದ್ದೇನೆ. ಆ ತಪಃಫಲದಲ್ಲಿ ಅರ್ಧವನ್ನು ಕೊಡುವೆನೆಂದು ಹೇಳಿದ್ದೆನು. ಈ ರಾಜನನ್ನು ಬಿಡದೆ ಕಾಡಿ ನೋಡಿದೆನು, ಈಗ ಮೆಚ್ಚಿದೆನು. ಹರಿಶ್ಚಂದ್ರ, ನನ್ನ ತಪಸ್ಸಿನ ಅರ್ಧ ಫಲವನ್ನು ತೆಗೆದುಕೊ!'' ಎಂದು ಹೇಳಿ ಧಾರೆಯೆರೆದರು. ಅನಂತರ ಶಿವನೆದುರಿಗೆ ''ಹರಿಶ್ಚಂದ್ರ, ನಿನಗೆ ಅಯೋಧ್ಯಾ ನಗರದಲ್ಲಿ ಪೃಥ್ವೀಶ್ವರ ಪದವಿಯನ್ನು ವಹಿಸಿಕೊಡುವೆನು. ಹೊರಡು. ರಥವನ್ನೇರು'' ಎಂದು ಹೇಳಿದರು. ಹರಿಶ್ಚಂದ್ರನು ''ಮುನಿಗಳೇ, ನನ್ನನ್ನು ಮಾರಿಕೊಂಡಿದ್ದೇನೆ. ಕೊಂಡಿರುವ ಒಡೆಯನಿದ್ದಾನೆ. ಈ ಕೆಲಸವನ್ನು ಬಿಟ್ಟು ನಾನು ಬರಬಾರದು. ಅಲ್ಲದೆ ನಿಮಗೆ ದಾನವಾಗಿತ್ತ ನೆಲದಲ್ಲಿ ನಾನು ಅಡಿಯಿಡುವವನಲ್ಲ. ಈ ವಿಷಯದಲ್ಲಿ ದಯವಿಟ್ಟು ನನ್ನನ್ನು ಒತ್ತಾಯಪಡಿಸಬೇಡಿರಿ'' ಎಂದು ನಿವೇದಿಸಿದನು. ವಿಶ್ವಾಮಿತ್ರ ಮಹರ್ಷಿಗಳು ನಕ್ಕು ''ಅರಸ, ನಾನೆಲ್ಲಿ? ರಾಜ್ಯವೆಲ್ಲಿ? ನನಗೇಕೆ ರಾಜ್ಯ? ನಿನ್ನ ಸತ್ಯನಿಷ್ಠೆಯನ್ನು ಪರೀಕ್ಷಿಸುವುದಕ್ಕಾಗಿ ಸಕಲ ರಾಜ್ಯವನ್ನೂ ಕಿತ್ತುಕೊಂಡಂತೆ ನಟಿಸಿ ಕಾಡಿ ನೋಡಿದೆನು. ರಾಜ್ಯವೆಲ್ಲವೂ ನಿನ್ನದೇ. ವೀರಬಾಹುಕನು ಹೊಲೆಯನಲ್ಲ, ಸಾಕ್ಷಾತ್ ಯಮಧರ್ಮರಾಜನೇ ನನ್ನ ಸೂಚನೆಯಂತೆ ಆ ವೇಷದಲ್ಲಿದ್ದು ನಿನ್ನನ್ನು ಕೊಂಡಂತೆ ವ್ಯವಹರಿಸಿದ್ದಾನೆ ! ನನ್ನ ಮಾತನ್ನು ನಂಬು, ಇದರಲ್ಲಿ ಕೃತಕವೇನೂ ಇಲ್ಲ!'' ಎಂದು ಹೇಳಿದರು.

ವಸಿಷ್ಠ ಮುನಿಗಳು : ''ಹರಿಶ್ಚಂದ್ರ, ಇಂದ್ರಸಭೆಯಲ್ಲಿ ನನಗೂ ವಿಶ್ವಾಮಿತ್ರರಿಗೂ ವಾಗ್ವಾದ ಉಂಟಾಯಿತು. 'ಹರಿಶ್ಚಂದ್ರನು ಹುಸಿದನಾದರೆ, ನಾನು ಮುನಿತನವನ್ನು ತ್ಯಜಿಸಿ ನರಕಪಾಲದಲ್ಲಿ ಮದ್ಯವನ್ನು ಕುಡಿಯುತ್ತ ದಕ್ಷಿಣ ದಿಕ್ಕಿಗೆ ಅಭಿಮುಖವಾಗಿ ಹೋಗುವೆನು' ಎಂದು ಪ್ರತಿಜ್ಞೆ ಮಾಡಿದ್ದೆನು. ನನ್ನ ಮರ್ಯಾದೆಯನ್ನುಳಿಸಿ ಸತ್ಯವನ್ನು ಪಾಲಿಸಿದೆ'' ಎಂದು ವಾತ್ಸಲ್ಯದಿಂದ ಭೂಪಾಲನನ್ನು ಆಲಂಗಿಸಿಕೊಂಡರು. ಪರಮೇಶ್ವರನು ''ಹರಿಶ್ಚಂದ್ರ, ನಿನಗೆ ಬೇಕಾದ ವರವನ್ನು ಕೇಳಿಕೊ'' ಎನ್ನಲು, ಹರಿಶ್ಚಂದ್ರನು ''ಸ್ವಾಮಿಯೆ, ನಿನ್ನ ಮಂದಿರವಿರುವ ಈ ಕಾಶೀಕ್ಷೇತ್ರದಲ್ಲಿ ನನ್ನ ಹೆಸರು ಸ್ಥಿರವಾಗಿ ನಿಲ್ಲಲಿ'' ಎಂದು ಬೇಡಿಕೊಂಡನು. ಪಂಪಾ ವಿರೂಪಾಕ್ಷಸ್ವಾಮಿಯು ''ತಥಾಸ್ತು'' ಎಂದು ಅನುಗ್ರಹಿಸಿ ದೇವತೆಗಳನ್ನೂ ಋಷಿಗಳನ್ನೂ ನೋಡಿ ''ನೀವೆಲ್ಲರೂ

ಹರಿಶ್ಚಂದ್ರನನ್ನು ಅಯೋಧ್ಯಾ ನಗರಕ್ಕೆ ಕಳಿಸಿ ಬನ್ನಿರಿ" ಎಂದು ಆಜ್ಞೆಯನ್ನಿತ್ತು ಅಂತರ್ಧಾನ ಹೊಂದಿದನು..

ಅನಂತರ ಹರಿಶ್ಚಂದ್ರನ ಪ್ರಯಾಣದ ಏರ್ಪಾಡು ನಡೆಯಿತು. ಹರಿಶ್ಚಂದ್ರನು ಮಂತ್ರಿಯಾದ ಸತ್ಯಕೀರ್ತಿಯೊಡನೆ ಪತ್ನೀಪುತ್ರ ಸಮೇತನಾಗಿ ರಥವನ್ನೇರಿ ಅಯೋಧ್ಯಾಭಿಮುಖನಾಗಿ ಹೊರಟನು. ದೇವತೆಗಳೂ ಋಷಿಗಳೂ ಅವನೊಡನೆ ಪ್ರಯಾಣಮಾಡಿದರು. ಮಹಾರಾಜನು ಹಿಂದಿರುಗಿ ಬರುವನೆಂಬುದನ್ನು ಕೇಳಿ ರಾಜಧಾನಿಯಲ್ಲಿದ್ದ ಪುರಜನ ಪರಿಜನರು ಆನಂದದಿಂದ ಹಿಗ್ಗಿದರು. ಶಸ್ತ್ರಧಾರಿಗಳಾದ ಸೈನಿಕರು ಮುಂದೆ ಹೋಗಿ ಹರಿಶ್ಚಂದ್ರನನ್ನು ಸ್ವಾಗತಿಸಿ ವೈಭವದಿಂದ ಕರೆತಂದರು. ಮಂಗಳ ವಾದ್ಯಗಳು ಭೋರ್ಗರೆದವು. ಪೂರ್ಣಚಂದ್ರನು ಉದಿಸಿದಾಗ ಸಮುದ್ರವು ಉಕ್ಕಿಬರುವಂತೆ ಜನಸ್ತೋಮವು ನೆರೆಯಿತು. ರಾಜವೀಧಿಯ ಇಕ್ಕೆಲಗಳಲ್ಲಿಯೂ ಅಂಗನೆಯರು ಕಳಸಕನ್ನಡಿಗಳನ್ನು ಹಿಡಿದು ಸ್ವಾಗತಿಸುವುದಕ್ಕಾಗಿ ನಿಂತರು. ರಥ ಪರಿವಾರಗಳೊಡನೆ ಹರಿಶ್ಚಂದ್ರನು ಅಯೋಧ್ಯಾ ನಗರವನ್ನು ಸಮೀಪಿಸಿದನು. ಜನಸ್ತೋಮವು 'ಜಯ ಜಯ!' ಎಂದು ಘೋಷಿಸುತ್ತಿರಲಾಗಿ, ದಿನಕರನು ಕಮಲವನವನ್ನು ಹೊಗುವಂತೆ, ವಸಂತನು ಉದ್ಯಾನವನವನ್ನು ಹೊಗುವಂತೆ, ಹರಿಶ್ಚಂದ್ರ ಭೂಪಾಲನು ಅಯೋಧ್ಯಾ ನಗರವನ್ನು ಪ್ರವೇಶಿಸಿದನು. ಮಹಾರಾಜನ ಪ್ರಜೆಗಳಿಗೆ ಅಭಯವನ್ನೀಯುತ್ತ, ಪರಿಪರಿಯ ತೋರಣದ ವೈಭವಕ್ಕೆ ತಲೆದೂಗುತ್ತ, ಮನೆಮನೆಗಳಲ್ಲಿ ಏರಿಸಿದ ಬಾವುಟಗಳನ್ನು ವೀಕ್ಷಿಸಿ ನಲಿಯುತ್ತ ಅರಮನೆಗೆ ನಡೆತಂದನು. ಅರಮನೆಯ ಮಹಾದ್ವಾರದಲ್ಲಿ ಅಂಗನೆಯರು ಮಂಗಳಾರತಿಯನ್ನು ಬೆಳಗಿದರು. ವಿಪ್ರರು ಮಂತ್ರಾಕ್ಷತೆಗಳನ್ನೆರಚಿ ಆಶೀರ್ವದಿಸಿದರು. ವಂದಿಮಾಗಧರು ಬಿರುದಾವಳಿಗಳನ್ನು ಪಠಿಸಿದರು. ಗಾಯಕರು ಹಾಡಿದರು. ಸೇವಕರು ಕೈ ಮುಗಿದರು. ವಾದ್ಯಗಳು ಭೋರ್ಗರೆದವು. ಸ್ವಯಂ ವಿಶ್ವಾಮಿತ್ರ ಮಹರ್ಷಿಗಳು ಹರಿಶ್ಚಂದ್ರನ ಕೈ ಹಿಡಿದು ಅರಮನೆಯನ್ನು ಪ್ರವೇಶಮಾಡಿದರು. ವಿಶ್ವಾಮಿತ್ರರು ಸಾಮಾನ್ಯರೆ? ಸಕಲ ಮುನಿಗಳಲ್ಲಿ ಶ್ರೇಷ್ಠರು. ಸಕಲ ಮುನಿಸ್ತುತ್ಯರು. ಧರ್ಮಾರ್ಥ ಕಾಮಮೋಕ್ಷಗಳನ್ನು ಅನುಗ್ರಹಿಸಬಲ್ಲ ಮಹಾಮಹಿಮರು.

ಅನಂತರ ಹರಿಶ್ಚಂದ್ರನನ್ನು ಕುರಿತು "ಅರಸ, ನಿನ್ನ ವಸ್ತುಗಳನ್ನೆಲ್ಲವನ್ನೂ ನೋಡಿಕೊ! ನೀನು ಇರಿಸಿಹೋದವುಗಳಲ್ಲಿ ಯಾವ ಕೊರತೆಯೂ ಆಗಿಲ್ಲ. ಇದು ಗಜಶಾಲೆ, ಇದು

ಅಶ್ವಶಾಲೆ, ಇದು ಭಂಡಾರ, ಇದು ಉಗ್ರಾಣ, ಇದು ಬೀಗದ ಕೈ, ಇದು ಮುದ್ರೆ, ಇದು ಲೆಕ್ಕದ ಪುಸ್ತಕ'' ಎಂದು ಹೇಳಿ ಸಕಲ ಸಾಮಗ್ರಿಗಳನ್ನೂ ಹರಿಶ್ಚಂದ್ರನಿಗೆ ಒಪ್ಪಿಸಿದನು. ಆಮೇಲೆ ಹರಿಶ್ಚಂದ್ರನು ಸಭಾಮಂಟಪಕ್ಕೆ ಆಗಮಿಸಿ ಸಿಂಹಾಸನಾರೂಢನಾದನು. ಬೇಕಾದಷ್ಟು ದಾನಧರ್ಮಗಳನ್ನು ಮಾಡಿದನು. ಸಾಮಂತರು ಕಾಣಿಕೆಗಳನ್ನು ತಂದೊಪ್ಪಿಸಿದರು. ಎಲ್ಲರಿಗೂ ಅಭಯವನ್ನಿತ್ತು ಉಪಚರಿಸಿ, ಹರಿಶ್ಚಂದ್ರನು ವಿಷ್ಣು ಬ್ರಹ್ಮ ಇಂದ್ರ– ಮುಂತಾದ ದೇವತೆಗಳನ್ನು ವಂದಿಸಿದನು. ಅವರೆಲ್ಲರೂ ಬೀಳ್ಕೊಂಡು ತಮ್ಮ ಲೋಕಗಳಿಗೆ ಹೊರಟು ಹೋದರು. ಹರಿಶ್ಚಂದ್ರನು ವಿಶ್ವಾಮಿತ್ರ ಮುನಿಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿ ''ಮಹರ್ಷಿಗಳೆ, ನೀವು ಪ್ರಸನ್ನರಾಗಿ ನನ್ನನ್ನು ಅನುಗ್ರಹಿಸಿದಿರಿ. ನನ್ನನ್ನು ಪಾಲಿಸಿದಿರಿ'' ಎಂದು ನಿವೇದಿಸಿದನು. ವಿಶ್ವಾಮಿತ್ರರೂ ಇತರ ಮುನಿಗಳೂ ಹರಿಶ್ಚಂದ್ರನನ್ನು ಆಶೀರ್ವದಿಸಿ ಬೀಳ್ಗೊಂಡರು. ಸಭೆಗೆ ಆಗಮಿಸಿದ್ದ ಚೋಳ, ಮಾಳವ, ಮಗಧಾದಿ ಭೂಪಾಲರಿಗೆ ಬಳುವಳಿಯನ್ನಿತ್ತು ಸತ್ಕರಿಸಿ ಹರಿಶ್ಚಂದ್ರನು ಅವರನ್ನು ಕಳಿಸಿಕೊಟ್ಟನು.

ಹರನ ಸಭೆಯೊಳಗೆ, ಮುರಹರನ ಸಭೆಯೊಳಗೆ, ವಾಗ್ವರನ ಸಭೆಯೊಳಗೆ, ದೇವೇಂದ್ರನ ಸಭೆಯೊಳಗೆ, ದಿನಕರನ ಸಭೆಯೊಳಗೆ, ಅಗ್ನಿಯ ಸಭೆಯೊಳಗೆ, ಚಂದ್ರನ ಸಭೆಯೊಳಗೆ, ಮುನಿಗಳ ಸಭೆಯೊಳಗೆ, ರಾಜರ ಸಭೆಯೊಳಗೆ– ಹರಿಶ್ಚಂದ್ರನ ಕಥನವೇ ಕಥನ. ಅವನನ್ನು ಶ್ಲಾಘಿಸುವ ಮಾತೇ ಮಾತು. ಅನ್ಯವಾರ್ತೆಗಳು ಹೊಗಲಿಲ್ಲ.

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೫ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಗದಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೋತ್ಸಾಹದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮